ಪ್ರಜಾವಾಣಿ

ಜೈವಿಕ ಬೇಲಿಯೊಂದಿಗೆ 100 ಕೆರೆಗಳಿಗೆ ಹೊಸ ಸ್ವರೂಪ

ಪರಿಸರ ಸ್ನೇಹಿ 'ಹಸಿರು ಸರೋವರ'

● ಆರ್. ಮಂಜುನಾಥ್

ಬೆಂಗಳೂರು: ರಾಜ್ಯದಲ್ಲಿ 100 ಕೆರೆಗಳು ಪರಿಸರ ಸ್ನೇಹಿಯಾಗಿ ಅಭಿವೃದ್ಧಿಯಾಗುತ್ತಿದ್ದು, ಕಾಂಕ್ರೀಟ್, ಪೇವರ್ಸ್‌ಗಳನ್ನು ಅಳವಡಿಸದೆ ಜೈವಿಕ ತಡೆಗೋಡೆಗಳೊಂದಿಗೆ 'ಹಸಿರು ಸರೋವರ'ಗಳನ್ನಾಗಿ ಪರಿವರ್ತಿಸಲಾಗುತ್ತಿದೆ.

ಹಿಂದೆ ಅನುಸರಿಸುತ್ತಿದ್ದ ಕೆರೆ ನಿರ್ಮಾಣ ಹಾಗೂ ಅವುಗಳ ನಿರ್ವಹಣೆ ವಿಧಾನವನ್ನೇ ಇದೀಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಳವಡಿಸಿಕೊಳ್ಳುತ್ತಿದೆ. ಕೆರೆಗಳನ್ನು ಕೆರೆಗಳನ್ನಾಗಿಯೇ ಉಳಿಸಿಕೊಂಡು, ಅತ್ಯಾಧುನಿಕ ಸೌಕರ್ಯಗಳಿಂದ ದೂರ ಉಳಿಸಿ, ಕಡಿಮೆ ವೆಚ್ಚದಲ್ಲಿ ಪರಿಸರ ಸ್ನೇಹಿ ತಾಣವನ್ನಾಗಿಸುವ ಯೋಜನೆ ಆರಂಭವಾಗಿದೆ. ರಾಜ್ಯದ 31 ಜಿಲ್ಲೆಗಳಲ್ಲಿ 100 ಕೆರೆಗಳು 'ಹಸಿರು ಸರೋವರ'ವಾಗುವ ಕಾರ್ಯ ಆಗಸ್ಟ್‌ನಿಂದ ಆರಂಭವಾಗಲಿದೆ.

ಕೆರೆಗಳಿಗೆ ಕೋಟ್ಯಂತರ ವೆಚ್ಚ ಮಾಡುವುದರ ಹೊರತಾಗಿ, ಕೆರೆಗಳನ್ನು ನೈಸರ್ಗಿಕವಾಗಿಯೇ ಉಳಿಸಿ, ಕಾಂಕ್ರೀಟ್ ಬಳಸದೆ, ಕಡಿಮೆ ವೆಚ್ಚದಲ್ಲಿ ಅಭಿವೃದ್ಧಿಗೊಳಿಸುವುದೇ 'ಹಸಿರು ಸರೋವರ' ಅಭಿಯಾನದ ಮೂಲ ಉದ್ದೇಶ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ (ಎಂನರೇಗಾ) ಈ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೆರೆಯ ಸುತ್ತ ಜೈವಿಕ ಬೇಲಿಯನ್ನು ನಿರ್ಮಿಸಲಾಗುತ್ತದೆ. ಎತ್ತರ ಹಾಗೂ ಕಡಿಮೆ ಎತ್ತರದಲ್ಲಿ ಬೆಳೆಯುವ ಸಸಿಗಳನ್ನು ಎರಡು ಸಾಲಿನಲ್ಲಿ ನೆಡಲಾಗುತ್ತದೆ. ಹಿಂದಿನ ಕಾಲದಲ್ಲಿ ಬೇಲಿಯಾಗಿ ಬೆಳೆಸುತ್ತಿದ್ದ ಕತ್ತಾಳೆಯಂತಹ ಮುಳ್ಳಿನ ಗಿಡಗಳನ್ನು, ಎರಡು ಸಾಲಿನ ಮರಗಳ ನಡುವೆ ಬೆಳೆಸಲಾಗುತ್ತದೆ. ಪ್ರತಿ ತಾಲ್ಲೂಕು ಮಟ್ಟದಲ್ಲಿ ರಾಷ್ಟ್ರೀಯ ಜೀವನೋಪಾಯ ಸಂಸ್ಥೆಯಿಂದ (ಎನ್‌ಆರ್‌ಎಲ್‌ಎಂ) ರಚಿತವಾಗಿರುವ ಗ್ರಾಮ ಪಂಚಾಯಿತಿ ಮಟ್ಟದ ಸ್ವ-ಸಹಾಯ ಸಂಘಗಳ ಒಕ್ಕೂಟದ ನರ್ಸರಿಗಳಿಂದ ಸಸಿಗಳನ್ನು ನಾಟಿ ಮಾಡಲು ಸೂಚಿಸಲಾಗಿದೆ.

ಕೆರೆಯ ಏರಿಯನ್ನು ಕಡಿಮೆ ಕಲ್ಲು ಬಳಸಿ ಮಣ್ಣಿನಿಂದ ಸದೃಢಗೊಳಿಸಲಾಗುತ್ತದೆ. ಇಳಿಜಾರಿನಲ್ಲಿ ಮಣ್ಣಿನ ಸವೆತ ತಡೆಯಲು ವಡೆಲಿಯಾದಂತಹ ಸಸಿಗಳನ್ನು ನೆಡಲಾಗುತ್ತದೆ. ಕೆರೆಯ ದಂಡೆಯಲ್ಲಿ 'ಇಂಟರ್‌ಲಾಕಿಂಗ್ ಪೇವರ್ಸ್' ಅಳವಡಿಸುವಂತಿಲ್ಲ. ಜೀವವೈವಿಧ್ಯದ ಸಂರಕ್ಷಣೆಯೊಂದಿಗೆ ಅಂತರ್ಜಲ ಮಟ್ಟ ವೃದ್ಧಿಸಲು ಒತ್ತು ನೀಡಲು ಯೋಜಿಸಲಾಗಿದೆ.

ದಾವಣಗೆರೆ, ಧಾರವಾಡ, ಹಾಸನ, ಹಾವೇರಿ ಜಿಲ್ಲೆಗಳಲ್ಲಿ ತಲಾ ಐದು, ಚಿತ್ರದುರ್ಗ, ಗದಗದಲ್ಲಿ ತಲಾ ನಾಲ್ಕು, ಕಲಬುರಗಿ, ಉಡುಪಿ, ವಿಜಯನಗರ ಜಿಲ್ಲೆಗಳಲ್ಲಿ ತಲಾ ಎರಡು ಕೆರೆಗಳು ಸೇರಿದಂತೆ ಉಳಿದ 22 ಜಿಲ್ಲೆಗಳಲ್ಲಿ ತಲಾ ಮೂರು ಕೆರೆಗಳನ್ನು 'ಹಸಿರು ಸರೋವರ'ವನ್ನಾಗಿಸಲು ನಿರ್ಧರಿಸಲಾಗಿದೆ.

'ಅಮೃತ ಸರೋವರ ಕಾರ್ಯಕ್ರಮದಲ್ಲಿ 'ಹಸಿರು ಸರೋವರ ಅಭಿಯಾನವನ್ನು' ಆಯೋಜಿಸಲಾಗಿದೆ. ಹತ್ತಾರು ಕೆರೆಗಳನ್ನು ನೈಸರ್ಗಿಕವಾಗಿ ಅಭಿವೃದ್ಧಿಗೊಳಿಸಿರುವ ಆನಂದ ಮಲ್ಲಿಗವಾಡ ಅವರು ಯೋಜನೆಗೆ ಸಲಹೆ ನೀಡುತ್ತಿದ್ದಾರೆ. 100 ಕೆರೆಗಳು 'ಹಸಿರು ಸರೋವರಗಳಾಗಿ' ಈ ಆರ್ಥಿಕ ವರ್ಷದಲ್ಲಿ ಸಿದ್ಧವಾಗಲಿವೆ' ಎಂದು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಅಧಿಕಾರಿಗಳು ತಿಳಿಸಿದರು.



ಹಸಿರು ಸರೋವರದ ಮಾದರಿ ನಕ್ಷೆ

ಅನುಕೂಲಗಳು

- ಕಡಿಮೆ ವೆಚ್ಚದಲ್ಲಿ ಕೆರೆಗಳ ಪುನಶ್ಚೇತನ
- ಕೆರೆಯ ನೀರಿನ ಸಂಗ್ರಹ ಸಾಮರ್ಥ್ಯ ವೃದ್ಧಿ
- ಅತಿಕ್ರಮಣ ತಡೆಗಟ್ಟುವುದು
- ನೈಸರ್ಗಿಕವಾಗಿ ಸೌಂದರ್ಯ ಹೆಚ್ಚಳ

ಅನುಷ್ಠಾನ ವಿಧಾನ

- ಕೆರೆಯ ಒಳಾಂಗಣದ ಇಳಿಜಾರಿನಲ್ಲಿ ವಡೆಲಿಯಾದಂತಹ ಸ್ಥಳೀಯವಾಗಿ ಲಭ್ಯವಿರುವ ಸಸಿಗಳ ನಾಟಿ
- ಒಳಹರಿವು, ಹೊರಹರಿವು ಪ್ರದೇಶದ ಅಭಿವೃದ್ಧಿ
- ಹೂಳು ತಡೆಯಲು ಹೊಂಡಗಳ ನಿರ್ಮಾಣ
- ವೈಜ್ಞಾನಿಕವಾಗಿ ಹೂಳು ತೆರವು, ಕೆರೆಯ ಸುತ್ತ ಜೈವಿಕ ಬೇಲಿ
- ಕೋಟಿ ವೃಕ್ಷ ಅಭಿಯಾನದಡಿ ಆಲ, ಅರಳಿ, ಬೇವು ಮುಂತಾದ ಗಿಡಗಳ ನಾಟಿ
- ಜಾನುವಾರುಗಳಿಗೆ ನೀರು ಕುಡಿಯಲು ಇಳಿಜಾರು ಪ್ರದೇಶ

ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ: ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:ನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಡಿ ₹22.70 ಕೋಟಿ ವೆಚ್ಚದಲ್ಲಿ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಆರಂಭಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಅಲ್ಲದೇ, ವೈದ್ಯಕೀಯ ಶಿಕ್ಷಣ ಇಲಾಖೆ ವತಿಯಿಂದ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ನೆಫ್ರೋ-ಯೂರಾಲಜಿ ಸಂಸ್ಥೆಗೆ ಅನೆಕ್ಸ್ ಕಟ್ಟಡ ನಿರ್ಮಿಸಲು ₹26 ಕೋಟಿ ಪರಿಷ್ಕೃತ ಅಂದಾಜಿಗೆ ಸಂಪುಟ ಒಪ್ಪಿಗೆ ನೀಡಿದೆ. ಇದಕ್ಕೆ ರಾಜ್ಯ ಸರ್ಕಾರ ₹8.50 ಕೋಟಿ ಮತ್ತು ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ₹17.50 ಕೋಟಿ ಭರಿಸಲಾಗುವುದು ಎಂದು ಹೇಳಿದರು.

₹3 ಹೆಚ್ಚಿಸಲು ಒಪ್ಪಿಗೆ

ಹಾಲು ದರವನ್ನು ಪ್ರತಿ ಲೀಟರ್‌ಗೆ ₹3 ಹೆಚ್ಚಿಸಲು ಸಚಿವ ಸಂಪುಟ ಸಭೆ ಅನುಮತಿ ನೀಡಿದೆ.

ಮೊಟ್ಟ ಮೊದಲು ಜೀವವಿಮೆ

ಪರಿಚಯಿಸುತ್ತಿದ್ದೇವೆ
ಎಲ್ ಐ ಸಿ ಯ ಜೀವನ್ ಕಿರಣ್
ಪ್ಲಾನ್ ಕ್ರ.:870 UIN:512N353V01

ಭವಿಷ್ಯದ ನಿರ್ಮಾಣವನ್ನು ಸಂರಕ್ಷಿಸಿ

ಅವಧಿ ಮುಕ್ತಾಯದ ತನಕ ಸಂರಕ್ಷಣೆಯನ್ನು ಪಡೆಯಿರಿ ಮತ್ತು ಆನಂತರ ಪ್ರೀಮಿಯಮ್* ಮರಳಿ ಪಡೆದುಕೊಳ್ಳಿ.



ಪಾಲಿಸಿ ಮುಕ್ತಾಯದಲ್ಲಿ, ಪಾವತಿಸಿದ ಪ್ರೀಮಿಯಂಗಳ* ಹಿಂತಿರುಗಿಸುವಿಕೆ

ಆಕರ್ಷಕ ಪ್ರಯೋಜನಗಳು

ಕಡಿಮೆ ವೆಚ್ಚದಲ್ಲಿ ಅತ್ಯಧಿಕ ವಿಮಾರಕ್ಷಣೆ | ಆಕರ್ಷಕ ಅಧಿಕ ವಿಮಾ ಮೊತ್ತದ ರಿಯಾಯಿತಿಗಳು | ಏಕ ಪ್ರೀಮಿಯಂ ಅಥವಾ ನಿಯಮಿತ ಪ್ರೀಮಿಯಂ | ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ವೈಯಕ್ತಿಕ, ಉಳಿತಾಯ, ಜೀವ ವಿಮಾ ಯೋಜನೆ

*ಮೇಲೆ ನಮೂದಿಸಲಾದ ಪ್ರೀಮಿಯಮ್‌ನಲ್ಲಿ ಯಾವುದೇ ಹೆಚ್ಚುವರಿ ಪ್ರೀಮಿಯಮ್, ಯಾವುದೇ ರೈಡರ್ ಪ್ರೀಮಿಯಮ್ ಮತ್ತು ತೆರಿಗೆಗಳು ಸೇರಿಲ್ಲ

LIC/M1/2023-24/04/Kan

ಈ ಯೋಜನೆ ಆನ್‌ಲೈನ್‌ನಲ್ಲಿಯೂ ಲಭ್ಯವಿದೆ

ಡೌನ್ ಲೋಡ್ ಮಾಡಿ ಎಲ್‌ಐಸಿ ಮೊಬೈಲ್ ಆಪ್ LIC digital | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827

ವಿವರಗಳಿಗಾಗಿ ನಿಮ್ಮ ಏಜೆಂಟರನ್ನು/ಸನಿಹದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿ ಅಥವಾ ನಿಮ್ಮ ನಗರದ ಹೆಸರನ್ನು SMS ಮಾಡಿ 56767474ಗೆ

ನಮ್ಮೊಂದಿಗೆ ಸೇರಿಕೊಳ್ಳಿ: LIC India Forever | IRDAI Regn No.: 512

ನಮ್ಮ ವಾಟ್ಸಾಪ್ ನಂ. 8976862090 ಹೇಳಿರಿ 'Hi'

ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
LIFE INSURANCE CORPORATION OF INDIA

ಕ್ಷಣ ಕ್ಷಣವೂ ನಿಮ್ಮೊಂದಿಗೆ

ಮೋಸದ ದೂರವಾಣಿ ಕರೆಗಳು ಮತ್ತು ಕಾಲ್ಪನಿಕ/ಕೃತ್ರಿಮ ಆಫರ್‌ಗಳಿಂದ ಜಾಗರೂಕರಾಗಿರಿ! ಐಆರ್‌ಡಿಎಐ ಯಾವತ್ತೂ ವಿಮಾ ಪಾಲಿಸಿಗಳ ಮಾರಾಟ, ಬೋನಸ್‌ಗಳ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಈ ಬಗೆಯ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಪೋಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳುತ್ತೇವೆ. ಅಪಾಯ ಅಂಶಗಳು, ಷರತ್ತು ಮತ್ತು ನಿಬಂಧನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಮಾರಾಟವನ್ನು ಮುಕ್ತಾಯಗೊಳಿಸುವ ಮುನ್ನ ದಯವಿಟ್ಟು ಮಾರಾಟ ಪುಸ್ತಿಕೆಯನ್ನು ಜಾಗರೂಕತೆಯಿಂದ ಓದಿಕೊಳ್ಳಿರಿ.

ಕಲಾಗ್ರಾಮದಲ್ಲಿ ನಿರ್ಮಿಸಲು ಯೋಜನೆ ರೂಪಿಸಿದ್ದ ಸಂಸ್ಕೃತಿ ಇಲಾಖೆ

ನಾಡದೇವಿಗಿಲ್ಲ ಪ್ರತಿಮೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ಪ್ರಥಮ ಭುವನೇಶ್ವರಿ ಪ್ರತಿಮೆ ನಿರ್ಮಾಣಕ್ಕೆ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅನುದಾನ ಒದಗಿಸಿಲ್ಲ. ಇದರಿಂದಾಗಿ ನಾಡದೇವಿಗೆ ಪ್ರತಿಮೆಯ ಸ್ವರೂಪ ಒದಗಿಸುವ ಕಾರ್ಯಕ್ಕೆ ಹಿನ್ನಡೆಯಾಗಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಸುಮಾರು ₹ 2 ಕೋಟಿ ವೆಚ್ಚದಲ್ಲಿ 30 ಅಡಿ ಎತ್ತರದ ಕಂಚಿನ ಪ್ರತಿಮೆ ನಿರ್ಮಿಸಲು ಇಲಾಖೆ ಯೋಜನೆ ರೂಪಿಸಿತ್ತು. ಇದಕ್ಕೆ ಅನುಮೋದನೆಯೂ ದೊರೆತಿತ್ತು. ಕಳೆದ ನವೆಂಬರ್ ತಿಂಗಳಲ್ಲಿಯೇ ಪ್ರತಿಮೆ ಸ್ಥಾಪಿಸಿ, ಚಾಲನೆ ನೀಡಲು ಸರ್ಕಾರ ಮುಂದಾಗಿತ್ತು. ಆದರೆ, ಪ್ರತಿಮೆಯ ಸ್ಥಳ ನಿಗದಿ ವಿಚಾರವಾಗಿ ಗೊಂದಲ ಉಂಟಾಗಿದ್ದರಿಂದ ಕಳೆದ ವರ್ಷ ಸಾಕಾರವಾಗಿರಲಿಲ್ಲ. ಬಳಿಕ ಚುನಾವಣೆ ನೀತಿ ಸಂಹಿತೆ ಜಾರಿಯಿಂದಾಗಿ ಪ್ರತಿಮೆ ನಿರ್ಮಾಣಕ್ಕೆ ಅನುದಾನ ಒದಗಿಸಿರಲಿಲ್ಲ. ಈಗ ಕಾಂಗ್ರೆಸ್ ನೇತೃತ್ವದ ಸರ್ಕಾರವು ಈ ಯೋಜನೆಯನ್ನು ಕೈಬಿಟ್ಟಿದೆ.

ನಾಡದೇವಿಯ ಪ್ರತಿಮೆಯನ್ನು ಜೆ.ಸಿ.ರಸ್ತೆಯಲ್ಲಿರುವ ಕನ್ನಡ ಭವನದ ಮುಂಭಾಗ ನಿರ್ಮಿಸಲು ಇಲಾಖೆ ಮುಂದಾಗಿತ್ತು. 10 ಅಡಿ ಎತ್ತರದ ಪೀಠದ ಮೇಲೆ ಪ್ರತಿಮೆ ಸ್ಥಾಪಿಸಿ, ಪೀಠದ ಸುತ್ತ ನಾಡಿನ ಸಾಂಸ್ಕೃತಿಕ ವೈಭವ ಚಿತ್ರಿಸುವುದು ಯೋಜನೆಯಲ್ಲಿತ್ತು. ಆದರೆ, ಕನ್ನಡ ಭವನದ ಮುಂಭಾಗ ಸ್ಥಳಾವಕಾಶದ ಕೊರತೆ ಎದುರಾಗಿತ್ತು. ಹೀಗಾಗಿ, ಕಲಾಗ್ರಾಮದಲ್ಲಿ ಪ್ರತಿಮೆ ನಿರ್ಮಿಸಲು ಅಧಿಕಾರಿಗಳು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. 30 ಎಕರೆಯಲ್ಲಿ ವ್ಯಾಪಿಸಿಕೊಂಡಿರುವ ಕಲಾಗ್ರಾಮದಲ್ಲಿ, ಸಂಸ್ಕೃತಿ ಇಲಾಖೆ 11 ಎಕರೆ ಪ್ರದೇಶವನ್ನು ನಿರ್ವಹಣೆ ಮಾಡುತ್ತಿದೆ.

ಭುವನೇಶ್ವರಿಯ ಪ್ರತಿಮೆ ನಿರ್ಮಿಸುವ ಯೋಜನೆ ಈಗ ಸರ್ಕಾರದ ಮುಂದಿಲ್ಲ. ಹಿಂದೆ ಏನಾಗಿತ್ತು ಎನ್ನುವುದರ ಬಗ್ಗೆ ಮಾಹಿತಿ ಪಡೆಯುತ್ತೇನೆ

ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

700 ಪ್ರತಿಮೆ: ಇಂಡಿಯನ್ ಫೌಂಡೇಷನ್ ಫಾರ್ ದಿ ಆರ್ಟ್ಸ್ ಸಂಸ್ಥೆಯು ಬೆಂಗಳೂರಿನ ಪ್ರತಿಮೆಗಳ ಬಗ್ಗೆ ಅಧ್ಯಯನ ಮಾಡಿದ್ದು, ಇಲ್ಲಿ 700 ಪ್ರತಿಮೆಗಳನ್ನು ಗುರುತಿಸಿದೆ. ಇವುಗಳಲ್ಲಿ ಅರ್ಧದಷ್ಟು ಪ್ರತಿಮೆಗಳು 10 ವರ್ಷಗಳಲ್ಲಿ ತಲೆಯೆತ್ತಿವೆ. ಕೆಂಪೇಗೌಡ ಹಾಗೂ ರಾಜ್‌ಕುಮಾರ್ ಅವರ ಪ್ರತಿಮೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇಲ್ಲಿ ಸರ್ಕಾರವು ಇದೇ ಮೊದಲ ಬಾರಿ ಭುವನೇಶ್ವರಿ ಪ್ರತಿಮೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿತ್ತು.

'ನಾಡದೇವಿಯ ಪ್ರತಿಮೆಯನ್ನು ಕಲಾಗ್ರಾಮದಲ್ಲಿ ಸುಮಾರು ಅರ್ಧ ಎಕರೆ ಪ್ರದೇಶದಲ್ಲಿ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಅಲ್ಲಿ ಪ್ರತಿಮೆ ನಿರ್ಮಾಣದಿಂದ ಪ್ರವಾಸಿಗರನ್ನು ಸೆಳೆಯಲು ಸಾಧ್ಯವಾಗುತ್ತಿತ್ತು. ಸ್ಥಳ, ಪ್ರತಿಮೆಯ ಸ್ವರೂಪ ಅಂತಿಮಗೊಳಿಸುವುದು ವಿಳಂಬವಾಯಿತು. ಅನುದಾನ ಇಲ್ಲವಾಗಿರುವುದರಿಂದ ಪ್ರತಿಮೆ ನಿರ್ಮಾಣ ಯೋಜನೆ ಕೈಬಿಟ್ಟಂತೆ' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಅಧಿಕೃತ ಚಿತ್ರ ಬಳಕೆ

ಭುವನೇಶ್ವರಿ ಪ್ರತಿಮೆ ವಿನ್ಯಾಸವೂ ಸಾಂಸ್ಕೃತಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿತ್ತು. ನಾಡದೇವಿ ಚಿತ್ರವನ್ನು ಆಯ್ಕೆ ಮಾಡುವ ಸಂಬಂಧ ಈ ಹಿಂದೆ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದ ಡಿ. ಮಹೇಂದ್ರ ಅಧ್ಯಕ್ಷತೆಯಯಲ್ಲಿ ಸಮಿತಿ ರಚಿಸಿತ್ತು. ಆ ಸಮಿತಿ ಕಲಾವಿದ ಕೆ. ಸೋಮಶೇಖರ್ ಅವರು ಸಿದ್ಧಪಡಿಸಿರುವ 'ನಾಡದೇವಿ'ಯ ಚಿತ್ರವನ್ನು ಶಿಫಾರಸು ಮಾಡಿತ್ತು. ಇದನ್ನು ಅಧಿಕೃವೆಂದು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿತ್ತು. ಅಂತಿಮವಾಗಿ ಇದೇ ಚಿತ್ರವನ್ನು ಬಳಸಿಕೊಂಡು, ಪ್ರತಿಮೆ ನಿರ್ಮಿಸಲು ನಿರ್ಧರಿಸಲಾಗಿತ್ತು. ವಿಗ್ರಹ ನಿರ್ಮಾಣದ ಜವಾಬ್ದಾರಿಯನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ನೀಡಲಾಗಿತ್ತು.

'ಕಲಾಗ್ರಾಮದಲ್ಲಿ ಭುವನೇಶ್ವರಿ ಪ್ರತಿಮೆ ನಿರ್ಮಿಸಿ, ಥೀಮ್ ಪಾರ್ಕ್ ರೂಪಿಸಿದಲ್ಲಿ ಪ್ರವಾಸಿ ತಾಣವಾಗಲಿದೆ. ಇದು ಸರ್ಕಾರಕ್ಕೆ ಆದಾಯದ ಮೂಲವೂ ಆಗಲಿದೆ' ಎಂದು ಡಿ. ಮಹೇಂದ್ರ ತಿಳಿಸಿದರು.

ಬಿಬಿಎಂಪಿ: 'ಆರ್‌ಆರ್‌ಆರ್ ನಗರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೌರಾಡಳಿತ ನಿರ್ದೇಶನಾಲಯದ 'ನನ್ನ ಜೀವನ, ನನ್ನ ಸ್ವಚ್ಛ ನಗರ' ಅಭಿಯಾನದಲ್ಲಿ ಬಿಬಿಎಂಪಿ 'ರಾಜ್ಯದ ಅತ್ಯುತ್ತಮ ಆರ್‌ಆರ್‌ಆರ್ ನಗರ'ವಾಗಿ ಪ್ರಶಸ್ತಿ ಗಳಿಸಿದೆ.

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ 'ನನ್ನ ಜೀವನ, ನನ್ನ ಸ್ವಚ್ಛ ನಗರ' ಧ್ಯೇಯವಾಕ್ಯದೊಂದಿಗೆ ಮೇ 15ರಿಂದ ಪರಿಸರ ದಿನ ಜೂನ್ 5ರವರೆಗೆ ರಾಷ್ಟ್ರೀಯ ಅಭಿಯಾನವನ್ನು ಪ್ರಾರಂಭಿಸಿತು. ಇದರ ಅಂಗವಾಗಿ ನಗರರಾಭಿವೃದ್ಧಿ ಇಲಾಖೆಯ ಪೌರಾಡಳಿತ ನಿರ್ದೇಶನಾಲಯವು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಭಿಯಾನ ಆಯೋಜಿಸಿತ್ತು. ಆರ್‌ಆರ್‌ಆರ್ (ಕಡಿತ, ಮರುಬಳಕೆ ಮತ್ತು ಸಂಸ್ಕರಣೆ) ಕೇಂದ್ರಗಳನ್ನು ತೆರೆಯಲು ಸೂಚಿಸಲಾಗಿತ್ತು.

ಬಿಬಿಎಂಪಿ 49 ವಾರ್ಡ್‌ಗಳಲ್ಲಿ ಆರ್.ಆರ್.ಆರ್ ಕೇಂದ್ರಗಳನ್ನು ತೆರೆದಿತ್ತು. ಮನೆಗಳಲ್ಲಿ ಬಳಕೆಯಾಗದ ಪುಸ್ತಕಗಳು, ಆಟಿಕೆಗಳು, ಕಬ್ಬಿಣದ ಉತ್ಪನ್ನ ಹಾಗೂ ಪ್ಲಾಸ್ಟಿಕ್ ಉತ್ಪನ್ನಗಳನ್ನು ಕೇಂದ್ರಗಳಿಗೆ ನೀಡಿದರೆ ಅದನ್ನು ಪುನರ್ ಬಳಕೆ ಮಾಡುವುದು, ಜೊತೆಗೆ ನಗರವನ್ನು ಸ್ವಚ್ಛ ನಗರವನ್ನಾಗಿಸುವ ಉದ್ದೇಶ ಹೊಂದಿತ್ತು.

'ನನ್ನ ಜೀವನ, ನನ್ನ ಸ್ವಚ್ಛ ನಗರ' ಅಭಿಯಾನದಲ್ಲಿ ವಿಭಿನ್ನ ಆಯ್ಕೆ ಮಾನದಂಡಗಳ ಆಧಾರದ ಮೇಲೆ ಬೆಂಗಳೂರು ನಗರವನ್ನು ರಾಜ್ಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಆರ್.ಆರ್.ಆರ್ ನಗರಗಳಲ್ಲಿ ಒಂದಾಗಿ ಆಯ್ಕೆ ಮಾಡಲಾಗಿದೆ.

ಪೌರಾಡಳಿತ ಸಚಿವ ರಹೀಮ್ ಖಾನ್ ಹಾಗೂ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಮಂಜುಶ್ರೀ ಬಿಬಿಎಂಪಿಗೆ 'ಅತ್ಯುತ್ತಮ ಆರ್‌ಆರ್‌ಆರ್ ನಗರ' ಪ್ರಶಸ್ತಿ ಹಾಗೂ ಪ್ರಮಾಣ ಪತ್ರ ವಿತರಿಸಿದರು. ಘನತ್ಯಾಜ್ಯ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್ ಪ್ರವೀಣ್ ಲಿಂಗಯ್ಯ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಸಂಸ್ಥೆಯ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ್ ಕಬಾಡೆ, ಚೀಫ್ ಮಾರ್ಷಲ್ ರಾಜಬೀರ್ ಸಿಂಗ್ ಇದ್ದರು

ನಗರದಲ್ಲಿ ನಡೆದ 'ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ' ಕುರಿತು ಪೌರಾಡಳಿತ ನಿರ್ದೇಶನಾಲಯ ಗುರುವಾರ ನಡೆಸಿದ ಕಾರ್ಯಾಗಾರದಲ್ಲಿ ಪೌರಾಡಳಿತ ಸಚಿವ ರಹೀಮ್ ಖಾನ್ ಹಾಗೂ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಮಂಜುಶ್ರೀ ಅವರು ಬಿಬಿಎಂಪಿಗೆ 'ಅತ್ಯುತ್ತಮ ಆರ್.ಆರ್.ಆರ್ ನಗರ' ಪ್ರಶಸ್ತಿ ಹಾಗೂ ಪ್ರಮಾಣ ಪತ್ರವನ್ನು ವಿತರಿಸಿದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಸಂಸ್ಥೆಯ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಬಸವರಾಜ್ ಕಬಾಡೆ, ಘನತ್ಯಾಜ್ಯ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್ ಪ್ರವೀಣ್ ಲಿಂಗಯ್ಯ, ಚೀಫ್ ಮಾರ್ಷಲ್ ರಾಜಬೀರ್ ಸಿಂಗ್ ಉಪಸ್ಥಿತರಿದ್ದರು.

ಅಭಿನಂದನೆ: ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಘನತ್ಯಾಜ್ಯ ವಿಭಾಗದ ಅಧಿಕಾರಿ, ಸಿಬ್ಬಂದಿಯನ್ನು ಅಭಿನಂದಿಸಿದ್ದಾರೆ.

ರಜತ ಮಹೋತ್ಸವ: ದೇಶದಾದ್ಯಂತ 300 ಸಾಂಸ್ಕೃತಿಕ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನದ ಸಹಯೋಗಕ್ಕೆ 25 ವರ್ಷಗಳು ಸಂದಿವೆ. ರಜತ ಮಹೋತ್ಸವದ ಪ್ರಯುಕ್ತ ಜಂಟಿಯಾಗಿ ದೇಶದಾದ್ಯಂತ 300ಕ್ಕೂ ಹೆಚ್ಚು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

ರಜತಮಹೋತ್ಸವದ ಭಾಗವಾಗಿ ಈ ವರ್ಷ 150 ವಿಭಿನ್ನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಮುಂದಿನ ವರ್ಷವೂ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. 300ಕ್ಕೂ ಅಧಿಕ ಕಾರ್ಯಕ್ರಮಗಳಲ್ಲಿ 4,600ಕ್ಕೂ ಹೆಚ್ಚು ಕಲಾವಿದರಿಗೆ ವೇದಿಕೆ ಕಲ್ಪಿಸಲಾಗುತ್ತದೆ. ಇಲ್ಲಿನ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಗ್ಯಾಲರಿಯಲ್ಲಿ ಇದೇ 28ರಿಂದ ಆ.8ರವರೆಗೆ ಕಲಾ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಭಾರತೀಯ ವಿದ್ಯಾಭವನದ ಜಂಟಿ ನಿರ್ದೇಶಕಿ ನಾಗಲಕ್ಷ್ಮೀ ಕೆ. ರಾವ್ ತಿಳಿಸಿದ್ದಾರೆ.

'ಚಂಡೀಗಡದಲ್ಲಿ 'ವಸುದೈವ ಕುಟುಂಬಕಂ', ಭುವನೇಶ್ವರ ದಲ್ಲಿ 'ಲಲಿತ ಕಲೆಗಳಲ್ಲಿ ಮಾನವೀಯ ಮೌಲ್ಯಗಳು', ಜೈಪುರದಲ್ಲಿ 'ಜಾನಪದ ಮತ್ತು ಬುಡಕಟ್ಟು ಸಂಸ್ಕೃತಿಯ ಹಬ್ಬಗಳು', ಪುಣೆಯಲ್ಲಿ 'ಕಥಾ ಕೀರ್ತನ', 'ನಾಗಪುರದಲ್ಲಿ ಕಲೆಗಳ ಮೂಲಕ ಭಾರತೀಯ ಇತಿಹಾಸ', ತಿರುವ ನಂತಪುರದಲ್ಲಿ 'ಪಂಚಭೂತಗಳು', ಕೊಲ್ಕತ್ತಾದಲ್ಲಿ 'ಕಾವ್ಯ-ನೃತ್ಯ-ಚಿತ್ರ', ಬೆಂಗಳೂರಿನಲ್ಲಿ 'ಫ್ಯೂಷನ್ ಸಂಗೀತ ಮತ್ತು ನೃತ್ಯ ಉತ್ಸವ' ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ' ಎಂದು ಹೇಳಿದ್ದಾರೆ.

'ಅಳಿವಿನಂಚಿನಲ್ಲಿರುವ ಭಾರತೀಯ ಜಾನಪದ ಮತ್ತು ಸಾಂಪ್ರದಾಯಿಕ ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವ ಪ್ರಯತ್ನ ಇದಾಗಿದ್ದು, ಈ ಯೋಜನೆಯಲ್ಲಿ ಯುವ ಮತ್ತು ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಅವಕಾಶ ಒದಗಿಸಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿಲಿಮಂಜಾರೊ ಪರ್ವತ ಏರಿದ 63ರ ವೈದ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಲ್ಲಿ ನೆಲೆಸಿರುವ ಕನ್ನಡತಿ ಡಾ. ಸ್ವರ್ಣಾಂಬಾ ಲೋಕೇಶ್ ಅವರು ತಮ್ಮ 63ನೇ ವಯಸ್ಸಿನಲ್ಲಿ ದಕ್ಷಿಣ ಆಫ್ರಿಕಾ ಖಂಡದ ಅತ್ಯಂತ ಎತ್ತರದ ಕಿಲಿಮಂಜಾರೊ ಪರ್ವತ ಏರಿದ್ದಾರೆ.

ಸ್ವರ್ಣಾಂಬಾ ಲೋಕೇಶ್

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ತಾಂಜೇನಿಯಾದಲ್ಲಿರುವ ಕಿಲಿಮಂಜಾರೊ ಪರ್ವತದ ಚಾರಣ ಕೈಗೊಳ್ಳಬೇಕಾದರೆ ಆರು ತಿಂಗಳು ಮುಂಚಿತವಾಗಿ ಸಿದ್ಧತೆ ಮಾಡಿಕೊಳ್ಳಬೇಕು. ಅದರಲ್ಲೂ, 60 ವರ್ಷ ದಾಟಿದವರು ಈ ಪರ್ವತದ ಚಾರಣ ಮಾಡಬೇಕಾದರೆ ಅದೊಂದು ಸಾಹಸವೇ ಸರಿ. ಆದರೆ, ದೈಹಿಕವಾಗಿ ಸದೃಢವಾಗಿರಬೇಕು' ಎಂದು ತಮ್ಮ ಅನುಭವ ಹಂಚಿಕೊಂಡರು.

'ಜುಲೈ 11ರಿಂದ 18ರ ನಡುವೆ ಈ ಚಾರಣವನ್ನು ಕೈಗೊಳ್ಳ ಲಾಗಿತ್ತು. ಈ ಚಾರಣದಲ್ಲಿ ಬೆಂಗಳೂರಿನ ಆಸ್ಟರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ದೇಶಕ ಡಾ.ಎಚ್.ವಿ. ಶಿವರಾಂ, ಅವರ ಪುತ್ರಿ ಚಂದನಾ ಶಿವರಾಂ, ಸ್ನೇಹಾ ಪಾಳೇಗಾರ್ ಅವರು ಭಾಗವಹಿಸಿದ್ದರು' ಎಂದು ಅವರು ತಿಳಿಸಿದ್ದಾರೆ.

ಕೆಎಸ್‌ಎಸ್‌ಐಡಿಸಿ ಲಾಭ ದ್ವಿಗುಣ; ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (ಕೆಎಸ್‌ಎಸ್‌ಐಡಿಸಿ) ಲಾಭ 2022–23ನೇ ಸಾಲಿನಲ್ಲಿ ದ್ವಿಗುಣಗೊಂಡಿದೆ.

2021–22ನೇ ಸಾಲಿನಲ್ಲಿ ₹25.98 ಕೋಟಿ ಲಾಭ ಗಳಿಸಿದ್ದ ನಿಗಮ, ಕಳೆದ ಆರ್ಥಿಕ ಸಾಲಿನಲ್ಲಿ ₹49.04 ಕೋಟಿ ಲಾಭ ಗಳಿಸಿದೆ. ಕೈಗಾರಿಕಾ ನಿವೇಶನಗಳ ಕ್ರಯಪತ್ರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ವಿತರಣೆ ಮಾಡಿರುವುದು ಈ ಸಾಲಿನ ಸಾಧನೆಯಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಸ್.ಜಿ. ಸೋಮಶೇಖರ್ ತಿಳಿಸಿದ್ದಾರೆ.

ಕೋವಿಡ್ ಹಾಗೂ ಆರ್ಥಿಕ ಹಿಂಜರಿತದಿಂದ ಎರಡ್ಮೂರು ವರ್ಷ ಉತ್ಪಾದನೆ ವಲಯಕ್ಕೆ ಬೇಡಿಕೆ ತಗ್ಗಿತ್ತು. ಆದ್ದರಿಂದ, ನವೋದ್ಯಮಿಗಳು ನಿಗದಿತ ಅವಧಿಯಲ್ಲಿ ಕೈಗಾರಿಕೆ ಸ್ಥಾಪಿಸಲು ಸಾಧ್ಯವಾಗಿರಲಿಲ್ಲ. ಕ್ರಯಪತ್ರ ವಿತರಣೆಯಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳಿದ್ದವು. ಅವುಗಳನ್ನು ನಿವಾರಿಸಿಕೊಂಡು ನವೋದ್ಯಮಿಗಳಿಗೆ ವಿತರಣೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ನವೋದ್ಯಮಿಗಳಿಗೆ ಹೆಚ್ಚಿನ ಅವಕಾಶ ನೀಡಿ, ಪ್ರೋತ್ಸಾಹಿಸುವ ಉದ್ದೇಶದಿಂದ ಕೈಗಾರಿಕಾ ಪುನರ್‌ಸ್ಥಾಪನೆ ನಿಯಮ ಜಾರಿಗೆ ತರಲಾಗಿದೆ. ಕನಿಷ್ಠ ದಂಡವನ್ನು ವಿಧಿಸಿ, ಕೈಗಾರಿಕೆಗಳ ಸ್ಥಾಪನೆಗೆ ಮತ್ತಷ್ಟು ಕಾಲಾವಕಾಶ ಒದಗಿಸಲಾಗಿದೆ. ಇದರಿಂದ ಉದ್ಯಮಿಗಳಿಗೂ ಅನುಕೂಲವಾಗಿದೆ, ಸಂಸ್ಥೆಗೂ ಲಾಭವಾಗಿದೆ. ಸಂಸ್ಥೆಯಲ್ಲಿ ಆರ್ಥಿಕ ಶಿಸ್ತು ತರಲಾಗಿದ್ದು, ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಿದ್ದರಿಂದ 2022-23ನೇ ಸಾಲಿನಲ್ಲಿ ಲಾಭಾಂಶದ ಹೆಚ್ಚಳವಾಗಲು ಕಾರಣವಾಗಿದೆ ಎಂದು ವಿವರಿಸಿದ್ದಾರೆ.

ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿ ನಿಗಮವು ಐದು ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸುತ್ತಿದೆ ಎಂದು ಸೋಮಶೇಖರ್ ಹೇಳಿದ್ದಾರೆ.

ಕೆಂಪಾದವೋ...

ಬಸವನಗುಡಿಯ ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯವು ನಗರದಲ್ಲಿ ಗುರುವಾರ ಹಮ್ಮಿಕೊಂಡ 'ಕಲಾ ಪರ್ವ-2023' ಅಂತರ ಕಾಲೇಜು ಸಾಂಸ್ಕೃತಿಕ ಹಬ್ಬದಲ್ಲಿ ವಿದ್ಯಾರ್ಥಿಗಳು ಫ್ಯಾಷನ್ ಶೋ ನಡೆಸಿಕೊಟ್ಟರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ದತ್ತು: ಎಲ್ಲರಿಗೂ ಅನ್ವಯವಾಗುವ ಜುವೆನೈಲ್ ಜಸ್ಟಿಸ್ ಕಾಯ್ದೆ

ಟೋಲ್: ವರ್ಷದಲ್ಲೇ ₹14,121 ಕೋಟಿ ವರಮಾನ ಹೆಚ್ಚಳ 7

ಮಳೆ ಮಂದ; ನೆರೆ ಆತಂಕ ದೂರ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,266	19,659	₹61,660 (ಬೆಂಗಳೂರು)	₹77,500 (ಬೆಂಗಳೂರು)	81.92

ತಿಂಗಳಿಗೊಮ್ಮೆ ಜಿಲ್ಲಾವಾರು ಶಾಸಕರ ಸಭೆ: ಸಿದ್ದರಾಮಯ್ಯ ಭರವಸೆ

ಅಸಮಾಧಾನದ ಅಹವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಗಾವಣೆ ಶಿಫಾರಸು ಮತ್ತು ಅನುದಾನ ವಿಚಾರದಲ್ಲಿ ಸಚಿವರು ಸ್ಪಂದಿಸುತ್ತಿಲ್ಲವೆಂದು ಕೆಲವು ಶಾಸಕರು ಅಪಸ್ವರ ಎತ್ತಿದ ಬೆನ್ನಲ್ಲೆ, ಗುರುವಾರ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ, 'ಏನೇ ಅಸಮಾಧಾನಗಳಿದ್ದರೂ ನೇರವಾಗಿ ನನಗೆ ಹೇಳಿ. ಪಕ್ಷದ ವೇದಿಕೆಯಲ್ಲಿ ಚರ್ಚಿಸಿ' ಎಂದು ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿ ಹೇಳಿದ್ದಾರೆ.

ಹೋಟೆಲ್ ರ‍್ಯಾಡಿಸನ್ ಬ್ಲೂನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಆಡಳಿತಾತ್ಮಕ ಒತ್ತಡಗಳ ಮಧ್ಯೆಯೂ ನಾನು ತಿಂಗಳಿಗೊಮ್ಮೆ ಜಿಲ್ಲಾವಾರು ಶಾಸಕರ ಸಭೆ ಕರೆಯುತ್ತೇನೆ. ಕ್ಷೇತ್ರದ ಕುಂದು ಕೊರತೆಗಳ ಬಗ್ಗೆ ಚರ್ಚಿಸುತ್ತೇನೆ. ಸರ್ಕಾರದಿಂದ ತುರ್ತಾಗಿ ಆಗಬೇಕಿರುವ ಕೆಲಸಗಳು ಸಮರ್ಪಕವಾಗಿ ಆಗುವಂತೆ ನೋಡಿಕೊಳ್ಳುತ್ತೇನೆ' ಎಂದು ಭರವಸೆ ನೀಡಿದ್ದಾರೆ.

'ಕೆಲವು ಸಚಿವರ ಮೇಲೆ ಶಾಸಕರು ಅಸಮಾಧಾನಗೊಂಡಿದ್ದಾರೆ. ಪತ್ರ ಬರೆದು ಸಭೆ ಕರೆಯಲು ಒತ್ತಾಯಿಸಿದರು. ಏನೇ ಅಸಮಾಧಾನ ಇದ್ದರೂ ನನ್ನ ಗಮನಕ್ಕೆ ತೆಗೆದುಕೊಂಡು ಬನ್ನಿ. ಮಾಧ್ಯಮಗಳ ಮುಂದೆ ಮಾತನಾಡಬೇಡಿ. ನಕಲಿ ಪತ್ರ ಕೂಡ ಹರಿದಾಡಿತು. ಬಿಜೆಪಿ ಇಂತಹ ವಿಷಯಗಳ ಬಗ್ಗೆ ಕಾಯುತ್ತಿರುತ್ತದೆ. ಹೀಗಾಗಿ, ಏನೇ ಅಸಮಾಧಾನ ಇದ್ದರೂ ಪಕ್ಷದ ವೇದಿಕೆಯಲ್ಲಿ ಚರ್ಚಿಸೋಣ ಎಂದು ಸಲಹೆ ನೀಡಿದರು' ಎಂದು ಗೊತ್ತಾಗಿದೆ.

ಮುಖ್ಯಮಂತ್ರಿ ಮಾತನಾಡುತ್ತಿದ್ದಾಗ ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿ ಮಧ್ಯಪ್ರವೇಶಿಸಿ, 'ನಮ್ಮಿಂದ ಪತ್ರ ಬಂದಿದೆ ಎಂದು ಗೊಂದಲ ಶುರುವಾಗಿದೆ. ನಾವು ಪತ್ರಕ್ಕೆ ಸಹಿ ಹಾಕಿರುವುದು ನಿಜ. ಆದರೆ, ಮಾಧ್ಯಮಗಳಲ್ಲಿ ಬರುತ್ತಿರುವ ಪತ್ರ ಬೇರೆ. ನಿಮ್ಮ ಗಮನ ಸೆಳೆಯಲು ನಾವು ಪತ್ರ ಬರೆದಿದ್ದೆವು. ಅದು ಇಷ್ಟು ಬೆಳೆಯುತ್ತದೆ ಎಂದು ಅಂದುಕೊಂಡಿರಲಿಲ್ಲ ಎಂದಿದ್ದಾರೆ' ಎಂದು ಹೇಳಲಾಗಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ವಿಧಾನಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹಮದ್, ಗೃಹ ಸಚಿವ ಜಿ. ಪರಮೇಶ್ವರ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದರು ಪ್ರಜಾವಾಣಿ ಚಿತ್ರ

6ನೇ ಪುಟ ನೋಡಿ

ವರ್ಗಾವಣೆ: ಸಂಪುಟ ಸಭೆಯಲ್ಲಿ ಮಾರ್ದನಿ

ಸಚಿವರೇ ಹಣಕ್ಕಾಗಿ ಬೇಡಿಕೆ ಇಡುತ್ತಿರುವ ಕುರಿತು ಆಕ್ಷೇಪ ವ್ಯಕ್ತಪಡಿಸಿ ಶಾಸಕರು ಬರೆದಿದ್ದಾರೆ ಎನ್ನಲಾದ ಪತ್ರದ ವಿಷಯ ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಮಾರ್ದನಿಸಿತು.

ಸಭೆಯಲ್ಲಿ ಮಾತನಾಡಿದ ಕೆಲ ಸಚಿವರು ಮುಖ್ಯಮಂತ್ರಿಗೆ ಸಮಜಾಯಿಷಿ ನೀಡಿ ತಮ್ಮಿಂದ ಯಾವುದೇ ತಪ್ಪಾಗಿಲ್ಲ ಎಂದು ಅಲವತ್ತುಕೊಂಡರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಗೂ ಮುನ್ನ ನಡೆದ ಸಚಿವ ಸಂಪುಟ ಸಭೆ ಸುದೀರ್ಘವಾಗಿ ನಡೆಯಿತು. ಪ್ರಮುಖ ವಿಷಯಗಳ ತೀರ್ಮಾನದ ಬಳಿಕ ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಸಮಯ ಶಾಸಕರ ಪತ್ರದ ಬಗ್ಗೆಯೇ ಚರ್ಚಿಸಲಾಯಿತು ಎಂದು ಮೂಲಗಳು ಹೇಳಿವೆ.

6ನೇ ಪುಟ ನೋಡಿ

ರಸ್ತೆ, ಹೆದ್ದಾರಿ ಅಭಿವೃದ್ಧಿಗೆ ಪ್ರಾಧಿಕಾರ

ಖಾಸಗಿ ಬಂಡವಾಳ ಆಕರ್ಷಣೆಗೆ ಆದ್ಯತೆ • ಹೆಚ್ಚಲಿವೆ ಟೋಲ್ ರಸ್ತೆಗಳು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಮತ್ತು ಸಾರ್ವಜನಿಕ ಸಹ ಭಾಗಿತ್ವದಲ್ಲಿ (ಪಿಪಿಪಿ) ರಸ್ತೆಗಳು ಮತ್ತು ಹೆದ್ದಾರಿಗಳ ಅಭಿವೃದ್ಧಿಗಾಗಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ರಾಜ್ಯ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ'ವನ್ನು ರಚಿಸಲು ಸರ್ಕಾರ ನಿರ್ಧರಿಸಿದೆ.

ಎಚ್‌.ಕೆ.ಪಾಟೀಲ

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ. ಖಾಸಗಿಯವರು ಬಂಡವಾಳ ಹೂಡಿ ರಸ್ತೆ ಅಭಿವೃದ್ಧಿ ಪಡಿಸಿದ ರಸ್ತೆ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಟೋಲ್ ನೀಡಿಯೇ ಸಂಚರಿಸಬೇಕಾದ ಪರಿಸ್ಥಿತಿ ಎದುರಾಗುವ ಸಾಧ್ಯತೆ ಇದೆ.

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ.ಪಾಟೀಲ ಅವರು, ಈ ಪ್ರಾಧಿಕಾರದ ಮೂಲಕ ಖಾಸಗಿ ಬಂಡವಾಳವನ್ನು ಆಕರ್ಷಿಸಲಾಗುವುದು ಎಂದರು.

ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಈ ಪ್ರಾಧಿಕಾರ ಬರಲಿದ್ದು, ಇದು ಪಿಪಿಪಿ ಯೋಜನೆಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ರಾಜ್ಯದ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಯೋಜನೆಗಳ ಆದ್ಯತಾ ಪಟ್ಟಿ ತಯಾರಿಸುವುದು, ಪ್ರವಾಸೋದ್ಯಮ, ಅಂತರ ರಾಜ್ಯ ಸಂಪರ್ಕಿಸುವ ಹೆದ್ದಾರಿಗಳು, ಕೈಗಾರಿಕಾ ಕಾರಿಡಾರ್ ಹೆದ್ದಾರಿಗಳ ಅಭಿವೃದ್ಧಿ ಯೋಜನೆಗಳಿಗೆ ಯೋಜನಾ ವರದಿ ಮತ್ತು ಕಾರ್ಯ ಸಾಧ್ಯತಾ ವರದಿಗಳನ್ನು ಪ್ರಾಧಿಕಾರ ತಯಾರಿಸಲಿದೆ ಎಂದರು.

ರಸ್ತೆ ಅಭಿವೃದ್ಧಿಗಾಗಿ ಹೆಚ್ಚಿನ ಖಾಸಗಿ ಬಂಡವಾಳ ಆಕರ್ಷಿಸಲು ಸೂಕ್ತ ಯೋಜನೆಗಳ ಗುರುತಿಸುವಿಕೆ ಮತ್ತು ತಾತ್ವಿಕ ಅನುಮೋದನೆಯನ್ನು ಪ್ರಾಧಿಕಾರ ನೀಡಲಿದೆ ಎಂದು ಪಾಟೀಲ ತಿಳಿಸಿದರು.

6ನೇ ಪುಟ ನೋಡಿ

ಮಕ್ಕಳಿಗೆ ಮೊಟ್ಟೆ: ಖರೀದಿಗೆ ಟೆಂಡರ್

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಿಗೆ ಮತ್ತು ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ವಿತರಿಸುವ ಮೊಟ್ಟೆಯನ್ನು ರಾಜ್ಯ ಮಟ್ಟದಲ್ಲಿ ಕೆಟಿಪಿಪಿ ಕಾಯ್ದೆಯಡಿ ಟೆಂಡರ್ ಕರೆದು ಖರೀದಿಸಲು ಸರ್ಕಾರ ನಿರ್ಧರಿಸಿದೆ.

ಒಂದು ಮೊಟ್ಟೆಗೆ ₹6 ಮೀರದಂತೆ ಖರೀದಿಸಬೇಕು. ಇದಕ್ಕಾಗಿ ₹297.19 ಕೋಟಿ ಅನುದಾನ ಒದಗಿಸಲಾಗುತ್ತದೆ.

ಅಂಗನವಾಡಿಗಳಿಗೆ ಕಳಪೆ ಮೊಟ್ಟೆ ವಿತರಿಸುತ್ತಿರುವ ಬಗ್ಗೆ ಇತ್ತೀಚೆಗೆ 'ಪ್ರಜಾವಾಣಿ' ವರದಿ ಮಾಡಿತ್ತು. ಸ್ಥಳೀಯವಾಗಿ ಖರೀದಿ ಮಾಡುತ್ತಿರುವುದರಿಂದಾಗಿ ಗುಣಮಟ್ಟದ ಮೊಟ್ಟೆ ಸಿಗುತ್ತಿಲ್ಲ ಎಂಬ ದೂರುಗಳಿದ್ದವು.

ಕಲ್ಲುಗಣಿ: ₹6,105 ಕೋಟಿ ದಂಡ ಬಾಕಿ

ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಮತ್ತು ಗುತ್ತಿಗೆ ಪ್ರದೇಶಕ್ಕೆ ಹೊಂದಿಕೊಂಡಂತೆ ಒತ್ತುವರಿ ಮಾಡಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಉಪಖನಿಜ ತೆಗೆದು ರಾಜಧನ ಪಾವತಿಸದೇ ಸಾಗಣೆ ಮಾಡಿದವರಿಗೆ ವಿಧಿಸಿರುವ ದಂಡವನ್ನು ಒಂದು ಬಾರಿ ತೀರುವಳಿ ಮೂಲಕ ಪಾವತಿಗೆ ಅವಕಾಶ ನೀಡಲು ಸಂಪುಟ ಸಭೆ ತೀರ್ಮಾನಿಸಿದೆ.

ಇದನ್ನು ಹೇಗೆ ಜಾರಿ ಮಾಡಬೇಕು ಎಂಬ ಬಗ್ಗೆ ಚರ್ಚಿಸಲು ಸಚಿವ ಸಂಪುಟ ಉಪಸಮಿತಿ ರಚಿಸಲು ನಿರ್ಧರಿಸಲಾಗಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಒಟ್ಟು ಎಂಟು ವರ್ಷಗಳಲ್ಲಿ ಹೆಚ್ಚುವರಿಯಾಗಿ ಉಪಖನಿಜ ತೆಗೆದು, ರಾಜಧನ ಪಾವತಿಸದೇ ಸಾಗಣೆ ಮಾಡಿದ್ದಕ್ಕಾಗಿ ವಿವಿಧ ಗಣಿಮಾಲೀಕರಿಗೆ ಒಟ್ಟು ₹6,105 ಕೋಟಿ ದಂಡ ವಿಧಿಸಲಾಗಿದೆ. ಅದರ ವಸೂಲಿ ಆಗಿಲ್ಲ. ಈಗ ವಸೂಲಿ ಮಾಡಲು ತೀರ್ಮಾನಿಸಲಾಗಿದೆ ಎಂದರು.

ಸೆ.15ರವರೆಗೆ ಇ.ಡಿ ನಿರ್ದೇಶಕರ ಅವಧಿ ವಿಸ್ತರಣೆ

ನವದೆಹಲಿ: ಜಾರಿ ನಿರ್ದೇಶನಾಲಯದ ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರಾವಧಿಯನ್ನು ಸುಪ್ರೀಂ ಕೋರ್ಟ್ ಸೆ.15ರವರೆಗೆ ವಿಸ್ತರಿಸಿದೆ. 'ಕೇಂದ್ರದ ವಾದ ಪುರಸ್ಕರಿಸಿ 'ಸಾರ್ವಜನಿಕ ಮತ್ತು ರಾಷ್ಟ್ರೀಯ ಹಿತಾಸಕ್ತಿ' ಆಧರಿಸಿ ವಿಸ್ತರಿಸಲಾಗಿದೆ' ಎಂದು ತಿಳಿಸಿತು. 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆತ್ತಲೆ ಮೆರವಣಿಗೆ ಸಿಬಿಐ ತನಿಖೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಇಬ್ಬರು ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಬೆತ್ತಲೆ ಮೆರವಣಿಗೆ ಕೃತ್ಯದ ತನಿಖೆಯನ್ನು ಸಿಬಿಐ ನಡೆಸಲಿದೆ. 'ಮಣಿಪುರದ ಹೊರಗೆ ತನಿಖೆ ನಡೆಸಬೇಕು ಎಂದು ಕೇಂದ್ರ ಸರ್ಕಾರ ಕೇಳಲಿದೆ' ಎಂದು ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಣಿಪುರದ ಹೊರಗೆ ನೆರೆಯ ಅಸ್ಸಾಂನಲ್ಲಿ ತನಿಖೆಗೆ ಅವಕಾಶ ಕೋರಿ ಕೇಂದ್ರ ಸರ್ಕಾರ ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸುವ ಸಾಧ್ಯತೆಯಿದೆ. 'ಗಂಭೀರವಾದ ಈ ಕೃತ್ಯದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಎಲ್ಲ ರೀತಿಯ ಯತ್ನ ಮಾಡಲಾಗುವುದು' ಎಂದರು.

ಅವರ ಪ್ರಕಾರ, ಮಣಿಪುರ ಹಿಂಸಾಚಾರದ ಐದು ಗಂಭೀರವಾದ ಕೃತ್ಯಗಳನ್ನು ಈಗಾಗಲೇ ಸಿಬಿಐ ತನಿಖೆಗೆ ಒಪ್ಪಿಸಲಾಗಿದೆ. ಮಣಿಪುರದ ಮೈತೇಯಿ, ಕುಕಿ ಸಮುದಾಯದವರ ಜೊತೆಗೆ ಕೇಂದ್ರ ಗೃಹ ಸಚಿವಾಲಯ ಸಂಪರ್ಕದಲ್ಲಿದ್ದು, ಪರಿಸ್ಥಿತಿ ಸಹಜಸ್ಥಿತಿಗೆ ತರುವ ಪ್ರಯತ್ನಗಳು ನಡೆದಿವೆ.

ಬೆತ್ತಲೆ ಮೆರವಣಿಗೆ ಕೃತ್ಯದ ಮೊಬೈಲ್ ಚಿತ್ರೀಕರಣ ಮಾಡಿದ್ದ ವ್ಯಕ್ತಿಯನ್ನು ಬಂಧಿಸಿದ್ದು, ಆತನ ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಬೆತ್ತಲೆ ಮೆರವಣಿಗೆಯ ವಿಡಿಯೊ ಸೋರಿಕೆ ಸೇರಿದಂತೆ ಎಲ್ಲ ವಿವರ ತಿಳಿಯಲಿದೆ ಎಂದು ಆಶಿಸಿದರು. ಜನಾಂಗೀಯ ದ್ವೇಷದಿಂದಾಗಿ ಮೂರು ತಿಂಗಳಿನಿಂದ ಮಣಿಪುರದಲ್ಲಿ ಹಿಂಸಾಚಾರ ನಡೆಯುತ್ತಿದೆ. ಸುಮಾರು 160 ಜನರು ಮೃತಪಟ್ಟಿದ್ದಾರೆ. ಮೇ 4ರಂದು ನಡೆದಿದ್ದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಕೃತ್ಯದ ವಿಡಿಯೊ ರಾಷ್ಟ್ರವ್ಯಾಪಿ ತೀವ್ರ ಚರ್ಚೆ, ಆಕ್ರೋಶಕ್ಕೆ ಕಾರಣವಾಗಿತ್ತು.

ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬು ಸುಂದರ್ ಕಾಲೇಜಿಗೆ ಗುರುವಾರ ಭೇಟಿ ನೀಡಿದರು. ಕಾಲೇಜಿನ ನಿರ್ದೇಶಕಿ ರಶ್ಮಿ ಕೃಷ್ಣಪ್ರಸಾದ್ ಇದ್ದರು –ಪ್ರಜಾವಾಣಿ ಚಿತ್ರ

ಶೌಚಾಲಯದಲ್ಲಿ ರಹಸ್ಯ ಕ್ಯಾಮೆರಾ ಇರಲಿಲ್ಲ: ಖುಷ್ಬು

ಪ್ರಜಾವಾಣಿ ವಾರ್ತೆ

ಉಡುಪಿ: 'ಇಲ್ಲಿಯ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ಯಾವುದೇ ರಹಸ್ಯ ಕ್ಯಾಮೆರಾ ಇರಿಸಿರಲಿಲ್ಲ. ಸಾಮಾಜಿಕ ಜಾಲತಾಣದಲ್ಲಿ ವದಂತಿ ಹರಡಬೇಡಿ' ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬು ಸುಂದರ್ ಹೇಳಿದರು.

ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ಪ್ರಕರಣದ ವಿಚಾರಣೆ ನಡೆಸಲು ಗುರುವಾರ ಕಾಲೇಜಿಗೆ ಭೇಟಿ ನೀಡಿದ ಅವರು ಕಾಲೇಜಿನ ನಿರ್ದೇಶಕಿ ರಶ್ಮಿ ಕೃಷ್ಣಪ್ರಸಾದ್, ಆಡಳಿತ ಮಂಡಳಿಯ ಪ್ರಮುಖರು, ಸಂತ್ರಸ್ತೆ ಹಾಗೂ ಕಾಲೇಜಿನ ಹಲವು ವಿದ್ಯಾರ್ಥಿನಿಯರ ಜತೆ ಸುದೀರ್ಘ ಚರ್ಚೆ ನಡೆಸಿದರು. ಘಟನೆ ನಡೆದಿದೆ ಎನ್ನಲಾದ ಕಾಲೇಜಿನ ಶೌಚಾಲಯಕ್ಕೆ ತೆರಳಿ ಪರಿಶೀಲಿಸಿದರು.

6ನೇ ಪುಟ ನೋಡಿ

ಶಂಕಿತ ಉಗ್ರರ 20 ಬ್ಯಾಂಕ್ ಖಾತೆಗಳಿಗೆ ₹ 23 ಲಕ್ಷ ಜಮೆ

ಸ್ಫೋಟ: ವಿದೇಶಿಯರಿಂದ ₹ 15 ಲಕ್ಷ

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು, ಮಂಗಳೂರು ಸೇರಿದಂತೆ ಹಲವು ನಗರಗಳಲ್ಲಿ ಬಾಂಬ್ ಸ್ಫೋಟಿಸಿ ಜನರನ್ನು ಕೊಲ್ಲಲು ಸಂಚು ರೂಪಿಸಿದ ಆರೋಪ ಹೊತ್ತಿರುವ ಶಂಕಿತ ಉಗ್ರರಿಗೆ ಕೆಲ ವಿದೇಶಿಯರು ₹ 15 ಲಕ್ಷ ನೀಡಿರುವ ಮಾಹಿತಿಯನ್ನು ಸಿಸಿಬಿ ಪೊಲೀಸರು ಪುರಾವೆ ಸಮೇತ ಪತ್ತೆ ಮಾಡಿದ್ದಾರೆ.

ದುಬೈ ಹಾಗೂ ಇತರೆ ದೇಶಗಳಲ್ಲಿರುವ ವಿದೇಶಿಯರು, ಪ್ರಕರಣದ ಪ್ರಮುಖ ಆರೋಪಿ ಜುನೇದ್ ಅಹಮ್ಮದ್ ಮೂಲಕ ಶಂಕಿತರ ಖಾತೆಗಳಿಗೆ ಹಣ ಜಮೆ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಬ್ಯಾಂಕ್ ಖಾತೆಗಳ ವಿವರ ಸಂಗ್ರಹಿಸಿರುವ ಸಿಸಿಬಿ ಪೊಲೀಸರು, ಹಣ ನೀಡಿರುವ ವಿದೇಶಿಯರು ಯಾರು? ಅವರ ಉದ್ದೇಶವೇನು ? ಎಂಬುದನ್ನು ಪತ್ತೆ ಹಚ್ಚಲು ತನಿಖೆ ಮುಂದುವರಿಸಿದ್ದಾರೆ.

'ಶಂಕಿತ ಉಗ್ರರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ ಹಾಗೂ ಮೊಹಮ್ಮದ್ ಉಮರ್ ಖಾತೆಗಳಿಗೆ ಹಣ ಬಂದಿರುವುದಕ್ಕೆ ಪುರಾವೆಗಳು ಸಿಕ್ಕಿವೆ' ಎಂದು ಮೂಲಗಳು ಹೇಳಿವೆ.

'ಬೆಂಗಳೂರು ಸರಣಿ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಟಿ.ನಾಸೀರ್, ಸದ್ಯ ಜೈಲಿನಲ್ಲಿದ್ದಾನೆ. ಆರ್‌.ಟಿ. ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೊಲೆ ಪ್ರಕರಣದಲ್ಲಿ ಬಂಧಿತರಾಗಿದ್ದ ಜುನೇದ್ ಅಹಮ್ಮದ್ ಹಾಗೂ ಇತರೆ ಆರೋಪಿಗಳು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಾಸೀರ್ ಜೊತೆ ಸ್ನೇಹ ಬೆಳೆಸಿಕೊಂಡಿದ್ದರು. ಧರ್ಮ ರಕ್ಷಣೆಗಾಗಿ ಬಾಂಬ್ ಸ್ಫೋಟಿಸುವಂತೆ ಹೇಳಿದ್ದ ನಾಸೀರ್, ಅದಕ್ಕೆ ಆರ್ಥಿಕ ಸಹಾಯ ಮಾಡುವುದಾಗಿ ತಿಳಿಸಿದ್ದ. ಇದಕ್ಕೆ ಜುನೇದ್ ಹಾಗೂ ಇತರರು ಒಪ್ಪಿದ್ದರು. ಇದಾದ ಬಳಿಕವೇ ಶಂಕಿತರ ಖಾತೆಗಳಿಗೆ ಹಂತ ಹಂತವಾಗಿ ಹಣ ಬಂದಿದೆ'.

20 ಖಾತೆಗಳ ವಿವರ ಸಂಗ್ರಹ: 'ಶಂಕಿತ ಐವರ ಹೆಸರಿನಲ್ಲಿರುವ 20 ಪ್ರತ್ಯೇಕ ಬ್ಯಾಂಕ್ ಖಾತೆಗಳಿಗೆ ಸುಮಾರು ₹ 23 ಲಕ್ಷ ಜಮೆ ಆಗಿದೆ. ಅದರಲ್ಲಿ ₹ 15 ಲಕ್ಷ ವಿದೇಶಿಯರಿಂದ ಬಂದಿದೆ. ಬಹುಪಾಲು ಹಣವನ್ನು ಶಂಕಿತರು ಡ್ರಾ ಮಾಡಿಕೊಂಡಿರುವುದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ಜಾಹೀದ್ ತಬ್ರೇಜ್‌ಗೆ ಹಣದ ವ್ಯವಹಾರದಲ್ಲಿ ಹೆಚ್ಚಿನ ತಿಳಿವಳಿಕೆ ಇದೆ. ಹೀಗಾಗಿ, ಈತನ ಮೂಲಕವೇ ಹೆಚ್ಚು ಬಾರಿ ಬ್ಯಾಂಕ್ ವಹಿವಾಟು ನಡೆದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ನಾಸೀರ್ 8 ದಿನ ಸಿಸಿಬಿ ಕಸ್ಟಡಿಗೆ

ಪ್ರಮುಖ ಆರೋಪಿ ಟಿ.ನಾಸೀರ್‌ನನ್ನು ಹೆಚ್ಚಿನ ವಿಚಾರಣೆಗಾಗಿ ಎಂಟು ದಿನಗಳವರೆಗೆ ಸಿಸಿಬಿ ಪೊಲೀಸರ ಕಸ್ಟಡಿಗೆ ವಹಿಸಲಾಗಿದೆ.

ಬೆಂಗಳೂರು ಸರಣಿ ಬಾಂಬ್ ಸ್ಫೋಟ ಸೇರಿದಂತೆ 36 ಪ್ರಕರಣಗಳಲ್ಲಿ ಭಾಗಿಯಾಗಿರುವ ನಾಸೀರ್ ಸದ್ಯ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದಾನೆ. 'ನಾಸೀರ್ ಸೂಚನೆಯಂತೆ ಶಂಕಿತರು ಕೆಲಸ ಮಾಡುತ್ತಿದ್ದರು. ಹೀಗಾಗಿ, ನಾಸೀರ್‌ನನ್ನು ವಿಚಾರಣೆಗೆ ಒಳಪಡಿಸಬೇಕಿದ್ದು, ಕಸ್ಟಡಿಗೆ ನೀಡಿ' ಎಂದು ಸಿಸಿಬಿ ಪೊಲೀಸರ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಾದ ಜಿ.ಎನ್. ಅರುಣ್ ಹಾಗೂ ಬಿ.ಎಸ್. ಪಾಟೀಲ ಅವರು ಎನ್‌ಐಎ ವಿಶೇಷ ನ್ಯಾಯಾಲಯವನ್ನು ಕೋರಿದ್ದರು. ಮನವಿ ಪುರಸ್ಕರಿಸಿದ ನ್ಯಾಯಾಧೀಶ ಗಂಗಾಧರ ಅವರು, ನಾಸೀರ್‌ನನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದರು. ಶುಕ್ರವಾರ ಬೆಳಿಗ್ಗೆ ಕಸ್ಟಡಿಗೆ ಪಡೆಯಲು ಸಿಸಿಬಿ ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ.

ಭಾರತದ ಸೆಮಿಕಂಡಕ್ಟರ್ ಪಯಣ

ಹಿಂದಿನ ದಿನಗಳ ಕಲ್ಪನೆ

"ಮೈಕ್ರೋಪ್ರೊಸೆಸರ್‌ಗಳು ಮಾರುಕಟ್ಟೆಯಾದ್ಯಂತ ಅಗ್ಗದ ದರದಲ್ಲಿ ದೊರೆಯಬೇಕಾದರೆ ನಾವೇಕೆ ಭಾರತದಲ್ಲಿ ಇವನ್ನು ಉತ್ಪಾದನೆ ಮಾಡಬೇಕು"

1960: ಅಧಿಕಾರಶಾಹಿಗಳ ಆಲಸ್ಯತೆಯಿಂದಾಗಿ ದೇಸಿ ಕಂಪನಿಗಳಿಗೆ ಹಿನ್ನಡೆ

1970: ಖಂಡಾಂತರ ಕಂಪನಿಗಳ ಅಗ್ಗದ ಉತ್ಪನ್ನಗಳ ಹಾವಳಿಯನ್ನು ತಡೆಯಲು ದೇಸಿ ಕಂಪನಿಗಳಿಗೆ ಬೆಂಬಲ ನೀಡಲಿಲ್ಲ

1980: ಭಾರತದ ಏಕೈಕ ವಿಎಲ್‌ಎಸ್‌ಐ ನಿಗೂಢ ಅಗ್ನಿಗೆ ಆಹುತಿಯಾಯಿತು ಮತ್ತು ಇತರೆ ಏಷ್ಯನ್ ದೇಶಗಳಿಗೆ ಅವಕಾಶ ನೀಡಿತು

1990: ನೀತಿಗಳ ಜಾಲದಿಂದಾಗಿ ಉದ್ಯಮಶೀಲತೆ ಅವಸಾನಗೊಂಡಿತು

India Semiconductor Mission

Ministry of Electronics & Information Technology Government of India | G20 | ಆಜಾದೀ ಕಾ ಅಮೃತ ಮಹೋತ್ಸವ | Digital India Power To Empower

ವಸ್ತು ಸ್ಥಿತಿ

'ಮೇಕ್ ಇನ್ ಇಂಡಿಯಾ' ಮತ್ತು 'ಆತ್ಮನಿರ್ಭರ ಭಾರತ'

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಅಡಿಯಲ್ಲಿ ಭಾರತವು ತನ್ನ ನೀತಿಗಳಲ್ಲಿ ಮಹತ್ವದ ಸುಧಾರಣೆಗಳನ್ನು ಪಡೆದಿದೆ ಮತ್ತು ಒಂದು ಬಲಿಷ್ಠ ದೇಸಿ ಇಕೋಸಿಸ್ಟಮ್ ಪೋಷಿಸುವಲ್ಲಿ ಮತ್ತು ಅದಕ್ಕೊಂದು ಸ್ಥಾನ ನೀಡುವಲ್ಲಿ ಉತ್ತೇಜನ ನೀಡುವ ಮೂಲಕ, ಭಾರತವನ್ನು

ಒಂದು ಆಶಾದಾಯಕ ಸೆಮಿಕಂಡಕ್ಟರ್ ಜಾಲವನ್ನಾಗಿ

ರೂಪಿಸಿದೆ

ಭಾರತವನ್ನು ಜಾಗತಿಕ ಸೆಮಿಕಂಡಕ್ಟರ್ ಜಾಲವನ್ನಾಗಿ ರೂಪಿಸಲು ರೂ.76,000 ಕೋಟಿ ಮೌಲ್ಯದ ಐತಿಹಾಸಿಕ ಹಣಕಾಸು ಉತ್ತೇಜನ

ಸೆಮಿಕಂಡಕ್ಟರ್ ಫ್ಯಾಬ್ಸ್, ಡಿಸ್‌ಪ್ಲೇ ಫ್ಯಾಬ್ಸ್ ಮತ್ತು ಇನ್ನಿತರ ಸೌಲಭ್ಯಗಳ ಸ್ಥಾಪನೆಗಾಗಿ ಯೋಜನೆಯ 50%ರಷ್ಟು ಏಕರೂಪ ಹಣಕಾಸು ಉತ್ತೇಜನ

ಒಂದು 40,000 ಡಬ್ಲ್ಯುಎಸ್‌ಪಿಎಂ ಸೆಮಿಕಂಡಕ್ಟರ್ ಫ್ಯಾಬ್ರಿಕೇಶನ್ ಘಟಕವು ಸಾವಿರಾರು ನೇರ ಮತ್ತು ಅಪ್ರತ್ಯಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ

ಭವಿಷ್ಯದ ಹತ್ತು ವರ್ಷಗಳ ಅವಧಿಯಲ್ಲಿ ಇದು ಭಾರತದ ಜಿಡಿಪಿ'ಗೆ ರೂ.60,000 ರಿಂದ ರೂ.70,000 ಕೋಟಿ ಆದಾಯ ಸೇರಿಸುತ್ತದೆ

ಪ್ರಸ್ತುತ ದಶಕದಲ್ಲಿ ಭಾರತದ ಸೆಮಿಕಂಡಕ್ಟರ್ ಮಾರುಕಟ್ಟೆಯು, ಜಾಗತಿಕ ಮಾರುಕಟ್ಟೆಯ 11% ನಷ್ಟು, ಎಂದರೆ 110 ಬಿಲಿಯನ್ ಯುಎಸ್‌ಡಿ ಮೌಲ್ಯದಷ್ಟು ಸಾಧನೆ ಮಾಡಬಲ್ಲದು

ಸೆಮಿಕಂಡಕ್ಟರ್‌ಗಳ ವಿನ್ಯಾಸ ಮತ್ತು ಉತ್ಪಾದನೆಯಲ್ಲಿ ಅತ್ಯಂತ ಗರಿಷ್ಠ ಪ್ರಮಾಣದ ಬೆಳವಣಿಗೆಯನ್ನು ಸಾಧಿಸೋಣ...

ಸೆಮಿಕಾನ್‌ಇಂಡಿಯಾ 2023

ಉದ್ಘಾಟಕರು

ನರೇಂದ್ರ ಮೋದಿ

ಪ್ರಧಾನಮಂತ್ರಿ

28–30 ಜುಲೈ, 2023 | ಗಾಂಧಿನಗರ, ಗುಜರಾತ್

50 ಗ್ಲೋಬಲ್ ಸ್ಪೀಕರ್ಸ್ | 100 ಸ್ಟಾರ್ಟ್‌ಅಪ್‌ಗಳು

150 ಪ್ರದರ್ಶಕರು | 300 ಜಾಗತಿಕ ಕಂಪನಿಗಳು

ಡಿಡಿ ವಾಹಿನಿಯಲ್ಲಿ ನೇರ ಪ್ರಸಾರ ವೀಕ್ಷಿಸಿರಿ

CBC 06101/13/0016/2324

ಕಣ್ಣುರಿ, ಕಣ್ಣೀರು, ತುರಿಕೆ ಇದ್ದರೆ ಎಚ್ಚರ

‘ಮದ್ರಾಸ್ ಐ’ ಕಾಟ

• ವರುಣ ಹೆಗಡೆ

ಬೆಂಗಳೂರು: ಬಿಸಿಲು-ಮಳೆ, ಮೋಡ ಕವಿದ ವಾತಾವರಣದಿಂದಾಗಿ ನಗರದಲ್ಲಿ ‘ಕಂಜಕ್ಟಿವೈಟಿಸ್’ (ಮದ್ರಾಸ್ ಐ) ಪ್ರಕರಣ ಹೆಚ್ಚಳವಾಗಿದ್ದು, ನೇತ್ರ ಚಿಕಿತ್ಸಾಲಯಗಳಿಗೆ ಭೇಟಿ ನೀಡುತ್ತಿರುವ ಹೊರರೋಗಿಗಳಲ್ಲಿ ಶೇ 20 ರಷ್ಟು ಮಂದಿಯಲ್ಲಿ ಈ ಸಮಸ್ಯೆ ದೃಢಪಡುತ್ತಿದೆ.

ಕಣ್ಣುರಿ, ಕಣ್ಣಿನಲ್ಲಿ ನೀರು, ತುರಿಕೆ, ಕಣ್ಣು ಕೆಂಪಾಗುವುದು, ಕಣ್ಣಿನ ಊತ ಸೇರಿ ವಿವಿಧ ಸಮಸ್ಯೆಗಳಿಗೆ ಜನ ಆಸ್ಪತ್ರೆಗಳತ್ತ ಮುಖಮಾಡುತ್ತಿದ್ದಾರೆ. ಇದರಿಂದಾಗಿ ನಗರದ ಪ್ರಮುಖ ಕಣ್ಣಿನ ಆಸ್ಪತ್ರೆಗಳಾದ ಮಿಂಟೊ, ನಾರಾಯಣ ನೇತ್ರಾಲಯ, ಡಾ.ಅಗರವಾಲ್ಸ್ ಐ ಹಾಸ್ಪಿಟಲ್, ಶಂಕರ ಕಣ್ಣಿನ ಆಸ್ಪತ್ರೆ ಹಾಗೂ ಬೆಂಗಳೂರು ನೇತ್ರಾಲಯದಲ್ಲಿ ಹೊರ ರೋಗಿಗಳ ಸಂಖ್ಯೆ ಶೇ 10ರಷ್ಟು ಹೆಚ್ಚಳವಾಗಿದೆ.

ಕಳೆದೊಂದು ತಿಂಗಳಿಂದ ನಗರದಲ್ಲಿ ಬಿಸಿಲು–ಮಳೆಯಿಂದಾಗಿ ವಾತಾವರಣದಲ್ಲಿ ತೇವಾಂಶ ಹೆಚ್ಚಳವಾಗಿದೆ. ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾದರೆ, ಗರಿಷ್ಠ ಉಷ್ಣಾಂಶ 25 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ಇದರಿಂದಾಗಿ ಚಳಿಯ ವಾತಾವರಣವಿದ್ದು, ವೈರಾಣು ವೇಗವಾಗಿ ಹರಡಲಾರಂಭಿಸಿದೆ.

‘ಮದ್ರಾಸ್ ಐ’ ಸಮಸ್ಯೆ ಹಿರಿಯರಿಗಿಂತಲೂ ಹೆಚ್ಚಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿದೆ. ಮಿಂಟೊ ಆಸ್ಪತ್ರೆಗೆ ಪ್ರತಿ ನಿತ್ಯ 400ರಿಂದ 600 ಹೊರರೋಗಿಗಳು ಭೇಟಿ ನೀಡುತ್ತಿದ್ದಾರೆ. ಅವರಲ್ಲಿ 90ರಿಂದ 100 ರೋಗಿಗಳಲ್ಲಿ ಈ ಸಮಸ್ಯೆ ದೃಢಪಡುತ್ತಿದೆ. ನಾರಾಯಣ ನೇತ್ರಾಲಯದಲ್ಲಿ ಪ್ರತಿನಿತ್ಯ ಸರಾಸರಿ 20 ಪ್ರಕರಣಗಳು ವರದಿಯಾಗುತ್ತಿವೆ.

ಹರಡುವಿಕೆ ತಡೆಗಟ್ಟಿ: ‘ಕಣ್ಣಿನ ಸಮಸ್ಯೆ ಚಿಕಿತ್ಸೆಗೆ ಬರುತ್ತಿರುವ ಪ್ರತಿ ಹತ್ತು ಮಂದಿಯಲ್ಲಿ ಇಬ್ಬರು ‘ಕಂಜಕ್ಟಿವೈಟಿಸ್’ ಸಮಸ್ಯೆ ಎದುರಿಸುತ್ತಿರುವವರಾಗಿದ್ದಾರೆ. ಈ ಸಮಸ್ಯೆ ಇರುವವರಲ್ಲಿ ಕೆಲವರಿಗೆ ನೆಗಡಿ, ಗಂಟಲು ಊತ ಸಹ ಇರುತ್ತವೆ. ಒಂದು ತಿಂಗಳಿಂದ ಈ ಪ್ರಕರಣ ಹೆಚ್ಚಳವಾಗಿದೆ. ಆಸ್ಪತ್ರೆಗಳಲ್ಲಿಯೂ ಸೋಂಕಿತ ರೋಗಿಗೆ ಚಿಕಿತ್ಸೆ ನೀಡಿದ ಬಳಿಕ ಉಪಕರಣಗಳನ್ನು ಸ್ವಚ್ಛಗೊಳಿಸಬೇಕಾಗುತ್ತದೆ. ಇದು ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಅವರು ಪದೇ ಪದೇ ಕಣ್ಣುಗಳನ್ನು ಮುಟ್ಟಿಕೊಳ್ಳುವುದು, ಶಾಲೆಗಳಲ್ಲಿ ಪೆನ್ನು, ಪುಸ್ತಕಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುವುದು ಮುಖ್ಯ ಕಾರಣ’ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕಿಯೂ ಆಗಿರುವ ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ತಿಳಿಸಿದರು.

‘ಎರಡು ವಾರಗಳಿಂದ ಹೆಚ್ಚಿನ ಹೊರರೋಗಿಗಳಲ್ಲಿ ‘ಕಂಜಕ್ಟಿವೈಟಿಸ್’ ದೃಢಪಡುತ್ತಿದೆ. ಇದು ಕಣ್ಣಿನ ನೀರು, ಸ್ಪರ್ಶದಿಂದ ಹೆಚ್ಚಾಗಿ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಸೋಂಕಿತ ರೋಗಿ ಬಳಸಿದ ವಸ್ತುಗಳನ್ನು ಬೇರೆಯವರು ಉಪಯೋಗಿಸ ಬಾರದು’ ಎಂದು ಡಾ.ಅಗರವಾಲ್ಸ್ ಐ ಹಾಸ್ಪಿಟಲ್‌ನ ನೇತ್ರ ತಜ್ಞ ಡಾ. ಗಿರೀಶ್ ರೆಡ್ಡಿ ತಿಳಿಸಿದರು.

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ತಪಾಸಣೆಗಾಗಿ ಹೊರರೋಗಿಗಳು ಕಾಯುತ್ತಿರುವುದು – ಪ್ರಜಾವಾಣಿ ಚಿತ್ರ

‘ಕಂಜಕ್ಟಿವೈಟಿಸ್’ ಪ್ರಮುಖ ಲಕ್ಷಣಗಳು

- ಕಣ್ಣುಗುಡ್ಡೆಯ ಊತ
- ರೆಪ್ಪೆ ಅಂಟಿಕೊಳ್ಳುವುದು
- ಕಣ್ಣಿನ ಬಣ್ಣ ಗುಲಾಬಿ ಅಥವಾ ಕೆಂಪು ಬಣ್ಣಕ್ಕೆ ತಿರುಗುವುದು
- ಕಣ್ಣಲ್ಲಿ ಅತಿಯಾಗಿ ನೀರು ಬರುವಿಕೆ
- ಕಣ್ಣು ಅತಿಯಾಗಿ ತುರಿಕೆ ಆಗುವಿಕೆ
- ಕಣ್ಣುಗಳ ನಿರಂತರ ಅಸ್ವಸ್ಥತೆ

ಮುನ್ನೆಚ್ಚರಿಕೆ ಕ್ರಮಗಳು

- ಕೈಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು
- ಕಣ್ಣು ಮತ್ತು ಕೈಗಳ ನಡುವಿನ ಸಂಪರ್ಕ ತಡೆಯಬೇಕು
- ಕೈಗಳಿಂದ ಕಣ್ಣುಗಳ ಸ್ಪರ್ಶ ತಡೆಯಲು ಕನ್ನಡಕ ಹಾಕಿಕೊಳ್ಳಬಹುದು
- ಕಣ್ಣುಗಳ ಆಯಾಸ ತಡೆಯಲು ಟಿ.ವಿ, ಮೊಬೈಲ್ ವೀಕ್ಷಣೆ ಕಡಿಮೆ ಮಾಡುವುದು
- ಸೋಂಕಿತ ವ್ಯಕ್ತಿ ಬಳಸಿದ ಟವೆಲ್ ಸೇರಿ ವಿವಿಧ ವಸ್ತುಗಳನ್ನು ಬಳಸದಿರುವುದು
- ಸೋಂಕಿತ ವ್ಯಕ್ತಿ ಹೊರಗಡೆ ತೆರಳದಿರುವುದು
- ವೈದ್ಯರ ಸಲಹೆ ಪಡೆದು ಕಣ್ಣಿನ ಔಷಧಗಳನ್ನು ಬಳಸುವುದು

ಈ ಅವಧಿಯಲ್ಲಿ ಮಳೆ, ತಂಪು ವಾತಾವರಣದಿಂದ ವೈರಾಣು ಸಕ್ರಿಯವಾಗಿ ಇರುತ್ತದೆ. ಕಣ್ಣು ಕೆಂಪಾದಲ್ಲಿ ಆಸ್ಪತ್ರೆಗೆ ಭೇಟಿ ನೀಡಿ, ತಪಾಸಣೆ ಮಾಡಿಸಿಕೊಳ್ಳಬೇಕು

ಡಾ. ಸುಜಾತಾ ರಾಥೋಡ್, ಮಿಂಟೊ ಆಸ್ಪತ್ರೆ ನಿರ್ದೇಶಕಿ

ವಾತಾವರಣದಲ್ಲಿ ತಂಪು ಇರುವುದರಿಂದ ವೈರಾಣು ಹೆಚ್ಚು ಅವಧಿ ಜೀವಂತವಾಗಿ ಉಳಿದು, ಹರಡಲಿದೆ. ಕೈಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು

ಡಾ. ಯತೀಶ್ ಎಸ್., ನಾರಾಯಣ ನೇತ್ರಾಲಯದ ನೇತ್ರ ತಜ್ಞ

ಎಸ್.ಎಂ. ಕೃಷ್ಣಗೆ ಬಿಎಂಎ ಜೀವಮಾನ ಸಾಧನೆ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್‌ನಿಂದ (ಬಿಎಂಎ) ನೀಡುವ ಜೀವಮಾನ ಸಾಧನೆ ಪ್ರಶಸ್ತಿಗೆ ಬಿಜೆಪಿ ಮುಖಂಡ ಎಸ್.ಎಂ. ಕೃಷ್ಣ ಆಯ್ಕೆ ಯಾಗಿದ್ದಾರೆ’ ಎಂದು ಅಸೋಸಿಯೇಷನ್ ಅಧ್ಯಕ್ಷ ಕೆ.ಎನ್. ನಾರಾಯಣಸ್ವಾಮಿ ಹೇಳಿದರು.

ಗುರುವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ‘ಜುಲೈ 29ರಂದು ದಿ ಚಾನ್ಸರಿ ಪೆವಿಲಿಯನ್ ಹೋಟೆಲ್‌ನಲ್ಲಿ ನಡೆಯುವ ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್‌ನ 66ನೇ ವಾರ್ಷಿಕ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ’ ಎಂದು ತಿಳಿಸಿದರು.

‘ಭಾರತೀಯ ವಾಣಿಜ್ಯ ಮತ್ತು ಕೈಗಾರಿಕೆಗಳ ಮಹಾಸಂಸ್ಥೆಗಳ ಒಕ್ಕೂಟ (ಎಫ್‌ಐಸಿಸಿಐ) ಅಧ್ಯಕ್ಷ ಕೆ. ಉಲ್ಲಾಸ್ ಕಾಮತ್ ಅವರಿಗೆ ‘ಬಿಎಂಎ ಅವಾರ್ಡ್ ಆಫ್ ಎಕ್ಸಲೆನ್ಸ್’ ಪ್ರದಾನ ಮಾಡಲಾಗುತ್ತದೆ.

ಉದ್ಯಮಿ ಸಮರ್ಥ ರಾಘವ ನಾಗಭೂಷಣಂ, ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಸಬಿತಾ ರಾಮಮೂರ್ತಿ, ಸೇಂಟ್ ಜೋಸೆಫ್ ಕಾಲೇಜಿನ ಫಾದರ್ ವಿಕ್ಟರ್ ಲೋಬೋ, ಪ್ಯಾರಾ ಒಲಂಪಿಯನ್ ಎಚ್.ಎನ್. ಗಿರೀಶ್, ಆರ್.ವಿ. ವಿಶ್ವವಿದ್ಯಾಲಯ ಉಪಕುಲಪತಿ ವೈ.ಎಸ್.ಆರ್ ಮೂರ್ತಿ, ಕಂಬಳ ಶ್ರೀನಿವಾಸ್, ಎಫ್‌ಕೆಸಿಸಿಐ ನಿಕಟಪೂರ್ವ ಅಧ್ಯಕ್ಷ ಐ.ಎಸ್. ಪ್ರಸಾದ್ ಅವರಿಗೆ ‘ಬಿಎಂಎ ಸಾಧಕ ಪ್ರಶಸ್ತಿಗಳನ್ನು’ ಪ್ರದಾನ ಮಾಡಲಾಗುವುದು’ ಎಂದು ಅವರು ಮಾಹಿತಿ ನೀಡಿದರು.

ಸೊಸೈಟಿ ಆಡಳಿತ ಮಂಡಳಿ ವಜಾ

ಪ್ರಜಾವಾಣಿ ವಾರ್ತೆ

‘**ಬೆಂಗಳೂರು:** ಪೋಸ್ಟಲ್ ಆ್ಯಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೊ–ಆಪರೇಟಿವ್ ಸೊಸೈಟಿ ಆಡಳಿತ ಮಂಡಳಿಯನ್ನು ಐದು ವರ್ಷ ವಜಾಗೊಳಿಸಿ ಸಹಕಾರ ಸೊಸೈಟಿಗಳ ರಿಜಿಸ್ಟ್ರಾರ್ ಆದೇಶಿಸಿದ್ದಾರೆ.

ಸದಸ್ಯರಿಗೆ ನಿವೇಶನ ಹಂಚಿಕೆ ವಿಳಂಬ, 4 ಎಕರೆ 37 ಗುಂಟೆ ಭೂಮಿ ಬಡಾವಣೆ ನಿರ್ಮಾಣದಲ್ಲಾಗಿರುವ ಅಕ್ರಮವನ್ನು ಆದೇಶದಲ್ಲಿ ಉಲ್ಲೇಖಿಸಿದ್ದಾರೆ. ರಿಜಿಸ್ಟ್ರಾರ್ ಕ್ಯಾ. ಕೆ. ರಾಜೇಂದ್ರ ಅವರು ಫೆಬ್ರುವರಿಯಲ್ಲಿ ನೀಡಿದ್ದ ಆದೇಶವನ್ನು ಎತ್ತಿಹಿಡಿದು, ಜುಲೈ 20ರಂದು ಅಂತಿಮ ತೀರ್ಪು ನೀಡಿ, ಆಡಳಿತಾಧಿಕಾರಿಯನ್ನು ನೇಮಿಸಲು ಸೂಚಿಸಿದ್ದಾರೆ.

ಸರ್ಕಾರ ಕೆಲವು ದಿನಗಳಲ್ಲಿ ಆಡಳಿತಾಧಿಕಾರಿಯನ್ನು ನೇಮಿಸುವ ಸಾಧ್ಯತೆ ಇದ್ದು, ಅವರು ಸೊಸೈಟಿ ಕಾರ್ಯ ಚಟುವಟಿಕೆಗಳನ್ನು ನಡೆಸಲಿದ್ದಾರೆ.

‘ವಾರಾಂತ್ಯದಲ್ಲಿ ಮುಳ್ಳಯ್ಯನಗಿರಿ ಪ್ರವಾಸ ಬೇಡ’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಚಂದ್ರದ್ರೋಣ ಪರ್ವತ ಶ್ರೇಣಿಯ ಮುಳ್ಳಯ್ಯನಗಿರಿ ಮತ್ತು ಸುತ್ತಮುತ್ತಲ ಗಿರಿಶ್ರೇಣಿಯಲ್ಲಿ ಅತಿಯಾದ ಮಳೆ ಸುರಿಯುತ್ತಿರುವುದರಿಂದ ಗಿರಿಶ್ರೇಣಿಗೆ ಪ್ರವಾಸಿಗರು ವಾರಾಂತ್ಯದಲ್ಲಿ ಬರಬಾರದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಸಲಹೆ ನೀಡಿದ್ದಾರೆ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಸ್ಥಳಾವಕಾಶ ಬೇಕಾಗಿದೆ

ಬೆಂಗಳೂರು ನಗರ / ಜಿಲ್ಲೆ ವ್ಯಾಪ್ತಿಯ ಅಡಿಯಲ್ಲಿನ ಕೆಳಕಂಡ ಸ್ಥಳಗಳಲ್ಲಿ ಶಾಖೆಗಳಿಗಾಗಿ ವಾಣಿಜ್ಯ ಸ್ಥಳವನ್ನು ಹೊಂದಿರುವ ಮಾಲೀಕರಿಂದ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಸಹಕಾರ ನಗರ	2500
ಅಶೋಕ ಪಿಲ್ಲರ್	2500
ಕಾಕ್ಸ್ ಟೌನ್	2500
ಕಾಡುಗೋಡಿ, ವೈಟ್‌ಫೀಲ್ಡ್ (ಸತ್ಯ ಸಾಯಿ ಆಸ್ಪತ್ರೆ ಹತ್ತಿರ)	2500
ಮಾಯಸಂದ್ರ	1500

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 19–08–2023 ರಂದು ಸಂಜೆ 3.00 ಗಂಟೆಯವರೆಗೆ. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. “ಮಧ್ಯವರ್ತಿಗಳಿಗೆ ಅವಕಾಶವಿಲ್ಲ”

ಸ್ಥಳ : ಬೆಂಗಳೂರು
ದಿನಾಂಕ : 28–07–2023
ಸಹಿ/–
ಸಹಾಯಕ ಮಹಾ ಪ್ರಬಂಧಕರು

ಮಳೆ: ರಾಜ್ಯದಲ್ಲಿ ಡೆಂಗಿ ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮಳೆಯಿಂದಾಗಿ ಡೆಂಗಿ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದ್ದು, ಈ ತಿಂಗಳು 1,915 ಮಂದಿಯಲ್ಲಿ ಡೆಂಗಿ ಜ್ವರ ದೃಢಪಟ್ಟಿದೆ.



ಬಿಸಿಲು ಮಳೆಯಿಂದಾಗಿ ಡೆಂಗಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಕೆಲವೆಡೆ ಮಳೆ ನೀರು ಹಾಗೇ ನಿಂತಿರುವುದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಳವಾಗಲಿದ್ದು, ಈಡಿಸ್ ಎಂಬ ಸೊಳ್ಳೆ ಕಡಿತದಿಂದ ಈ ಜ್ವರ ಬರಲಿದೆ. ಆದ್ದರಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ವರ್ಷ ಈಗಾಗಲೇ 50 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 35 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿದ್ದು, ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 4,175ಕ್ಕೆ ತಲುಪಿದೆ. ಸುಮಾರು ಅರ್ಧದಷ್ಟು ಪ್ರಕರಣ ಇದೇ ತಿಂಗಳಲ್ಲಿ ದೃಢಪಟ್ಟಿವೆ.

ಕಳೆದ ವರ್ಷ 9,620 ಮಂದಿ ಡೆಂಗಿ ಜ್ವರದಿಂದ ಬಳಲಿದ್ದರು. ಅವರಲ್ಲಿ ಒಂಬತ್ತು ಮಂದಿ ಜ್ವರದ ತೀವ್ರತೆಗೆ ಮೃತಪಟ್ಟಿರುವುದು ದೃಢಪಟ್ಟಿತ್ತು. ಈ ವರ್ಷ ಮರಣ ವರದಿಯಾಗಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 3,457 ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದ್ದು, 2,062 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 310, ವಿಜಯಪುರದಲ್ಲಿ 134, ಶಿವಮೊಗ್ಗದಲ್ಲಿ 121, ಬೆಳಗಾವಿಯಲ್ಲಿ 112, ಚಿತ್ರದುರ್ಗದಲ್ಲಿ 104, ಧಾರವಾಡದಲ್ಲಿ 99, ಕೊಡಗಿನಲ್ಲಿ 88, ಹಾಸನದಲ್ಲಿ 78, ಬಳ್ಳಾರಿಯಲ್ಲಿ 74, ದಕ್ಷಿಣ ಕನ್ನಡ ಹಾಗೂ ಕಲಬುರಗಿಯಲ್ಲಿ ತಲಾ 72, ದಾವಣಗೆರೆಯಲ್ಲಿ 71, ಬಾಗಲಕೋಟೆಯಲ್ಲಿ 68, ತುಮಕೂರು, ಉಡುಪಿ ಹಾಗೂ ಚಿಕ್ಕಮಗಳೂರಿನಲ್ಲಿ ತಲಾ 66 ಹಾಗೂ ಗದಗದಲ್ಲಿ 63 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 60ಕ್ಕಿಂತ ಕಡಿಮೆಯಿದೆ.

ಚಿಕೂನ್‌ಗುನ್ಯಾ ಪ್ರಕರಣವೂ ಏರಿಕೆ: 28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 21 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 14 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 661 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ವಿಜಯಪುರ (87), ಮೈಸೂರಿನಲ್ಲಿ (81) ಹಾಗೂ ಶಿವಮೊಗ್ಗದಲ್ಲಿ (54) ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆಯಿದೆ.

‘ಸೊಳ್ಳೆ ಕಡಿತದಿಂದ ಕಾಣಿಸಿಕೊಳ್ಳುವ ಡೆಂಗಿ, ಚಿಕೂನ್‌ಗುನ್ಯಾ ಪ್ರಕರಣಗಳು ಹೆಚ್ಚಳವಾಗುತ್ತಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಪಿಆರ್‌ಆರ್: ಕುಂದುಕೊರತೆ ಸಭೆ 31ಕ್ಕೆ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆ ಭಾಗ-1ರ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ರೈತರು ಹಾಗೂ ಭೂ ಮಾಲೀಕರೊಂದಿಗೆ ಕುಂದುಕೊರತೆ ಪರಿಹಾರ ಸಭೆಯನ್ನು ಜುಲೈ 31ರಂದು ನಡೆಸಲಿದ್ದಾರೆ.

ಅರಮನೆ ರಸ್ತೆಯಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಭೆ ಆಯೋಜಿಸಲಾಗಿದೆ ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ವೆಂಕಟಗಿರಿ ಜನ್ಮ ಶತಮಾನೋತ್ಸವ ಪೂರ್ವ ಸಭೆ ಆ. 5ಕ್ಕೆ

ಬೆಂಗಳೂರು: ಆರ್ಥಿಕ ತಜ್ಞರಾಗಿದ್ದ ಕೆ. ವೆಂಕಟಗಿರಿ ಗೌಡ ಅವರ ಜನ್ಮಶತಮಾನೋತ್ಸವ ಸೆಪ್ಟೆಂಬರ್ ತಿಂಗಳಲ್ಲಿ ಆಯೋಜಿಸಲಾಗಿದೆ.

ಈ ಜನ್ಮಶತಮಾನೋತ್ಸವದ ಪೂರ್ವಭಾವಿ ಸಭೆಯನ್ನು ಆಗಸ್ಟ್ 5ರಂದು ಬೆಳಿಗ್ಗೆ 11ಕ್ಕೆ ಜಯನಗರದ 4ನೇ ಬ್ಲಾಕ್‌ನಲ್ಲಿರುವ ಬಿಇಎಸ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಡಾ. ಕೆ. ವೆಂಕಟಗಿರಿ ಗೌಡ ಜನ್ಮಶತಮಾನೋತ್ಸವ ಸಮಿತಿ ಅಧ್ಯಕ್ಷ ಪ್ರೊ. ಕೆ. ರಂಗ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶತಮಾನೋತ್ಸವದ ಸ್ಮರಣ ಸಂಚಿಕೆಗೆ ವೆಂಕಟಗಿರಿ ಅವರ ಕುರಿತು ಲೇಖನಗಳು ಮತ್ತು ಫೋಟೊಗಳನ್ನು ನೀಡಬೇಕು ಎಂದು ಕೋರಿದ್ದಾರೆ.

ಮಾಹಿತಿಗೆ: 90191 06600, 93412 28001ಗೆ ಸಂಪರ್ಕಿಸಬಹುದು.

ಸಮಾಲೋಚನಾ ಸಭೆ ಇಂದು

ಬೆಂಗಳೂರು: ಪಬ್ಲಿಕ್ ಅಫೇರ್ಸ್ ಫೌಂಡೇಷನ್, ಗ್ರಾಹಕ ಯೂನಿಟಿ ಮತ್ತು ಟ್ರಸ್ಟ್ ಸೊಸೈಟಿ ಮತ್ತು ಬಿಎಂಎಸ್ ಕಾಲೇಜ್ ಆಫ್ ಲಾ ಸಹಯೋಗದಲ್ಲಿ ಜುಲೈ 28ರಂದು ‘ಸಾಂಕ್ರಾಮಿಕವಲ್ಲದ ರೋಗಗಳನ್ನು ಪರಿಹರಿಸುವಲ್ಲಿ ಪ್ಯಾಕೇಜ್ ಲೇಬಲಿಂಗ್‌ನ ಪ್ರಾಮುಖ್ಯತೆ’ ಕುರಿತು ರಾಜ್ಯಮಟ್ಟದ ಸಮಾಲೋಚನಾ ಸಭೆಯು ಬಿ.ಎಂ.ಎಸ್. ಕಾನೂನು ಮಹಾವಿದ್ಯಾಲಯದಲ್ಲಿ ನಡೆಯಲಿದೆ.

ಹೆಪಟೈಟಿಸ್ ಬಿ: 6,682 ಜನರಲ್ಲಿ ಸೋಂಕು

ಬೆಂಗಳೂರು: ಹೆಪಟೈಟಿಸ್ ಬಿ ಸೋಂಕು ಪತ್ತೆ ಸಂಬಂಧ 2022–23 ಸಾಲಿನಲ್ಲಿ ರಾಜ್ಯದಲ್ಲಿ 2.43 ಲಕ್ಷ ಜನರನ್ನು ತಪಾಸಣೆ ಮಾಡಲಾಗಿದೆ. ಅವರಲ್ಲಿ 6,682 ಮಂದಿಯಲ್ಲಿ ಈ ಸೋಂಕು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಜುಲೈ 28ರಂದು ವಿಶ್ವ ಹೆಪಟೈಟಿಸ್ ದಿನದ ಪ್ರಯುಕ್ತ ಇಲಾಖೆಯು ರಾಜ್ಯದಾದ್ಯಂತ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಹೆಪಟೈಟಿಸ್ ಸಿ ಸೋಂಕು ಪತ್ತೆ ಸಂಬಂಧ 85,784 ಜನರನ್ನು ಪರೀಕ್ಷಿಸಲಾಗಿದ್ದು, ಅವರಲ್ಲಿ 868 ಮಂದಿಯಲ್ಲಿ ರೋಗ ಪತ್ತೆಯಾಗಿದೆ. ಸೋಂಕಿತರಿಗೆ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ. ಹೆಪಟೈಟಿಸ್ ಬಿ ಮತ್ತು ಹೆಪಟೈಟಿಸ್ ಸಿ ಎರಡಕ್ಕೂ ಉಚಿತ ತಪಾಸಣೆ, ರೋಗ ನಿರ್ಣಯ ಮತ್ತು ಚಿಕಿತ್ಸೆ ಒದಗಿಸಲಾಗುತ್ತಿದೆ ಎಂದು ಇಲಾಖೆ ಹೇಳಿದೆ.

‘ಹೆಪಟೈಟಿಸ್ ಎ ಮತ್ತು ಇ ಸೋಂಕು ಮಲ, ಕಲುಷಿತ ಆಹಾರ ಮತ್ತು ನೀರಿನಿಂದ ಹರಡುತ್ತದೆ. ಹೆಪಟೈಟಿಸ್ ಬಿ ಮತ್ತು ಸಿ ಸೋಂಕು ರಕ್ತ, ಲೈಂಗಿಕ ಮಾರ್ಗದ ಮೂಲಕ ಹರಡುತ್ತದೆ’ ಎಂದು ಪ್ರಕಟಣೆ ತಿಳಿಸಿದೆ.



ಕ್ಷಣ ಕ್ಷಣದ ಸುದ್ದಿಗಾಗಿ
prajavani.net ನೋಡಿ

ಪತ್ನಿ ಕೊಲೆ: ಶರಣಾದ ಆರೋಪಿ

ಪ್ರಜಾವಾಣಿ ವಾರ್ತೆ

ಶಂಕರ್

ಗೀತಾ

ಬೆಂಗಳೂರು: ಚಂದ್ರಾಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಗೀತಾ (33) ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ಪತಿ ಶಂಕರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ಶಿವಾನಂದನಗರದ ನಿವಾಸಿ ಗೀತಾ ಅವರನ್ನು ಬುಧವಾರ ತಡರಾತ್ರಿ ಕೊಲೆ ಮಾಡಲಾಗಿದೆ. ಕೃತ್ಯದ ನಂತರ ಗೀತಾ ತಾಯಿಗೆ ಕರೆ ಮಾಡಿದ್ದ ಆರೋಪಿ, 'ನಿಮ್ಮ ಮಗಳನ್ನು ಕೊಲೆ ಮಾಡಿದ್ದೇನೆ' ಎಂಬುದಾಗಿ ತಿಳಿಸಿದ್ದ. ನಂತರ, ಆತ ಠಾಣೆಗೆ ಬಂದು ಶರಣಾಗಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗೀತಾ ಕೊಲೆ ಬಗ್ಗೆ ಸಂಬಂಧಿಕರು ದೂರು ನೀಡಿದ್ದಾರೆ. ಶಂಕರ್‌ನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ತಿಳಿಸಿವೆ.

ಪರ ಪುರುಷನ ಜೊತೆ ಸಲುಗೆ: 'ಸ್ಥಳೀಯ ನಿವಾಸಿ ಶಂಕರ್ ಹಾಗೂ ಹೊಸೂರಿನ ಗೀತಾ, ಹದಿಮೂರು ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇತ್ತೀಚೆಗೆ ದಂಪತಿ ನಡುವೆ ಜಗಳ ಶುರುವಾಗಿತ್ತು. ಇದರ ನಡುವೆಯೇ ಪರ ಪುರುಷನ ಜೊತೆ ಗೀತಾ ಸಲುಗೆ ಇಟ್ಟುಕೊಂಡಿದ್ದರೆಂಬ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತ್ನಿಯ ಅಕ್ರಮ ಸಂಬಂಧವನ್ನು ಪ್ರಶ್ನಿಸಿದ್ದ ಶಂಕರ್, ಹಲವು ಬಾರಿ ಜಗಳ ತೆಗೆದಿದ್ದ. ಇದೇ ವಿಚಾರವಾಗಿ ಪದೇ ಪದೇ ಗಲಾಟೆ ನಡೆಯುತ್ತಿತ್ತು. ಗೀತಾ ಅವರು ಪರ ಪುರುಷನ ಜೊತೆಗಿದ್ದ ಫೋಟೊ ಹಾಗೂ ವಿಡಿಯೊಗಳು ಶಂಕರ್‌ಗೆ ಸಿಕ್ಕಿದ್ದವು. ಇದರಿಂದ ಆತ ಮತ್ತಷ್ಟು ಕೋಪಗೊಂಡಿದ್ದ' ಎಂದು ಮೂಲಗಳು ತಿಳಿಸಿವೆ.

ತಲೆಗೆ ಆಯುಧದಿಂದ ಹೊಡೆದು ಕೊಲೆ: 'ಪತ್ನಿ ಗೀತಾ ಜೊತೆ ಆರೋಪಿ ಶಂಕರ್ ಬುಧವಾರ ರಾತ್ರಿ ಜಗಳ ತೆಗೆದಿದ್ದ. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಆರೋಪಿ, ಪತ್ನಿಯ ತಲೆಗೆ ಆಯುಧದಿಂದ ಹೊಡೆದಿದ್ದ. ತೀವ್ರ ರಕ್ತಸ್ರಾವದಿಂದ ಗೀತಾ ಮೃತಪಟ್ಟಿದ್ದರು' ಎಂದು ಹೇಳಿವೆ.

'ಸೋಫಾ ಮೇಲೆ ಮೃತದೇಹ ಇರಿಸಿದ್ದ ಆರೋಪಿ, ಗೀತಾ ಅತ್ತೆಗೆ ಕರೆ ಮಾಡಿದ್ದ. 'ನಿಮ್ಮ ಮಗಳು ಬೇರೆ ಪುರುಷನ ಜೊತೆ ಸಲುಗೆ ಇಟ್ಟುಕೊಂಡಿದ್ದಳು. ಇದರ ವಿಡಿಯೊ ನನಗೆ ಸಿಕ್ಕಿದ್ದವು. ಹೀಗಾಗಿ, ನಿಮ್ಮ ಮಗಳನ್ನು ಕೊಲೆ ಮಾಡಿದ್ದೇನೆ. ನಾನು ಪೊಲೀಸರಿಗೆ ಶರಣಾಗಲು ಠಾಣೆಗೆ ಹೊರಟಿದ್ದೇನೆ' ಎಂಬುದಾಗಿ ಹೇಳಿದ್ದ. ನಂತರವೇ ಹೊಸೂರಿನಲ್ಲಿದ್ದ ಗೀತಾ ಪೋಷಕರು ನಗರಕ್ಕೆ ಬಂದಿದ್ದರು' ಎಂದು ಮೂಲಗಳು ತಿಳಿಸಿವೆ.

ರೂಪದರ್ಶಿ ಆತ್ಮಹತ್ಯೆ: ಜಿಮ್ ತರಬೇತುದಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ರೂಪದರ್ಶಿ ವಿದ್ಯಾಶ್ರೀ (25) ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಜಿಮ್ ತರಬೇತುದಾರ ಅಕ್ಷಯ್‌ನನ್ನು (27) ಪೊಲೀಸರು ಬಂಧಿಸಿದ್ದಾರೆ.

'ಕೆಂಪಾಪುರದ ನಿವಾಸಿ ವಿದ್ಯಾಶ್ರೀ, ಜುಲೈ 21ರಂದು ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮನೆಯಲ್ಲಿ ಮರಣ ಪತ್ರ ಸಿಕ್ಕಿದೆ. ಮದುವೆಯಾಗುವುದಾಗಿ ಹೇಳಿ ವಂಚಿಸಿ ಆತ್ಮಹತ್ಯೆಗೆ ಪ್ರಚೋದನೆ ನೀಡಿರುವ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ಸ್ನೇಹಿತ ಅಕ್ಷಯ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎಂಸಿಎ ಪದವೀಧರರಾದ ವಿದ್ಯಾಶ್ರೀ, ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅದರ ಜೊತೆ, ರೂಪದರ್ಶಿಯೂ ಆಗಿದ್ದರು. 'ಮಿಸ್ ಆಂಧ್ರ' ಕಿರೀಟವನ್ನೂ ಪಡೆದಿದ್ದರು. ಕೆಂಪಾಪುರದಲ್ಲಿ ತಾಯಿ ಜೊತೆ ವಾಸವಿದ್ದರು' ಎಂದು ಮೂಲಗಳು ತಿಳಿಸಿವೆ.

'ಆರೋಪಿ ಅಕ್ಷಯ್, ಮಂಡ್ಯದವ. ಪೋಷಕರ ಜೊತೆ ನಗರಕ್ಕೆ ಬಂದಿದ್ದ. ಬಸವೇಶ್ವರನಗರದಲ್ಲಿರುವ ಜಿಮ್ ನಲ್ಲಿ ತರಬೇತುದಾರನಾಗಿ ಕೆಲಸ ಮಾಡುತ್ತಿದ್ದ. ಈತನ ಕುಟುಂಬ ಸದ್ಯ ಕೆಂಗೇರಿ ಗೇಟ್ ಪ್ರದೇಶದಲ್ಲಿ ವಾಸವಿದೆ' ಎಂದು ಹೇಳಿವೆ.

'ಸಾವಿಗೆ ಅಕ್ಷಯ್ ಕಾರಣ'

'ಪ್ರೀತಿಯ ನಾಟಕವಾಡಿದ್ದ ಅಕ್ಷಯ್, ನನ್ನನ್ನು ನಾಯಿ ತರ ನೋಡುತ್ತಿದ್ದ. ನಾನು ಕೊಟ್ಟ ಹಣವನ್ನು ವಾಪಸು ಕೇಳಿದರೆ ಬೈಯುತ್ತಿದ್ದ. ನಮ್ಮ ಕುಟುಂಬವನ್ನೂ ನಿಂದಿಸುತ್ತಿದ್ದ. ಈತನ ಕಿರುಕುಳದಿಂದ ಮಾನಸಿಕವಾಗಿ ನೊಂದಿದ್ದೇನೆ. ನನಗೆ ಬದುಕಲು ಆಗುತ್ತಿಲ್ಲ' ಎಂದು ವಿದ್ಯಾಶ್ರೀ ಮರಣಪತ್ರದಲ್ಲಿ ಬರೆದಿರುವುದಾಗಿ ಗೊತ್ತಾಗಿದೆ.

'ಎಲ್ಲ ಹುಡುಗಿಯರಿಗೆ ನನ್ನದೊಂದು ವಿನಂತಿ. ಯಾರನ್ನೂ ನಂಬಿ ಪ್ರೀತಿ ಮಾಡಬೇಡಿ. ಅಮ್ಮ, ತಮ್ಮ ನನ್ನನ್ನು ಕ್ಷಮಿಸಿ' ಎಂದೂ ಅವರು ಉಲ್ಲೇಖಿಸಿರುವುದಾಗಿ ತಿಳಿದುಬಂದಿದೆ.

ವಿದ್ಯಾಶ್ರೀ

ಅಕ್ಷಯ್

ಫೇಸ್‌ಬುಕ್‌ನಲ್ಲಿ ಸ್ನೇಹ: 'ಸಾಮಾಜಿಕ ಮಾಧ್ಯಮ ಫೇಸ್‌ಬುಕ್‌ನಲ್ಲಿ ವಿದ್ಯಾಶ್ರೀ ಖಾತೆ ತೆರೆದಿದ್ದರು. ಅವರ ಖಾತೆಗೆ ಆರೋಪಿ ಅಕ್ಷಯ್ 2021ರಲ್ಲಿ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದ. ಅದನ್ನು ವಿದ್ಯಾಶ್ರೀ ಸ್ವೀಕರಿಸಿದ್ದರು. 'ನಾನು ನಿಮ್ಮ ಅಭಿಮಾನಿ' ಎಂಬುದಾಗಿ ಹೇಳಿಕೊಂಡು ಮಾತನಾಡಲಾರಂಭಿಸಿದ್ದ ಅಕ್ಷಯ್, ವಿದ್ಯಾಶ್ರೀ ಸ್ನೇಹ ಸಂಪಾದಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಿದ್ಯಾಶ್ರೀ ಹಾಗೂ ಅಕ್ಷಯ್, ಪರಸ್ಪರ ಪ್ರೀತಿಸಲಾರಂಭಿಸಿದ್ದರು. ಹಲವು ಬಾರಿ ಭೇಟಿ ಸಹ ಆಗಿದ್ದರು. ಮದುವೆಯಾಗುವುದಾಗಿ ಹೇಳಿದ್ದ ಆರೋಪಿ, ವಿದ್ಯಾಶ್ರೀ ಕಡೆಯಿಂದ ₹ 1.76 ಲಕ್ಷ ಸಾಲ ಪಡೆದಿದ್ದ. ಜೊತೆಗೆ, ಲೈಂಗಿಕವಾಗಿ ಬಳಸಿಕೊಂಡಿದ್ದ' ಎಂದು ಹೇಳಿವೆ.

ಹಣ ವಾಪಸು ಕೇಳಿದ್ದಕ್ಕೆ ಕಿರುಕುಳ: 'ವಿದ್ಯಾಶ್ರೀ ಹಾಗೂ ಅಕ್ಷಯ್ ನಡುವೆ ಇತ್ತೀಚೆಗೆ ಮನಸ್ತಾಪ ಉಂಟಾಗಿತ್ತು. ತಾವು ನೀಡಿರುವ ಹಣವನ್ನು ವಾಪಸು ಕೊಡುವಂತೆ ವಿದ್ಯಾಶ್ರೀ ಒತ್ತಾಯಿಸಿದ್ದರು. ಅದಕ್ಕೆ ಒಪ್ಪದ ಆರೋಪಿ, ಕಿರುಕುಳ ನೀಡಲಾರಂಭಿಸಿದ್ದ. ಖಾಸಗಿ ಫೋಟೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುವುದಾಗಿ ಬೆದರಿಸಲಾರಂಭಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿ ಕಿರುಕುಳದಿಂದ ಬೇಸತ್ತ ವಿದ್ಯಾಶ್ರೀ, ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಹೇಳಿವೆ.

ಅಪರಾಧ ಸುದ್ದಿ

ಅಮಾಯಕರ ಬಿಡುಗಡೆಗೆ ಆಗ್ರಹ

ಬೆಂಗಳೂರು: 'ಡಿ.ಜೆ. ಹಳ್ಳಿ-ಕೆ.ಜಿ. ಹಳ್ಳಿ, ಹುಬ್ಬಳ್ಳಿ ಮತ್ತು ಶಿವಮೊಗ್ಗ ಗಲಭೆ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ಆದರೆ ಅಮಾಯಕರನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಹೆಲ್ಪಿಂಗ್ ಇಂಡಿಯಾ ಸಂಸ್ಥೆಯ ಮುಖ್ಯಸ್ಥ, ಸಾಮಾಜಿಕ ಕಾರ್ಯಕರ್ತ ಅಲಂ ಪಾಷಾ ಆಗ್ರಹಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯಾವುದೇ ಧರ್ಮದ ಬಗ್ಗೆ ಅವಹೇಳನ ಮಾಡುವುದರಿಂದ ಸಾಮರಸ್ಯಕ್ಕೆ ಧಕ್ಕೆಯಾಗುತ್ತದೆ. ಡಿ.ಜೆ. ಹಳ್ಳಿ-ಕೆ.ಜಿ. ಹಳ್ಳಿ ಗಲಭೆಯ ಸಂದರ್ಭದಲ್ಲಿ ಆರ್‌ಎಸ್‌ಎಸ್ ಮುಖಂಡರು ಸೂಚಿಸಿದ ಮುಸ್ಲಿಮರನ್ನು ಮಾತ್ರ ಬಂಧಿಸಲಾಗಿದೆ' ಎಂದು ದೂರಿದರು.

WONDERLA HOLIDAYS LIMITED
WONDERLA PARKS AND RESORTS
CIN: L55101KA2002PLC031224
Regd. Office: 28th KM, Mysore Road, Bengaluru-562109, Karnataka. Website: www.wonderla.com, Email Id: investors@wonderla.com, Ph: +91 80 37230372

NOTICE
Notice of 21st Annual General Meeting, Remote E-Voting and Book Closure

Notice is hereby given that the 21st Annual General Meeting (AGM) of the Company will be held at 11.00 a.m. on Thursday, 24th August, 2023 through Video Conferencing ("VC") / Other Audio Visual Means ("OAVM") in compliance with all the applicable provisions of the Companies Act, 2013 and the Rules made thereunder and the Securities and Exchange Board of India ("SEBI") (Listing Obligations and Disclosure Requirements) Regulations, 2015, read with General Circular No. 20/2020, 14/2020, 17/2020, 02/2021, 10/2022 issued by the Ministry of Corporate Affairs (MCA) and Circular number SEBI/HO/CFD/CMD1/CIR/P/2020/79, SEBI/HO/CFD/CMD2/CIR/P/2021/11 and SEBI/HO/CFD/PoD-2/P/CIR/2023/4 issued by the Securities and Exchange Board of India (SEBI) (collectively referred to as "relevant circulars"), to transact the business as detailed in the Notice of AGM. Members participating through the VC / OAVM facility shall be reckoned for the purpose of quorum under Section 103 of the Companies Act, 2013.

Board of Directors at their Meeting held on Wednesday, 24th May 2023, recommended Final Dividend of Rs. 2.50/- per equity share having nominal value of Rs. 10/- each for the financial year ended 31st March 2023.

The Final Dividend shall be credited to the eligible member(s) directly to their respective bank account through the available electronic modes.

Pursuant to the provisions of Section 108 of the Companies Act, 2013 read with Rule 20 of the Companies (Management and Administration) Amendment Rules, 2015 and Regulation 44 of SEBI (Listing Obligations and Disclosure Requirements) Regulations 2015, the Company is pleased to provide members facility to exercise their right to vote for the 21st AGM by electronic means and the business may be transacted through e-Voting services provided by Central Depository Services (India) Limited (CDSL). The members who have cast their vote(s) by remote e-voting may also attend the AGM but shall not be entitled to cast their vote(s) again at the AGM.

The e-voting period commences on Sunday, 20th August 2023 (9:00 am) and ends on Wednesday, 23rd August 2023 (5:00 pm). During this period shareholders of the Company, holding shares either in physical form or in dematerialized form, as on the cut-off date (record date) 17th August 2023, may cast their votes electronically. The e-voting module shall be disabled by CDSL for voting thereafter. Once the vote on a resolution is cast by the shareholder, the shareholder shall not be allowed to change it subsequently. In case of any queries, you may refer the Frequently Asked Questions (FAQs) for Shareholders and e-voting user manual for Shareholders available at https://www.evotingindia.com/.

In case a person has become Member of the Company after the dispatch of AGM Notice but on or before the cut-off date i.e. 17th August, 2023, the member may approach CDSL for issuance of User ID and Password. In case of queries or grievances regarding e-voting Members may write to helpdesk. evoting@cdslindia.com or to Company at investors@wonderla.com. The Notice of 21st AGM and the Annual Report for 2022-23 will also be available on Company's website http://www.wonderla.com/investor-relations.

The Register of Members and the Share Transfer books of the Company shall remain closed from Saturday, 19th August 2023 to Thursday, 24th August 2023 (both days inclusive) for the purpose of AGM.

The Dividend if declared will be payable to those Equity Shareholders holding shares on the close of Friday, 11th August 2023.

For Wonderla Holidays Limited
Sd/-
Srinivasulu Raju Y
Company Secretary

Date: 26.07.2023
Place: Bengaluru

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-408/930/2023-24 ದಿನಾಂಕ:26.07.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಸುರೇಶ್‌ಕುಮಾರ್ ಬಾಫನ್ನಾ ಫ್ಲಾಟ್ ನಂ.A 104, ಮಂತ್ರಿ ಗ್ರೀನ್ಸ್ ಅಪಾರ್ಟ್‌ಮೆಂಟ್ಸ್, ನಂ.1, ಸಂಪಿಗೆ ರಸ್ತೆ, ಮಂತ್ರಿಮಾಲ್, ಮಲ್ಲೇಶ್ವರಂ, ಬೆಂಗಳೂರು-560 003	ಯಲಹಂಕ	ಜಾಲ	ಸೊಣ್ಣಪ್ಪನ ಹಳ್ಳಿ	7/4	0 ಎಕರೆ 13 ಗುಂಟೆ	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಾಣಿಜ್ಯ ಉಪಯೋಗಕ್ಕಾಗಿ ಅಭಿವೃದ್ಧಿಪಡಿಸಿದರೆ ನೂರಾರು ಜನರಿಗೆ ಉದ್ಯೋಗ ದೊರಕುತ್ತದೆ. ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಅನೇಕ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಸದರಿ ಭೂಮಿಯು ನಗರ ಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ, ಸದರಿ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು "ವ್ಯವಸಾಯ" ವಲಯದಿಂದ "ವಾಣಿಜ್ಯ" ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

BDA/PRO/CLU/09/2023-24 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

IN THE COURT OF THE IX ADDL. CITY CIVIL COURT AND SESSIONS JUDGE AT BANGALORE (CCH-5)
OS. NO.4546/2023

BETWEEN:
Sri. S. Pradeep, Aged about 31 years, S/o. Sri. M. Sreeramulu, R/o.G-194, 7th Main Road, HAL Old Township, Bangalore-560017 .... **PLAINTIFF**
AND
M/s. Silver Springs and others, ...**DEFENDANTS**

NOTICE UNDER ORDER I RULE 8(2)r/w ORDER V RULE 20 OF THE CODE OF CIVIL PROCEDURE, 1908
NOTICE/SUIT SUMMONS

1. M/s. Silver Springs,
A registered Partnership Firm, Having its office at No.73/1, Sheriff center, St. Mark's Road, Bangalore-560001
Rep. by its Partner,
Sri. Yunus Zia, Major.

2. M/s. Canara Housing Development Company,
A registered Partnership Firm, Having its office at No. 85/1, K.H.Road, Bangalore-560027
Represented by its Partners,
Sri .P.Dayanandi Pai, Major,
And Sri. P. Satish Pai, Major,

3. M/s. Karnataka Yuva Society,
A society registered under the Karnataka Societies, Registration Act, 1960, Having its office at No.75, Chick Bazaar Road, Taskar Town, Bangalore-51

WHEREAS the above named Plaintiff has instituted a suit against M/s. Silver Springs and Others (the Defendants aforementioned) seeking a decree of mandatory injunction and also for a decree of permanent injunction in a representative capacity, representing each of the all 175 sites owners and residents of the Schedule 'B' Property. It is hereby brought to your notice that you are at liberty to appear before this court in person or allow the plaintiff to prosecute the same in his representative capacity OR you are at liberty to even contest the said matter. It is further being brought to your notice that the present matter will be called out next on 31-08-2023, at 11 AM., in the Court of Hon'ble City Civil and Sessions Judge (CCH-5), at Bangalore.

Given under my hand and seal of the court this 26th day of July 2023.

SCHEDULE 'A' PROPERTY

All that piece and parcel of the converted land portions of the lands bearing Survey Nos.26, 27, 31, 32, 33 and 34, all situated at Munekolalu Village, Varthur Hobli, Bangalore South Taluk, all conjoined and together of extend of 18 acres 22 guntas and bounded as under
East: Private property, West: Private property, North: Private property, South: Road

SCHEDULE 'B' PROPERTY

All that piece and parcel of the converted land in Survey No. 31, 33 and 34 forming the 175 sites and carved out Schedule 'A' property, situated at Munekolalu Village, Varthur Hobli, Bangalore South Taluk, measuring 10 Acres 2 Guntas.

SCHEDULE 'C' PROPERTY

All that piece and parcel of the Plot No. D-3, carved out of Converted Sy.No. 34, at Munekolalu Village, Varthur Hobli, Bangalore South Taluk, now within BBMP Ward No. 85-Doddanakundi, Sl No.135/1369, Munnekollal, Bangalore, Measuring towards East: 110 feet, West: 160 feet, North: 126 Feet and South: 65 feet, in all totally measuring 13,686 square feet and bounded on:
East: Road, West: Road, North: Road, South: Open space

BY ORDER OF THE COURT
Assistant Registrar,
City Civil Court,
Bangalore-560 009

Advocate for Plaintiff
SHIVA & SHIVA,
Advocates,
No.11, 2nd Floor, 28th Cross, 19th Main, 2nd Block, Rajajinagar, Bangalore-560010
Dt:28.07.2023 Place: Bangalore

PUBLIC NOTICE
To Place your Classified Ads Contact
9731810277

PUBLIC NOTICE

The General Public is hereby notified that, Sri. H B Nagesh Kumar S/O Sri.H S Basavarajaiah, residing at No:371, Jai Maruthi Nilaya, Behind Sallapuradamma Temple, Sunkadakatte, Bangalore – 560091, is the owner of the Scheduled Property described Infra.

It is noticed that original settlement deed date:17/03/1989, bearing doc no:8428, Book – 1,Volume No:4245 at page 73 to 76 executed by Sri Kariyanna in favour of Smt Honnamma w/o Sri H S Basavarajaiah registered at the office of Sub-Registrar, Bangalore,North Taluk,Bangalore,Pertaining to the Scheduled Property is lost/misplaced. In this connection,an E-Complaint has been lodged on 25/07/2023 at Bangalore City Police Station, Bangalore,bearing serial no: 0657762/2023.

The finder of the said document is requested to surrender the Original Settlement deed to the undersigned within 7 days from this day,falling which, it shall be deemed that the Settlement deed is irretrievably lost and Certified Copy of the same shall be obtained from the office of Sub-Registrar of Assurances in lieu of lost original for the purpose of records.

SCHEDULED PROPERTY

All that piece and parcel of the Property bearing Sy. No. 49/11, Measuring 20 guntas, Situated at Srigadhadha Kaval Village, Yeshwanthpura Hobli, Bangalore North Taluk and Bounded On by East:Sy.No:49/5, by West: Sy.No:49/10, by North : Sy.No:49/5, by South: Sy.No:49/5

G.NATARAJA, Advocate
No.58,4th Cross,KSRTC Layout,
Vishwanedam, Bengaluru, 560091
Ph – 9844792412 & 6362148092

PUBLIC NOTICE

My client **Mrs.Rathi Sukumaran,** W/o. Sri.Sukumaran, R/at No.881, 3rd Cross, 7th Main, HAL 2nd Stage, Indiranagar, Bengaluru, had lost the **original Possession Certificate PR No.76/73-74 dated: 19/12/1973 issued by the CITB, Bengaluru** in respect of site bearing No.881, Block No.HAL II Stage Extension, measuring East to West : 60'-6" feet and North to South : 40'-0" feet and bounded on the **East by :** Road, **West by :** Site No.890, **North by :** Site No.880 and **South by :** Site No.882, herein referred to as **SCHEDULE PROPERTY** and in this regard my client had also filed e-lost complaint vide : Lost Report No. 0652377/2023 dated: 21/07/2023. The public is hereby cautioned not to deal with the schedule property with anybody except with my client. If anybody finds/found the original Possession Certificate PR No.76/73-74 dated: 19/12/1973 issued by the CITB, Bengaluru in respect of schedule property as stated above is requested to return the same to my client or deliver the same to the address given below.

Dileep.N, Advocate,
No.114, 9th Cross, 5th Main,
Hanumanthanagar,
Bengaluru-560019.
Mobile : 9740000881

REAL ESTATE BUYING

Sites

Multiple Locations

WANTED
4000-20000SFT Land Jayanagar, Basavangudi, Chamrajpet, J.P.Nagar, CBD Surrounding area. Purchase & JV, Verna Developers, MG Road, Bangalore. 9353128035/ 9620253180

REAL ESTATE SELLING

Flat

J P Nagar

NEW_FLATS for Sale, J.P.Nagar`near Tippu Circle,2`BHK &.3_BHK, 39,00,000/-& 45,00,000/`,(Low Price) Completion`in 3_months`Bank Loan_will`be approved`(only Muslims)Contact- Simha: 9036706304 Shahzad: 6364062086.

Vijayanagar

THREE BEDROOM FLAT, Area-1470 sft including Balcony, Carparking, Rate:8200/Sft (Negotiable) at Saraswathinagar, Vijayanagar, Bangalore. (Broker excuse)- 9880100828.

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Hospital & Medical Jobs

REQUIRE MALE and Female Ayurveda Therapist and Receptionist @ Yelahanka New Town. Mob: 9449658968/ 7259977110

CONNECT ಕ್ಲಾಸಿಫೈಡ್ಸ್

Wanted

ಕನ್ಸ್ಟ್ರಕ್ಷನ್ ಸೂಪರ್‌ವೈಸರ್ ಬೇಕಾಗಿದ್ದಾರೆ
ಮೈಸೂರಿಗೆ ಹತ್ತಿರವಿರುವ (ಪಾಂಡವಪುರದಲ್ಲಿ) ಕಟ್ಟಡ ನಿರ್ಮಾಣ ಯೋಜನೆಗೆ ಅಗತ್ಯವಾದ ಅರ್ಹತೆ ಮತ್ತು ಅನುಭವವುಳ್ಳ ವ್ಯಕ್ತಿಗಳು ಬೇಕಾಗಿದ್ದಾರೆ.
ಅನುಭವಕ್ಕೆ ಅನುಗುಣವಾದ ಸಂಬಳದ ಜೊತೆಗೆ ಊಟ, ವಸತಿ ನೀಡಲಾಗುವುದು.
Mail your bio-data to admin@sreeseniorhomes.in
Contact
Sree Senior Homes
99000 31256

General

OPPORTUNITY TO Earn INCOME 60k & Above per month with Fixed Salary for Retired, Bankers, Sr.Citizens, Business People's, Homemaker's. Part/ Full Time. Contact:- 9035303572/ 9060034387.

Marketing & Sales

WANTED SALES Executive Experienced Male Candidates Needed. Minimum Qualification: Any Degree Two Wheeler Must Interested People Send Resume to bangalore@agsar.net Call: 9840691864

Part-Time Jobs

TOP MNC COMPANY LICENSED BY GOVT. Restart Your 2nd Career Opportunity With Flexible Timings Age Limit 45yrs And Above: 7019215243/ 9886641282

BUSINESS

Business to Business

Business

BEST INVESTMENT For Petrol Bunk Lease Cum Sale or Partnership Kanakapura National Highway 209 Built`to`shuit Restaurant 35000sft Call:9035963540

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

AUTOMOTIVE

Four Wheelers Buying

Toyota

WEARE Looking To Buy Preowned Toyota Land Cruiser/Prado. Preferably Less Driven. Immediate Settlement. Good Price Offered. Contact: 9845050520

Four Wheelers Selling

Benz

MERCEDESBENZ S350. For Sale. 2016 Black Color 18k Driven. Extremely Well Maintained.PPF Installed, Fancy Number. Second Owner. Price 63L Contact: 9845009982

PERSONAL

Change of Name

CHANGE OF NAME
I, **ANIL KUMAR VANAMALI BHAT,** S/o VANAMALI VAIKUNTH BHAT, Residing at # E-101, Rohan Vasantha, Marathahalli, Bengaluru - 560037, have changed my name to **ANIL V BHAT** vide affidavit dated 27/07/2023 before Notary Vyshali K, Bangalore.

I, GOBICHETTIPALAYAM Nageswaran Lavanya, hereby change my name to Lavanya Udhay Shankar for all purposes.

CHANGE OF NAME
I, **SAHANA,** D/o No. 10359479N, Rank HAV, Dayashankar M N, R/at. # 45, Sree Nilaya, 1st Main, 9th Cross, Channakeshava Nagar (Hosa Road), Electronic City Post, Bangalore-560100, have changed my name from **SAHANA D** to **SAHANA M D** vide affidavit dt.25-07-2023 before Notary K.V.Mani, Bengaluru

CHANGE OF NAME
I, **MANGALA,** W/o No. 10359479N, Rank HAV, Dayashankar M N, R/at. # 45, Sree Nilaya, 1st Main, 9th Cross, Channakeshava Nagar (Hosa Road), Electronic City Post, Bangalore-560100, have changed my name from **MANGALA** to **MANGALA M N** my DOB is mentioned in the SR as 10-08-1972 & correct DOB is **05-08-1972.** vide affidavit dt.26-07-2023 before Notary K.V.Mani, Bengaluru

I,_AZMATHUNNISA W/o`Rizwan Bakshi Sahab,R/a`#804, 52nd main,24th Cross,1st stage, Kumaraswamy Layout, Bangalore- 560078.`have changed my`Name`from KHAIRUNNISA to AZMATHUNNISA vide`affidavit dated:27-7-2023 before`Notary Ambreshappa, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CHANGE OF NAME
I, **IMRAN,** R/at. Islampura, Kasaba Hobli, Nelamangala Taluk, Bengaluru Rural Dist-562123 have changed my name to **MOHAMMED IMRAN** vide affidavit dated 27/07/2023 before Notary Gangaraja C B, Bangalore. Henceforth I shall be know as **MOHAMMED IMRAN** only

I, BUSETTY LAKSHMINARAYANA SETTY, Residing at Bellary-583201 have changed my name as BUSUTTY LAKSHMINARAYANA SETTY, vide affidavit dated 27/7/2023 before Notary P.C.Ramaiah, Bengaluru

I, NAVYA Manjunatha D/o Manjunatha T.V. R/a No.96, Namana Nilaya,1st Main, 6th Cross, Madhuban Layout, Hulimavu, B.G.Road,Near Vaishnavi Devi Temple, Bangalore-560076 have changed my name from NAVYA. M to NAVYA MANJUNATHA vide affidavit dated 26-07-2023 Sworn before Notary A.S.Narayana Reddy, Bangalore.

I, GOPI RAJAGOPAL #1799/4, 3rd Cross, 3rd Main, Prakashnagar, Bengaluru-21, have changed my name to GOPI K.R vide affidavit dated- 27/07/2023 before notary K.V. Mani

Lost

I, ROOPA .C have lost my Second PU Marks Card (Document ID 455937) passed out in the year 2018 from Seshadripuram Composite PU College & my Degree Marks Card (Document ID R1814696) passed out in the year 2021 from Seshadripuram Degree College affiliated to Bengaluru City University. The above mentioned documents are lost while relocating the residence. If found, contact to the phone number, Roopa .C- 8861016647.

DH DECCAN HERALD | ಪ್ರಜಾವಾಣಿ

BOOK YOUR REAL ESTATE

AD IN DECCAN HERALD ALL KARNATAKA & PRAJAVANI ALL KARNATAKA ON FRIDAY + SATURDAY + SUNDAY

@ 1600/-* Per Sqcm Single Column | @ 1800/-* Per Sqcm Multi Column

conditions apply*

For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

ಪೂಜೆ: ಚಿನ್ನಾಭರಣ ಕದ್ದೊಯ್ದ ನಕಲಿ ಜ್ಯೋತಿಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ಪೂಜೆ ನೆಪದಲ್ಲಿ ಮನೆಯೊಂದಕ್ಕೆ ಬಂದಿದ್ದ ನಕಲಿ ಜ್ಯೋತಿಷಿಯೊಬ್ಬ ₹ 5 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದೊಯ್ದಿದ್ದು, ಈ ಸಂಬಂಧ ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಲ್ಲಾಳಸಂದ್ರದ ನಿವಾಸಿಯಾಗಿರುವ ಮಹಿಳೆಯೊಬ್ಬರು ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ಬಳ್ಳಾರಿ ನಿವಾಸಿ ಎನ್ನಲಾದ ಆರೋಪಿ ಸುರೇಶ್ ಪಾಟೀಲ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಮಹಿಳೆ ತಮ್ಮ ಪತಿ ಜೊತೆ ನೆಲೆಸಿದ್ದಾರೆ. ದಂಪತಿಗೆ ಮಗಳಿದ್ದು, ಮದುವೆ ಮಾಡಿಕೊಡಲಾಗಿದೆ. ಪತಿ ಜೊತೆ ಜಗಳ ಮಾಡುವ ಮಗಳು, ಪದೇ ಪದೇ ತವರು ಮನೆಗೆ ಬರುತ್ತಿದ್ದರು. ಇದರಿಂದ ಬೇಸತ್ತ ಮಹಿಳೆ, ತಮ್ಮ ಕುಟುಂಬದ ಸಮಸ್ಯೆ ಬಗ್ಗೆ ಸಂಬಂಧಿಕರೊಬ್ಬರ ಬಳಿ ಹೇಳಿಕೊಂಡಿದ್ದರು. ಅವರ ಮೂಲಕ ಜ್ಯೋತಿಷಿ ಸುರೇಶ್ ಪರಿಚಯವಾಗಿತ್ತು. ವಿಶೇಷ ಪೂಜೆ ಮಾಡಿದರೆ, ಎಲ್ಲ ಸಮಸ್ಯೆಗಳು ನಿವಾರಣೆಯಾಗುವುದಾಗಿ ಆರೋಪಿ ಹೇಳಿದ್ದ. ವಿಶೇಷ ಪೂಜೆ ನೆಪದಲ್ಲಿ ಆರೋಪಿ ಸುರೇಶ್ ಮನೆಗೆ ಬಂದಿದ್ದ. ಮನೆಯಲ್ಲಿದ್ದ ಚಿನ್ನಾಭರಣ ಪಡೆದು ಬೀರುವಿನಲ್ಲಿಟ್ಟಿದ್ದ. 'ದೇವಾಲಯಕ್ಕೆ ಹೋಗಿ ಬಂದು, ಬೀರುವಿನಲ್ಲಿರುವ ಆಭರಣ ಪಡೆಯಿರಿ' ಎಂದು ಹೇಳಿದ್ದ' ಎಂದು ಮೂಲಗಳು ತಿಳಿಸಿವೆ.

'ದೇವಾಲಯಕ್ಕೆ ಹೋಗಿದ್ದ ಮಹಿಳೆ, ವಾಪಸು ಬಂದು ಬೀರು ನೋಡಿದ್ದರು. ಚಿನ್ನಾಭರಣ ಸ್ಥಳದಲ್ಲಿ ನಿಂಬೆಹಣ್ಣುಗಳು ಮಾತ್ರ ಇದ್ದವು. ಆರೋಪಿ ಮೊಬೈಲ್‌ಗೆ ಕರೆ ಮಾಡಿದಾಗ, ಸ್ವಿಚ್ ಆಫ್ ಆಗಿತ್ತು. ಜ್ಯೋತಿಷಿಯಿಂದ ವಂಚನೆ ಆಗಿರುವುದು ಗೊತ್ತಾಗುತ್ತಿದ್ದಂತೆ ಠಾಣೆಗೆ ಬಂದು ದೂರು ನೀಡಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿಯನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿವೆ.

'ಬ್ರೈನ್ ಮ್ಯಾಪಿಂಗ್' ಪರೀಕ್ಷೆ: ಮಹಿಳೆ ಬಂಧನ

ಬೆಂಗಳೂರು: ಒಂದೂವರೆ ವರ್ಷದ ಹಿಂದೆ ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳವು ಪ್ರಕರಣದ ಆರೋಪಿಯನ್ನು 'ಬ್ರೈನ್ ಮ್ಯಾಪಿಂಗ್' ಪರೀಕ್ಷೆಗೆ ಒಳಪಡಿಸಿ ಪೊಲೀಸರು ಬಂಧಿಸಿದ್ದಾರೆ.

ಗದಗ ಜಿಲ್ಲೆಯ ಅನ್ನಪೂರ್ಣ ಬಂಧಿತ ಆರೋಪಿ.

'ನ್ಯಾಯಾಲಯದ ಅನುಮತಿ ಪಡೆದು ಅನ್ನಪೂರ್ಣ ಅವರನ್ನು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಲಾಗಿತ್ತು. ಈ ಪರೀಕ್ಷೆಯಲ್ಲೂ ಆರೋಪಿ ಸುಳಿವು ಬಿಟ್ಟಿರಲಿಲ್ಲ. ಬಳಿಕ ನಡೆದ ಬ್ರೈನ್ ಮ್ಯಾಪಿಂಗ್ ಪರೀಕ್ಷೆಯಲ್ಲಿ ಸಿಕ್ಕಿ ಬಿದ್ದಿದ್ದಾಳೆ' ಎಂದು ಪೊಲೀಸರು ಹೇಳಿದರು.

'ಉದ್ಯಮಿ ಹೊನ್ನಾಚಾರಿ ಅವರ ಮನೆಯಲ್ಲಿ ₹ 10 ಲಕ್ಷ ನಗದು, ₹ 250 ಗ್ರಾಂ ಚಿನ್ನಾಭರಣ ಕಳವು ನಡೆದಿತ್ತು. ಅವರ ಮನೆಯಲ್ಲಿ ಕೆಲಸಕ್ಕಿದ್ದ ಅನ್ನಪೂರ್ಣ ಮೇಲೆ ಅನುಮಾನ ವ್ಯಕ್ತ ಪಡಿಸಿ ದೂರು ನೀಡಿದ್ದರು. ಪೊಲೀಸರು ನಾಲ್ಕು ಬಾರಿ ನೋಟಿಸ್ ನೀಡಿ ವಿಚಾರಣೆ ನಡೆಸಿದ್ದರೂ ಸುಳಿವು ಬಿಟ್ಟುಕೊಟ್ಟಿರಲಿಲ್ಲ' ಎಂದಿದ್ದಾರೆ.

ಮಡಿವಾಳದ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲಾಯಿತು. ಬ್ರೈನ್ ಮ್ಯಾಪಿಂಗ್ ಪರೀಕ್ಷೆಯ ವೇಳೆ 'ಮಾಮ' ಎನ್ನುವ ಪದ ಹೇಳಿದ್ದಳು. ಕದ್ದ ಚಿನ್ನಾಭರಣ ಹಾಗೂ ಹಣವನ್ನು ಗದಗದಲ್ಲಿ ನೆಲೆಸಿರುವ ಮಾವನ ಮನೆಗೆ ಕೊಟ್ಟಿದ್ದಳು. ಪರೀಕ್ಷೆ ವೇಳೆ ನೀಡಿದ ಮಾಮ ಪದ ಆಧರಿಸಿ ಅವರ ಮಾವನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಮಾವನಿಗೆ ಕೊಟ್ಟಿದ್ದ ಹಾಗೂ ಗಿರವಿಯಿಟ್ಟಿದ್ದ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಯುವತಿಗೆ ಸಂದೇಶ ಕಳುಹಿಸಿದ್ದಕ್ಕೆ ಕೊಲೆ

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಮಾರ್ವೇಶ್ (19) ಸಾವಿನ ತನಿಖೆ ನಡೆಸುತ್ತಿರುವ ಪೊಲೀಸರು, ಇದೊಂದು ಕೊಲೆ ಎಂಬುದಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಮಾರ್ವೇಶ್, ಬಿ.ಕಾಂ ವ್ಯಾಸಂಗ ಮಾಡುತ್ತಿದ್ದರು. ಬುಧವಾರ ಇವರ ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ರೌಡಿ ಹಾಗೂ ಸಹಚರರು ಕೃತ್ಯ ಎಸಗಿರುವ ಅನುಮಾನವಿದ್ದು, ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಥಳೀಯ ಕಾಲೇಜಿನಲ್ಲಿ ಓದುತ್ತಿದ್ದ ಮಾರ್ವೇಶ್, ಪರಿಚಯಸ್ಥ ಯುವತಿಯೊಬ್ಬರ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದರೆಂದು ಗೊತ್ತಾಗಿದೆ. ಯುವತಿಯ ಸ್ನೇಹಿತನಾಗಿರುವ ರೌಡಿ, ಸಂದೇಶ ನೋಡಿ ಕೋಪಗೊಂಡಿದ್ದ. ಕಾಲೇಜು ಬಳಿ ಮಾರ್ವೇಶ್‌ನನ್ನು ಅಡ್ಡಗಟ್ಟಿದ್ದ ರೌಡಿ ಹಾಗೂ ಇತರರು, ಹಲ್ಲೆ ಮಾಡಿ, ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು' ಎಂದು ಮೂಲಗಳು ತಿಳಿಸಿವೆ.

'ರಸ್ತೆಯಲ್ಲಿ ಬಿದ್ದಿದ್ದ ಮಾರ್ವೇಶ್ ಅವರನ್ನು ಸ್ನೇಹಿತರು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಮಾರ್ವೇಶ್ ಮೃತಪಟ್ಟಿರುವುದಾಗಿ ಹೇಳಿದರು. ಸಾವಿನ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದಿವೆ.

ಕುವೈತ್‌ನಿಂದ ಚಿನ್ನದ ಕತ್ತರಿ ತಂದ ಪ್ರಯಾಣಿಕ

ದೇವನಹಳ್ಳಿ: ಕುವೈತ್‌ನಿಂದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕನಿಂದ ಕಸ್ಟಮ್ಸ್ ಅಧಿಕಾರಿಗಳು ಚಿನ್ನದ ಕತ್ತರಿ ಸೇರಿದಂತೆ 263 ಗ್ರಾಂ ಚಿನ್ನ ವಶಪಡಿಸಿಕೊಂಡಿದ್ದಾರೆ.

ವಶಪಡಿಸಿಕೊಂಡ ಚಿನ್ನದ ಮೌಲ್ಯ ₹15.51 ಲಕ್ಷ ಎಂದು ಅಂದಾಜಿಸಲಾಗಿದೆ.

ಫಿನೈಲ್ ಸೇವನೆ: ಅನ್ನನಾಳಕ್ಕೆ ಹಾನಿ- ಯಶಸ್ವಿ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲ ಸ್ವಚ್ಛಗೊಳಿಸುವ ದ್ರಾವಣ ಸೇವಿಸಿ, ಅನ್ನನಾಳಕ್ಕೆ ಹಾನಿ ಮಾಡಿಕೊಂಡಿದ್ದ ನಗರದ 6 ವರ್ಷದ ಬಾಲಕಿಗೆ ನಗರದ ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಮನೆಯಲ್ಲಿ ಆಟವಾಡುವ ಸಂದರ್ಭದಲ್ಲಿ ಆಕಸ್ಮಿಕವಾಗಿ ನೆಲ ಸ್ವಚ್ಛಗೊಳಿಸುವ ದ್ರಾವಣವನ್ನು ಬಾಲಕಿ ಸೇವಿಸಿದ್ದಳು. ಇದರಿಂದ ಆಕೆಯ ಅನ್ನನಾಳ ಹಾಗೂ ಸಣ್ಣ ಕರುಳಿನ ಒಂದು ಭಾಗ ಸಂಪೂರ್ಣವಾಗಿ ಸುಟ್ಟು ಹೋಗಿತ್ತು. ಹಾನಿಗೊಳಗಾದ ಅನ್ನನಾಳವನ್ನು ತೆಗೆದು, ಕೊಳವೆ ಮೂಲಕ ಅವಳ ಸಣ್ಣ ಕರುಳಿಗೆ ನೇರವಾಗಿ ಆಹಾರವನ್ನು ನೀಡಲು ವ್ಯವಸ್ಥೆ ಮಾಡಲಾಗಿತ್ತು. ಇದೂ ಸಹ ಆಕೆಗೆ ಕಷ್ಟವಾಗುತ್ತಿತ್ತು. ಹೀಗಾಗಿ, ಉದರ ತಜ್ಞ ಡಾ. ಮನೀಶ್ ಜೋಶಿ ತಂಡವು ಸಂಪೂರ್ಣವಾಗಿ ಸುಟ್ಟು ಕಿರಿದಾಗಿದ್ದ ಅನ್ನನಾಳವನ್ನು ತೆಗೆದು, ಕೊಳವೆಯನ್ನು ನೇರವಾಗಿ ಬಾಲಕಿಯ ಸಣ್ಣ ಕರುಳಿಗೆ ಅಳವಡಿಸಿತು. ಈ ಮೂಲಕ ಅನ್ನನಾಳವನ್ನು ಮರುನಿರ್ಮಾಣ ಮಾಡಲಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

'ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ಅನ್ನನಾಳವನ್ನು ಮರುನಿರ್ಮಾಣ ಮಾಡಲಾಗಿದೆ. ಇದರಿಂದ ಇದೀಗ ಬಾಲಕಿಯು ಬಾಯಿಯ ಮೂಲಕ ಆಹಾರ ಸೇವಿಸಬಹುದಾಗಿದೆ' ಎಂದು ಡಾ. ಮನೀಶ್ ಜೋಶಿ ಹೇಳಿದ್ದಾರೆ.

ಮುಖ್ಯಮಂತ್ರಿ ಕಾರು ಅಡ್ಡಗಟ್ಟಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆ ಎದುರು ಅಡ್ಡಾದಿಡ್ಡಿ ನಿಲ್ಲಿಸುತ್ತಿರುವ ವಾಹನಗಳಿಂದ ಕಿರಿಕಿರಿ ಉಂಟಾಗುತ್ತಿದೆ' ಎಂದು ಆರೋಪಿಸಿ ಮನೆ ಮಾಲೀಕರೊಬ್ಬರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರು ಅಡ್ಡಗಟ್ಟಿ ಆಕ್ರೋಶ ವ್ಯಕ್ತಪಡಿಸಿದರು.

ಕುಮಾರಕೃಪಾ ರಸ್ತೆಯಲ್ಲಿ ಮುಖ್ಯಮಂತ್ರಿ ಮನೆ ಇದೆ. ಇದರ ಎದುರಿನ ಮನೆಯಲ್ಲಿ ಕುಟುಂಬ ವಾಸವಿದೆ. ಈ ಮನೆ ಎದುರು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದ್ದು, ಇದರಿಂದ ಕುಟುಂಬದ ಸದಸ್ಯರಿಗೆ ಓಡಾಡಲು ತೊಂದರೆ ಉಂಟಾಗಿದೆ.

ಮುಖ್ಯಮಂತ್ರಿ ಭೇಟಿಗೆ ಬರುವ ಜನ, ಮನೆ ಎದುರು ಬೇಕಾಬಿಟ್ಟಿಯಾಗಿ ವಾಹನ ನಿಲ್ಲಿಸುತ್ತಿದ್ದಾರೆ. ಇದರಿಂದ ಕುಟುಂಬದ ಸದಸ್ಯರು ನಿತ್ಯವೂ ತೊಂದರೆ ಅನುಭವಿಸುತ್ತಿದ್ದಾರೆ. ಇದರಿಂದ ಬೇಸತ್ತ ಮನೆ ಮಾಲೀಕ, ಸಿದ್ದರಾಮಯ್ಯ ಅವರ ಕಾರು ತಡೆದು ದೂರು ನೀಡಿದರು.

'ಮನೆ ಎದುರು ಬೇಕಾಬಿಟ್ಟಿ ವಾಹನ ಗಳನ್ನು ನಿಲ್ಲಿಸಲಾಗುತ್ತಿದೆ. ಇದರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ದಯವಿಟ್ಟು ಕ್ರಮ ಕೈಗೊಳ್ಳಿ' ಎಂದು ಮನೆ ಮಾಲೀಕ ಕೋರಿದರು.

PUBLIC NOTICE

Public is hereby informed that my client is intending to purchase the schedule property from its owner Sri.Ashok Bangalore, S/o.Mr.B. Krishnamurthy, R/o at #347, 1st and 3rd Block, East, 22nd Cross, Jayanagar, Bangalore-560011.Any person/s having any claim over the schedule property may lodge his/her/their objections or claims in writing with all documentary evidence with regard to such claims, to the undersigned within 15 days hereof, failing which my client will proceed to complete the purchase. Any objections /claims received thereafter will not be binding upon my client.

SCHEDULE PROEPRTY:

All that piece & parcel of the vacant immovable property bearing Site No.315, formed by Bank Officers and Officials House Building Co-operative Society Ltd., situated at BOOHBCS Layout, Doddakallasandra First Stage, Doddakallasandra Village, Uttarahalli Hobli, Bangalore South Taluk, Bangalore, measuring East to West: 60 feet and North to South: 67 feet, totally measuring 4020Sq ft (446.66 Sq Yards) and bounded on East by: Road, West by: Site No.333 and 332, North by:Site No. 316& South by: Site No. 314

K. S. Nandish Babu, Advocate,
No.7, Above Janatha Hotel, MBS Building, H.Siddaiah Road, 11th Cross, Wilson Garden, Bangalore -560 027

PUBLIC NOTICE

Our client ('Client') is desirous of entering into certain transaction in connection with the residentially converted immovable properties morefully described in the 'Schedule' here to and hereinafter collectively referred to as 'Schedule Properties' with **M/s. M.S.K. Holdings**, a Partnership firm and **Mr. C. Bhimaraju, son of Late Chandramathi Mudaliar, residing at Bengaluru** ('Owners'). The Owners have represented to our Client that they are the absolute owners of their respective portions in the Schedule Properties, with unrestricted rights of alienation over the same.

Notice is hereby given to the general public that any person/s other than the Owners, asserting any right, title, charge, lien, claim/s or any interest whatsoever in respect of the Schedule Properties are hereby called upon to submit to the undersigned, their claim/s, if any, over the Schedule Properties or their objections, if any, to the aforementioned transaction. The said claim/s or objections must be in writing, together with documentary proof of such claim/s or objections, so as to reach us at the address given below within a period of 10(Ten) days from the date of publication of this Notice. If no such claim/s or objections are received, it shall be deemed that no one else other than the Owners has/ have any right, title, interest or claim/s in respect of the Schedule Properties and our Client would be at liberty to proceed with the said transaction in connection with the Schedule Properties.

SCHEDULE
(Description of the Schedule Properties)

All that piece and parcel of residentially converted immovable properties, totally admeasuring 25 Acres 30 Guntas, situated at Bidaluru Village, Kasaba Hobli, Devanahalli Taluk, Bangalore Rural District, described in the table below:

Sl. No.	Survey No.	Extent		Boundaries
		Acres	Guntas	
1.	113/1	02	06	East by Land bearing Survey No.112; West by Land bearing Survey No. 114; North by Land bearing Survey No. 127; and South by Land bearing Survey No. 113/2.
2.	113/2	00	28	East : Land bearing Survey No.112; West : Land bearing Survey Nos. 114 &115; North : Land bearing Survey No. 113/1; and South : Remaining portion of Survey No. 113/2
3.	117/1	03	00	East by Land bearing Survey No.116; West by Land bearing Survey No. 119; North by Land bearing Survey No. 125; and South by Land bearing Survey No. 117/2.
4.	117/2	03	06	East by Land bearing Survey No.116; West by Land bearing Survey No. 119; North by Land bearing Survey No. 117/1; and South by Land bearing Survey No. 117/3.
5.	117/3	03	00	East by Land bearing Survey No.116; West by Land bearing Survey No. 119; North by Land bearing Survey No. 117/2; and South by Road
6.	114	00	22	East by Land bearing Survey No.113/1; West by Land bearing Survey No. 126; North by Land bearing Survey No. 127; and South by Land bearing Survey No. 115/1
7.	115/1	01	32	East by Land bearing Survey No.113; West by Land bearing Survey No. 116; North by Land bearing Survey No. 114 &126 South by Land bearing Survey No. 115/2
8.	115/2	01	34	East by Land bearing Survey No.113; West by Land bearing Survey No. 116; North by Land bearing Survey No. 115/1 and South by Land bearing Survey No. 115/3
9.	126	09	22	East by Land bearing Survey No.114 & 127; West by Land bearing Survey No. 125/4; North by Lake (Survey No. 144) and South by Land bearing Survey No. 115/1 & 116

The aforementioned Schedule Properties have access through a portion of the property bearing Survey No. 125/4, measuring 06 Guntas and the said extent has been relinquished by its owner Mr. S.Roopesh Kumar, son of Mr. M. Sainath in favour of the Bidaluru Gram Panchayati, Devanahalli Taluk, Bangalore Rural District.

Date:
Place: Bengaluru

Sd/-
Mr. Srinivas B.R. & Ms. Brijita Prakash, Partners
DSK Legal, Prestige Loka,No. 201,
2nd Floor, No. 7/1 & 7/7, Brunton Road,
Craig Park Layout, Bengaluru – 560025.
Tel: 080-69548770.

[ಆಚಾರ್ & ಕೋ. ಸಿಂಧು ಶ್ರೀನಿವಾಸಮೂರ್ತಿ]

ಪುನೀತ್ ಇಷ್ಟಪಟ್ಟ ಕಥೆ

ಬಹುತೇಕ ಮಹಿಳೆಯರೇ ಎಲ್ಲ ವಿಭಾಗಗಳಲ್ಲಿ ಕೆಲಸ ಮಾಡಿ, ಅಶ್ವಿನಿ ಪುನೀತ್ ರಾಜ್‌ಕುಮಾರ್ ನಿರ್ಮಿಸಿರುವ 'ಆಚಾರ್ & ಕೋ..' ಚಿತ್ರ ಇಂದು(ಜುಲೈ 28) ತೆರೆಗೆ ಬಂದಿದೆ. 1960ರ ದಶಕದ ಬೆಂಗಳೂರಿನ ಕಥೆ ಹೇಳುವ ಚಿತ್ರದ ಕುರಿತು ನಿರ್ದೇಶಕಿ, ನಾಯಕಿ ಸಿಂಧು ಶ್ರೀನಿವಾಸಮೂರ್ತಿ ಒಂದಷ್ಟು ಮಾಹಿತಿ ನೀಡಿದ್ದಾರೆ...

ವಿನಾಯಕ ಕೆ.ಎಸ್.

● ಚಿತ್ರರಂಗದಲ್ಲಿ ನಿಮ್ಮ ಹಿನ್ನೆಲೆ ಏನು? ಎಷ್ಟು ವರ್ಷದ ಪಯಣ?

ನಾನು 16ನೇ ವಯಸ್ಸಿನಿಂದ ರಂಗಭೂಮಿಯಲ್ಲಿ ಸಕ್ರಿಯಳಾಗಿದ್ದೆ. 'ಫ್ರೆಂಚ್ ಬಿರಿಯಾನಿ', ತೆಲುಗಿನ 'ಸಿನಿಮಾ ಬಂಡಿ' ಮೊದಲಾದ ಸಿನಿಮಾಗಳಲ್ಲಿ ನಟಿಸಿರುವೆ. ನಟಿಯಾಗಬೇಕೆಂಬ ಆಸೆಯಿಂದಲೇ ಚಿತ್ರರಂಗಕ್ಕೆ ಬಂದಿದ್ದು. ಸಿನಿಮಾ, ವೆಬ್‌ಸೀರೀಸ್, ಜಾಹೀರಾತುಗಳಲ್ಲಿ ನಟಿಸಿ ನಂತರ ಚಿತ್ರಕಥೆ ಬರವಣಿಗೆ ಕಲಿಯಲು ಮುಂಬೈಗೆ ಹೋದೆ.

● ಈ ಸಿನಿಮಾ ಪಯಣ ಹೇಗೆ ಪ್ರಾರಂಭವಾಯಿತು?

2017ರಲ್ಲಿ ಈ ಸಿನಿಮಾ ಬರವಣಿಗೆ ಕೆಲಸ ಶುರುಮಾಡಿದ್ದು. 2019ರಲ್ಲಿ ಮುಕ್ತಾಯಗೊಂಡಿತು. ಚಿತ್ರರಂಗದ ಪ್ರತಿಭೆಗಳಿಗೆ ಅವಕಾಶ ನೀಡುವ ಮುಂಬೈನ 'ತುಳಸಿಯಾ' ಸಂಸ್ಥೆಯ ಚೈತನ್ಯ ಹೆಗ್ಡೆ ಅವರಿಗೆ ಸ್ಕ್ರಿಪ್ಟ್ ತೋರಿಸಿದೆ. ಅವರಿಗೆ ಬಹಳ ಇಷ್ಟವಾಗಿ ಒಂದು ದೃಶ್ಯ ಚಿತ್ರೀಕರಣ ಮಾಡಲು ಹೇಳಿದರು. ಅಲ್ಲಿಯವರೆಗೆ ನನಗೆ ಚಿತ್ರ ನಿರ್ದೇಶನದ ಆಲೋಚನೆ ಇರಲಿಲ್ಲ. ಬೆಂಗಳೂರಿನ ಕುರಿತು ಹೆಚ್ಚು ಗೊತ್ತಿರುವುದರಿಂದ ನೀವೇ ನಿರ್ದೇಶನ ಮಾಡಿ ಎಂದು ಅವರು ಒತ್ತಾಯಿಸಿದರು. 2020ರಲ್ಲಿ ಒಂದು ಸ್ಯಾಂಪಲ್ ದೃಶ್ಯ ಚಿತ್ರೀಕರಣವಾಯಿತು. ಅಷ್ಟು ಹೊತ್ತಿಗೆ ಕೋವಿಡ್ ಪ್ರಾರಂಭವಾಯ್ತು.

● ಪಿಆರ್‌ಕೆ ನಿರ್ಮಾಣ ಸಂಸ್ಥೆ ಜೊತೆಯಾಗಿದ್ದು ಹೇಗೆ?

ನಾನು ಈ ನಿರ್ಮಾಣ ಸಂಸ್ಥೆಯ 'ಫ್ರೆಂಚ್ ಬಿರಿಯಾನಿ' ಚಿತ್ರದಲ್ಲಿ ನಟಿಸಿದ್ದೆ. ಇದರ ಪ್ರಚಾರದ ಸಮಯದಲ್ಲಿ ಅಶ್ವಿನಿ ಹಾಗೂ ಪುನೀತ್ ರಾಜ್‌ಕುಮಾರ್ ಅವರ ಪರಿಚಯವಾಗಿತ್ತು. ಹೀಗಾಗಿ ಅವರಿಗೆ ಹೋಗಿ ಕಥೆ ಹೇಳಿದೆ. ಪುನೀತ್ ಅವರಿಗೆ ಕಥೆ ಬಹಳ ಇಷ್ಟವಾಯ್ತು. ಬಹಳಷ್ಟು ಜನರ ಬಳಿ ಈ ಕಥೆ ನಿರ್ಮಾಣ ಮಾಡುತ್ತಿರುವೆ ಎಂದು ಅವರು ಹೇಳಿಕೊಂಡಿದ್ದರು.

● ಯಾಕೆ ಮಹಿಳೆಯರೇ ಸೇರಿಕೊಂಡು ಈ ಸಿನಿಮಾ ಮಾಡಬೇಕು ಅನ್ನಿಸಿದ್ದು?

ನಿರ್ಧಾರ ಮಾಡಿ ಈ ತಂಡ ಆಗಿದ್ದಲ್ಲ. ಒಂದು ರೀತಿಯಲ್ಲಿ ಕೂಡಿಬಂದಿದ್ದು. ನಿರ್ಮಾಪಕರಾಗಿ ಅಶ್ವಿನಿ ಸಿಕ್ಕರು. 1960-70ರ ಬೆಂಗಳೂರಿನ ಕಥೆ. ಹೀಗಾಗಿ ಕರ್ನಾಟಕ ಸಂಗೀತದ ಹಿನ್ನೆಲೆಯುಳ್ಳ ಬಿಂದು ಮಾಲಿನಿ ಸಂಗೀತ ನಿರ್ದೇಶಕರಾಗಬೇಕು ಎಂದು ಮೊದಲೇ ಅಂದುಕೊಂಡಿದ್ದೆ. ಅವರೂ ಒಪ್ಪಿಕೊಂಡರು. 'ಒನ್ ಕಟ್ ಟೂ ಕಟ್' ಸಿನಿಮಾಗೆ ಕ್ರಿಯೇಟೀವ್ ಪ್ರೊಡ್ಯೂಸರ್ ಆಗಿದ್ದ ಕ್ರಿಯೇಟಿವ್ ನಿರ್ಮಾಪಕಿ ಡಾನ್ನಿಲಾ ಕೊರ್ರೆಯಾ ಈ ತಂಡ ಸೇರಿಕೊಂಡರು. ವಸ್ತ್ರವಿನ್ಯಾಸಕಾರ್ತಿ ಇಂಚರ ಸುರೇಶ್ ಅವರನ್ನು ಕೂಡ ಮೊದಲೇ ಆಯ್ಕೆ ಮಾಡಿಯಾಗಿತ್ತು.

● ಇದು ಒಟ್ಟು ಕುಟುಂಬದ ಕಥೆಯಾ?

1960–70ರ ದಶಕದಲ್ಲಿ 10 ಜನ ಮಕ್ಕಳಿರುವ ಒಂದು ಕುಟುಂಬದ ಕಥೆ. ಒಬ್ಬೊಬ್ಬರದ್ದು ಒಂದೊಂದು ರೀತಿಯ ಪಾತ್ರಗಳು. ಆ ಕಾಲಘಟ್ಟದ ಬದುಕನ್ನು ಮರುಸೃಷ್ಟಿ ಮಾಡಿದ್ದೇವೆ. ಕುಟುಂಬವೆಲ್ಲ ಬಂದು ನೋಡಬೇಕು ಎಂಬ ಆಸೆಯಿಂದ ಮಾಡಿರುವ ಚಿತ್ರವಿದು.

● ಚಿತ್ರೀಕರಣದ ಅನುಭವ ಮತ್ತು ಸವಾಲುಗಳು?

ಪಿಆರ್‌ಕೆಯಂತಹ ನಿರ್ಮಾಣ ಸಂಸ್ಥೆ ಜೊತೆಗಿರುವುದರಿಂದ ಸವಾಲು ಕಡಿಮೆ. ಮೈಸೂರಿನಲ್ಲಿ 40 ದಿನಗಳ ಕಾಲ ಒಂದೇ ಹಂತದ ಚಿತ್ರೀಕರಣ ನಡೆಸಿದೆವು. ಸಣ್ಣ ಪುಟ್ಟ ಸವಾಲುಗಳೊಂದಿಗೆ ಚಿತ್ರೀಕರಣ ಮುಗಿಯಿತು. ಇದೀಗ ಬಿಡುಗಡೆ ಹಂತಕ್ಕೆ ಬಂದಿದೆ. ಪುನೀತ್ ಅವರು ಕಥೆಯನ್ನು ಬಹಳ ಇಷ್ಟಪಟ್ಟಿದ್ದರು. ಚಿತ್ರಮಂದಿರದಲ್ಲಿ ಬಿಡುಗಡೆಯಾಗುವಂತೆ ಸಿನಿಮಾ ಮಾಡೋಣ ಎಂದು ಅವರು ನಿರ್ಧರಿಸಿದ್ದರು. ❖

ಪ್ರಜಾವಾಣಿ ನೋಡಿಯೊ ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಮಿಲನಾ ನಾಗರಾಜ್

ರಾಜ್ಯದ ಹೆಚ್ಚಿನ ಚಿತ್ರಮಂದಿರಗಳ ಪರದೆಗಳನ್ನು 'ಹಾಸ್ಟೆಲ್ ಹುಡುಗರು..' ಆಕ್ರಮಿಸಿಕೊಂಡಿರುವ ಸಂದರ್ಭದಲ್ಲೇ ಇಂದು(ಜುಲೈ 28) ಐದು ಹೊಸ ಚಿತ್ರಗಳು ಬಿಡುಗಡೆಯಾಗುತ್ತಿವೆ. ಈ ಪೈಕಿ ಹಲವು ಚಿತ್ರಗಳಿಗೆ ಚಿತ್ರಮಂದಿರಗಳಲ್ಲಿ ದಿನಕ್ಕೊಂದು ಪ್ರದರ್ಶನವಷ್ಟೇ ದೊರಕಿದೆ.

'ಆರ'

ದೈವ ಹಾಗೂ ದುಷ್ಟಶಕ್ತಿಯ ಸಂಘರ್ಷದ ಕಥಾಹಂದರ ಒಳಗೊಂಡ 'ಆರ' ಥ್ರಿಲ್ಲರ್ ಜಾನರ್‌ನ ಸಿನಿಮಾ. ಯುವ ಸಿನಿಮೋತ್ಸಾಹಿಗಳ ತಂಡ ಈ ಚಿತ್ರ ನಿರ್ಮಿಸಿದೆ. ರೋಹಿತ್ ಹಾಗೂ ದೀಪಿಕಾ ಆರಾಧ್ಯ ಚಿತ್ರದ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಚಿತ್ರದ ನಾಯಕ ನಟ ರೋಹಿತ್ ಬರೆದಿದ್ದಾರೆ. ಆನಂದ್ ನೀನಾಸಂ ಸತ್ಯ, ರಾಜ್, ನಿಖಿಲ್, ಶ್ರೀಪಾದ್, ಪ್ರತೀಕ್, ಲೋಕೇಶ್ ಚಿತ್ರದ ಪ್ರಮುಖ ಪಾತ್ರಗಳಿಗೆ ಬಣ್ಣ ಹಚ್ಚಿದ್ದಾರೆ.

ಹುಡುಗರ ಹಾವಳಿ ನಡುವೆ ಐದು ಸಿನಿಮಾ!

ಶಶಾಂಕ್

'ಕೌಸಲ್ಯಾ ಸುಪ್ರಜಾ ರಾಮ': 'ಮೊಗ್ಗಿನ ಮನಸು' ಖ್ಯಾತಿಯ ಶಶಾಂಕ್ ನಿರ್ದೇಶನದಲ್ಲಿ ಡಾರ್ಲಿಂಗ್ ಕೃಷ್ಣ ನಾಯಕರಾಗಿ ನಟಿಸಿರುವ ಈ ಚಿತ್ರ ತೆರೆಕಂಡಿದೆ. ತಂದೆಯ ಪ್ರಭಾವದಿಂದ ಪುರುಷಾಭಿಮಾನಿಯಾಗುವ(ಮೇಲ್ ಷೋವಿನಿಸ್ಟ್) ಹುಡುಗನೊಬ್ಬನ ಸುತ್ತ ಈ ಚಿತ್ರದ ಕಥೆಯಿದೆ. ಚಿತ್ರದಲ್ಲಿ ಕೃಷ್ಣ ಅವರಿಗೆ ಬೃಂದಾ ಆಚಾರ್ಯ ಜೋಡಿಯಾಗಿದ್ದು, ನಟಿ ಮಿಲನಾ ನಾಗರಾಜ್, ನಾಗಭೂಷಣ್ ಅವರೂ ಚಿತ್ರದಲ್ಲಿದ್ದಾರೆ. ಕೌರವ ಪ್ರೊಡಕ್ಷನ್ ಹೌಸ್ ಹಾಗೂ ಶಶಾಂಕ್ ಸಿನಿಮಾಸ್ ಜೊತೆಗೂಡಿ ಈ ಸಿನಿಮಾ ನಿರ್ಮಾಣ ಮಾಡಿದೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

'ಆಚಾರ್ & ಕೋ.': ಪಿ.ಆರ್.ಕೆ ಪ್ರೊಡಕ್ಷನ್ಸ್ ನಿರ್ಮಾಣದ ಈ ಚಿತ್ರವನ್ನು ಸಿಂಧು ಶ್ರೀನಿವಾಸಮೂರ್ತಿ ನಿರ್ದೇಶಿಸಿದ್ದಾರೆ. 1960ರ ಕಾಲಘಟ್ಟದಲ್ಲಿ ನಡೆಯುವ ಕಥೆ ಇದಾಗಿದ್ದು, ಬೆಂಗಳೂರಿನ ಜಯನಗರ ನಿವಾಸಿ ಮಧುಸೂದನ್ ಆಚಾರ್ - ಸಾವಿತ್ರಿ ಆಚಾರ್ ಹಾಗೂ ಅವರ ಹತ್ತು ಜನ ಮಕ್ಕಳ ಸುತ್ತ ಕಥಾಹಂದರವಿದೆ. ಕೂಡು ಕುಟುಂಬದ ಕಥೆ ಇದಾಗಿದ್ದು, ಮೈಸೂರಿನಲ್ಲಿ ಚಿತ್ರದ ಚಿತ್ರೀಕರಣ ನಡೆಸಿದೆ. ಅಶೋಕ್, ಸುಧಾ ಬೆಳವಾಡಿ, ಸಿಂಧು ಶ್ರೀನಿವಾಸಮೂರ್ತಿ ಮತ್ತಿತರರು ತಾರಾಬಳಗದಲ್ಲಿದ್ದಾರೆ. ಬಿಂದುಮಾಲಿನಿ ಸಂಗೀತ ನಿರ್ದೇಶನ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ ಹಾಗೂ ಆಶಿಕ್ ಕುಸುಗೊಳ್ಳಿ ಅವರ ಸಂಕಲನವಿರುವ ಈ ಚಿತ್ರಕ್ಕೆ ಸಿಂಧು ಶ್ರೀನಿವಾಸ ಮೂರ್ತಿ ಹಾಗೂ ಕಣ್ಣನ್ ಗಿಲ್ ಕಥೆ, ಚಿತ್ರಕಥೆ ರಚಿಸಿದ್ದಾರೆ.

ಈ ಸಿನಿಮಾಗಳ ಜೊತೆಗೆ ಶ್ರೀರಜನಿ ನಿರ್ದೇಶನದ **'ನವ ಇತಿಹಾಸ'** ಸಿನಿಮಾವೂ ಇಂದು ತೆರೆಕಂಡಿದೆ.

ರಾಗಿಣಿ ಸಿನಿಮಾ ಮುಂದಕ್ಕೆ: ನಟಿ ರಾಗಿಣಿ ದ್ವಿವೇದಿ ಪ್ರಮುಖಪಾತ್ರದಲ್ಲಿ ನಟಿಸಿರುವ 'ಶೀಲ' ಸಿನಿಮಾ ಬಿಡುಗಡೆ ಮುಂದಕ್ಕೆ ಹೋಗಿದೆ. ಸಿನಿಮಾವನ್ನು ಜುಲೈ ಮಾಸಾಂತ್ಯಕ್ಕೆ ಬಿಡುಗಡೆಗೊಳಿಸುವುದಾಗಿ ಚಿತ್ರತಂಡ ಘೋಷಿಸಿತ್ತು. ಈ ಸಿನಿಮಾ ಕನ್ನಡ ಹಾಗೂ ಮಲಯಾಳಂನಲ್ಲಿ ನಿರ್ಮಾಣವಾಗಿದೆ. ಇದೊಂದು ಮಹಿಳಾ ಪ್ರಧಾನ ಚಿತ್ರವಾಗಿದ್ದು, ಚಿತ್ರಕ್ಕೆ ಬಾಲು ನಾರಾಯಣನ್ ಆ್ಯಕ್ಷನ್ ಕಟ್ ಹೇಳಿದ್ದು, ಕೇರಳ ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆದಿದೆ. ❖

ದೀಪಿಕಾ ಆರಾಧ್ಯ

ರಾಗಿಣಿ ದ್ವಿವೇದಿ

ಕೆ.ಜಿ.ರಸ್ತೆ : ತ್ರಿವೇಣಿ DTS - 4ಆಟ

ಮಾಗಡಿ ರಸ್ತೆ : VEERESH CINEMAS
ಮಲ್ಲೇಶ್ವರಂ : ಸವಿತಾ 4.30pm - 7.30pm
ಸುಂಕದಕಟ್ಟೆ : ಮೋಹನ್ DTS - 4ಆಟ
ಅವಲಹಳ್ಳಿ : ವೆಂಕಟೇಶ್ವರ DTS - 4ಆಟ
ಜೆ.ಪಿ.ನಗರ : ಸಿದ್ದಲಿಂಗೇಶ್ವರ DTS - 4ಆಟ
ಕಮಲಾನಗರ : ವೀರಭದ್ರೇಶ್ವರ DTS - 4ಆಟ
ಕೆಂಗೇರಿ: ವೆಂಕಟೇಶ್ವರ DTS - 4ಆಟ
ತಾವರಕೆರೆ : ಬಾಲಾಜಿ DTS - 4ಆಟ
Bharathi Cinema Peenya
ಕಾಮಾಕ್ಷಿಪಾಳ್ಯ ವಿಕ್ಟರಿ ಸಿನಿಮಾಸ್ DTS - 4ಆಟ
ಗೊಲ್ಲರಹಟ್ಟಿ : ವೆಂಕಟೇಶ್ವರ DTS - 4ಆಟ
ಉತ್ತರಹಳ್ಳಿ : MUKTA A2 CINEMAS
ಗೌಡನಪಾಳ್ಯ : ಶ್ರೀನಿವಾಸ DTS - 4ಆಟ
ವಿ.ಆರ್ ಸಿನಿಮಾಸ್ : ವಿ.ಆರ್ ಸಿನಿಮಾಸ್ DTS - 4ಆಟ

ಹೊಂಗಸಂದ್ರ : ಬೃಂದಾ DTS - 4ಆಟ
ಮಾಗಡಿ : ಬಾಲಾಜಿ DTS - 4ಆಟ
PVR CINEMAS: ORION RAJAJINAGAR, OLD MADRAS ROAD, GT MALL - MAGADI ROAD, VAISHNAVI SAPPHIRE, MSR ELEMENTS MALL, ARENA MALL, VEGA CITY, GLOBAL, FORUM, BHARTIYA CITY
INOX LIVE the MOVIE: MANTRI MALL, VALUE MALL WF, SWAGATH, GARUDA MALL-MG ROAD, GALLERIA MALL, GARUDA-YELAHANKA
Cinépolis: MEENAKSHI MALL, ETA, LULU MALL - SCREEN -6, LULU VIP, SJR, ORION EAST, RMM, FUN CINEMAS
GOPALAN CINEMAS: ARCH - MYSORE ROAD, LAGECY MALL, INNOVATION, GRAND MALL
MIRAJ CINEMAS MAGADI ROAD
SPI AURA CINEMAS WHITEFIELD
INNOVATIVE MULTIPLEX MARATHAHALLI
KINO CINEMAS SIGEHALLI
ROCKLINE mall & cinemas PEENYA
CINEPHILE HSR

ತುಮಕೂರು : ಗಾಯತ್ರಿ DTS - 4ಆಟ
INOX LIVE the MOVIE
ತಿಪಟೂರು : ತ್ರಿಮೂರ್ತಿ DTS - 4ಆಟ
ರಾಮನಗರ : ಶ್ರೀರಾಮ DTS - 4ಆಟ
ಕನಕಪುರ : ಅರ್ಕಾವತಿ DTS - 4ಆಟ
ಚನ್ನಪಟ್ಟಣ : ಲಕ್ಷ್ಮೀ DTS - 4ಆಟ
ಶಿರಾ : ಸಪ್ತಗಿರಿ DTS - 4ಆಟ
ದೊಡ್ಡಬಳ್ಳಾಪುರ : ಸೌಂದರ್ಯಮಹಲ್ DTS - 4ಆಟ
ಮೈಸೂರು : DRC CINEMAS, INOX, PVR CINEMAS, SATYAM CINEPLEXES, MYSURU VISION CINEMAS
ಲಿಡೋ DTS - 4ಆಟ
ಮಂಡ್ಯ : ಮಹಾವೀರ್ DTS - 4ಆಟ
ಮದ್ದೂರು : ಸಂಜಯ DTS - 4ಆಟ

ಹಾಸನ : ಎಸ್.ಪಿ.ಜಿ DTS - 4ಆಟ
ಚನ್ನರಾಯಪಟ್ಟಣ : ಗಾಯತ್ರಿ DTS - 4ಆಟ
ನಾಗಮಂಗಲ: ವೆಂಕಟೇಶ್ವರ DTS - 4ಆಟ
ಕೊಳ್ಳೆಗಾಲ : ಕೃಷ್ಣ DTS - 4ಆಟ
ಚಾಮರಾಜನಗರ : ಬಸವೇಶ್ವರ DTS - 4ಆಟ
ಮಳವಳ್ಳಿ : ರಾಜರಾಜೇಶ್ವರಿ DTS - 4ಆಟ
ಕೆ.ಆರ್ ನಗರ : ಗೌರಿಶಂಕರ್ DTS - 4ಆಟ
ಟಿ.ನರಸೀಪುರ : ಮುರುಗನ್ DTS - 4ಆಟ
ಬನ್ನೂರು: ರತ್ನಮಹಲ್ DTS - 4ಆಟ
ಬೆಳ್ಳೂರು ಕ್ರಾಸ್ : ಮಾರುತಿ DTS - 4ಆಟ
ಕೆ.ಆರ್ ಪೇಟೆ : ಕೆ.ಜೆ.ಬಿ DTS - 4ಆಟ
ಬೇಲೂರು : ರೇಣುಕಾ DTS - 4ಆಟ

ಪಾಂಡವಪುರ: ಕೋಕಿಲಾ DTS - 4ಆಟ
ಗುಂಡ್ಲುಪೇಟೆ: ವೆಂಕಟೇಶ್ವರ DTS - 4ಆಟ
ಕೆ.ಎಂ.ದೊಡ್ಡಿ : ಸುಮಾ DTS - 4ಆಟ
ದಾವಣಗೆರೆ : ಗಿತಾಂಜಲಿ DTS - 4ಆಟ
MOVIE TIME CINEMAS
ಬಳ್ಳಾರಿ : ನಟರಾಜ ಕಾಂಪ್ಲೆಕ್ಸ್ DTS - 4ಆಟ
ಚಿತ್ರದುರ್ಗ : ಪ್ರಸನ್ನ DTS - 4ಆಟ
ಸಿರಗುಪ್ಪ : ರಾಮಕೃಷ್ಣ DTS - 4ಆಟ
ಹಿರಿಯೂರು: ನಂಜುಂಡೇಶ್ವರ DTS - 4ಆಟ
ಹುಬ್ಬಳ್ಳಿ : Cinépolis
ಅಪ್ಸರಾ DTS - 4ಆಟ
ದಾರವಾಡ : ಪದ್ಮ DTS - 4ಆಟ
ಗದಗ : ಕೃಷ್ಣ DTS - 4ಆಟ
ಬಿಜಾಪುರ: ಡ್ರೀಮ್‌ಲ್ಯಾಂಡ್ DTS - 4ಆಟ

ರಾಣೆಬೆನ್ನೂರು : ಶಿವಶಕ್ತಿ DTS - 4ಆಟ
ಹಾವೇರಿ : ಮಾಘವಿ DTS - 4ಆಟ
ಇಳಕಲ್ : ಶ್ರೀನಿವಾಸ DTS - 4ಆಟ
ಬಾಗಲಕೋಟೆ : ವಾಸವಿ DTS - 4ಆಟ
ಬಾದಾಮಿ : ಮಹಾಕುಟೇಶ್ವರ DTS - 4ಆಟ
ರಬಕವಿ : ಶ್ರೀನಿವಾಸ DTS - 4ಆಟ
ಜಮಖಂಡಿ : ಸುವರ್ಣ DTS - 4ಆಟ
ಮುದೋಳ್ : ಸುಭಾಷಿಣಿ DTS - 4ಆಟ
ಗೋಕಾಕ್: ಲಕ್ಷ್ಮೀ DTS - 4ಆಟ
ಲಕ್ಷ್ಮೇಶ್ವರ : ಕೃಷ್ಣ DTS - 4ಆಟ
ಸಿಂದಗಿ : ವಿನಾಯಕ DTS - 4ಆಟ
ತಾಳಿಕೋಟೆ: ಅಮೀರ್ DTS - 4ಆಟ
ಅಥಣಿ : ದುರ್ಗಾಲಕ್ಷ್ಮೀ DTS - 4ಆಟ

ಬೆಳಗಾಂ: INOX
ಗುಲ್ಬರ್ಗಾ: INOX, MUKTA A2 CINEMAS, SHETTY'S MULTIPLEX
ಗಂಗಾವತಿ : MOHIUDDIN TALKIES GANGAVATHI
ಹೊಸದಾಗಿ ನವೀಕರಿಸಲಾಗಿದೆ
ಕೊಪ್ಪಳ : ಶಿವೆ DTS - 4ಆಟ
ಸಿಂದನೂರು : ಸಂಗಮ DTS - 4ಆಟ
ಕುಷ್ಟಗಿ : ಬಸವರಾಜು DTS - 4ಆಟ
ಶಿವಮೊಗ್ಗ : ಮಲ್ಲಿಕಾರ್ಜುನ DTS - 4ಆಟ
Bharath Cinemas
ಬದ್ರಾವತಿ : ವೆಂಕಟೇಶ್ವರ DTS - 4ಆಟ
ಶಿಕಾರಿಪುರ : ಕಿರಣ್ DTS - 4ಆಟ
ಅನವೇರಿ: ಶ್ರೀದೇವಿ DTS - 4ಆಟ
ಕಡೂರು : ವಿಜಯಲಕ್ಷ್ಮೀ DTS - 4ಆಟ
ಚೆನ್ನಗಿರಿ : ವೀರಭದ್ರೇಶ್ವರ DTS - 4ಆಟ
ತೀರ್ಥಹಳ್ಳಿ: ವೆಂಕಟೇಶ್ವರ DTS - 4ಆಟ

ಶಿರಾಳಕೊಪ್ಪ ಮಾರುತಿ DTS - 4ಆಟ
ಚಿಕ್ಕಮಗಳೂರು : ಶ್ರೀಲೇಖ DTS - 4ಆಟ
ಮಂಗಳೂರು : Bharath Cinemas, PVR CINEMAS, Cinépolis, SP CINEMAS
ಸೂರತ್‌ಕಲ್: ನಟರಾಜ ಕಾಂಪ್ಲೆಕ್ಸ್ DTS - 4ಆಟ
ಬೆಳ್ತಂಗಡಿ: ಭರತ್ DTS - 4ಆಟ
ಉಡುಪಿ : Bharath Cinemas
ಕುಂದಾಪುರ : ವಿನಾಯಕ DTS - 4ಆಟ
Bharath Cinemas
ನ್ಯಾಮತಿ : ಶ್ರೀಶೈಲಾ DTS - 4ಆಟ
ಮಣಿಪಾಲ್ : Bharath Cinemas
ಪಡುಬಿದ್ರಿ : Bharath Cinemas
ಪುತ್ತೂರು : ಹಾಗೂ ರಾಜ್ಯಾದ್ಯಂತ

OVERSEAS RELEASE
USA & CANADA
BAY AREA, CA
CHICAGO, IL
NEW JERSEY
NEW YORK REGION
LOS ANGELES, CA
MIAMI, FL
DALLAS AREA, TX
TORONTO CITY

'ಡೈಮಂಡ್ ಕ್ರಾಸ್'ನಲ್ಲಿ ದಾವಣಗೆರೆ ಬ್ರದರ್ಸ್

ಸಿದ್ದಯ್ಯ ಹಿರೇಮಠ

1970ರ ದಶಕದಲ್ಲಿ ತೆರೆ ಕಂಡಿದ್ದ, ರಾಜ್‌ಕುಮಾರ್ ಅಭಿನಯದ 'ಆಪರೇಷನ್ ಡೈಮಂಡ್ ರಾಕೆಟ್' ಯಶಸ್ವೀ ಪತ್ತೆದಾರಿ ಸಿನಿಮಾ. ಜೇಮ್ಸ್ ಬಾಂಡ್ ಮಾದರಿಯ ಕಥೆಯನ್ನು ಹೊಂದಿದ್ದ ಈ ಚಿತ್ರ ಯುವಜನರನ್ನು ಸೆಳೆದಿತ್ತು. ದಾವಣಗೆರೆ ನಗರದ ಯುವಕರ ದಂಡು ಅದೇ ಧಾಟಿಯ 'ಡೈಮಂಡ್ ಕ್ರಾಸ್' ಚಿತ್ರದಲ್ಲಿ ನಟಿಸಿದ್ದು, ಚಿತ್ರ ಇಂದು(ಜುಲೈ 28) ತೆರೆಕಂಡಿದೆ.

ಸೈಬರ್ ಕ್ರೈಂ ಕಥಾಹಂದರದ ಚಿತ್ರವಿದು. ಕಥೆಯಂತೆಯೇ ಈ ಚಿತ್ರದ ನಾಯಕ, ಖಳನಾಯಕನ ಪಾತ್ರದಲ್ಲಿ ಅಭಿನಯಿಸಿರುವ ದಾವಣಗೆರೆಯ ಸೋದರರಾದ ರಜತ್ ಅಣ್ಣಪ್ಪ ಮತ್ತು ರಾಜು ಅವರ ಜೀವನಗಾಥೆಯೂ ರೋಚಕ.

ರಜತ್ ಹಾಗೂ ರಾಜು ಹಾಲಿವುಡ್ ನಟ ಟೋನಿ ಜಾ ಅವರಂತೆ ಸಮರ ಕಲೆಯನ್ನು (ಮಾರ್ಷಲ್ ಆರ್ಟ್ಸ್)ಕರಗತ ಮಾಡಿಕೊಳ್ಳಬೇಕು ಎಂಬ ಬಯಕೆ ಗಾರೆ ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದ ಮಂಜಪ್ಪ ಅವರದ್ದಾಗಿತ್ತು. ಬಡವರಾದರೂ ಮಕ್ಕಳ ಕಲಿಕೆಗೆ ನೀರೆರೆದು ಪೋಷಿಸಿದ್ದ ತಂದೆಯ ಪ್ರೋತ್ಸಾಹಕ್ಕೆ ಮಾರುಹೋಗಿ, ತಂಡವೊಂದನ್ನು ಕಟ್ಟಿಕೊಂಡು, ದಾವಣಗೆರೆಯ ಎಸ್‌ಕೆಆರ್‌ಎಂ ರೈಸ್ ಮಿಲ್ ಆವರಣದಲ್ಲಿ ನಿತ್ಯ ಸ್ಟಂಟ್ ಕಲಿಕೆ ಆರಂಭಿಸಿದ್ದ ಈ ಸೋದರರ ತಂಡಕ್ಕೆ ಮಿಲ್ ಮಾಲೀಕರಿಂದ ಆರಂಭದಲ್ಲಿ ಅಡ್ಡಿ ಉಂಟಾದರೂ, ನಂತರ ಮೆಚ್ಚುಗೆ ದೊರೆಯಿತು. ಹೊಡೆದಾಟದ ಕಲೆಯಲ್ಲಿ ಪಳಗಿ ತಂದೆಯ ಕನಸು ನನಸು ಮಾಡಿದ ಸಂತೃಪ್ತಿಯಲ್ಲಿದ್ದ ಅವರ ಯಶೋಗಾಥೆ ಕೆಲವು ವರ್ಷಗಳ ಹಿಂದೆ ಸುದ್ದಿ ರೂಪದಲ್ಲಿ ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದೇ ತಡ ಚಂದನವನದಿಂದ ಅವಕಾಶಗಳು ಹುಡುಕಿಕೊಂಡು ಬಂದವು.

'ಸಿನಿಮಾದಲ್ಲಿ ಅಭಿನಯಿಸುವುದಾದರೆ ಪ್ರಮುಖ ಪಾತ್ರದಲ್ಲೇ ಅಭಿನಯಿಸಿ' ಎಂದು ಸ್ಥಳೀಯ ಕಲಾವಿದ ಆರ್.ಟಿ. ಅರುಣ್‌ಕುಮಾರ್ ಸಲಹೆ ನೀಡಿ ಬೆನ್ನು ತಟ್ಟಿದ್ದರಿಂದ ಅವಕಾಶಗಳನ್ನು ನಿರಾಕರಿಸಿದ ಈ ಸೋದರರಿಗೆ, ನಟ ಅರುಣ್‌ಸಾಗರ್ ಮೂಲಕ ಹಿರಿಯ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಸೋದರಳಿಯ ರಾಮ್‌ದೀಪ್ (ಈ ಚಿತ್ರದ ನಿರ್ದೇಶಕ) ಹಾಗೂ ಸಂಭಾಷಣೆಕಾರ ರಾಮಚಂದ್ರಬಾಬು ಪರಿಚಯವಾಯಿತು. ಅವರೊಂದಿಗಿನ ಭೇಟಿಯ ನಂತರ ರೂಪುಗೊಂಡಿದ್ದೇ 'ಡೈಮಂಡ್ ಕ್ರಾಸ್' ಕಥೆ.

ಪಾಸ್‌ವರ್ಡ್‌ಗಳನ್ನು ಹ್ಯಾಕ್ ಮಾಡಿ ಸಮಾಜದ ಶಾಂತಿ ಕದಡುವ ದುಷ್ಟ ಶಕ್ತಿಗಳನ್ನು ಹ್ಯಾಕಿಂಗ್ ಮೂಲಕವೇ ದಿಕ್ಕು ತಪ್ಪಿಸುವ ನಾಯಕ, ನಕಾರಾತ್ಮಕ ಜ್ಞಾನವನ್ನು ಒಳಿತಿಗೆ ಬಳಸುವ ಕಥೆಯ ಸಿನಿಮಾ ಕೋವಿಡ್ ಕಾಲದಲ್ಲಿ ಎದುರಾದ ಅನೇಕ ಅಡೆತಡೆಗಳನ್ನು ಮೆಟ್ಟಿ, ಐದು ವರ್ಷಗಳ ನಂತರ ಬಿಡುಗಡೆಯಾಗುತ್ತಿದೆ.

'ಎಂಬಿಎ ಮತ್ತು ಬಿಸಿಎ ಓದಿ ಜೀವನದಲ್ಲಿ ನೆಲೆ ಕಂಡುಕೊಂಡಿರುವ ನಾವು, ಅಪ್ಪನ ಆಸೆಯಂತೆ ಸ್ಟಂಟ್ ಕಲಿತು ಚಿತ್ರದಲ್ಲಿ ನಟಿಸಿದ್ದೇವೆ. ಆದರೆ, ಕಳೆದ ವರ್ಷ ಅಪ್ಪ ನಮ್ಮನ್ನು ಅಗಲಿದರು. ನಮ್ಮ ಸಿನಿಮಾವನ್ನು ಅವರು ನೋಡಲಾಗಲಿಲ್ಲ ಎಂಬ ದುಃಖವಿದೆ' ಎಂದು ಹೇಳುವಾಗ ನಾಯಕ ರಜತ್ ಕಣ್ಣುಗಳು ಒದ್ದೆಯಾಗಿದ್ದವು.

ತಂದೆಗೆ ನೆರವಾಗಲು ಸೌದೆ ಮಾರಾಟ ಮಾಡುತ್ತಿದ್ದ ತಾಯಿ ರುದ್ರಮ್ಮ ಅವರಿಗೆ ಕಟ್ಟಿಗೆ ಒಡೆಯುವ ಕೆಲಸದಲ್ಲಿ ನೆರವಾಗುತ್ತಲೇ ಬೆಳೆದಿರುವ ಬಡ ಕುಟುಂಬದ ಕುಡಿಗಳ ಆಪ್ತ ಸ್ನೇಹಿತರಾದ ದಾವಣಗೆರೆಯ ಸ್ಮಾರ್ಟ್ ನಾಗು, ರಘು ಬೊಯ್ಕಾ, ಮನೋಹರ್ ಮನು, ಮಹಾಂತೇಶ, ಶರತ್ ರೋಸಿ, ಜಾನಿ, ರವಿ, ಚಿರು ಈ ಚಿತ್ರದಲ್ಲಿ ಡ್ಯೂಪ್ ಇಲ್ಲದೆಯೇ ನಟಿಸಿ ರೋಮಾಂಚನಗೊಳಿಸುವ ಹೊಡೆದಾಟದ ದೃಶ್ಯಗಳಿಗೆ ಜೀವ ತುಂಬಿದ್ದಾರೆ. ಹೊಸಪೇಟೆ ಮೂಲದ ಉದ್ಯಮಿ ಮನೀಷ್ ಮೆಹ್ತಾ ನಿರ್ಮಾಣದ ಚಿತ್ರದಲ್ಲಿ ರೋಜರ್ ನಾರಾಯಣ್, ರೂಪಿಕಾ ನಟಿಸಿದ್ದಾರೆ. ❖

ರಾಜು, ರಜತ್ ಅಣ್ಣಪ್ಪ

ಕಳೆದ ಶುಕ್ರವಾರ(ಜುಲೈ 21) ಬಿಡುಗಡೆಯಾದ ನಿತಿನ್ ಕೃಷ್ಣಮೂರ್ತಿ ನಿರ್ದೇಶನದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿದೆ. ಅನೇಕ ಥಿಯೇಟರ್‌ಗಳಲ್ಲಿ ಹೌಸ್‌ಫುಲ್ ಪ್ರದರ್ಶನಗಳನ್ನು ಸಿನಿಮಾ ಕಾಣುತ್ತಿದ್ದು, ಹಲವು ತಿಂಗಳುಗಳಿಂದ ಬಿಕೋ ಎನ್ನುತ್ತಿದ್ದ ಚಿತ್ರಮಂದಿರಗಳು ಸಾವಿರಾರು ಪ್ರೇಕ್ಷಕರನ್ನು ಸೆಳೆಯುತ್ತಿದೆ.

'ಚಿತ್ರ ಬಿಡುಗಡೆ ದಿನದಂದು 155 ಪರದೆಗಳಲ್ಲಿ ಸಿನಿಮಾ ರಿಲೀಸ್ ಆಗಿತ್ತು. ಇದೀಗ ಈ ಪರದೆಗಳ ಸಂಖ್ಯೆ 285 ಮೀರಿದೆ. ಒಟ್ಟು 3 ಲಕ್ಷಕ್ಕೂ ಅಧಿಕ ಟಿಕೆಟ್ ಮಾರಾಟವಾಗಿದೆ' ಎಂದಿದ್ದಾರೆ ಚಿತ್ರದ ನಿರ್ಮಾಪಕ ವರುಣ್ ಗೌಡ.

ರಾಜ್ಯದಲ್ಲಿ ಮತ್ತಷ್ಟು ಏಕಪರದೆ ಚಿತ್ರಮಂದಿರಗಳಲ್ಲಿ ಸಿನಿಮಾಗೆ ಬೇಡಿಕೆ ಬಂದಿದೆ ಎಂದಿದ್ದಾರೆ ವರುಣ್. ಸಾಮಾನ್ಯ ಪ್ರೇಕ್ಷಕರಷ್ಟೇ ಅಲ್ಲದೆ ಸೆಲೆಬ್ರಿಟಿಗಳೂ ಸಿನಿಮಾ ಕಂಡು ಮೆಚ್ಚಿದ್ದಾರೆ. ಶಿವರಾಜ್‌ಕುಮಾರ್, ರಕ್ಷಿತ್ ಶೆಟ್ಟಿ, ರಮೇಶ್ ಅರವಿಂದ್ ಸೇರಿದಂತೆ ಹಲವು ನಟರು ಚಿತ್ರತಂಡದ ಬೆನ್ನುತಟ್ಟಿದ್ದಾರೆ. ಸಿನಿಮಾ ವಿದೇಶಗಳಲ್ಲಿಯೂ ಬಿಡುಗಡೆಯಾಗುತ್ತಿದೆ. ಕೆನಡಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ದುಬೈ, ಸಿಂಗಪುರ ಸೇರಿದಂತೆ ಮತ್ತಷ್ಟು ದೇಶಗಳಲ್ಲೂ ಹುಡುಗರ ಹಾವಳಿ ಕಾಣಿಸಿಕೊಳ್ಳಲಿದೆ. ಚಿತ್ರವನ್ನು ರಕ್ಷಿತ್ ಶೆಟ್ಟಿ ತಮ್ಮ 'ಪರಂವಃ ಪಿಕ್ಚರ್ಸ್' ಮೂಲಕ ಪ್ರಸ್ತುತಪಡಿಸಿದ್ದು, ವರುಣ್ ಸ್ಟುಡಿಯೋಸ್ ಹಾಗೂ ಗುಲ್‌ಮೊಹರ್ ಫಿಲ್ಮ್ಸ್ ಬ್ಯಾನರ್‌ನಡಿ ಪ್ರಜ್ವಲ್ ಬಿ.ಪಿ, ವರುಣ್ ಕುಮಾರ್ ಗೌಡ, ನಿತಿನ್ ಕೃಷ್ಣಮೂರ್ತಿ, ಅರವಿಂದ್ ಕೆ. ಕಶ್ಯಪ್ ಬಂಡವಾಳ ಹೂಡಿ ನಿರ್ಮಿಸಿದ್ದಾರೆ. ❖

ಹೊಸ ಶಾಲೆಗಳ ಆರಂಭಕ್ಕೆ ಅರ್ಜಿ: ಮತ್ತೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸದಾಗಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ಆರಂಭಿಸಲು ನೋಂದಣಿಗಾಗಿ ಅರ್ಜಿ ಸಲ್ಲಿಸಿದ್ದು, ತಿರಸ್ಕೃತಗೊಂಡಿದ್ದರೆ ಅಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತೆ ಅರ್ಜಿ ಸಲ್ಲಿಸಬಹುದು.

2023–24ನೇ ಸಾಲಿಗೆ ಶಾಲೆಗಳನ್ನು ಆರಂಭಿಸಲು ಈಗಾಗಲೇ ಹಲವು ಸಂಸ್ಥೆಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ದಾಖಲೆಗಳು ಅಪೂರ್ಣವಾಗಿದ್ದ ಕಾರಣ ಸಾಕಷ್ಟು ಅರ್ಜಿಗಳು ತಿರಸ್ಕೃತಗೊಂಡಿದ್ದವು. ಅಂತಹ ಸಂಸ್ಥೆಗಳು ಆ.19ರ ಒಳಗೆ ಪೂರ್ಣ ದಾಖಲೆಗಳ ಸಹಿತ ಅರ್ಜಿ ಸಲ್ಲಿಸಬಹುದು. ಜುಲೈ 25ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತೆ ಬಿ.ಬಿ. ಕಾವೇರಿ ಮಾಹಿತಿ ನೀಡಿದ್ದಾರೆ.

ಅಮೃತ್: ಬೆಂಗಳೂರಿಗೆ ₹991 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೃತ್ ಯೋಜನೆಯಡಿ ಕೇಂದ್ರ ಸರ್ಕಾರವು ಬಿಬಿಎಂಪಿಗೆ ₹991 ಕೋಟಿ ಅನುದಾನ ನೀಡಿದೆ ಎಂದು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ರಾಜ್ಯ ಸಚಿವ ಕೌಶಲ್ ಕಿಶೋರ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಗುರುವಾರ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 'ಕುಡಿಯುವ ನೀರು, ತ್ಯಾಜ್ಯ ಸಂಗ್ರಹ, ಉದ್ಯಾನ ನಿರ್ಮಾಣ ಮತ್ತಿತರ ಕಾಮಗಾರಿಗಳಿಗೆ ಈ ಅನುದಾನ ನೀಡಲಾಗಿದೆ. ಬೆಂಗಳೂರಿನಲ್ಲಿ 26 ಯೋಜನೆಗಳ ಕಾಮಗಾರಿಗಳನ್ನು ನಡೆಸಲಾಗಿದ್ದು, 25 ಕಾಮಗಾರಿಗಳು ಪೂರ್ಣಗೊಂಡಿವೆ. ಮಲ್ಲಸಂದ್ರದ ಉದ್ಯಾನ ಕಾಮಗಾರಿ ಪೂರ್ಣ ಆಗಿಲ್ಲ' ಎಂದು ಮಾಹಿತಿ ನೀಡಿದ್ದಾರೆ.

ಸಿಆರ್‌ಪಿಎಫ್ ಆವರಣದಲ್ಲಿ 500 ಸಸಿಗಳನ್ನು ನೆಟ್ಟ ವಿದ್ಯಾರ್ಥಿಗಳು

'ಹಸಿರು ಬೆಂಗಳೂರಿ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಿಗೆ ಸಸಿ ಪೋಷಿಸುವ ಜವಾಬ್ದಾರಿ ವಹಿಸಿ, ಅವರ ನಾಮಫಲಕವನ್ನು ಅಳವಡಿಸಿ ಪ್ರೋತ್ಸಾಹಿಸುವ 'ಹಸಿರು ಬೆಂಗಳೂರು' ಕಾರ್ಯಕ್ರಮಕ್ಕೆ ಗುರುವಾರ ಚಾಲನೆ ದೊರೆತಿದೆ.

ಬಿಬಿಎಂಪಿ ಯಲಹಂಕ ವಲಯ ವ್ಯಾಪ್ತಿಯಲ್ಲಿರುವ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಆವರಣದಲ್ಲಿ 'ಹಸಿರು ಬೆಂಗಳೂರು' ಉದ್ಘಾಟನೆ ಸಮಾರಂಭದಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸಸಿ ನೆಟ್ಟರು.

'ಬ್ರ್ಯಾಂಡ್ ಬೆಂಗಳೂರು' ರೂಪಿಸುವ ಏಳು ವಿಷಯಗಳಲ್ಲಿ 'ಹಸಿರು ಬೆಂಗಳೂರು' ಒಂದು ವಿಚಾರವಾಗಿದೆ. ಈ ನಿಟ್ಟಿನಲ್ಲಿ ಶೈಕ್ಷಣಿಕ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಂಡು ಶಾಲಾ-ಕಾಲೇಜು ಮಕ್ಕಳಿಂದ ನಗರದಾದ್ಯಂತ 'ಹಸಿರು ಬೆಂಗಳೂರು' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಿಆರ್‌ಪಿಎಫ್ ಆವರಣದಲ್ಲಿ ಕೇಂದ್ರೀಯ ವಿದ್ಯಾಲಯದ ಸಹಯೋಗದೊಂದಿಗೆ 500 ಸಸಿಗಳನ್ನು ನೆಟ್ಟು, ಪ್ರತಿಯೊಂದು ಸಸಿಯ ಮೂರು ವರ್ಷಗಳ ಪೋಷಣೆ ಜವಾಬ್ದಾರಿಯನ್ನು ತಲಾ ಒಬ್ಬ ವಿದ್ಯಾರ್ಥಿಗೆ ನೀಡಲಾಯಿತು.

ಬಿಬಿಎಂಪಿ ಯಲಹಂಕ ವಲಯ ವ್ಯಾಪ್ತಿಯಲ್ಲಿರುವ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಆವರಣದಲ್ಲಿ ನಡೆದ 'ಹಸಿರು ಬೆಂಗಳೂರು' ಉದ್ಘಾಟನೆ ಸಮಾರಂಭದಲ್ಲಿ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳು ಸಸಿ ನೆಟ್ಟರು.

ಪ್ರತಿ ಸಸಿಗಳಿಗೂ ಒಬ್ಬೊಬ್ಬ ವಿದ್ಯಾರ್ಥಿಯ ಹೆಸರನ್ನು ಟ್ಯಾಗ್ ಮಾಡಿದ್ದು, ವೃಕ್ಷ ಕವಚ ಅಳವಡಿಸಲಾಗಿದೆ. ಮೂರು ವರ್ಷ ಉತ್ತಮವಾಗಿ ಸಸಿಯನ್ನು ಮರವಾಗಿಸಿದ ವಿದ್ಯಾರ್ಥಿಗೆ 'ಹಸಿರು ರಕ್ಷಕ' ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಪಾಲಿಕೆ ವ್ಯಾಪ್ತಿಯಲ್ಲಿ 2023-24ನೇ ವರ್ಷದಲ್ಲಿ 1 ಲಕ್ಷ ಸಸಿಗಳನ್ನು ನೆಡುವ ಗುರಿ ಹೊಂದಿದ್ದು, ಶೈಕ್ಷಣಿಕ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಿಂದ ನಗರದಲ್ಲಿ ಹಸಿರೀಕರಣ ಹೆಚ್ಚಾಗಲು ಸಾಧ್ಯವಾಗುವುದರ ಜೊತೆಗೆ ಮಕ್ಕಳಲ್ಲಿ ಪರಿಸರದ ಮೇಲೆ ಹೆಚ್ಚು ಜಾಗೃತಿ ಮೂಡಲಿದೆ ಎಂದು ಬಿಬಿಎಂಪಿ ಅರಣ್ಯ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಸರೀನಾ ಸಿಕ್ಕಲಿಗರ್ ತಿಳಿದರು.

ಕಾರ್ಯಕ್ರಮದಲ್ಲಿ ಅರಣ್ಯ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್, ಯಲಹಂಕ ವಲಯ ಜಂಟಿ ಆಯುಕ್ತೆ ಪೂರ್ಣಿಮಾ, ಅರಣ್ಯ ಇಲಾಖೆಯ ಸಿಬ್ಬಂದಿ, ಸಿಆರ್‌ಪಿಎಫ್ ಅಧಿಕಾರಿಗಳು, ಕೇಂದ್ರೀಯ ವಿದ್ಯಾಲಯದ ಶಿಕ್ಷಕರು ಇದ್ದರು.

ಹುಣಸಮಾರನಹಳ್ಳಿ ಕೆರೆಯನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ ಸಾರ್ವಜನಿಕರ ಬಳಕೆಗೆ ಸಮರ್ಪಿಸಿದರು. ಲೋಟ್ಸ್ ಇಂಡಿಯಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಅಂಕುರ್ ಮಿತ್ತಲ್, ಹ್ಯಾಂಡ್ ಇನ್ ಹ್ಯಾಂಡ್ ಸಂಸ್ಥೆಯ ಸಿ. ದೊರೆಸ್ವಾಮಿ, ಗುರುನಂದನ್ ರಾವ್ ಎಂ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಆರ್.ಕೆ. ಕಾಂಗ್ರೆಸ್ ಮುಖಂಡರಾದ ಎಸ್‌ಎನ್ ಶ್ರೀನಿವಾಸಯ್ಯ, ಎಂ. ಜಯಗೋಪಾಲಗೌಡ, ಎಸ್.ಕೆ. ಮಹೇಶ್ ಕುಮಾರ್ ಇದ್ದರು

ಹುಣಸಮಾರನಹಳ್ಳಿ ಕೆರೆ: ಬಳಕೆಗೆ ಸಮರ್ಪಣೆ

'ಕೆರೆ ಹಾಗೂ ಪ್ರಕೃತಿ ನಮ್ಮ ಆಸ್ತಿ'

ಪ್ರಜಾವಾಣಿ ವಾರ್ತೆ

ಯಲಹಂಕ: 'ಕೆರೆ ಹಾಗೂ ಪ್ರಕೃತಿ ನಮ್ಮ ಆಸ್ತಿಯಾಗಿದ್ದು, ಇದನ್ನು ನಾವೇ ರಕ್ಷಿಸಿಕೊಳ್ಳಬೇಕು ಎಂಬ ಭಾವನೆ ಜನರಲ್ಲಿ ಮೂಡುವವರೆಗೆ ಕೆರೆಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಅಸಾಧ್ಯ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಭಿಪ್ರಾಯಪಟ್ಟರು.

'ಲೋಟ್ಸ್ ಇಂಡಿಯಾ' ಮತ್ತು 'ಹ್ಯಾಂಡ್ ಇನ್' ಸಂಸ್ಥೆಗಳ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವ ಹುಣಸಮಾರನಹಳ್ಳಿ ಕೆರೆಯನ್ನು ಸಾರ್ವಜನಿಕರ ಬಳಕೆಗೆ ಸಮರ್ಪಣೆ ಮಾಡಿದ ಸಮಾರಂಭದಲ್ಲಿ ಅವರು ಮಾತನಾಡಿದರು.

ಸುಮಾರು 22 ಎಕರೆ ವಿಸ್ತೀರ್ಣದ ಈ ಕೆರೆಯಲ್ಲಿ ಗಿಡಗಂಟಿಗಳು ಬೆಳೆದು, ತ್ಯಾಜ್ಯ ತುಂಬಿಕೊಂಡು ಜನರ ಓಡಾಟವೂ ಕಷ್ಟವಾಗಿತ್ತು. ಕೆರೆ ಅಭಿವೃದ್ಧಿ ಮಾಡಲೇಬೇಕೆಂದು ಸಂಕಲ್ಪ ಮಾಡಿ, ನಾಲ್ಕು ವರ್ಷಗಳ ಹಿಂದೆ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳನ್ನು ಇಲ್ಲಿಗೆ ಕರೆತಂದು ಸಣ್ಣಮಟ್ಟದಲ್ಲಿ ಕಾಮಗಾರಿ ಆರಂಭಿಸಲಾಯಿತು. ನಂತರ ಹಂತ-ಹಂತವಾಗಿ ಅಭಿವೃದ್ಧಿಪಡಿಸಿದ್ದರಿಂದ ಇಂದು ಸುಂದರ ಕೆರೆಯಾಗಿ ಕಂಗೊಳಿಸುವುದರ ಜೊತೆಗೆ ಪ್ರಾಣಿ-ಪಕ್ಷಿಗಳ ಆವಾಸಸ್ಥಾನವಾಗಿ ಮಾರ್ಪಾಡಾಗುತ್ತಿದೆ ಎಂದು ತಿಳಿಸಿದರು.

ಜತೆಗೆ, ಐಟಿಸಿ ಇಂಡಿಯಾ ಸಂಸ್ಥೆಯ ವತಿಯಿಂದ ಕೆರೆಯ ಸುತ್ತ 2 ಸಾವಿರ ಸಸಿಗಳನ್ನು ನೆಡಲಾಗಿದೆ ಎಂದು ಮಾಹಿತಿ ನೀಡಿದರು.

ಕೆರೆಯಲ್ಲಿ ಅಧಿಕ ಪ್ರಮಾಣದ ನೀರು ಸಂಗ್ರಹಣೆಗೆ ವ್ಯವಸ್ಥೆ ಮಾಡಲಾಗಿದೆ. ಕೆರೆಯ ಸುತ್ತಲೂ ನಡಿಗೆ ಪಥ, ಬೆಂಚುಗಳು, ತಂತಿಬೇಲಿ ಅಳವಡಿಕೆ, ಏರಿಯ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಲಾಗಿದೆ ಎಂದು ಹೇಳಿದರು.

ಸಿನಿಮಾ ಪೈರಸಿ: ಗರಿಷ್ಠ 3 ವರ್ಷ ಜೈಲು

ಸಿನಿಮಾಟೋಗ್ರಾಫ್ ಕಾಯ್ದೆ ತಿದ್ದುಪಡಿ ಮಸೂದೆ: ರಾಜ್ಯಸಭೆ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರದ ಹಿಂಸಾಚಾರ ಕುರಿತ ಚರ್ಚೆಗೆ ಒತ್ತಾಯಿಸಿ ಪ್ರತಿಪಕ್ಷಗಳ ಸಭಾತ್ಯಾಗದ ನಡುವೆಯೇ ರಾಜ್ಯಸಭೆಯಲ್ಲಿ ಪೈರಸಿ ತಡೆ ಮತ್ತು ಪರವಾನಗಿ ಕಾರ್ಯವಿಧಾನವನ್ನು ಸರಳಗೊಳಿಸುವ ಸಿನಿಮಾಟೋಗ್ರಾಫ್ ಕಾಯ್ದೆಯ ತಿದ್ದುಪಡಿ ಮಸೂದೆ ಮಂಡನೆಯಾಗಿ, ಧ್ವನಿ ಮತದಿಂದ ಅಂಗೀಕಾರ ಪಡೆಯಿತು.

ಮಸೂದೆಯಲ್ಲಿ, ಚಲನಚಿತ್ರಗಳ ಪೈರಸಿ ಪ್ರಕರಣಗಳಲ್ಲಿ ಅಪರಾಧಿಗೆ ಗರಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ಚಲನಚಿತ್ರ ನಿರ್ಮಾಣ ವೆಚ್ಚದ ಶೇ 5 ರಷ್ಟು ದಂಡ ವಿಧಿಸುವ ಕಠಿಣ ನಿಯಮವನ್ನು ಸೇರಿಸಲಾಗಿದೆ. ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ಪ್ರಮಾಣೀಕರಣದ ಮೇಲಿನ 10 ವರ್ಷಗಳ ಸಿಂಧುತ್ವವನ್ನು ತೆಗೆದುಹಾಕುವ ಅಂಶವನ್ನು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಸಿನಿಮಾಗಳಿಗೆ ನೀಡಲಾಗುವ 'UA' ಸರ್ಟಿಫಿಕೇಟ್ ಅಡಿಯಲ್ಲಿ ವಯಸ್ಸಿನ– ಆಧಾರದ ಮೇಲೆ ಮೂರು ಬಗೆಯ ಪ್ರಮಾಣ ಪತ್ರಗಳನ್ನು ನೀಡುವ ಪ್ರಸ್ತಾವವನ್ನೂ ಇದು ಒಳಗೊಂಡಿದೆ. ಅವುಗಳೆಂದರೆ 'UA 7+', 'UA 13+' ಮತ್ತು 'UA 16+'. ಇದರ ಜೊತೆಗೆ, ದೂರದರ್ಶನ ಅಥವಾ ಇತರ ಮಾಧ್ಯಮಗಳಲ್ಲಿ ಚಿತ್ರ ಪ್ರದರ್ಶನಕ್ಕೆ ಪ್ರತ್ಯೇಕ ಪ್ರಮಾಣಪತ್ರ ನೀಡಲು ಸಿಬಿಎಫ್‌ಸಿಗೆ ಈ ಮಸೂದೆ ಅಧಿಕಾರ ನೀಡುತ್ತದೆ.

ಚಲನಚಿತ್ರಗಳ ಪೈರಸಿಯನ್ನು ತಡೆಯುವ ಪ್ರಯತ್ನದಲ್ಲಿ, ಚಲನಚಿತ್ರಗಳ ಅನಧಿಕೃತ ರೆಕಾರ್ಡಿಂಗ್ (ವಿಭಾಗ 6AA) ಮತ್ತು ಅವುಗಳ ಪ್ರದರ್ಶನವನ್ನು ನಿಷೇಧಿಸುವ (ವಿಭಾಗ 6AB) ನಿಬಂಧನೆಗಳೊಂದಿಗೆ ಹೊಸ ವಿಭಾಗಗಳನ್ನು ಪರಿಚಯಿಸಲು ಈ ಮಸೂದೆ ಅನುವು ಮಾಡಿಕೊಡುತ್ತದೆ.

ರವಿ ಪೂಜಾರಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಕೊಲೆಗೆ ಸುಪಾರಿ ನೀಡಿದ ಪ್ರಕರಣದಲ್ಲಿ ಆರೋಪಿಯಾಗಿರುವ ಭೂಗತ ಪಾತಕಿ ರವಿ ಪೂಜಾರಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ತಿಲಕ್ ನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಜಾಮೀನು ಕೋರಿ ರವಿ ಪೂಜಾರಿ ಅಲಿಯಾಸ್ ರವಿಪ್ರಕಾಶ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ನೇತೃತ್ವದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಷನ್ ಪರ ವಕೀಲರು, 'ಆರೋಪಿ ರವಿ ಪೂಜಾರಿಯನ್ನು ಸೆನೆಗಲ್‌ನಿಂದ ಹಸ್ತಾಂತರ ಮಾಡಲಾಗಿದ್ದು, ಕರ್ನಾಟಕದಲ್ಲಿ 107 ಪ್ರಕರಣ ಬಾಕಿ ಇವೆ. ಮಹಾರಾಷ್ಟ್ರದಲ್ಲಿ 20, ಕೇರಳ, ಗುಜರಾತ್ ಮತ್ತು ರಾಜಸ್ಥಾನದಲ್ಲೂ ಪ್ರಕರಣ ದಾಖಲಾಗಿವೆ. ತನಿಖೆಗಾಗಿ ಆರೋಪಿಯನ್ನು ಬೇರೆಬೇರೆ ರಾಜ್ಯಗಳಿಗೆ ಕರೆದೊಯ್ಯುತ್ತಿರುವುದರಿಂದ ಈ ಪ್ರಕರಣದ ವಿಚಾರಣೆಯಲ್ಲಿ ತಡವಾಗಿದೆ' ಎಂದು ವಿವರಿಸಿದ್ದರು.

ಇದನ್ನು ಮಾನ್ಯ ಮಾಡದ ನ್ಯಾಯ ಪೀಠ, 'ವಿಚಾರಣಾ ನ್ಯಾಯಾಲಯ ಬಹು ಹಿಂದೆಯೇ ಆರೋಪ ನಿಗದಿ ಮಾಡಿದ್ದರೂ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ. ಹೀಗಾಗಿ, ಒಂದು ವರ್ಷದಲ್ಲಿ ವಿಚಾರಣೆ ಪೂರ್ಣಗೊಳಿಸಬೇಕು' ಎಂದಿದೆ.

67 ಕೈದಿಗಳ ಬಿಡುಗಡೆಗೆ ಸಂಪುಟ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ 67 ಕೈದಿಗಳನ್ನು ಸನ್ನಡತೆ ಆಧಾರದ ಮೇಲೆ ವಿಶೇಷ ಮಾಫಿಯೊಂದಿಗೆ ಬಿಡುಗಡೆ ಮಾಡಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

'ಆಜಾದಿ ಕಾ ಅಮೃತ್ ಮಹೋತ್ಸವ್' ಪ್ರಯುಕ್ತ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಗಳ ಅನ್ವಯ 67 ಅರ್ಹ ನಿರ್ದಿಷ್ಟ ವರ್ಗದ ಕೈದಿಗಳ ಪಟ್ಟಿ ತಯಾರಿಸಿ ಬಿಡುಗಡೆ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಈ ಸಂಬಂಧ ಒಳಾಡಳಿತ ಇಲಾಖೆ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಪರಿಶೀಲನಾ ಸಮಿತಿ ರಚಿಸಲಾಗಿತ್ತು. ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ ಒಟ್ಟು 71 ಅರ್ಹ ಕೈದಿಗಳ ಪ್ರಕರಣಗಳನ್ನು ಪರಿಶೀಲಿಸಿ, ಒಂದು ಪ್ರಕರಣದಲ್ಲಿ ಒಬ್ಬ ಕೈದಿ ಈಗಾಗಲೇ ಬಿಡುಗಡೆ ಹೊಂದಿರುವುದರಿಂದ 3 ಪ್ರಕರಣಗಳಲ್ಲಿ ಅವಧಿ ಪೂರೈಸದೇ ಇರುವುದರಿಂದ ಕೈಬಿಡಲಾಗಿದೆ. 4 ಪ್ರಕರಣಗಳಲ್ಲಿ ಕೇಂದ್ರ ಸರ್ಕಾರದ ಸಹಮತಿ ಅವಶ್ಯ ಇರುವುದರಿಂದ ಆ ಪ್ರಕರಣಗಳನ್ನು ಸಹಮತಿಗಾಗಿ ಕೇಂದ್ರ ಗೃಹ ಸಚಿವಾಲಯಕ್ಕೆ ಕಳುಹಿಸಲಾಗಿದೆ ಎಂದು ಪಾಟೀಲ ತಿಳಿಸಿದರು.

ಶುಭಾ ಪ್ರಕರಣದ ಬಗ್ಗೆ ಚರ್ಚೆ: 2003ರಲ್ಲಿ ತಾನು ವಿವಾಹವಾಗಬೇಕಾಗಿದ್ದ ವರನನ್ನು ತನ್ನ ಪ್ರಿಯಕರನೊಂದಿಗೆ ಸೇರಿ ಕೊಲೆ ಮಾಡಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಶುಭಾ ಶಂಕರನಾರಾಯಣ ಅವರ ಬಿಡುಗಡೆ ವಿಷಯವೂ ಸಂಪುಟ ಸಭೆಯಲ್ಲಿ ಚರ್ಚೆಗೆ ಬಂದಿತು ಎಂದು ಮೂಲಗಳು ತಿಳಿಸಿವೆ.

ಕೈದಿಗಳ ಬಿಡುಗಡೆ ಪಟ್ಟಿಯಲ್ಲಿ ಶುಭಾ ಹೆಸರಿತ್ತು. ಆದರೆ, ಈ ಕೊಲೆ ನಡೆದ ಸಂದರ್ಭದಲ್ಲಿ ರಾಜ್ಯ ವ್ಯಾಪಿ ಚರ್ಚೆಗೆ ಕಾರಣವಾಗಿತ್ತು. ಸಾರ್ವಜನಿಕವಾಗಿಯೂ ಆಕ್ರೋಶ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಕೇಂದ್ರದ ನಿರ್ಣಯಕ್ಕೆ ಬಿಡಲು ತೀರ್ಮಾನಿಸಲಾಯಿತು.

ಇಂಟೆಲ್ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಗಿರೀಶ್ ಮತ್ತು ವಕೀಲೆ ಶುಭಾ ಅವರ ನಿಶ್ಚಿತಾರ್ಥ 2003 ರಲ್ಲಿ ಆಗಿತ್ತು. ಅದಾಗಿ 5 ತಿಂಗಳಲ್ಲಿ ವಿವಾಹ ನಡೆಯಬೇಕಿತ್ತು. ಕಾನೂನು ಕಾಲೇಜಿನಲ್ಲಿ ತನ್ನ ಜೂನಿಯರ್ ಆಗಿದ್ದ ಅರುಣ್ ವರ್ಮ ಅವರನ್ನು ಶುಭ ಪ್ರೀತಿಸುತ್ತಿದ್ದರು. ಇವರಿಬ್ಬರು ಇನ್ನಿಬ್ಬರ ಜತೆ ಸೇರಿ ಇಂದಿರಾನಗರ–ಕೋರಮಂಗಲ ವರ್ತುಲ ರಸ್ತೆಯಲ್ಲಿ ಗಿರೀಶ್ ತಲೆಗೆ ಹೊಡೆದು ಕೊಲೆ ಮಾಡಿದ್ದರು.

8 ಹೋಟೆಲ್ ಯೋಜನೆಗಳಿಗೆ ಸಮಿತಿ ಅನುಮೋದನೆ

ಬೆಂಗಳೂರು: ಕರ್ನಾಟಕ ಪ್ರವಾಸೋದ್ಯಮ ನೀತಿ (2020-26) ಅಡಿ ಎಂಟು ಹೋಟೆಲ್ ಯೋಜನೆಗಳಿಗೆ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಅಧ್ಯಕ್ಷರಾಗಿರುವ ಉನ್ನತಾಧಿಕಾರ ಸಮಿತಿ ಅನುಮೋದನೆ ನೀಡಿದೆ.

ಹೋಟೆಲ್ ಮತ್ತು ರೆಸಾರ್ಟ್ ಯೋಜನೆಗಳಿಗೆ ತಾತ್ವಿಕ ಅನುಮೋದನೆ ನೀಡುವ ಈ ಸಮಿತಿಯ ಸಭೆ ಗುರುವಾರ ನಡೆಯಿತು.

ಅಂದಾಜು ₹ 266.06 ಕೋಟಿ ಮೊತ್ತದ 19 ಹೋಟೆಲ್ ಯೋಜನೆಗಳ ಪ್ರಸ್ತಾವನೆಗಳು ಸಲ್ಲಿಕೆ ಆಗಿದ್ದವು. ಅವುಗಳ ತಾತ್ಕಾಲಿಕ ಅರ್ಹ ಯೋಜನಾ ಮೊತ್ತ ₹ 223.52 ಕೋಟಿಗಳಾಗಿದ್ದು, ಅಷ್ಟೂ ಹೋಟೆಲ್‌ಗಳ ನಿರ್ಮಾಣದಿಂದ 1,495 ಉದ್ಯೋಗ ಸೃಷ್ಟಿ ನಿರೀಕ್ಷಿಸಲಾಗಿತ್ತು. ಅನುಮೋದನೆ ನೀಡಿರುವ ಎಂಟು ಯೋಜನೆಗಳ ಅಂದಾಜು ಮೊತ್ತ ₹ 81.72 ಕೋಟಿಯಾಗಿದ್ದು, ಅವುಗಳ ಅರ್ಹ ಯೋಜನಾ ಮೊತ್ತ ₹ 70.33 ಕೋಟಿ. ಈ ಯೋಜನೆಗಳಿಗೆ ತಾತ್ಕಾಲಿಕ ಸಹಾಯಧನದ ಮೊತ್ತ ₹ 11.97 ಕೋಟಿಯಾಗಿದ್ದು, 685 ಉದ್ಯೋಗಗಳು ಸೃಷ್ಟಿ ಆಗಲಿವೆ. ಈ ಯೋಜನೆಗಳು ಪೂರ್ಣಗೊಂಡ ಬಳಿಕ ಹೂಡಿಕೆದಾರರಿಗೆ ಸಹಾಯಧನದ ಮೊತ್ತ ಬಿಡುಗಡೆ ಆಗಲಿದೆ.

ಈಗಾಗಲೇ ನಿರ್ಮಾಣ ಕಾಮಗಾರಿ ಆರಂಭಿಸಿರುವ ಏಳು ಯೋಜನೆ ಮತ್ತು ಆರಂಭಿಸದೇ ಇರುವ ನಾಲ್ಕು ಹೋಟೆಲ್ ಯೋಜನೆಗಳ ಬಗ್ಗೆ ಮತ್ತೊಮ್ಮೆ ಸ್ಥಳ ಪರಿಶೀಲನಾ ವರದಿ ಪಡೆದು ಮುಂದಿನ ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡುವ ಕುರಿತು ನಿರ್ಣಯ ಕೈಗೊಳ್ಳಲು ಸಮಿತಿ ನಿರ್ಧರಿಸಿದೆ.

ಈಗಾಗಲೇ ಜಾರಿಗೊಳಿಸಿರುವ ಪ್ರವಾಸೋದ್ಯಮ ನೀತಿಯಲ್ಲಿರುವ ಕೆಲವು ನಿಯಮಗಳನ್ನು ಪರಿಷ್ಕರಿಸುವ ಅಗತ್ಯವಿದ್ದು, ತುರ್ತಾಗಿ ಈ ಕುರಿತು ಚರ್ಚಿಸಲು ಸಭೆ ಕರೆಯುವಂತೆ ಇಲಾಖೆಯ ಅಧಿಕಾರಿಗಳಿಗೆ ಸಮಿತಿ ಸೂಚನೆ ನೀಡಿತು.

ಅನುಮತಿ ಕೋರಿ ಕೇಂದ್ರಕ್ಕೆ ಅರ್ಜಿ: ಸಿ.ಎಂ

ಖನಿಜ ನಿಕ್ಷೇಪ ಶೋಧಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇರಬಹುದಾದ ಖನಿಜ ನಿಕ್ಷೇಪಗಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕ ಹುಡುಕಲು ಅನುಮತಿ ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗಣಿ ಮತ್ತು ಭೂವಿಜ್ಞಾನ, ಅರಣ್ಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಗುರುವಾರ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದರು.

ಅನುಮತಿ ಸೇರಿದಂತೆ ಗಣಿಗುತ್ತಿಗೆ ಪಡೆದ ಸಂಸ್ಥೆಗಳ ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ಏಕಗವಾಕ್ಷಿ ವ್ಯವಸ್ಥೆ ರೂಪಿಸಬೇಕು. ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅರಣ್ಯ ಇಲಾಖೆಗೆ ಕಳುಹಿಸಿದ ಹಲವು ಕಡತಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ. ರಾಜ್ಯದಲ್ಲಿ ಗಣಿ ಗುತ್ತಿಗೆ ಪಡೆದಿರುವ ಸಂಸ್ಥೆಗಳಿಗೆ ನಿರಾಕ್ಷೇಪಣಾ ಪತ್ರ, ಅನುಮತಿ ಪತ್ರ ನೀಡಲು ಅರಣ್ಯ ಇಲಾಖೆ ವಿಳಂಬ ಮಾಡುತ್ತಿದೆ. ಇಂತಹ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಕಂದಾಯ, ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಚಿವರು, ಅಧಿಕಾರಿಗಳು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ನಿಯಮಗಳ ಉಲ್ಲಂಘನೆಗಾಗಿ ಕಲ್ಲುಗಣಿ ಗುತ್ತಿಗೆದಾರರಿಗೆ ವಿಧಿಸಿರುವ ದಂಡ ಸಂಗ್ರಹಿಸಲು ಒಟಿಎಸ್ (ಒಂದು ಬಾರಿ ತೀರುವಳಿ) ಸೌಲಭ್ಯ ನೀಡುವ ಪ್ರಸ್ತಾವನೆಯನ್ನು ಸಚಿವ ಸಂಪುಟದ ಸಭೆಯಲ್ಲಿ ಮಂಡಿಸಬೇಕು ಎಂದು ಸೂಚಿಸಿದರು.

ಗಣಿ ಗುತ್ತಿಗೆ ಪಡೆದ ಸಂಸ್ಥೆಗಳು ಅರಣ್ಯ ಬೆಳೆಸಲು ಪರ್ಯಾಯ ಭೂಮಿ ನೀಡದೆ ಇರುವುದು ವಿಳಂಬಕ್ಕೆ ಕಾರಣ. ಆನೆಗಳು ಮತ್ತಿತರ ಕಾಡು ಪ್ರಾಣಿಗಳ ಉಪಟಳದಿಂದಾಗಿ ಕೃಷಿ ಭೂಮಿ ಮಾರಾಟ ಮಾಡಲು ಮುಂದಾಗಿರುವ ರೈತರಿಂದ ಭೂಮಿ ಖರೀದಿಸಬೇಕು. ನಂತರ ಅರಣ್ಯ ಬೆಳೆಸಲು ನೀಡಬೇಕು ಎಂದು ಸಲಹೆ ನೀಡಿದರು.

ಹಿಂದೆ ಅಕ್ರಮ ಗಣಿಗಾರಿಕೆಯಿಂದ ವಶಪಡಿಸಿಕೊಂಡಿರುವ 2.7 ದಶಲಕ್ಷ ಮೆಟ್ರಿಕ್ ಟನ್ ಅದಿರು ಅರಣ್ಯ ಪ್ರದೇಶದಲ್ಲಿದೆ. ಕಾನೂನು ತಜ್ಞರ ಸಲಹೆ ಪಡೆದು ಅದಿರು ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು ಎಂದರು.

ಅರಣ್ಯ ಸಚಿವ ಈಶ್ವರ ಖಂಡ್ರೆ, ತೋಟಗಾರಿಕೆ ಮತ್ತು ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ನಾಸಿರ್ ಅಹಮದ್ ಇದ್ದರು.

ನಿಗಮದ ಬೈಲಾ ತಿದ್ದುಪಡಿಗೆ ಸೂಚನೆ

ಗಣಿಗಾರಿಕೆ ವಲಯಗಳ ಸಮಗ್ರ ಅಭಿವೃದ್ಧಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ಬೈಲಾ ತಿದ್ದುಪಡಿ ಮಾಡಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಸುಪ್ರೀಂಕೋರ್ಟ್ ನಿರ್ದೇಶನದಂತೆ ಗಣಿಗಾರಿಕೆಯಿಂದ ಹಾನಿಗೆ ಒಳಗಾದ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ರೂಪಿಸಿದ ಕ್ರಿಯಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನಿಗಮದ ಬೈಲಾ ತಿದ್ದುಪಡಿ ಅಗತ್ಯವಿದೆ. ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ತುಮಕೂರು ಜಿಲ್ಲೆಗಳ 466 ಗ್ರಾಮಗಳನ್ನು ಗಣಿಗಾರಿಕೆ ಬಾಧಿತ ಪ್ರದೇಶಗಳೆಂದು ಘೋಷಿಸಲಾಗಿದೆ. ಈ ಗ್ರಾಮಗಳ ಅಭಿವೃದ್ಧಿಗಾಗಿ ರೂಪಿಸಿದ ₹ 24,996 ಕೋಟಿ ವೆಚ್ಚದ ಕ್ರಿಯಾ ಯೋಜನೆಗೆ ಸುಪ್ರೀಂಕೋರ್ಟ್ ಅನುಮೋದನೆ ನೀಡಿದೆ. ನಿವೃತ್ತ ನ್ಯಾಯಮೂರ್ತಿ ಸುದರ್ಶನ ರೆಡ್ಡಿ ಅವರನ್ನು ಮೇಲುಸ್ತುವಾರಿ ಪ್ರಾಧಿಕಾರವಾಗಿ ನೇಮಕ ಮಾಡಲಾಗಿದೆ ಎಂದರು.

ಮಹಾರಾಷ್ಟ್ರ ಪ್ರವಾಸೋದ್ಯಮ: ಉತ್ತಮ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಆಯೋಜಿಸಿದ್ದ ಮಹಾರಾಷ್ಟ್ರ ಪ್ರವಾಸೋದ್ಯಮದ ಟ್ರಾವೆಲ್ ಮತ್ತು ಟ್ರೇಡ್ ಶೋಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ವಿವಿಧ ವ್ಯಾಪಾರ ಮೇಳಗಳ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ದೇಶದ ವಿವಿಧೆಡೆ ಎಂಟು ಟ್ರೇಡ್ ರೋಡ್ ಶೋಗಳನ್ನು ಆಯೋಜಿಸಿದೆ. ಗುರುವಾರ ರಾಜಾಜಿ ನಗರದ ಫೇರ್‌ಫೀಲ್ಡ್ ಮ್ಯಾರಿಯೇಟ್ ನಡೆದ ಕಾರ್ಯಕ್ರಮವನ್ನು ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಧಿಕಾ ರಸ್ತೋಗಿ ಉದ್ಘಾಟಿಸಿದರು.

'ಕಳೆದ ವರ್ಷ ನಮ್ಮ ರೋಡ್‌ಶೋಗಳಿಗೆ ಉತ್ತಮ ಪ್ರತಿಕ್ರಿಯೆ ಬಂದಿದ್ದರಿಂದ ಈ ವರ್ಷವೂ ರೋಡ್ ಶೋ ಸರಣಿಯನ್ನು ಹೊಸ ಮಾರುಕಟ್ಟೆಗಳಲ್ಲಿ ಆಯೋಜಿಸಲು ನಿರ್ಧರಿಸಲಾಯಿತು. ಹೊಸ ಅವಕಾಶ ಮತ್ತು ಅನ್ವೇಷನೆಗಾಗಿ ನಡೆಯುವ ಈ ಕಾರ್ಯಕ್ರಮದ ಮೂಲಕ ಸ್ಥಳೀಯ ಪ್ರವಾಸೋದ್ಯಮವನ್ನು ಉತ್ತೇಜಿಸುವುದು, ಅಂತರ–ರಾಜ್ಯ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡುವುದು ಉದ್ದೇಶವಾಗಿದೆ' ಎಂದು ರಾಧಿಕಾ ರಸ್ತೋಗಿ ಅವರು ತಿಳಿಸಿದರು.

ಸೂರತ್, ಅಹಮದಾಬಾದ್, ಹೈದರಾಬಾದ್, ವಿಶಾಖಪಟ್ಟಣ, ನವದೆಹಲಿ ಮತ್ತು ಚೆನ್ನೈ ಸೇರಿದಂತೆ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಪ್ರವಾಸೋದ್ಯಮ ರೋಡ್‌ಶೋ ನಡೆಯಲಿದೆ. ಸಂಶೋಧನೆ, ನೆಟ್‌ವರ್ಕಿಂಗ್, ಬ್ರ್ಯಾಂಡ್ ವಿಸ್ತರಣೆ, ಮಾರಾಟ ಮಾತುಕತೆಗೆ ಪ್ರೋತ್ಸಾಹ ನೀಡಲಾಗುತ್ತದೆ ಎಂದು ಸಂಘಟಕರು ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ಕರ್ನಾಟಕ ಕ್ರೈಸ್ತ ಸಂಘಟನೆಯ ಅಧ್ಯಕ್ಷ ಸ್ಟ್ಯಾನಿ ಪಿಂಟೊ

ಮಣಿಪುರ: ನ್ಯಾಯ ಸಿಗುವವರೆಗೆ ಹೋರಾಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಣಿಪುರದ ಹಿಂಸಾಚಾರವನ್ನು ನಿಲ್ಲಿಸಿ, ದೌರ್ಜನ್ಯಕ್ಕೆ ಒಳಗಾದವರಿಗೆ ನ್ಯಾಯ ನೀಡಲು ಕೇಂದ್ರ ಸರ್ಕಾರ ವಿಫಲವಾದರೆ ದೆಹಲಿ ಮತ್ತು ಮಣಿಪುರ ಚಲೋ ನಡೆಸಲಾಗುವುದು ಎಂದು ಕರ್ನಾಟಕ ಕ್ರೈಸ್ತ ಸಂಘಟನೆಯ ಅಧ್ಯಕ್ಷ ಸ್ಟ್ಯಾನಿ ಪಿಂಟೊ ಎಚ್ಚರಿಕೆ ನೀಡಿದರು.

ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರ ಖಂಡಿಸಿ ಮಂಗಳೂರಿನಲ್ಲಿ ಕಥೋಲಿಕ್ ಸಭಾದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಕಥೋಲಿಕ್ ಸಭಾದ ನೇತೃತ್ವದಲ್ಲಿ ಮಂಗಳೂರು ಧರ್ಮಕ್ಷೇತ್ರದ ಮಹಿಳಾ ಆಯೋಗ, ಕ್ರೈಸ್ತ ಐಕ್ಯತೆಯ ಆಯೋಗ, ಮಂಗಳೂರು ಕ್ರಿಶ್ಚಿಯನ್ ಕೌನ್ಸಿಲ್‌ನ ಸಹಭಾಗಿತ್ವದಲ್ಲಿ ನಗರದ ಪುರಭವನದ ಎದುರು ಗುರುವಾರ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

'ಮಣಿಪುರದಲ್ಲಿ ನಡೆಯುತ್ತಿರುವ ಬೆಳವಣಿಗೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಅಲ್ಲಿನ ಹಿಂಸಾಚಾರ, ದೌರ್ಜನ್ಯದ ವಿರುದ್ಧ ಜಗತ್ತಿನಾದ್ಯಂತ ಜನರು ಧ್ವನಿ ಎತ್ತಿದ ಪ್ರಧಾನಿ ಪ್ರಧಾನಿ ತುಟಿಬಿಚ್ಚಿರುವುದು ವಿಪರ್ಯಾಸವಾಗಿದೆ. ಪ್ರಧಾನಿ ಕ್ರಮ ಕೈಗೊಳ್ಳುವ ಬಗ್ಗೆ ಯಾವುದೇ ಭರವಸೆ ಇಲ್ಲ. ಹೀಗಾಗಿ ಹೋರಾಟ ಮುಂದುವರಿಸಲಿದ್ದೇವೆ. ಅಲ್ಲಿ ಕೆಡವಿರುವ ಮನೆ, ಶಾಲೆಗಳನ್ನು ಮತ್ತೆ ಕಟ್ಟಿ, ಇತಿಹಾಸ ಸೃಷ್ಟಿಸುತ್ತೇವೆ' ಎಂದರು.

ರಾಜ್ಯ ದಾರಿಮೀಸ್ ಉಲಮಾ ಒಕ್ಕೂಟದ ಅಧ್ಯಕ್ಷ ಎಸ್‌ಬಿ ಮುಹಮ್ಮದ್ ದಾರಿಮಿ ಮಾತನಾಡಿ 'ಅಭಿವೃದ್ಧಿಶೀಲ ರಾಷ್ಟ್ರಕ್ಕೆ ಪ್ರತಿಭಟನೆಗಳು ಹಿತವಲ್ಲ. ಆದರೆ, ಮಣಿಪುರ ಸಹಿತ ದೇಶದಾದ್ಯಂತ ನಡೆಯುವ ಹಿಂಸಾಚಾರದ ವಿರುದ್ಧ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಿದೆ' ಎಂದರು.

ಸಾಮಾಜಿಕ ಹೋರಾಟಗಾರ್ತಿ ವಿದ್ಯಾ ದಿನಕರ್ ಮಾತನಾಡಿ, ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಮಣಿಪುರದಲ್ಲಿ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಪ್ರತಿಭಟನೆ ತೀವ್ರಗೊಳ್ಳಬೇಕಾಗಿದೆ ಎಂದರು. ವಿದ್ಯಾರ್ಥಿ ಡೇವಿಡ್ ಅಲ್ಲಿನ ಘಟನೆಗಳನ್ನು ಹಂಚಿಕೊಂಡರು.

ಮಂಗಳೂರು ಧರ್ಮಪ್ರಾಂತದ ಶ್ರೇಷ್ಠ ಗುರು ಮೋನ್ಸಿಜೋರು ಮ್ಯಾಕ್ಸಿಮ್ ನೊರೊನ್ಹಾ, ಮಾಜಿ ಸಚಿವ ರಮಾನಾಥ ರೈ, ಕಥೋಲಿಕ್ ಸಭಾ ಮಂಗಳೂರು ಪ್ರದೇಶದ ಆಧ್ಯಾತ್ಮಿಕ ನಿರ್ದೇಶಕ ಜೆ.ಬಿ. ಸಲ್ದಾನ, ಅಧ್ಯಕ್ಷ ಆಲ್ವಿನ್ ಡಿಸೋಜ, ಮಂಗಳೂರು ಧರ್ಮಪ್ರಾಂತದ ಸಾರ್ವಜನಿಕ ಸಂಪರ್ಕಾಧಿಕಾರಿ ರಾಯ್ ಕ್ಯಾಸ್ತಲಿನೊ, ಮಾಜಿ ಅಧ್ಯಕ್ಷ ಪೌಲ್ ರೋಲ್ಫಿ, ಉಪಾಧ್ಯಕ್ಷ ಲಾರೆನ್ಸ್ ಡಿಸೋಜ, ಜಮಾತೆ ಇಸ್ಲಾಮಿ ಹಿಂದ್‌ನ ಜಿಲ್ಲಾ ಸಂಚಾಲಕ ಅಮೀನ್ ಹಸನ್, ಮಹಿಳಾ ವಿಭಾಗದ ಅಧ್ಯಕ್ಷೆ ಸಾಜಿದಾ ಮೂಮಿನ್, ಸಾಲಿಡಾರಿಟಿ ಯೂತ್ ಮೂವ್‌ಮೆಂಟ್‌ನ ಜಿಲ್ಲಾ ಘಟಕದ ಅಧ್ಯಕ್ಷ ನಿಝಾಮುದ್ದೀನ್ ಉಮರ್ ಇದ್ದರು.

ನಗರದಲ್ಲಿ ಇಂದು

'ವಿಶ್ವ ಕಾಮಾಲೆ ದಿನ' ಕಾಲ್ನಡಿಗೆ ಜಾಗೃತಿ ಜಾಥಾ: ಅತಿಥಿಗಳು: ಶರಣ ಪ್ರಕಾಶ್ ಪಾಟೀಲ್, ದಿನೇಶ್ ಗುಂಡೂರಾವ್, ಕೆ. ಗೋಪಾಲಯ್ಯ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸುರೇಶ್ ರಾಮು, ಮೋಹನ್ ಕುಮಾರ್ ಎನ್., ಜಿ. ಮೋಹನ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಗ್ಯಾಸ್ಟ್ರೋ ಸೆಂಟರ್, ಮಹಾಲಕ್ಷ್ಮಿಪುರ, ಬೆಳಿಗ್ಗೆ 7ರಿಂದ

'ನಾವು ಆರು ಕಲಾ ಪ್ರದರ್ಶನ'ದ ಉದ್ಘಾಟನೆ, 'ಕಾರ್ನಿವಲ್ ಆಫ್ ಕಾರ್ನಿವಲ್ಸ್' ಪುಸ್ತಕ ಬಿಡುಗಡೆ: ಶೃತಿ ಖುರಾನ, ಅತಿಥಿಗಳು: ಟಿ.ಎಸ್. ಸತ್ಯವತಿ, ಎಚ್.ಆರ್. ಅನಂತ್, ಅಧ್ಯಕ್ಷತೆ: ಕೆ.ಜಿ. ರಾಘವನ್, 'ನಾಟ ರಾಗ': ಗಾಯನ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ಅಂಬಿಕ ಶಾಸ್ತ್ರಿ, ಎಚ್.ಎಸ್. ಕಾರ್ತಿಕೇಯ ಶರ್ಮಾ, ಶ್ರೀಕಾಂತಂ ನಾಗದೀಪ್ತಿ, ಶ್ರೀಕಾಂತಂ ನಾಗಪ್ರಣತಿ, ಪಿಟೀಲು: ಅಚ್ಯುತ ರಾವ್, ಮೃದಂಗ: ಪ್ರಶಾಂತ್ ಬಿ.ಎಸ್., ಆಯೋಜನೆ: ಭಾರತೀಯ ವಿದ್ಯಾಭವನ, ಇನ್ಫೋಸಿಸ್ ಪ್ರತಿಷ್ಠಾನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10ರಿಂದ

'ಕರ್ನಾಟಕಕ್ಕೆ ಜನಪರ ಶಿಕ್ಷಣ ನೀತಿ ರೂಪಿಸಲು ಶೈಕ್ಷಣಿಕ ಸಮಾವೇಶ': ಅತಿಥಿಗಳು: ಎಚ್.ಸಿ. ಮಹದೇವಪ್ಪ, ಡಾ.ಎಂ.ಸಿ. ಸುಧಾಕರ, ಮಧು ಬಂಗಾರಪ್ಪ, ಸುಖದೇವ್ ಥೋರಟ್, ಎ. ಮುರಿಗೆಪ್ಪ, ಮೈಕೆಲ್ ವಿಲಿಯಮ್ಸ್, ಮಹಾಬಲೇಶ್ವರ ರಾವ್, ಫ್ರಾನ್ಸಿಸ್ ಅಸ್ಸಿಸಿ ಅಲ್ಮೇಡಾ, ಆಯೋಜನೆ: ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 10ರಿಂದ

ವಿಶ್ವ ಹೆಪಟೈಟಿಸ್ ದಿನ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಅನಿಲ್ ಕುಮಾರ ಟಿ.ಕೆ., ರಂದೀಪ್ ಡಿ., ಡಾ. ನವೀನ್ ಭಟ್ ವೈ., ಡಾ. ಎಂ. ಇಂದುಮತಿ, ಡಾ. ಸುಜಾತ ರಾಥೋಡ್, ಡಾ. ಪುಷ್ಪಲತಾ, ಡಾ. ನಾಗೇಶ್ ಎನ್. ಎಸ್., ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಳಿಗ್ಗೆ 11

'ಇತಿಹಾಸ ಮತ್ತು ಪರಂಪರೆಯನ್ನು ಸಂರಕ್ಷಿಸುವಲ್ಲಿ ವಸ್ತುಸಂಗ್ರಹಾಲಯಗಳ ಪಾತ್ರ' ಕುರಿತು ಉಪನ್ಯಾಸ: ಶೇಕ್ ಮಸ್ತಾನ್, ಎಸ್. ನಾಗರತ್ನಮ್ಮ, ಸ್ಥಳ: ಕೆ. ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ನಾಡಪ್ರಭು ಕೆಂಪೇಗೌಡ ಜಯಂತಿ: ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ರಾಘವೇಂದ್ರ ಮೋಕ್ಷಗುಂಡಂ ಗುರೂಜಿ, ಉದ್ಘಾಟನೆ: ವೂಡೇ ಪಿ. ಕೃಷ್ಣ, ಸಿ.ಎಸ್. ಷಡಕ್ಷರಿ, ಸಿ. ನಾರಾಯಣಸ್ವಾಮಿ, ಅಧ್ಯಕ್ಷತೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಚೆಲುವರಾಯಸ್ವಾಮಿ, ಎಂ. ಕೃಷ್ಣಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣ ಪರಿಷತ್, ಸ್ಥಳ: ಎನ್.ಜಿ.ಓ ಹಾಲ್, ಕಬ್ಬನ್ ಉದ್ಯಾನ, ಮಧ್ಯಾಹ್ನ 12.05

ದೇಶದ ಅತಿದೊಡ್ಡ ಪ್ರಕೃತಿ ಮತ್ತು ವನ್ಯಜೀವಿ ಉತ್ಸವ: ಭಾಷಣಕಾರರು: ದಿಯಾ ಮಿರ್ಜಾ, ನಿತಿನ್ ಕಾಮತ್, ನೈರಿಕಾ ಹೊಳ್ಕರ್, ಬಿಟ್ಟು ಸಹಗಲ್, ವಾಣಿ ಮೂರ್ತಿ, ಉಲ್ಲಾಸ್ ಕಾಮತ್, ವ್ಯಾನ್ಸ್ ಜಿ. ಮಾರ್ಟಿನ್, ಗಾರ್ಗಿ ರಾವತ್, ವಿಶ್ವನಾಥ್ ಶ್ರೀಕಂಠಯ್ಯ, ಆಯೋಜನೆ: ನೇಚರ್ ಇನ್‌ಫೋಕಸ್, ಸ್ಥಳ: ಜಯಮಹಲ್ ಅರಮನೆ, ಸಂಜೆ 4ರಿಂದ

ಸ್ವಾಗತ ಕಾರ್ಯಕ್ರಮ: ಕನ್ನೆಗಂಟಿ ಲಲಿತಕುಮಾರಿ, ಅತಿಥಿಗಳು: ಪ್ರಸನ್ನ ಬಿ. ವರಾಳೆ, ಕೆ. ಶಶಿಕಿರಣ ಶೆಟ್ಟಿ, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲರ ಸಂಘ, ಸ್ಥಳ: ಹೈಕೋರ್ಟ್ ಯೂನಿಟ್, ಹಾಲ್ ನಂ. 1, ಮಧ್ಯಾಹ್ನ 1.45

'ಕವಿತೆಯೊಳಾಸೆಗೆಯ್ವ ಫಲಮಾವುದೊ'(ಕವಿ, ಕಾವ್ಯ, ಕವಿತೆಗಳ ಓದುವಿಕೆಯ ಮಾಲಿಕೆ-02): ಆಶಯ ನುಡಿ: ಎಚ್.ಎಲ್. ಪುಷ್ಪ, ಅಧ್ಯಕ್ಷತೆ: ಶಶಿಕಲಾ ವಸ್ತ್ರದ, ಅತಿಥಿ: ಕಮಲಾ ವೈ.ಸಿ., ಕವಿಗಳು: ಕೆ.ಆರ್. ಸಂಧ್ಯಾರೆಡ್ಡಿ, ಪ್ರತಿಭಾ ನಂದಕುಮಾರ್, ಎಂ.ಆರ್. ಕಮಲ, ಭಾಗ್ಯ ಸಿ.ಎಚ್., ಪದ್ಮಜಾ ಡಿ.ಎಸ್., ಆಯೋಜನೆ: ಸಾಹಿತ್ಯ ಅಕಾಡೆಮಿ, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ನ್ಯಾಷನಲ್ ಪ್ರಥಮ ದರ್ಜೆ ಕಾಲೇಜು, ಬಸವನಗುಡಿ, ಮಧ್ಯಾಹ್ನ 3.30

ಶಿವಕುಮಾರ ಸ್ವಾಮೀಜಿ ಅವರ ಗುರುವಂದನಾ ಕಾರ್ಯಕ್ರಮ, ಭಾರತೀಯ ಅಂಚೆ ಇಲಾಖೆ ವಿಶೇಷ ಅಂಚೆ ಲಕೋಟೆ ಬಿಡುಗಡೆ, 111 ಗ್ರಾಮಗಳಲ್ಲಿ ಸ್ಥಾಪಿಸುವ ಶಿವಕುಮಾರ ಸ್ವಾಮೀಜಿ ಅವರ ಪ್ರತಿಮೆಯ ಅನಾವರಣ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಪ್ರತಿಮೆ ಅನಾವರಣ: ಬಸವರಾಜ ಬೊಮ್ಮಾಯಿ, ವಿನಯ್ ಕುಲಕರ್ಣಿ, ಪ್ರಾಸ್ತಾವಿಕ ನುಡಿ: ಪ್ರಶಾಂತ್ ಕಲ್ಲೂರು, ಅತಿಥಿಗಳು: ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ಎಸ್. ರಾಜೇಂದ್ರ ಕುಮಾರ್, ಆಯೋಜನೆ: ವೀರಶೈವ ಲಿಂಗಾಯತ ಮಹಾವೇದಿಕೆ, ಸ್ಥಳ: ಬಸವ ಸಮಿತಿ, ಬಸವೇಶ್ವರ ವೃತ್ತ, ಸಂಜೆ 5

ಚೈತನ್ಯ ಸಂಜೆ: 'ಮೋಳಿಗೆ ಮಾರಯ್ಯ' ಕುರಿತ ಉಪನ್ಯಾಸ: ರೇಣುಕಾ ಶಂಕರ್, ಅಧ್ಯಕ್ಷತೆ: ಪ್ರೇಮಾ ಸೋಮಸುಂದರ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜ್ ಸಭಾಂಗಣ, ಜಯನಗರ, ಸಂಜೆ 5.30

'ಗತಿ ದಸ್': ಅತಿಥಿ: ಮೈಸೂರು ಬಿ. ನಾಗರಾಜ್, ಗಾಯನ: ಪ್ರತಿಮಾ ಅತ್ರೇಯ, ತಬಲಾ: ಕಾರ್ತಿಕ್ ಕೃಷ್ಣ, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ಕೊಳಲು: ಶ್ರೀಕೃಷ್ಣ ಭಟ್, ಆಯೋಜನೆ: ರಿದಮ್ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 5.30

ಪ್ರವಚನ ವಾಹಿನಿ: 'ವಚನಕಾರರ ಮನೋವಿಶ್ಲೇಷಣೆ' ಕುರಿತ ಉಪನ್ಯಾಸ: ವರದರಾಜ ಐಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವೈವಿಧ್ಯಮಯ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಮಹದೇವಪುರದಲ್ಲಿ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ವಸತಿ ಸಮುಚ್ಚಯ ಸ್ಥಳೀಯರಿಗೆ ಅವಕಾಶ ಕಲ್ಪಿಸಲು ಒತ್ತಾಯ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಸೂಲಿಕುಂಟೆ ಸಮೀಪವಿರುವ ಕೊಳಚೆ ನಿರ್ಮೂಲನಾ ಮಂಡಳಿಯು ನಿರ್ಮಾಣ ಮಾಡಿರುವ ವಸತಿ ಸಮುಚ್ಚಯದಲ್ಲಿ ಸ್ಥಳೀಯರಿಗೆ ಅವಕಾಶ ಕಲ್ಪಿಸಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಹದೇವಪುರ ಕ್ಷೇತ್ರದ ಕೊಡತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೂಲಿಕುಂಟೆ ಗ್ರಾಮದಲ್ಲಿ 50:50 ಅನುಪಾತದಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆಯ ಅನುದಾನದಲ್ಲಿ ಕೊಳಚೆ ನಿರ್ಮೂಲನ ಮಂಡಳಿಯು 900 ಮನೆಗಳನ್ನು ನಿರ್ಮಿಸಲು ಭೂಮಿ ಪಡೆದಿದೆ. ಮನೆಗಳ ನಿರ್ಮಾಣದ ನಂತರ ಕ್ಷೇತ್ರದ ಫಲಾನುಭವಿಗಳಿಗೆ ನೀಡಬೇಕಿದ್ದ 450 ಮನೆಗಳನ್ನು ಸಹ ಅನ್ಯ ಕ್ಷೇತ್ರದವರಿಗೆ ನೀಡುವ ಮೂಲಕ ಸರ್ಕಾರ ಮಹದೇವಪುರದ ಜನರಿಗೆ ಮೋಸ ಮಾಡುತ್ತಿದೆ ಎಂದು ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಆರೋಪಿಸಿದರು.

ರಾಜ್ಯದಲ್ಲಿ 2022ರಲ್ಲಿ ನಡೆದ 'ಹುಲಿ ಗಣತಿ'ಯ ವಿವರ ಬಿಡುಗಡೆ

435 ಹುಲಿಗಳು ಕ್ಯಾಮೆರಾದಲ್ಲಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 2022ರಲ್ಲಿ ನಡೆದ 'ಹುಲಿ ಗಣತಿ'ಯಲ್ಲಿ 435 ಹುಲಿಗಳು ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆಯಾಗಿದ್ದು, 2018ರಲ್ಲಿ ನಡೆದ ಗಣತಿಯಲ್ಲಿ 404 ಹುಲಿಗಳು ಕಾಣಿಸಿಕೊಂಡಿದ್ದವು. ಹುಲಿಗಳ ಸಂಖ್ಯೆ ಹೆಚ್ಚಳ ಆಗಿರುವುದಕ್ಕೆ ಇದು ಸಾಕ್ಷಿ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

'ಅಂತರರಾಷ್ಟ್ರೀಯ ಹುಲಿ ದಿನ'ಕ್ಕೆ ಎರಡು ದಿನಗಳ ಮೊದಲೇ 2022ರಲ್ಲಿ ನಡೆದ ಹುಲಿ ಗಣತಿಯ ವಿವರ ಬಿಡುಗಡೆ ಮಾಡಿದ ಅವರು, 'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಮಾರ್ಗಸೂಚಿ ಪ್ರಕಾರ ನಾಲ್ಕು ವರ್ಷಗಳಿಗೊಮ್ಮೆ ಹುಲಿ ಗಣತಿ ಮಾಡಲಾಗುತ್ತದೆ' ಎಂದಿದ್ದಾರೆ.

'2018ರಲ್ಲಿ ನಡೆದಿದ್ದ ಗಣತಿ ಪ್ರಕಾರ ಕರ್ನಾಟಕದಲ್ಲಿ ಕ್ಯಾಮೆರಾ ಟ್ರ್ಯಾಪ್‌ನಲ್ಲಿ 404 ಹುಲಿಗಳು ಪತ್ತೆ ಆಗಿದ್ದವು. ಅದನ್ನು ವನ್ಯಜೀವಿ ಸಂಖ್ಯಾ ಶಾಸ್ತ್ರದ ಪ್ರಕಾರ 475ರಿಂದ 573 ಹುಲಿಗಳು ಇರಬಹುದೆಂದು ವಿಶ್ಲೇಷಿಸಲಾಗಿತ್ತು. 2022ರಲ್ಲಿ 435 ಹುಲಿಗಳು ಸೆರೆಯಾಗಿದ್ದರೂ ವಿಶ್ಲೇಷಿಸಿದಾಗ ಈ ಸಂಖ್ಯೆ ಇನ್ನೂ ಹೆಚ್ಚು ಆಗಬಹುದು' ಎಂದಿದ್ದಾರೆ.

'ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 612, ಭದ್ರಾದಲ್ಲಿ 330, ಬಿಆರ್‌ಟಿಯಲ್ಲಿ 288, ಕಾಳಿಯಲ್ಲಿ 448, ನಾಗರಹೊಳೆಯಲ್ಲಿ 502 ಕ್ಯಾಮೆರಾ ಪಾಯಿಂಟ್ ಅಳವಡಿಸಲಾಗಿತ್ತು. ರಾಜ್ಯದ ಎಲ್ಲ ಸಂರಕ್ಷಿತ ಅರಣ್ಯಗಳಲ್ಲಿ ಅಳವಡಿಸಲಾಗಿದ್ದ 5,399 ಕ್ಯಾಮೆರಾ ಟ್ರ್ಯಾಪ್‌ನಲ್ಲಿ 66 ಲಕ್ಷಕ್ಕೂ ಹೆಚ್ಚು ವನ್ಯಜೀವಿಗಳ ಛಾಯಾಚಿತ್ರ ಸಂಗ್ರಹವಾಗಿದ್ದು, ಆಧುನಿಕ ತಂತ್ರಜ್ಞಾನ ಬಳಸಿ ಹುಲಿಗಳ ಚಲನವಲನ, ಪ್ರಾದೇಶಿಕ ಪರಿಮಿತಿ, ಹುಲಿಗಳ ಮೈಮೇಲಿನ ಪಟ್ಟೆಗಳ ಆಧಾರದಲ್ಲಿ ಸಂಖ್ಯೆ ಲೆಕ್ಕ ಹಾಕಲಾಗಿದೆ' ಎಂದಿದ್ದಾರೆ.

ಒಟ್ಟು 4,786 ಕ್ಯಾಮೆರಾ ಪಾಯಿಂಟ್

'ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ 80, ಬೆಳಗಾವಿ ವಿಭಾಗದಲ್ಲಿ 119, ಭದ್ರಾವತಿ ವಿಭಾಗದಲ್ಲಿ 121, ಕಾವೇರಿ ವನ್ಯಜೀವಿ ಧಾಮದಲ್ಲಿ 473, ಚಿಕ್ಕಮಗಳೂರು ವನ್ಯಜೀವಿ ಅರಣ್ಯದಲ್ಲಿ 41, ಹಳಿಯಾಳದಲ್ಲಿ 106, ಕಾರವಾರ ವಿಭಾಗದಲ್ಲಿ 135, ಕೊಪ್ಪ ವನ್ಯಜೀವಿ ಧಾಮದಲ್ಲಿ 50, ಕುದುರೆಮುಖ ವಿಭಾಗದಲ್ಲಿ 173, ಮಡಿಕೇರಿ (ಬ್ರಹ್ಮಗಿರಿ, ಪುಷ್ಪಗಿರಿ ಮತ್ತು ತಲಕಾವೇರಿ) ವಿಭಾಗದಲ್ಲಿ 175, ಮಲೆ ಮಹದೇಶ್ವರ ಬೆಟ್ಟದಲ್ಲಿ 432, ಮೈಸೂರು ವಿಭಾಗದಲ್ಲಿ 36, ಶಿವಮೊಗ್ಗ ವನ್ಯಜೀವಿ ಧಾಮದಲ್ಲಿ 182, ಶಿರಸಿ ವಿಭಾಗದಲ್ಲಿ 107, ವಿರಾಜಪೇಟೆ ವಿಭಾಗದಲ್ಲಿ 111, ಯಲ್ಲಾಪುರ ವಿಭಾಗದಲ್ಲಿ 94 ಸೇರಿ ರಾಜ್ಯದಲ್ಲಿ ಒಟ್ಟು 4,786 ಕ್ಯಾಮೆರಾ ಪಾಯಿಂಟ್‌ಗಳನ್ನು ಅಳವಡಿಸಲಾಗಿತ್ತು' ಎಂದು ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಮಣಿಪುರ ವಿದ್ಯಾರ್ಥಿಗಳಿಗೆ ಸುಲಭ ಪ್ರವೇಶ

ಬೆಂಗಳೂರು: ಸಂಘರ್ಷಕ್ಕೆ ತುತ್ತಾಗಿರುವ ಮಣಿಪುರದಿಂದ ರಾಜ್ಯಕ್ಕೆ ವಲಸೆ ಬರುವ ಮಕ್ಕಳಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಒತ್ತಾಯಿಸದೇ ರಾಜ್ಯದ ಶಾಲಾ, ಕಾಲೇಜುಗಳಲ್ಲಿ ಪ್ರವೇಶ ನೀಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿದೆ.

ಗಲಭೆ ಮತ್ತಿತರ ಕಾರಣಗಳಿಂದ ಕರ್ನಾಟಕಕ್ಕೆ ವಲಸೆ ಬರುವ ಇತರೆ ರಾಜ್ಯಗಳ ಮಕ್ಕಳ ಕಲಿಕೆಗೆ ಅವಕಾಶ ಮಾಡಿಕೊಡಲು 2019ರ ಆಗಸ್ಟ್‌ನಲ್ಲಿ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಅನುಗುಣವಾಗಿ ರಾಜ್ಯದ ಪಠ್ಯಕ್ರಮ ಅನುಸರಿಸುವ ಶಾಲೆಗಳಲ್ಲಿ ಪ್ರವೇಶ ನೀಡಬೇಕು. ಜನನ ಪ್ರಮಾಣಪತ್ರ, ವಲಸೆ ಪ್ರಮಾಣಪತ್ರ, ವರ್ಗಾವಣೆ ಪತ್ರ ಸೇರಿದಂತೆ ಯಾವ ದಾಖಲೆಗಳು ಇಲ್ಲದಿದ್ದರೂ, ಆ ಮಕ್ಕಳು ಪ್ರಸ್ತುತ ಕಲಿಯುತ್ತಿದ್ದ ತರಗತಿಗಳಿಗೆ ದಾಖಲು ಮಾಡಿಕೊಳ್ಳಬೇಕು. ಪಾಲಕರಿಂದ ಸ್ವಯಂ ದೃಢೀಕರಣ ಪತ್ರ ಪಡೆಯಬಹುದು. ಪಿಯು ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರದ ಬದಲು ನಿರ್ದಿಷ್ಟ ಅವಧಿಯ ಒಳಗೆ ದಾಖಲೆಗಳನ್ನು ಒದಗಿಸುವ ಕರಾರಿಗೆ ಒಳಪಡಿಸಿ ಪ್ರವೇಶ ನೀಡಬೇಕು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಮುಂದುವರಿದ ಫುಟ್‌ಪಾತ್ ವ್ಯಾಪಾರ: ಅಧಿಕಾರಿಗಳ ನಿರ್ಲಕ್ಷ್ಯ

ಪೀಣ್ಯದಾಸರಹಳ್ಳಿ: ಮಲ್ಲಸಂದ್ರ ಪೈಪ್‌ಲೈನ್ ರಸ್ತೆಯ ಪಾರ್ಕ್ ಪಕ್ಕದ ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳನ್ನು ದಾಸರಹಳ್ಳಿ ಪಾಲಿಕೆ ಅಧಿಕಾರಿಗಳು ತೆರವುಗೊಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ.

ಬೀದಿ ಬದಿ ವ್ಯಾಪಾರಿಗಳು ಮತ್ತೆ ಪಾದಚಾರಿ ಮಾರ್ಗದಲ್ಲೇ ವಹಿವಾಟು ಆರಂಭಿಸಿದ್ದಾರೆ. ಬೀದಿಬದಿ ವ್ಯಾಪಾರಿಗಳಿಗೆ ನಿಗದಿತ ಸ್ಥಳ ಗುರುತಿಸದ ಕಾರಣ ಮಲ್ಲಸಂದ್ರ ವೃತ್ತದಿಂದ ಕೆಂಪೇಗೌಡ ವೃತ್ತದವರೆಗೂ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ವ್ಯಾಪಾರ ಮಾಡಲು ಬರುವ ಜನರು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದುದರಿಂದ ಬೇರೆ ವಾಹನ ಸವಾರರಿಗೆ ತೊಂದರೆಯುಂಟಾಗಿತ್ತು.

ಈ ಬಗ್ಗೆ ದೂರುಗಳು ಬಂದಿದ್ದರಿಂದ ಬೀದಿ ಬದಿ ವ್ಯಾಪಾರಿಗಳ ವಿರೋಧದ ನಡುವೆಯೇ ಅಧಿಕಾರಿಗಳು ತೆರವು ಕಾರ್ಯಾಚರಣೆ ನಡೆಸಿದ್ದರು. ಈಗ ಮತ್ತೆ ಬೀದಿ ಬದಿಯಲ್ಲೇ ವ್ಯಾಪಾರ ನಡೆಸುತ್ತಿದ್ದರೂ ಅಧಿಕಾರಿಗಳು ಗಮನ ಹರಿಸಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಲೋಕಾರ್ಪಣೆ; ಸಿಂಗಪುರ ಟವರ್ ಪ್ರೇರಣೆ

ಟರ್ಮಿನಲ್–2ರಲ್ಲಿ 131 ಅಡಿ ಎತ್ತರದ ಅವಳಿ ಗೋಪುರ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ರಲ್ಲಿ 131 ಅಡಿ ಎತ್ತರದ ದೇಶದಲ್ಲಿಯೇ ಅತೀ ದೊಡ್ಡ ಜೋಡಿ ವೀಕ್ಷಣಾ ಗೋಪುರ (ಟ್ವಿನ್ ಟವರ್) ನಿರ್ಮಾಣ ಕಾಮಗಾರಿ ಭರದಿಂದ ಸಾಗುತ್ತಿದೆ.

ಪ್ರಯಾಣಿಕರಿಗೆ 360 ಡಿಗ್ರಿಯಲ್ಲೂ ವಿಮಾನ ನಿಲ್ದಾಣ ಮತ್ತು ವಿಮಾನ ಹಾರಾಟದ ದರ್ಶನ ಕಲ್ಪಿಸುವ ಸಲುವಾಗಿ ನಿರ್ಮಿಸುತ್ತಿರುವ ಗೋಪುರಗಳ ಕಾಮಗಾರಿ ಬಹುತೇಕ ಮುಕ್ತಾಯ ಹಂತದಲ್ಲಿದ್ದು, ಎಲ್ಲವೂ ಎಣಿಕೆಯಂತೆ ನಡೆದರೆ ಇದೇ ಸೆಪ್ಟೆಂಬರ್ 1ರಂದು ಲೋಕಾರ್ಪಣೆಗೊಳ್ಳುವ ಸಾಧ್ಯತೆ ಇದೆ.

ಜೋಡಿ ವೀಕ್ಷಣಾ ಗೋಪುರಕ್ಕೆ 'ಉದ್ಯಾನ ಮಂಟಪ' (ಗಾರ್ಡನ್ ಪೆವಿಲಿಯನ್) ಎಂದು ಹೆಸರಿಡಲಾಗಿದೆ. ನಿರ್ಮಾಣ ಕಾಮಗಾರಿ ಭರದಿಂದ ಸಾಗುತ್ತಿದ್ದು, ಸೆಪ್ಟೆಂಬರ್ ಒಳಗೆ ಮುಕ್ತಾಯವಾಗಲಿದೆ. ಸಿಂಗಪುರದ ಚಾಂಗಿ ವಿಮಾನ ನಿಲ್ದಾಣದ ವ್ಯೂವಿಂಗ್ ಟವರ್‌ನಿಂದ ಪ್ರೇರಣೆಗೊಂಡು ಈ ಗೋಪುರ ನಿರ್ಮಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿದೆ.

ವಿದೇಶಗಳಿಗೆ ತೆರಳುವ ಪ್ರಯಾಣಿಕರು ಇಮಿಗ್ರೇಷನ್ ಪ್ರಕ್ರಿಯೆ ಪೂರ್ಣಗೊಳ್ಳಿಸಿದ ಬಳಿಕ ವಿಮಾನಕ್ಕೆ ಕಾಯುವ ಸಮಯದಲ್ಲಿ ಟ್ವಿನ್ ಟವರ್‌ಗೆ ಭೇಟಿ ನೀಡಬಹುದು.ಈ ಗೋಪುರದಲ್ಲಿ ವಿದೇಶಗಳಿಗೆ ತೆರಳುವ ಪ್ರಯಾಣಿಕರು ಕೆಲ ಸಮಯ ತಂಗಬಹುದು. ವಿಶ್ರಾಂತಿ ಕೊಠಡಿ ಸೇರಿದಂತೆ ರೆಸ್ಟೋರೆಂಟ್ ವ್ಯವಸ್ಥೆ ಕೂಡ ಇರಲಿದೆ. 131 ಅಡಿ ಎತ್ತರದ ಗೋಪುರದ ಮೇಲ್ಭಾಗದಲ್ಲಿ ನಿಂತು ಪ್ರಯಾಣಿಕರು ವಿಮಾನಗಳ ಟೇಕ್ ಆಫ್ ಮತ್ತು ಲ್ಯಾಂಡಿಂಗ್ ಕಣ್ತುಂಬಿಕೊಳ್ಳಬಹುದು.

ಜನವರಿ 15ರಿಂದ ಟರ್ಮಿನಲ್–2ರಿಂದ ದೇಶಿಯ ವಿಮಾನಗಳ ಸಂಚಾರ ಮಾತ್ರ ಪ್ರಾರಂಭವಾಗಿತ್ತು. ಸೆಪ್ಟೆಂಬರ್ 1ರಿಂದ ಇಲ್ಲಿಂದ ಪೂರ್ಣ ಪ್ರಮಾಣದಲ್ಲಿ ಅಂತರರಾಷ್ಟ್ರೀಯ ವಿಮಾನಗಳ ಸಂಚಾರ ಆರಂಭವಾಗಲಿದೆ.

'ದೇವನಹಳ್ಳಿ ವಿಮಾನ ನಿಲ್ದಾಣ ಟರ್ಮಿನಲ್–1ರಲ್ಲಿ ಕಾರ್ಯಾಚರಣೆ ಮಾಡುತ್ತಿರುವ 28 ಅಂತರರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳು ಶೀಘ್ರದಲ್ಲಿಯೇ ಟರ್ಮಿನಲ್–2ರಲ್ಲಿ ಕಾರ್ಯಾಚರಣೆ ಆರಂಭಿಸಲಿವೆ. ವೀಕ್ಷಣಾ ಗೋಪುರದಲ್ಲಿ ಡೈನಿಂಗ್, ಲಾಂಜ್ ವ್ಯವಸ್ಥೆ ಕುರಿತು ಅಧಿಕೃತವಾಗಿ ಸಭೆಯಲ್ಲಿ ತೀರ್ಮಾನ ಆಗಲಿದೆ' ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಮುಂಬೈ ವಿಮಾನ ಹತ್ತು ತಾಸು ವಿಳಂಬ!

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಜುಲೈ 23ರಂದು ಮುಂಬೈಗೆ ತೆರಳಬೇಕಿದ್ದ ಏರ್ ಇಂಡಿಯಾ ವಿಮಾನ ಹತ್ತು ತಾಸು ತಡವಾಗಿ ನಿರ್ಗಮಿಸಿದೆ.

ಭಾನುವಾರ ಸಂಜೆ 7.35ಕ್ಕೆ ಹೊರಡಬೇಕಿದ್ದ ವಿಮಾನ ತಾಂತ್ರಿಕ ಸಮಸ್ಯೆಯಿಂದಾಗಿ ಮರುದಿನ ಸೋಮವಾರ ಬೆಳಗಿನ ಜಾವ 5.49ಕ್ಕೆ ಮುಂಬೈಗೆ ಪ್ರಯಾಣ ಬೆಳೆಸಿದೆ.

ವಿಮಾನದಲ್ಲಿ ತಾಂತ್ರಿಕ ಸಮಸ್ಯೆ ಕಂಡು ಬಂದ ತಕ್ಷಣ ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಸಂಪೂರ್ಣ ವಿಮಾನವನ್ನು ತಪಾಸಣೆ ನಡೆಸಲಾಯಿತು. ಆ ಹೊತ್ತಿಗಾಗಲೇ ವಿಮಾನದ ಸಿಬ್ಬಂದಿ ಕೆಲಸದ ಅವಧಿ ಮುಗಿದಿತ್ತು. ಪರ್ಯಾಯ ಸಿಬ್ಬಂದಿ ವ್ಯವಸ್ಥೆ ಮಾಡಲು ಮತ್ತಷ್ಟು ತಡವಾಯಿತು ಎಂದು ಕೆಲವು ಪ್ರಯಾಣಿಕರು ತಮಗಾದ ತೊಂದರೆಯನ್ನು ಸಾಮಾಜಿಕ ಜಾಲತಾಣಗಳಲ್ಲಿಹಂಚಿಕೊಂಡಿದ್ದಾರೆ.

ತುರ್ತು ಕೆಲಸದ ಮೇಲೆ ಮುಂಬೈಗೆ ತೆರಳಬೇಕಿದ್ದ ಕೆಲವು ಪ್ರಯಾಣಿಕರನ್ನು ಬೇರೆ ವಿಮಾನಗಳಲ್ಲಿ ಕಳುಹಿಸಲು ವ್ಯವಸ್ಥೆ ಮಾಡಲಾಯಿತು. ಇನ್ನುಳಿದ ಪ್ರಯಾಣಿಕರನ್ನು ಸ್ಥಳೀಯ ಹೋಟೇಲ್‌ನಲ್ಲಿ ತಂಗಲು ವ್ಯವಸ್ಥೆ ಮಾಡಲಾಯಿತು. ವಿಮಾನ ಹಾರಾಟದ ವ್ಯತ್ಯಯದ ಕುರಿತು ವಿಮಾನ ಯಾನ ಸಂಸ್ಥೆಯ ಸಿಬ್ಬಂದಿಗೆ ಸಮರ್ಪಕ ಮಾಹಿತಿ ಇರಲಿಲ್ಲ ಎಂದು ಟೀಕಿಸಿದ್ದಾರೆ.

ಅಧ್ಯಾಪಕರ ವರ್ಗಾವಣೆ; ಅನುಮಾನ ಮೂಡಿಸಿದ ವೈದ್ಯಕೀಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳ ಅಧ್ಯಾಪಕರ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ ಪ್ರಕಟಿಸಿದ ನಂತರ ವೈದ್ಯಕೀಯ ಪ್ರಕರಣಗಳಲ್ಲಿ ವರ್ಗಾವಣೆ ಬಯಸಿರುವವರಿಗೆ ಮತ್ತೆ ಅವಕಾಶ ನೀಡಿರುವ ಕಾಲೇಜು ಶಿಕ್ಷಣ ಇಲಾಖೆ ನಡೆಗೆ ಆಕ್ಷೇಪ ವ್ಯಕ್ತವಾಗಿದೆ.

ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರು, ಗ್ರಂಥಪಾಲಕರು ಹಾಗೂ ಕ್ರೀಡಾ ನಿರ್ದೇಶಕರ ವರ್ಗಾವಣೆಗೆ ಇದೇ ಜೂನ್ 5ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಕಡ್ಡಾಯ ವರ್ಗಾವಣೆ ಶೇ 9, ದಂಪತಿ ಪ್ರಕರಣ ಶೇ 3, ಚಿಕ್ಕ ಮಕ್ಕಳಿರುವ ವಿಧವೆಯರು ಅಥವಾ ಒಂಟಿ ಪೋಷಕರು, ಅಂಗವಿಕಲರು, ತೀವ್ರತರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ತಲಾ ಶೇ 1ರಷ್ಟು (ಒಟ್ಟು ಶೇ 3) ವರ್ಗಾವಣೆಗೆ ಅವಕಾಶ ನೀಡಲಾಗಿದೆ. ಈಗಾಗಲೇ ಅಮತಿಮ ಆದ್ಯತಾ ಪಟ್ಟಿ ಪ್ರಕಟಿಸಿದ್ದು, ಇದೇ 25ರಿಂದ 28ರವರೆಗೆ ವರ್ಗಾವಣೆಗೆ ಕೌನ್ಸೆಲಿಂಗ್ ನಡೆಯಲಿದೆ.

ಈ ಮಧ್ಯೆ ತೀವ್ರತರ ಕಾಯಿಲೆಯಿಂದ ಬಳಲುತ್ತಿರುವ 166 ಬೋಧಕರು ವೈದ್ಯಕೀಯ ಪ್ರಕರಣಗಳ ಅಡಿ ಶೇ 1ರಷ್ಟು ನಿಗದಿತ ಮಿತಿಯಡಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಸಲ್ಲಿಸಿದವರು ಆಯಾ ಜಿಲ್ಲೆಗಳ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣಪತ್ರ ಸಲ್ಲಿಸಿದ್ದರು. ಪ್ರಮಾಣಪತ್ರಗಳ ನೈಜತೆ ದೃಢೀಕರಣಕ್ಕಾಗಿ ಬೆಂಗಳೂರಿನ ಇಂದಿರಾನಗರದ ಸಿ.ವಿ.ರಾಮನ್ ಆಸ್ಪತ್ರೆ, ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆ ಹಾಗೂ ಜಯನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರು ತಪಾಸಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ವಿವಿಧ ಜಿಲ್ಲೆಗಳಿಂದ ಬಂದಿದ್ದ ಎಲ್ಲರೂ ಮರುಪತಾಸಣೆಗೆ ಒಳಗಾಗಿದ್ದಾರೆ. ಈಗ ಮತ್ತೆ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಿರುವುದು ಅನುಮಾನ ಮೂಡಿಸಿದೆ.

'ನಕಲಿ ಅಂಗವಿಕಲರ ಪ್ರಮಾಣಪತ್ರ ಪಡೆದು ಹಲವರು ಉದ್ಯೋಗ ಪಡೆದಿರುವಂತೆ, ಹಣ ನೀಡಿ ನಕಲಿ ವೈದ್ಯಕೀಯ ಪ್ರಮಾಣಪತ್ರಗಳನ್ನು ಪಡೆದು ತಮಗೆ ಬೇಕಾದ ಸ್ಥಳಗಳಿಗೆ ವರ್ಗಾವಣೆ ಪಡೆಯುತ್ತಿದ್ದಾರೆ. ನಕಲಿ ಪ್ರಮಾಣಪತ್ರ ಪಡೆದು ಕಳೆದ ಬಾರಿಯೂ ಶೇ 50ರಷ್ಟು ಕಾಯಿಲೆಯೇ ಇರದವರು ವರ್ಗಾವಣೆ ಪಡೆದರು. ಈ ಬಾರಿ ಜುಲೈ 12ರ ಒಳಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಎಲ್ಲ ಪ್ರಕ್ರಿಯೆ ಮುಗಿದ ನಂತರ ವೈದ್ಯಕೀಯ ಪ್ರಕರಣದಲ್ಲಿ ಮಾತ್ರ ಮತ್ತೆ ದಿನಾಂಕ ವಿಸ್ತರಿಸಿರುವುದು ಅನುಮಾನ ಮೂಡಿಸುತ್ತದೆ. ವಂಚನೆಗೆ ಶಿಕ್ಷಣ ಇಲಾಖೆಯೇ ಅವಕಾಶ ಮಾಡಿಕೊಡುತ್ತಿದೆ. ಇದರಿಂದ ನಿಜವಾದ ಸಮಸ್ಯೆ ಇರುವವರಿಗೆ ಅನ್ಯಾಯವಾಗುತ್ತಿದೆ' ಎಂದು ಕ್ಯಾನ್ಸರ್‌ನಿಂದ ಬಳಲುತ್ತಿರುವ ಪ್ರಾಧ್ಯಾಕರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಭ್ರಷ್ಟಾಚಾರ ತನಿಖೆ: ಸಕ್ಷಮ ಪ್ರಾಧಿಕಾರದ ಅನುಮತಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ನೌಕರರ ವಿರುದ್ಧ ದಾಖಲಾಗುವ ಭ್ರಷ್ಟಾಚಾರ ಆರೋಪದ ಖಾಸಗಿ ದೂರುಗಳ ಸಂಬಂಧ ಭ್ರಷ್ಟಾಚಾರ ನಿಯಂತ್ರಣಾ ಕಾಯ್ದೆಯ ಕಲಂ 17 (ಎ)ರ ಪ್ರಕಾರ ಸಕ್ಷಮ ಪ್ರಾಧಿಕಾರದ ಅನುಮೋದನೆಯಿಲ್ಲದೆ ತನಿಖೆ ನಡೆಸುವಂತಿಲ್ಲ' ಎಂದು ಹೈಕೋರ್ಟ್ ವಿಚಾರಣಾ ನ್ಯಾಯಾಲಯಗಳಿಗೆ ನಿರ್ದೇಶಿಸಿದೆ.

ಖಾಸಗಿ ದೂರು ಪರಿಗಣಿಸಿ ತನಿಖೆಗೆ ಆದೇಶಿಸಿದ್ದ ಸೆಷನ್ಸ್ ನ್ಯಾಯಾಲಯ ಆದೇಶದ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಚಿಕ್ಕಬಳ್ಳಾಪುರ ಜಿಲ್ಲೆಯ ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿಯಾಗಿದ್ದ ವಿ. ಅಶೋಕ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಕುರಿತಂತೆ ನಿರ್ದೇಶಿಸಿದೆ.

'ಕಲಂ 17 (ಎ) ರ ಅಡಿ ಸರ್ಕಾರಿ ನೌಕರರಿಗೆ ನೀಡಲಾಗಿರುವ ರಕ್ಷಣಾ ಹಿತಾಸಕ್ತಿಯನ್ನು ಗಮನದಲ್ಲಿ ಇರಿಸಿಕೊಂಡು ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ವಿಫಲವಾದಲ್ಲಿ ಕಾನೂನು ದುರ್ಬಳಕೆ ಮಾಡಿದಂತಾಗುತ್ತದೆ. ಆದರೂ, ಈ ಅವಕಾಶವನ್ನು ತಪ್ಪಿತಸ್ಥರು ರಕ್ಷಣೆಗಾಗಿ ಬಳಕೆ ಮಾಡುತ್ತಾರೆ ಎಂಬುದನ್ನು ಪರಿಗಣಿಸಲು ಆಗದು. ಇದು ಮುಗ್ಧರಿಗೆ ನೀಡುವ ರಕ್ಷಣೆಯಾಗಿದ್ದು, ಇದನ್ನು ಪಾಲಿಸುವುದು ಕಡ್ಡಾಯ' ಎಂದು ನ್ಯಾಯಪೀಠ ತಿಳಿಸಿದೆ.

ಪುಣೆ ರೇಸ್

ಮ್ಯಾಗಿಲೆಟೊ ಗೆಲ್ಲುವ ನಿರೀಕ್ಷೆ

ಜೆ.ಇ.ಹ್ಯೂಸ್ ಟ್ರೋಫಿ ಶುಕ್ರವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮ್ಯಾಗಿಲೆಟೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಡುಫಿ 5, ಅಡಮಾಸ್ 8, ಮಿದಾಸ್ ಟಚ್ 3
2ನೇ ರೇಸ್: ಅಲ್ವಾ ಡೊಮಿನೊ 6, ಸೀ ದಿ ಸನ್ 2, ಹೂವ್ಸ್ ಆಫ್ ಥಂಡರ್ 5
3ನೇ ರೇಸ್: ರೇಸಿಂಗ್ ರೊಮಾನ್ಸ್ 12, ನಿರ್ವಾನ 11, ಜಫೀರಾ 14
4ನೇ ರೇಸ್: ಮ್ಯಾಗಿಲೆಟೊ 6, ಸ್ಟಾರ್ ರೊಮಾನ್ಸ್ 4, ಕೊಯರ್ ಡೆ ಲಯನ್ 1
5ನೇ ರೇಸ್: ಇಟ್ಸ್ ಮೈ ಟೈಮ್ 5, ಡೆಕ್ಸ್ಟಾ 4, ಲಾರ್ಡ್ ಅಂಡ್ ಮಾಸ್ಟರ್ 6
6ನೇ ರೇಸ್: ಸಿಮ್ ಸಿಮ್ 3, ಪ್ಯೂರ್ 2, ನಾರ್ದರ್ನ್ ಸಿಂಗರ್ 5
7ನೇ ರೇಸ್: ಆಲ್‌ಫೈನ್ ಸ್ಟಾರ್ 1, ಡಾಕ್ ಮಾರ್ಟಿನ್ 2, ಸ್ಕೈಹಾಕ್ 6

ಉತ್ತಮ ಬೆಟ್: ಇಟ್ಸ್ ಮೈ ಟೈಮ್

ಜಾಕ್‌ಪಾಟ್ 3,4,5,6,7 ಟ್ರಿಬಲ್ 4,5,6

ಸರ್ಕಾರದ ಅಂಗಸಂಸ್ಥೆ ವ್ಯಾಜ್ಯ: ಕೋರ್ಟ್ ಮೊರೆ ಅನಪೇಕ್ಷಿತ

ಬೆಂಗಳೂರು: 'ಸರ್ಕಾರ ಮತ್ತು ಅದರ ಅಂಗ ಸಂಸ್ಥೆಗಳ ಮಧ್ಯದ ವ್ಯಾಜ್ಯಗಳನ್ನು ಸೂಕ್ತ ವೇದಿಕೆಯಲ್ಲಿ ಬಗೆಹರಿಸಿಕೊಳ್ಳಬೇಕೇ ಹೊರತು ಕೋರ್ಟ್ ಮೊರೆ ಹೋಗುವುದು ಸರಿಯಲ್ಲ' ಎಂದು ಹೈಕೋರ್ಟ್ ಹೇಳಿದೆ.

ಬಿನ್ನಿಪೇಟೆಯಲ್ಲಿನ ಹಣ್ಣು, ಹೂವು ಮತ್ತು ತರಕಾರಿ ಕುರಿತ ವಿಶೇಷ ಎಪಿಎಂಸಿಯ ಕಾರ್ಯದರ್ಶಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಭೂ ಸ್ವಾಧೀನ ಪರಿಹಾರ ಸಂಬಂಧಿತ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ ಮಧ್ಯದ ಈ ವ್ಯಾಜ್ಯವನ್ನು ಮೂರು ತಿಂಗಳಲ್ಲಿ ಪರಿಹರಿಸಬೇಕು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿಗೆ ನಿರ್ದೇಶಿಸಿದೆ.

'ಕೋರ್ಟ್‌ಗಳು ಈಗಾಗಲೇ ಪ್ರಕರಣಗಳ ಭಾರದಿಂದ ನಲುಗುತ್ತಿವೆ. ಆದ್ದರಿಂದ, ರಾಜ್ಯ ಸರ್ಕಾರ ಮತ್ತು ಅದರ ಅಂಗಸಂಸ್ಥೆಗಳ ಮಧ್ಯದ ವ್ಯಾಜ್ಯಗಳನ್ನು ಪ್ರತ್ಯೇಕ ವೇದಿಕೆಗಳಲ್ಲಿ ಬಗೆಹರಿಸಿಕೊಳ್ಳಬೇಕು. ಅವುಗಳನ್ನು ಕೋರ್ಟ್‌ಗಳ ಮುಂದೆ ತರುವುದು ಸರಿಯಲ್ಲ. ಸಾಧ್ಯವಾದಷ್ಟೂ ಕೋರ್ಟ್‌ಗಳಲ್ಲಿರುವ ವ್ಯಾಜ್ಯಗಳ ಹೊರೆಯನ್ನು ಇಳಿಸುವುದಕ್ಕೆ ಸರ್ಕಾರ ಸಹಕರಿಸಬೇಕಿದೆ' ಎಂದು ಹೇಳಿದೆ.

'ರಾಜ್ಯ ಸರ್ಕಾರ ಮತ್ತು ಅದರ ಅಂಗಸಂಸ್ಥೆಗಳ ನಡುವೆ ವ್ಯಾಜ್ಯಗಳಿದ್ದ ಸಂದರ್ಭದಲ್ಲಿ ಅವುಗಳನ್ನು ಪರಿಹರಿಸಲು ಕರ್ನಾಟಕ ರಾಜ್ಯ ವ್ಯಾಜ್ಯ ಪರಿಹಾರ ನೀತಿ-2021 ಅನ್ನು ಅಳವಡಿಸಿಕೊಳ್ಳಲಾಗಿದೆ. ಅದರಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿ ಈ ವ್ಯಾಜ್ಯವನ್ನು ಪರಿಹರಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಪರಿಶಿಷ್ಟ ಜಾತಿಗೆ ಕಾಟಿಕ್ ಸಮುದಾಯ ಸೇರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಕಾಟಿಕ್ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕು ಎಂದು ಕರ್ನಾಟಕ ರಾಜ್ಯ ಕಾಟಿಕ್ ಸಮಾಜ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಾಜದ ಪ್ರಧಾನ ಸಂಚಾಲಕ ಆರ್.ಕೆ. ಸಿದ್ರಾಮಣ್ಣ, 'ಕಾಟಿಕ್ (ಖಟಿಕ್) ಸಮುದಾಯವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದೆ. ರಾಜ್ಯದಲ್ಲಿ ಸಮುದಾಯವು ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇದೆ. ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಭಾಗದಲ್ಲಿ ನೆಲೆಸಿದ್ದು, ರಾಜಕೀಯವಾಗಿ ಹಿಂದುಳಿದಿದೆ. ದೇಶದ 11 ರಾಜ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ನಮ್ಮ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಲಾಗಿದೆ. ಹೀಗಾಗಿ, ರಾಜ್ಯದಲ್ಲಿ ಪ್ರಸ್ತುತ ಪ್ರವರ್ಗ 1 ಮತ್ತು 2ಎ ವರ್ಗದಲ್ಲಿರುವ ನಮ್ಮ ಎಲ್ಲ ಉಪಜಾತಿಗಳನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಬೇಕು' ಎಂದು ಒತ್ತಾಯಿಸಿದರು.

'2011ರಲ್ಲಿ ಕುವೆಂಪು ವಿ.ವಿಯ ಸಮಾಜಶಾಸ್ತ್ರ ವಿಭಾಗದ ಡಾ.ಬಿ. ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಮಾಡಲಾಗಿದೆ. ಕಾಟಿಕ್ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ವರದಿಯನ್ನು 2012ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಕುಲಶಾಸ್ತ್ರೀಯ ಅಧ್ಯಯನದ ಮೇಲೆ ನಮ್ಮ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು' ಎಂದು ಒತ್ತಾಯಿಸಿದರು.

'ಕುಲ ಕಸುಬು ಕುರಿ ಮತ್ತು ಮೇಕೆ ಮಾಂಸ ಮಾರಾಟ ಮಾಡುವುದಾಗಿದೆ. ರಾಜ್ಯದಲ್ಲಿ ಕಾಟಿಕ್, ಖಟಿಕ್, ಕಟುಗ, ಕಟುಕ, ಕಲಾಲ್, ಸೂರ್ಯವಂಶ ಕ್ಷತ್ರಿಯ, ಹಿಂದೂ ಕಲಾಲ್, ಹಿಂದೂ ಕಟಿಕ್, ಶೇರಗಾರ, ಆರೇ, ಅರೆಕಸಾಯಿ, ಅರೆಕಟಿಕಲ್ಲು, ಕಲಾಲ್ ಕಟಿಕ್, ಕಸಾಬ್, ಕಸಾಯಿ, ಮರಟ್ಟ ಎಂಬ ಹೆಸರುಗಳಿಂದು ಸಮುದಾಯವನ್ನು ಗುರುತಿಸಲಾಗುತ್ತಿದೆ' ಎಂದರು.

ಸಂಚಾಲಕರಾದ ವೆಂಕಟ್, ರಾಜು, ಹನುಮಂತ ರಾವ್, ಮಹೇಶ್ ಇದ್ದರು.

ಚಿತ್ರಾವಳಿ

ಜಪಾನ್‌ನ ಟೋಕಿಯೊದಲ್ಲಿ ನಡೆದಿದ್ದ 53ನೇ ಅಂತರರಾಷ್ಟ್ರೀಯ ಭೌತವಿಜ್ಞಾನ ಒಲಂಪಿಯಾಡ್–2023ರಲ್ಲಿ ಭಾರತದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ದೆಹಲಿಯ ಆದಿತ್ಯ, ಮಹಾರಾಷ್ಟ್ರದ ದ್ರುವ ಶಾ, ತೆಲಂಗಾಣದ ಮೆಹುಲ್ ಬೋರಾಡ್ ಅವರು ಚಿನ್ನದ ಪದಕ ಹಾಗೂ ಚಂಡೀಘಡದ ರಾಘವ್ ಗೋಯಲ್, ಛತ್ತೀಸ್‌ಘಡದ ರಿದಮ್ ಕೆಡಿಯಾ ಅವರು ಬೆಳ್ಳಿ ಪದಕ ಪಡೆದ ಸಾಧಕರಾಗಿದ್ದಾರೆ.

ನಗರದ ಮನೋರಾಯನಪಾಳ್ಯ ವಾರ್ಡ್‌ನ ಚಾಮುಂಡಿನಗರದಲ್ಲಿ ಒಳಚರಂಡಿ ಪೈಪ್‌ಲೈನ್ ಕಾಮಗಾರಿಗಳಿಗೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಭೂಮಿ ಪೂಜೆ ನೆರವೇರಿಸಿದರು. ಬಿಬಿಎಂಪಿ ಮಾಜಿ ವಿರೋಧ ಪಕ್ಷದ ನಾಯಕ ಅಬ್ದುಲ್ ವಾಜೀದ್ ಇದ್ದರು.

ಯಲಹಂಕದ ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜು ಮಂಗಳವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿನಿ ವಾರುಣಿ ಎನ್. ಬಾಬು ಅವರಿಗೆ ಸಾಹಿತಿ ಚಂದ್ರಶೇಖರ ಕಂಬಾರ ಅವರು ವಿದ್ಯಾರ್ಥಿ ವೇತನ ವಿತರಿಸಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಟಿ. ದೊಡ್ಡೇಗೌಡ, ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಹಾಗೂ ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಇದ್ದಾರೆ.

ಜಯನಗರದ ನ್ಯಾಷನಲ್ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ವಿವಿಧ ಸಂಶೋಧನಾತ್ಮಕ ಪ್ರಾಜೆಕ್ಟ್‌ಗಳನ್ನು ಪತ್ರಕರ್ತ ಗೌರೀಶ್ ಅಕ್ಕಿ ಬಿಡುಗಡೆಗೊಳಿಸಿದರು. ಕಾಲೇಜಿನ ಪ್ರಾಂಶುಪಾಲ ಬಿ. ಸುರೇಶ್, ನ್ಯಾಷನಲ್ ಶಿಕ್ಷಣ ಸಂಸ್ಥೆಗಳ ನಿವೃತ್ತ ಕುಲಸಚಿವ ಎಚ್.ಕೆ. ಮೌಳೇಶ್, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಸ್. ಜಯಸಿಂಹ, ಎಚ್.ಬಿ. ವೈಶಾಲಿ ಇದ್ದರು.

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಕೊಡಿಗೇಹಳ್ಳಿ ಮತ್ತು ಬ್ಯಾಟರಾಯನಪುರ ವಾರ್ಡ್‌ಗಳ 700 ವಿದ್ಯಾರ್ಥಿಗಳನ್ನು ಯಲಹಂಕ ಬ್ಯಾಟರಾಯಪುರದಲ್ಲಿರುವ ಸಹಕಾರನಗರದ ದೇವ್‌ಇನ್ ನ್ಯಾಷನಲ್ ಸ್ಕೂಲ್‌ನಲ್ಲಿ ನಡೆದ 'ನಮ್ಮೂರ ಹಮ್ಮೆ' ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಕಂದಾಯ ಸಚಿವ ಕೃಷ್ಣಬೈರೇಗೌಡ, ಶಾಸಕ ಪ್ರದೀಪ್ ಈಶ್ವರ್, ಮಾಜಿ ಉಪಮೇಯರ್ ಎನ್.ಇಂದಿರಾ, ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಎಂ. ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ಎಂ. ಹನುಮಂತೇಗೌಡ, ಟಿ.ಜಿ. ಚಂದ್ರು, ಎನ್. ಆದಿರಾಮು, ಕೆ. ಮಂಜುನಾಥ್, ವೆಂಕಟಸ್ವಾಮಿ, ನಟರಾಜ್, ತಿಂಡ್ಲು ಸತೀಶ್, ಎನ್.ಎಸ್. ದಿಲೀಪ್ ಕುಮಾರ್, ಕೆ. ದಿಲೀಪ್ ಇದ್ದರು.

ಕುವೆಂಪು ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ. ಪರಿಸರ ವಿಜ್ಞಾನದಲ್ಲಿ ಐದು ಚಿನ್ನದ ಪದಕಗಳನ್ನು ಪಡೆದಿರುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ(ಬಿಎಂಟಿಸಿ) ಚಾಲಕ ಉಮೇಶ್ ಅವರ ಪುತ್ರಿ ರೋಹಿಣಿ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಅವರು ₹5,000 ನಗದು ಮತ್ತು ಪ್ರಶಂಸನಾ ಪತ್ರ ನೀಡಿ ಸನ್ಮಾನಿಸಿದರು.

ರಾಜಾಜಿನಗರದ ಪ್ರಥಮ ದರ್ಜೆ ಕಾಲೇಜಿನ ಎನ್‌ಸಿ.ಸಿ., ಎನ್.ಎಸ್.ಎಸ್, ರೋವರ್ಸ್ ಮತ್ತು ರೇಂಜರ್ಸ್ ಘಟಕಗಳ ಸಹಯೋಗದಲ್ಲಿ ಗುರುವಾರ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಯಿತು. ರಾಜಾಜಿನಗರದ ಸಂಚಾರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ನ್ಯಾಮೇಗೌಡ, ಎಎಸ್ಐ ಕೆ.ಆರ್. ಶಿವಕುಮಾರ್, ಮಹಾಲಕ್ಷ್ಮಿ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಗಿರೀಶ್, ಎಎಸ್ಐ ಕೃಷ್ಣಪ್ಪ, ಪ್ರಾಧ್ಯಾಪಕ ಚಿಕ್ಕಚಿನ್ನಯ್ಯ, 1ನೇ ಕರ್ನಾಟಕ ಬೆಟಾಲಿಯನ್‌ನ ಹವಾಲ್ದಾರ್ ಯೋಗೇಶ್, ಕಾಲೇಜಿನ ಪ್ರಾಂಶುಪಾಲರಾದ ವನಜಾಕ್ಷಿ ಆರ್. ಹಳ್ಳಿಯವರ ಇದ್ದರು.

ನಗರದ ಸರ್ಕಾರಿ ಕಲಾ ಕಾಲೇಜು ಕನ್ನಡ ಸಂಘದ ವಿದ್ಯಾರ್ಥಿಗಳು ವಿಜಯಲಕ್ಷ್ಮಿ ಅವರು ಅನುವಾದಿಸಿದ 'ಚಮ್ಮಾರನ ಚಾಲೂಕಿ ಹೆಂಡತಿ' ನಾಟಕವನ್ನು ಸೋಮವಾರ ಪ್ರಸ್ತುತ ಪಡಿಸಿದರು.

ಹರಿಪ್ರಸಾದ್ ಮನವೊಲಿಕೆಗೆ ಸಚಿವ ಪರಮೇಶ್ವರ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸ್ಥಾನ ಸಿಗದಿರುವುದಕ್ಕೆ ಅಸಮಾಧಾನಗೊಂಡಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರನ್ನು ಗುರುವಾರ ಭೇಟಿಯಾದ ಗೃಹ ಸಚಿವ ಜಿ. ಪರಮೇಶ್ವರ, ಅವರ ಮನವೊಲಿಸುವ ಪ್ರಯತ್ನ ಮಾಡಿದರು.

ಹರಿಪ್ರಸಾದ್ ಜೊತೆ ಸುಮಾರು ಎರಡು ಗಂಟೆ ಚರ್ಚಿಸಿದ ಅವರು, ಯಾವುದೇ ಅಸಮಾಧಾನಗಳಿದ್ದರೂ ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳೋಣ ಎಂದು ಹೇಳಿದ್ದಾರೆ ಎನ್ನಲಾಗಿದೆ.

ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಪ್ರವಾಹದ ಸಂಕಷ್ಟದ ಪರಿಸ್ಥಿತಿಯಲ್ಲಿ ಜನರ ಹಿತದೃಷ್ಟಿಯಿಂದ ಒಟ್ಟಾಗಿ ಕೆಲಸ ಮಾಡಬೇಕಿದೆ. ಪಕ್ಷದ ಮೇಲೆ ನಂಬಿಕೆಯಿಂದ ದೊಡ್ಡ ಮಟ್ಟದ ಜನಾದೇಶ ಸಿಕ್ಕಿದೆ. ಎಲ್ಲ ನಾಯಕರೂ ಒಗ್ಗೂಡಿ ಕೆಲಸ ಮಾಡಬೇಕಾದ ಅಗತ್ಯವಿದೆ ಎಂದು ಮನವರಿಕೆ ಮಾಡಿ ಕೊಡಲು ಪರಮೇಶ್ವರ ಯತ್ನಿಸಿದರು.

'ನಿಮಗೆ ಸಚಿವ ಸ್ಥಾನ ಸಿಗದಿರುವ ಕುರಿತು ಬೇಸರವಿದೆ. ಮುಂದಿನ ದಿನಗಳಲ್ಲಿ ಸೂಕ್ತ ಸ್ಥಾನಮಾನ ಸಿಗುವುದು ಖಚಿತ. ಈ ಬಗ್ಗೆ ಹೈಕಮಾಂಡ್ ಗಮನಕ್ಕೆ ತರುವುದಾಗಿ ಪರಮೇಶ್ವರ ಭರವಸೆ ನೀಡಿದ್ದಾರೆ' ಎಂದೂ ಗೊತ್ತಾಗಿದೆ.

ಒಕ್ಕಲಿಗರ ಸಂಘ ಹನುಮಂತಯ್ಯ ಅಧ್ಯಕ್ಷ



ಹನುಮಂತಯ್ಯ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಡಿ. ಹನುಮಂತಯ್ಯ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ನಿರ್ದೇಶಕ ಎಚ್.ಎನ್. ಅಶೋಕ (ತಮ್ಮಾಜಿ) ಅಧ್ಯಕ್ಷತೆಯಲ್ಲಿ ಗುರುವಾರ ಪದಾಧಿಕಾರಿಗಳ ಚುನಾವಣೆ ನಡೆಯಿತು. ಗೌರವ ಅಧ್ಯಕ್ಷರಾಗಿ ಬಿ. ಕೆಂಚಪ್ಪಗೌಡ ಅವರನ್ನು ಆಯ್ಕೆ ಮಾಡಲಾಗಿದೆ.

ಉಪಾಧ್ಯಕ್ಷರಾಗಿ ಎಲ್. ಶ್ರೀನಿವಾಸ್ ಹಾಗೂ ಸಿ. ದೇವರಾಜು, ಪ್ರಧಾನ ಕಾರ್ಯದರ್ಶಿಯಾಗಿ ಎಚ್. ಸಿ. ಜಯಮುತ್ತು, ಸಹಾಯಕ ಕಾರ್ಯದರ್ಶಿಯಾಗಿ ವೆಂಕಟರಾಮೇಗೌಡ, ಖಜಾಂಚಿಯಾಗಿ ಸಿ.ಎಂ.ಮಾರೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆ. 2ರಂದು ರಾಜ್ಯ ನಾಯಕರೊಂದಿಗೆ ಹೈಕಮಾಂಡ್ ಸಭೆ

ನವದೆಹಲಿ: ಕರ್ನಾಟಕ ಕಾಂಗ್ರೆಸ್ ಸರ್ಕಾರದ ವಿರುದ್ಧ ಸ್ವಪಕ್ಷದ ಶಾಸಕರ ಮುನಿಸಿನ ಬೆನ್ನಲ್ಲೇ, ಪಕ್ಷದ ಹಿರಿಯ ನಾಯಕರ ಜತೆಗೆ ಹೈಕಮಾಂಡ್‌ನ ಸಭೆಗೆ ಮುಹೂರ್ತ ನಿಗದಿಯಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಆಗಸ್ಟ್ 2ರಂದು ಮಧ್ಯಾಹ್ನ 2 ಗಂಟೆಗೆ ಸಭೆ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾಲ್ಗೊಳ್ಳಲಿದ್ದಾರೆ. ಸಚಿವ ಸ್ಥಾನ ಸಿಗದ ಕಾರಣಕ್ಕೆ ಮುನಿಸಿಕೊಂಡಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರಿಗೆ ಆಹ್ವಾನ ನೀಡಲಾಗಿದೆ.

ಸ್ಫೋಟ: ವಿದೇಶಿಯರಿಂದ ₹ 15 ಲಕ್ಷ

ಒಂದನೇ ಪುಟದಿಂದ

'ದುಬೈನಲ್ಲಿದ್ದಾನೆ ಎನ್ನಲಾದ ಜುನೇದ್, ಜಾಹೀದ್ ತಬ್ರೇಜ್ ಮೂಲಕ ಇತರೆ ಶಂಕಿತರಿಗೂ ಹಣ ತಲುಪಿಸಿದ್ದಾನೆ. ಈ ಬಗ್ಗೆ ಶಂಕಿತರು ಹೇಳಿಕೆ ನೀಡಿದ್ದಾರೆ' ಎಂದಿವೆ.

ಶಾಂತಿ ಕದಡಲು ವಿದೇಶಿಯರ ಸಂಚು: 'ದುಬೈ ಹಾಗೂ ಇತರೆ ದೇಶಗಳಲ್ಲಿರುವ ಕೆಲವರು, ಭಾರತದಲ್ಲಿ ಭಯೋತ್ಪಾದನೆ ಪ್ರಚೋದಿಸಿ ಶಾಂತಿ ಕದಡಲು ಸಂಚು ರೂಪಿಸುತ್ತಿದ್ದಾರೆ. ನಾಸೀರ್ ಮೂಲಕ ಜುನೇದ್ ಹಾಗೂ ಸಹಚರರಿಗೆ ಹಣ ನೀಡಿರುವ ವಿದೇಶಿಯರು, 'ತ್ವರಿತವಾಗಿ ಬಾಂಬ್ ಸ್ಫೋಟಿಸಿ' ಎಂಬುದಾಗಿ ಪದೇ ಪದೇ ಸಂದೇಶ ರವಾನಿಸುತ್ತಿದ್ದ ಮಾಹಿತಿಯನ್ನು ಶಂಕಿತರು ಬಾಯ್ಬಿಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಥಳೀಯರಿಂದ ₹ 8 ಲಕ್ಷ ಜಮೆ': 'ಬಾಂಬ್ ಸ್ಫೋಟಿಸಲು ಸಂಚು ರೂಪಿಸಿದ್ದ ಶಂಕಿತರ ಉಗ್ರರ ಖಾತೆಗಳಿಗೆ ಕೆಲ ಸ್ಥಳೀಯರು ₹ 8 ಲಕ್ಷ ಜಮೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಚುನಾವಣಾ ಕಾರ್ಯದಿಂದ ಶಿಕ್ಷಕರಿಗೆ ಮುಕ್ತಿ

ಬೆಂಗಳೂರು: ಮತಗಟ್ಟೆ ಅಧಿಕಾರಿಗಳನ್ನಾಗಿ (ಬಿಎಲ್‌ಒ) ಶಿಕ್ಷಕರನ್ನು ನಿಯೋಜಿಸದಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಚುನಾವಣಾಧಿಕಾರಿಗಳಿಗೆ ಪತ್ರ ಬರೆದಿದೆ.

ಮತದಾರರ ಪಟ್ಟಿ ಪರಿಷ್ಕರಣೆ ಸೇರಿದಂತೆ ಚುನಾವಣೆಯ ವಿವಿಧ ಕಾರ್ಯಗಳಿಗೆ ಶಿಕ್ಷಕರನ್ನು ನಿಯೋಜಿಸಿದರೆ ಬೋಧನೆಗೆ ತೊಂದರೆಯಾಗುತ್ತದೆ. ಇಲಾಖೆ ನಿಗದಿ ಮಾಡುವ ಶೈಕ್ಷಣಿಕ ವೇಳಾಪಟ್ಟಿ ಪ್ರಕಾರ ರಜಾ ದಿನಗಳನ್ನು ಹೊರತುಪಡಿಸಿ 244 ದಿನಗಳನ್ನು ಶಾಲಾ ದಿನಗಳು ಎಂದು ಪರಿಗಣಿಸಲಾಗಿದೆ. ಪರೀಕ್ಷೆ, ಮೌಲ್ಯಮಾಪನ ಕಾರ್ಯಗಳ ಅವಧಿ ಕಳೆದರೆ ಬೋಧನೆಗೆ 180 ದಿನಗಳಷ್ಟೆ ಲಭ್ಯವಾಗುತ್ತವೆ. ವಾಸ್ತವದಲ್ಲಿ ಅಷ್ಟು ದಿನಗಳು ಸಿಗುತ್ತಿಲ್ಲ. ಅವರನ್ನು ಚುನಾವಣಾ ಕಾರ್ಯಗಳಿಗೆ ಬಳಸಿಕೊಂಡರೆ ಮಕ್ಕಳ ಕಲಿಕೆಗೆ ಹಿನ್ನಡೆ ಆಗುತ್ತದೆ ಎಂದು ಆಯುಕ್ತೆ ಬಿ.ಬಿ. ಕಾವೇರಿ ಪತ್ರದಲ್ಲಿ ವಿವರಿಸಿದ್ದಾರೆ.

ಕೆನರಾ ಬ್ಯಾಂಕ್ Canara Bank ಸಿಂಡಿಕೇಟ್ Syndicate (ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, ಮಂಗಳೂರು, ಬಲ್ಮಠ ರಸ್ತೆ, ಮಂಗಳೂರು– 575001. ಫೋನ್: 0824–2863322, ಇ–ಮೇಲ್: pecomlr@canarabank.com

ಟೆಂಡರ್ ಪ್ರಸ್ತಾವಣೆಗಾಗಿ ಸೂಚನೆ

ಮಂಗಳೂರಿನ ಕೆನರಾ ಬ್ಯಾಂಕ್ ಆಸ್ತಿಯಲ್ಲಿ ಎಎಎ ಮೆಘಾ ಕರೆನ್ಸಿ ಚೆಸ್ಟ್ ಮತ್ತು ಬ್ಯಾಂಕ್ ಶಾಖೆಯ ನಿರ್ಮಾಣಕ್ಕಾಗಿ ವಾಸ್ತುಶಿಲ್ಪಿಯ ಆಯ್ಕೆ

ಮಂಗಳೂರಿನ ಮಣ್ಣಗುಡ್ಡ– 575003, ಕೆನರಾ ಬ್ಯಾಂಕ್ ಆಸ್ತಿಯಲ್ಲಿ ಎಎಎ ಮೆಘಾ ಕರೆನ್ಸಿ ಚೆಸ್ಟ್ ಮತ್ತು ಬ್ಯಾಂಕ್ ಶಾಖೆಯ ನಿರ್ಮಾಣಕ್ಕಾಗಿ ವಾಸ್ತುಶಿಲ್ಪಿಯ ಸೇವೆಗಳನ್ನು ತೊಡಗಿಸಿಕೊಳ್ಳಲು ಪ್ರಸ್ತಾವನೆ.

ಟೆಂಡರ್ ಫಾರ್ಮ್‌ನ್ನು ನಮ್ಮ ಬ್ಯಾಂಕಿನ ವೆಬ್‌ಸೈಟ್ www.canarabank.com ಮತ್ತು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ www.gerpegov.com/CANARABANK. ಮಾನ್ಯತೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **01.09.2023 ಸಂಜೆ 3.00 ಗಂಟೆ**. ಮುಂದಿನ ಸಂವಹನ, ತಿದ್ದುಪಡಿ ಮತ್ತು ಬದಲಾವಣೆಗಳಿದ್ದಲ್ಲಿ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ನೀಡಲಾಗುವುದು.

ಸ್ಥಳ: ಮಂಗಳೂರು, ದಿನಾಂಕ: 28.07.2023 ಸಹಿ/– ಸಹಾಯಕ ಮಹಾಪ್ರಬಂಧಕರು, ವೃತ್ತ ಕಚೇರಿ, ಮಂಗಳೂರು

ಕೆನರಾ ಬ್ಯಾಂಕ್ Canara Bank ಸಿಂಡಿಕೇಟ್ Syndicate (ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, ಮಂಗಳೂರು, ಬಲ್ಮಠ ರಸ್ತೆ, ಮಂಗಳೂರು– 575001. ಫೋನ್: 0824–2863322, ಇ–ಮೇಲ್: pecomlr@canarabank.com

ಟೆಂಡರ್ ಪ್ರಸ್ತಾವಣೆಗಾಗಿ ಸೂಚನೆ

ಹಾಸನ ಕೆನರಾ ಬ್ಯಾಂಕ್ ಆಸ್ತಿಯಲ್ಲಿ ಬಹು ಅಂತಸ್ತಿನ ಬ್ಯಾಂಕ್ ಕಟ್ಟಡದ ನಿರ್ಮಾಣಕ್ಕಾಗಿ ವಾಸ್ತುಶಿಲ್ಪಿಯ ಆಯ್ಕೆ

ಕರ್ನಾಟಕ–573201, ಹಾಸನ ನಗರದ ಕೆನರಾ ಬ್ಯಾಂಕ್ ಆಸ್ತಿಯಲ್ಲಿ ಬಹು ಅಂತಸ್ತಿನ ಬ್ಯಾಂಕ್ ಕಟ್ಟಡದ ನಿರ್ಮಾಣಕ್ಕಾಗಿ ವಾಸ್ತುಶಿಲ್ಪಿಯ ಸೇವೆಗಳನ್ನು ತೊಡಗಿಸಿಕೊಳ್ಳಲು ಪ್ರಸ್ತಾವನೆ.

ಟೆಂಡರ್ ಫಾರ್ಮ್‌ನ್ನು ನಮ್ಮ ಬ್ಯಾಂಕಿನ ವೆಬ್‌ಸೈಟ್ www.canarabank.com ಮತ್ತು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ www.gerpegov.com/CANARABANK. ಮಾನ್ಯತೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **05.09.2023 ಸಂಜೆ 3.00 ಗಂಟೆ**. ಮುಂದಿನ ಸಂವಹನ, ತಿದ್ದುಪಡಿ ಮತ್ತು ಬದಲಾವಣೆಗಳಿದ್ದಲ್ಲಿ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ನೀಡಲಾಗುವುದು.

ಸ್ಥಳ: ಮಂಗಳೂರು, ದಿನಾಂಕ: 28.07.2023 ಸಹಿ/– ಸಹಾಯಕ ಮಹಾಪ್ರಬಂಧಕರು, ವೃತ್ತ ಕಚೇರಿ, ಮಂಗಳೂರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570006.

ದೂರವಾಣಿ:0821–2460495 ಇಮೇಲ್: eerdwsd.mys@gmail.com

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರೊಕ್ಯೂರ್‌ಮೆಂಟ್/02/2023–24 ದಿನಾಂಕ: 24.07.2023

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಸರ್ಕಾರಿ ಕೆಲಸಗಳಿಗೆ ವಾಹನವನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ಸ್ವಂತ ವಾಹನಗಳನ್ನು ಹೊಂದಿರುವ ಸರಬರಾಜುದಾರರು / ಟ್ರಾವಲ್ ಏಜೆನ್ಸಿಗಳು ರವರಿಂದ ಮೈಸೂರು ವಿಭಾಗ ಹಾಗೂ ವಿಭಾಗ ವ್ಯಾಪ್ತಿಯ 8 ಕಚೇರಿಗಳಿಗೆ (ಟೆಂಡರ್‌ಗಿಟ್ಟ ಮೊತ್ತ ರೂ. ರೂ.34.20ಲಕ್ಷ) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ **ದಿನಾಂಕ: 26.07.2023 ರಿಂದ 09.08.2023 ಸಂಜೆ 4.00 ಘಂಟೆಯವರೆಗೆ** ಸಾಧ್ಯವಾದರೆ ಟೆಂಡರ್ ತೆರೆಯುವ **ದಿನಾಂಕ: 10.08.2023 ರ ಸಂಜೆ 5.00 ಘಂಟೆಯ ನಂತರ.**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. **https://kppp.karnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (**ಫೋನ್ ನಂ.0821–2460495**)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು

DIPR/MYS/KAVITA/147/2023-24

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಹೆಚ್ಚುವರಿ ಆಯುಕ್ತರ ಕಛೇರಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಂಖ್ಯೆ:ಮೈನಪಾ/ಹೆ.ಆ.ಕ/ಟೆಂ.ಪ್ರ/ಹೊ.ಯಂ./5/2022–23 ದಿನಾಂಕ: 24.07.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ಶೇ.24.10 ಶೇ.7.25ರ ಎಸ್.ಎಫ್.ಸಿ ಹಾಗೂ ಪಾಲಿಕೆ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಿವರ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	(ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ
1.	ಶೇ. 24.10 ಹಾಗೂ ಶೇ. 7.25ರ ಅನುದಾನದಡಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ / ಪಂಗಡ ಮತ್ತು ಇತರೆ ಬಡ ಜನರಿಗೆ ಅನುಕೂಲವಾಗಲು ಹೊಲಿಗೆ ಯಂತ್ರಗಳನ್ನು ಫಲಾನುಭವಿಗಳಿಗೆ ಖರೀದಿಸಿ ನೀಡುವುದು.	DMA/2023-24/IND0227	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಿಗ್ಗೆ 11.00 ಗಂಟೆಗೆ
2.		DMA/2023-24/IND0228	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಿಗ್ಗೆ 11.00 ಗಂಟೆಗೆ
3.		DMA/2023-24/IND0229	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಿಗ್ಗೆ 11.00 ಗಂಟೆಗೆ
4.		DMA/2023-24/IND0230	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಿಗ್ಗೆ 11.00 ಗಂಟೆಗೆ
5.		DMA/2023-24/IND0231	1	24.07.2023	02.08.2023 ಸಂಜೆ 5:00 ಗಂಟೆಗೆ	04.08.2023 ಬೆಳಿಗ್ಗೆ 11.00 ಗಂಟೆಗೆ

ಇ–ಪೋರ್ಟಲ್ ಮುಖಾಂತರ ದ್ವಿಲಕೋಟೆ ಡಾಕ್ಯುಮೆಂಟ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ (**https://kppp.karnataka.gov.in**) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಮೇಲ್ಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ. ಟೆಂಡರ್ ಮಾನ್ಯ ಸಮ್ಮತ ಮಾನ್ಯತೆ ಅವಧಿಗಿಂತ (Validity period) 90 ದಿನಗಳ ನಂತರದ ಅವಧಿವರೆಗೆ ಮಾನ್ಯತೆ ಇರತಕ್ಕದ್ದು. ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ತಮ್ಮ ಗುತ್ತಿಗೆ ರಹದಾರಿ ಪ್ರತಿ, ತಮ್ಮ ಅಂಚೆ ವಿಳಾಸ, ಮೊಬೈಲ್ ದೂರವಾಣಿ ಸಂಖ್ಯೆಯನ್ನು ಈ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆ ಹೆಚ್ಚುವರಿ ಆಯುಕ್ತರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:**– ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಹೆಚ್ಚುವರಿ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/148/23-24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 03 ದಿನಾಂಕ: 27/07/2023

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು/ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in. ಮೂಲಕ (ಪೂರ್ವ ಅರ್ಹತೆ ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ–ಪೋರ್ಟಲ್ ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ@17.00 ಗಂಟೆ
KSRTC /2023-24/SE0242	ಕೆ.ಎಸ್.ಆರ್.ಟಿ.ಸಿಯ ವಿವಿಧ ವಿಭಾಗಗಳಿಗೆ ತಾಂತ್ರಿಕ ಸಹಾಯಕರನ್ನು ಒದಗಿಸುವ ಏಜೆನ್ಸಿಯನ್ನು ತೊಡಗಿಸಿಕೊಳ್ಳುವುದು.	13.72	28/08/2023
KSRTC/2023-24/IND0028	ಅಟೋಮೋಟಿವ್ ಗ್ರೀಸ್‌ಗಳ ಖರೀದಿ	6.50	28/08/2023
KSRTC/2023-24/IND0029	ಹೈಡ್ರಾಲಿಕ್ ಜ್ಯಾಕ್ಸ್ ಟಾಮಿ ಬಾರ್‌ನೊಂದಿಗೆ ಖರೀದಿ	20.00	28/08/2023
KSRTC/2023-24/IND0030	ನ್ಯೂಮ್ಯಾಟಿಕ್ ಡೋರ್ ಅಸೆಂಬ್ಲಿಗಳ ಖರೀದಿ	0.30	28/08/2023
KSRTC/2023-24/IND0031	ಬ್ರೇಕ್ ಲೈನಿಂಗ್‌ಗಳು ಮತ್ತು ಕ್ಲಚ್ ಫೇಸಿಂಗ್ ರಿವೆಟ್‌ಗಳೊಂದಿಗೆ (Asbestos free)	20.00	28/08/2023
KSRTC/2023-24/IND0032	ಇ.ಟಿ.ಎಂ ರೋಲ್‌ಗಳಿಗಾಗಿ ಕೊರೊಗೇಟೆಡ್ ಭಾಕ್ಸ್ ಮತ್ತು ಪ್ಲಾಸ್ಟಿಕ್ ಬಾಕ್ಸಸ್	0.40	28/08/2023

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ:–ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in. ಅಥವಾ ದೂರವಾಣಿ ಸಂಖ್ಯೆ: 080–22230960/22234115 ಕರೆಮಾಡಿ / Support@eprochelpdesk.com, ಇ–ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು (ಟೆಂಡರ್ ಕರೆಯುವ ಪ್ರಾಧಿಕಾರಿ)

ವಾ.ಸಾ.ಸಂ.ಇ/ವಾಪ್ರ/692/ಆಕಾರ್/2023–24

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)

ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.

ದೂರವಾಣಿ: +91–80–22977400/500/600 ಟೆಲಿ–ಫ್ಯಾಕ್ಸ್:080–22977278

ಇ–ಮೇಲ್: director@jayadevacardiology.com | website: www.jayadevacardiology.com

No.: SJICR/TS/22/2023-24 Date: 26-07-2023

ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್) ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಉಪಕರಣಗಳ ಸರಬರಾಜಿಗಾಗಿ ಕರ್ನಾಟಕ ಸರ್ಕಾರದ ಕೆಪಿಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ಇಂಡೆಂಟ್ ಸಂಖ್ಯೆ	ಕಾಮಗಾರಿಗಳ ವಿವರ
1	SJICR/2023-24/OW/Work_Indent 1	ಕಲಬುರ್ಗಿಯಲ್ಲಿನ ಹುಮ್ನಾಬಾದ್ ರಸ್ತೆಯಲ್ಲಿರುವ 350 ಹಾಸಿಗೆಗಳ ಎಸ್‌ಜೆಐಸಿಆರ್‌ಗೆ 15 KL ಸಾಮರ್ಥ್ಯದ HSD ಟ್ಯಾಂಕ್–02 ಸಂಖ್ಯೆಗಳು ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು.
2	SJICR/2023-24/OW/Work_Indent 2	ಕಲಬುರ್ಗಿಯಲ್ಲಿನ ಹುಮ್ನಾಬಾದ್ ರಸ್ತೆಯಲ್ಲಿರುವ 350 ಹಾಸಿಗೆಗಳ ಎಸ್‌ಜೆಐಸಿಆರ್‌ಗೆ 1.50 ಟನ್/ಗಂಟೆ ಸಾಮರ್ಥ್ಯದ ತೈಲದಲ್ಲಿ ಉರಿಯುವ ಬಾಯ್ಲರ್ 02 ಸಂಖ್ಯೆಗಳು ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು.
3	SJICR/2023-24/OW/Work_Indent 3	ಕಲಬುರ್ಗಿಯಲ್ಲಿನ ಹುಮ್ನಾಬಾದ್ ರಸ್ತೆಯಲ್ಲಿರುವ 350 ಹಾಸಿಗೆಗಳ ಎಸ್‌ಜೆಐಸಿಆರ್‌ಗೆ ಪೂರಕ ಕೆಲಸಗಳೊಂದಿಗೆ ಲಾಂಡ್ರಿ ಉಪಕರಣಗಳ ಸರಬರಾಜು, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು.
4	SJICR/2023-24/OW/Work_Indent 4	ಕಲಬುರ್ಗಿಯಲ್ಲಿನ ಹುಮ್ನಾಬಾದ್ ರಸ್ತೆಯಲ್ಲಿರುವ 350 ಹಾಸಿಗೆಗಳ ಎಸ್‌ಜೆಐಸಿಆರ್‌ನಲ್ಲಿರುವ ಫುಡ್ ಕೋರ್ಟ್‌ಗೆ ಅಡುಗೆ ಸಲಕರಣೆಗಳ ಸರಬರಾಜು, ಅಳವಡಿಸುವುದು.
5	SJICR/2023-24/OW/Work_Indent 5	ಕಲಬುರ್ಗಿಯಲ್ಲಿನ ಹುಮ್ನಾಬಾದ್ ರಸ್ತೆಯಲ್ಲಿರುವ 350 ಹಾಸಿಗೆಗಳ ಎಸ್‌ಜೆಐಸಿಆರ್‌ಗೆ 3ಮೀ x 3 ಮೀ ಚದರ ಆಟೋ ಇಂಟೆಲಿಜೆಂಟ್ ಸೋಲಾರ್ ಟವರ್ ಗಡಿಯಾರಗಳ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು.
6	SJICR/2023-24/OW/Work_Indent 6	ಕಲಬುರ್ಗಿಯಲ್ಲಿನ ಹುಮ್ನಾಬಾದ್ ರಸ್ತೆಯಲ್ಲಿರುವ 350 ಹಾಸಿಗೆಗಳ ಎಸ್‌ಜೆಐಸಿಆರ್‌ಗೆ ನರ್ಸ್ ಕರೆ ವ್ಯವಸ್ಥೆಯ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು.
7	SJICR/2023-24/OW/Work_Indent 7	ಕಲಬುರ್ಗಿಯಲ್ಲಿನ ಹುಮ್ನಾಬಾದ್ ರಸ್ತೆಯಲ್ಲಿರುವ 350 ಹಾಸಿಗೆಗಳ ಎಸ್‌ಜೆಐಸಿಆರ್‌ಗೆ ಮಾಡ್ಯುಲರ್ ಲ್ಯಾಬೊರೇಟರಿ ಒದಗಿಸುವುದು ಮತ್ತು ಸ್ಥಾಪಿಸುವುದು.
8	SJICR/2023-24/OW/Work_Indent 8	ಕಲಬುರ್ಗಿಯಲ್ಲಿನ ಹುಮ್ನಾಬಾದ್ ರಸ್ತೆಯಲ್ಲಿರುವ 350 ಹಾಸಿಗೆಗಳ ಎಸ್‌ಜೆಐಸಿಆರ್‌ಗೆ ಮಾಡ್ಯುಲರ್ ಆಪರೇಷನ್ ಥಿಯೇಟರ್–02 ಸಂಖ್ಯೆಗಳಿಗೆ ಗೋಡೆಗಳು ಮತ್ತು ಸೀಲಿಂಗ್, ವಾಹಕ ವಿನೈಲ್ ಫ್ಲೋರಿಂಗ್ ಲ್ಯಾಮಿನಾರ್ ಗಾಳಿಯ ಹರಿವು ಮತ್ತು ಇತರ ಕೆಲಸಗಳಿಗೆ ಸ್ಟೇನ್‌ಲೆಸ್ ಸ್ಟೀಲ್ ಪ್ಯಾನೆಲಿಂಗ್ ಅನ್ನು ಒದಗಿಸುವುದು ಮತ್ತು ಸ್ಥಾಪಿಸುವುದು.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ : 01–08–2023 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **30–08–2023ರ ಸಂಜೆ 4.00 ಗಂಟೆಯವರೆಗೆ.**
2. ಪ್ರಿ–ಬಿಡ್ ಮೀಟಿಂಗ್ ದಿನಾಂಕ : **16–08–2023ರ ಬೆಳಿಗ್ಗೆ 11:30 ಗಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **31–08–2023ರ ಸಂಜೆ 4:00 ಗಂಟೆಗೆ.**
4. **ಇ.ಎಂ.ಡಿ.** : ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತೆ.
5. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology.com**ನ್ನು ನೋಡಬಹುದು.
6. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ

ಶಾಖಾ ಕಛೇರಿ,ನಂ.9/1, 2ನೇ ಮಹಡಿ,ಸಾಹುಕಾರ್ ಚನ್ನಯ್ಯ ರಸ್ತೆ, ಶ್ರೀ ಕೃಷ್ಣಧಾಮ ಎದುರು, ಸರಸ್ವತಿಪುರಂ, ಮೈಸೂರು – 570 009.

ದೂರವಾಣಿ : 2344934/23445241/2344531

email: mys.ksfc@karnataka.gov.in

ದಿನಾಂಕ. 17.07.2023ರಂದು ಇ ಪತ್ರಿಕೆಯಲ್ಲಿ ಪ್ರಕಟವಾದ ಆಧಾರ ಸ್ವತ್ತಿನ ಇ–ಹರಾಜು (e-Auction) ಮಾರಾಟ ಪ್ರಕಟಣೆಗೆ ತಿದ್ದುಪಡಿ

ಮೆ: ಎಸ್.ಎಸ್.ಎ. ಎಂಟರ್‌ಪ್ರೈಸಸ್ ಘಟಕದ, **e-auction Id** ಯನ್ನು **KSFC/2023–24/AUCTION7** ಎಂದು ಒದಿಕೊಳ್ಳುವುದು ಮತ್ತು ಈ ಘಟಕದ ಭೂಮಿ ಮತ್ತು ಕಟ್ಟಡದ ನಿಗಧಿಪಡಿಸಿರುವ ಮೀಸಲು ಬೆಲೆಯು **ರೂ 1,45,00,000/–** ಎಂದು ಒದಿಕೊಳ್ಳುವುದು. ಘಟಕಕ್ಕೆ ಸಂಬಂದಿಸಿದ ವಿವರಗಳನ್ನು ಪಡೆಯಲು ಕಡೆಯ **ದಿನಾಂಕ.17.08.2023, 16.00** ಹಾಗೂ ಪ್ರಕಟಣೆಯಲ್ಲಿನ ಎಲ್ಲಾ ಘಟಕಗಳಿಗು ಅನ್ವಹಿಸುವಂತೆ ತಿದ್ದುಪಡಿಯಾಗಿರುವ ದಿನಾಂಕಗಳನ್ನು ಕೆಳಗಿನಂತೆ ಒದಿಕೊಳ್ಳುವುದು :–

* Date and Time to confirm Participation of Interest in Auction is 18.08.2023, 16:00
* Live Bidding Start Date & time is 19.08.2023, 16:00
* Live Bidding End Date & time is 26.08.2023, 16:00

ಮೇಲಿನ ಬದಲಾವಣೆಗಳನ್ನು KPP Portal (Karnataka Public Procurement Portal) ನಲ್ಲಿ ವೀಕ್ಷಿಸಬಹುದು

ದಿನಾಂಕ: 28.07.2023 ಸ್ಥಳ: ಮೈಸೂರು. ಸಹಾಯಕ ಪ್ರಧಾನ ವ್ಯವಸ್ಥಾಪಕರು.

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064

ವೆಬ್‌ಸೈಟ್: www.rwf.indianrailways.gov.in.

ಟೆಂಡರ್ ಪ್ರಕಟಣೆ ಸಂಖ್ಯೆ. ಆರ್‌ಡಬ್ಲ್ಯೂಎಫ್/ಡಬ್ಲ್ಯೂ/23–24/04 ದಿನಾಂಕ: 26/07/2023

ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರವರು ಕೆಳಕಂಡ ಕೆಲಸಕ್ಕೆ ವೆಬ್‌ಸೈಟ್ http://www.ireps.gov.in (Works) ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ. 1. ಟೆಂಡರ್ ಸಂಖ್ಯೆ : ಡಬ್ಲ್ಯೂ.496/ ಆರ್‌ಡಬ್ಲ್ಯೂಎಫ್/ ವೈಎನ್‌ಕೆ/1013. **ವಿವರ :** ಆರ್‌ಡಬ್ಲ್ಯೂಎಫ್‌ನ ಕಾಲೋನಿಗಳೊಂದಿಗೆ ಆಡಳಿತ ಕಟ್ಟಡದಲ್ಲಿ ಒಂದು ವರ್ಷದ ಅವಧಿಗಾಗಿ ಹಾಲಿಯಿರುವ ಸ್ಟ್ರಕ್ಚರ್‌ಗಳಿಗೆ ಹೆಚ್ಚುವರಿ (ಸೇರ್ಪಡೆಗಳು), ಮಾರ್ಪಾಡುಗಳು ಹಾಗೂ ಸುಧಾರಣೆ, ವಿಶೇಷ ದುರಸ್ತಿ ಕಾಮಗಾರಿಗಳು, ಸರಬರಾಜು ಹಾಗೂ ಕಟ್ಟಡ ಸಾಮಗ್ರಿಗಳ ಸಾಗಾಣಿಕೆ ಮತ್ತು ತೋಟಗಾರಿಕೆ ಸಂಬಂಧಿತ ಕಾಮಗಾರಿಗಳು ಇತ್ಯಾದಿ (ವಲಯ ಕಾಲೋನಿ 2023–24). **ಅಂದಾಜು ಮೌಲ್ಯ** : ರೂ.11129571.93. **ಕೊನೆಯ ದಿನಾಂಕ ಹಾಗೂ ಸಮಯ** : 25/08/2023 ರಂದು 11.00 ಗಂಟೆಗೆ. ಟೆಂಡರ್ ಪ್ರಕಟಣೆಯ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್: www.rwf.indianrailways.gov.in ನಲ್ಲಿ ನೋಡಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ|| ಬಿ. ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂರವಾಣಿ: 080–22867172/22866302 ಫ್ಯಾಕ್ಸ್: 080–22863576 /22861665

ಇ–ಮೇಲ್: sedmatech@gmail.com Website: www.municipaladmn.gov.in

ಸಂಖ್ಯೆ: 1002692 DMA ESTI MISC 7 2023 ದಿನಾಂಕ: 27.07.2023

ಟೆಂಡರ್ ಪ್ರಕಟಣೆ

ಪೌರಾಡಳಿತ ನಿರ್ದೇಶನಾಲಯದಲ್ಲಿ 32 ಡಾಟಾ ಎಂಟ್ರಿ ಆಪರೇಟರ್‌ಗಳ, ಒಬ್ಬರು ಎಂ.ಐ.ಎಸ್ ಎಕ್ಸ್‌ಪರ್ಟ್ ಹಾಗು ಒಬ್ಬರು ನೋಡಲ್ ಇಂಜಿನಿಯರ್ ರವರುಗಳ ಸೇವೆಯನ್ನು ಹೊರ ಗುತ್ತಿಗೆ ಆಧಾರದ ಮೇಲೆ ಪಡೆಯುವ ಸೇವಾ ಕೆಲಸಕ್ಕೆ ಟೆಂಡರ್ (INDENT No: DMA/2023-24/SE0389) ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ್ನು LCS ಆಧಾರದ ಮೇಲೆ ಇ–ಪೋರ್ಟಲ್ ಮುಖಾಂತರ ಪ್ರಚುರಪಡಿಸಲಾಗಿದ್ದು, ಇ–ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಅಪ್‌ಲೋಡ್ ಮಾಡಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು https://kppp.karnataka.gov.in ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/– ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು

DIPR/CP/695/Zen/2023-24

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

7ನೇ ಮಹಡಿ, 1ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560001

ದೂರವಾಣಿ ಸಂಖ್ಯೆ:– 080–22353849 ಇ–ಮೇಲ್: desadmkar@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:ಆಸಾಂನಿ/13/ಲೆಕ್ಕ–ವಾಹನ/2023–24 ವಾರ್ಷಿಕ ದರ ಒಪ್ಪಂದದ ಮೂಲಕ ಮಾಸಿಕ ಬಾಡಿಗೆ ಆಧಾರದ ಮೇಲೆ ಹವಾನಿಯಂತ್ರಿತ ವಾಹನವನ್ನು ಒದಗಿಸಲು ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ ವಾರ್ಷಿಕ ದರ ಒಪ್ಪಂದದ ಮೂಲಕ ಮಾಸಿಕ ಬಾಡಿಗೆ ಆಧಾರದ ಮೇಲೆ 07 ಸಂಖ್ಯೆ ಹವಾನಿಯಂತ್ರಿತ ವಾಹನವನ್ನು ಒದಗಿಸಲು ಹೆಸರಾಂತ ಮತ್ತು ನೊಂದಾಯಿತ ಪ್ರಯಾಣ ಏಜೆನ್ಸಿಗಳಿಂದ ಅಥವಾ ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ.ಪಿ ಪೋರ್ಟಲ್ **kppp.karnataka.gov.in** ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ **kppp.karnataka.gov.in** ಇಲ್ಲಿ **ದಿನಾಂಕ: 01.08.2023 ರಂದು ಸಂಜೆ 5.30ರೊಳಗಾಗಿ** ಸಲ್ಲಿಸಬಹುದು.

ಸಹಿ/– ನಿರ್ದೇಶಕರು

DIPR/CP/AAPL/RO690/23-24

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with A++ GRADE

ಜ್ಞಾನಭಾರತಿ, ಬೆಂಗಳೂರು – 560056.

ಸಂಖ್ಯೆ: ಎಸಿಎ–4/ಎಲ್.ಎಲ್.ಎಂ ಪ್ರವೇಶ/2021-22 ದಿನಾಂಕ: 26.07.2023

ಪ್ರವೇಶಾತಿ ಪ್ರಕಟಣೆ

ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ಇವರಿಂದ 2023-24ರ ಶೈಕ್ಷಣಿಕ ಸಾಲಿನ ಎರಡು ವರ್ಷದ ಎಲ್‌ಎಲ್.ಎಮ್. ಸ್ನಾತಕೋತ್ತರ ಪದವಿ ಮೊದಲ ಸೆಮಿಸ್ಟರ್ ಕೋರ್ಸ್‌ನ ಪ್ರವೇಶಾತಿ ಕೋರಿ ಅರ್ಜಿಯನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮೂರು/ಐದು ವರ್ಷದ ಎಲ್.ಎಲ್.ಬಿ. ಪದವಿಯಲ್ಲಿ ಕನಿಷ್ಠ ಶೇ.45 ಅಂಕಗಳೊಂದಿಗೆ (ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ /ಪಂಗಡ / ಪ್ರವರ್ಗ-1 ಮತ್ತು ವಿಕಲ ಚೇತನ ಅರ್ಜಿದಾರರಿಗೆ ಶೇ.5 ರಷ್ಟು ವಿನಾಯಿತಿ. ಪರಿಶಿಷ್ಟ ಜಾತಿ /ಪಂಗಡ ಅಭ್ಯರ್ಥಿಗಳ ಕುಟುಂಬ ವಾರ್ಷಿಕ ಆದಾಯವು ರೂ.8 ಲಕ್ಷಕ್ಕಿಂತ ಮೇಲೆ ಮೀರಿರಬಾರದು) ಯಶಸ್ವಿಯಾಗಿ ಪೂರ್ಣಗೊಳಿಸಿರುವವರು ಮಾತ್ರ ಅರ್ಹರಾಗಿರುತ್ತಾರೆ. ಅರ್ಜಿ ಶುಲ್ಕದ ವಿವರಗಳು ಈ ಕೆಳಕಂಡಂತಿರುತ್ತದೆ:

ಕ್ರ. ಸಂ.	ವಿವರ	ಸಾಮಾನ್ಯ / ಇತರ ಹಿಂದುಳಿದ ವರ್ಗ	ಪ.ಜಾ./ಪ.ಪಂ./ಪ್ರ.ವರ್ಗ-1
1.	ಅರ್ಜಿ ಶುಲ್ಕ	ರೂ. 800/–	ರೂ. 400/–
2.	ತಡವಾಗಿ ಸಲ್ಲಿಸಿದ ಅರ್ಜಿ ದಂಡ ಶುಲ್ಕ	ರೂ. 200/–	ರೂ. 200/–

ಆಸಕ್ತಿಯುಳ್ಳ ಅಭ್ಯರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯ ವೆಬ್‌ಸೈಟ್: **https://bangaloreuniversity.karnataka.gov.in** or **www.ulcbangalore.com**ನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡಿ, ಸಂಬಂಧಪಟ್ಟ ಎಲ್ಲಾ ದಾಖಲೆ ಹಾಗೂ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವ ಮುಖಾಂತರ ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ: **30.07.2023** ರ ಒಳಗಾಗಿ ಹಾಗೂ ದಂಡಶುಲ್ಕ ಸಹಿತ ದಿನಾಂಕ: **02.08.2023**ರ ಒಳಗೆ ಆನ್‌ಲೈನ್‌ನಲ್ಲಿ ಸಲ್ಲಿಸುವುದು. ಆನ್‌ಲೈನ್‌ನಲ್ಲಿ ಅರ್ಜಿಯನ್ನು ಡೌನ್‌ಲೋಡ್ ಮಾಡಿ ಸಂಬಂಧಿಸಿದ ದಾಖಲೆಗಳೊಂದಿಗೆ ಪ್ರಾಂಶುಪಾಲರು ಹಾಗೂ ಮುಖ್ಯಸ್ಥರು, ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು–560 056 ಇವರಿಗೆ ದಿನಾಂಕ: **04.08.2023** ರೊಳಗಾಗಿ ಖುದ್ದಾಗಿ ಅಥವಾ ಅಂಚೆ ಮುಖಾಂತರ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾಲಯದ ಜಾಲತಾಣವನ್ನು ಸಂಪರ್ಕಿಸಿ.

ಸಹಿ/–, ಕುಲಸಚಿವರು

DIPR/CP/RO688/AAPL/2023-24

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001. ಫೋನ್ ಸಂ. 080–22265383 ವೆಬ್‌ಸೈಟ್: www.kiadb.in

ನಂ. ಐಎಡಿಬಿ/ಇಎನ್‌ಜಿಜ/ಇಟಿಎನ್‌ಡಿ–ಇಪಿ–04/134/2023–24 ದಿನಾಂಕ: 27.07.2023

ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳನ್ನು, ತಾಂತ್ರಿಕ ಮಾನವ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಐಟಂ ದರ ಟೆಂಡರ್‌ಗಳನ್ನು ದ್ವಿ ಲಕ್ಕೋಟೆ ಪದ್ಧತಿಯುಡಿಯುಲ್ಲಿ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ರಾಮನಗರ ಜಿಲ್ಲೆ ಮತ್ತು ತಾಲ್ಲೂಕು ಬಿಡದಿ 2ನೇ ಹಂತ, 2ನೇ ಸೆಕ್ಟರ್‌ನಲ್ಲಿರುವ ರಸ್ತೆ ಸಂಖ್ಯೆ 7, 8, 9 & 15 ರಲ್ಲಿ ಬಾಕಿ ಉಳಿದಿರುವ ಡಾಂಬರೀಕರಣ ರಸ್ತೆ ಬದಿ ಚರಂಡಿ ಮತ್ತು ಬಾಕ್ಸ್ ಕಲ್ವರ್ಟ್‌ಗಳ ನಿರ್ಮಾಣ ಮಾಡುವ ಕಾಮಗಾರಿ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11.08.2023 ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯ ಅಭಿಯಂತರರು–1 ಕೆ.ಐ.ಎ.ಡಿ.ಬಿ

ವಾ.ಸಾ.ಸಂ.ಇ/ವಾಪ್ರ/694/ಆಕಾರ್/2023–24

ಮಂಗಳೂರು ಮಹಾನಗರಪಾಲಿಕೆ

DMA/2023-24/WORK INDENT NO.4, 9, 592, 1836 ದಿನಾಂಕ: 26.07.2023

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಗಳನ್ನು **ಸಾಮಾನ್ಯ** ನಿಧಿಯಲ್ಲಿ ನಿರ್ವಹಿಸುವ ಬಗ್ಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 11.08.2023.** ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **kppp.karnataka.gov.in** ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ ಸಂ.	ಕೆಲಸದ ಹೆಸರು	ಅಂದಾಜು ಮೊತ್ತ ರೂಪಾಯಿ
1	ಮ.ನ.ಪಾ. ವ್ಯಾಪ್ತಿಯ ವಿ.ನಂ.20 ತಿರುವೈಲ್ ವಾರ್ಡಿನ ಪೆಟ್ರೋಲ್ ಪಂಪ್ ಎದುರುಗಡೆ ರಸ್ತೆ ಅಭಿವೃದ್ಧಿ ಕಾಮಗಾರಿ. (Indent No.4/Call-2)	8,00,000.00
2	ಮ.ನ.ಪಾ. ವ್ಯಾಪ್ತಿಯ ವಿ.ನಂ.19 ಪಚ್ಚನಾಡಿ ವಾರ್ಡಿನ ಬೊಂದೇಲ್ ವಾಮಂಜೂರು ರಸ್ತೆಯ ಆರ್.ಒ.ಬಿ. ಬಳಿ ಹಾಲಿ ಕಾಂಕ್ರೀಟ್ ರಸ್ತೆಯಿಂದ ಪಚ್ಚನಾಡಿ ಸೇತುವೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. (Indent No.9/Call-3)	5,77,000.00
3	ಮ.ನ.ಪಾ ವ್ಯಾಪ್ತಿಯ ವಿ.ನಂ.23ನೇ ದೇರೆಬೈಲು ಪೂರ್ವ ವಾರ್ಡಿನಲ್ಲಿ ಬರುವ ಕೊಂಚಾಡಿ ರಾಮ ಭಜನಾ ಮಂದಿರದ ಆರ್.ಸಿ.ಸಿ. ಮೇಲ್ಛಾವಣಿ ಕಾಮಗಾರಿ. (Indent No.592/Call-2)	7,00,000.00
4	ಮ.ನ.ಪಾ ವ್ಯಾಪ್ತಿಯ ವಿ.ನಂ.22 ಕದ್ರಿ ಪದವು ವಾರ್ಡಿನ ಪದವಿನಂಗಡಿ ಪಿಂಟೋ ಗಾರ್ಡನ್‌ನಿಂದ ಮುಗ್ರೋಡಿವರೆಗೆ ಹೋಗುವ ರಸ್ತೆಯಲ್ಲಿ ಒಳಚರಂಡಿ ಜಾಲ ವಿಸ್ತರಣೆ ಕಾಮಗಾರಿ. (Indent No.1836)	33,80,000.00

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

DIPR/MNG/KSMCA/276/23-24 dt: 27.07.2023

KARNATAKA STATE BOARD OF AUQAF

[Constituted by the Government of Karnataka under the Waqf Act,1995 (CENTRAL ACT-43 OF 1995)]

"Darul Auqaf" # 6, Cunningham Road, Bengaluru-560 052.

Tel: 080-22264594/22264595 Fax: 080-22255663

Website: www.karwakf.org // e-mail:info@karwakf.org

Tender No. KSBA/RK/05/2023-24 Date : 18.07.2023

Brief Tender Notification

Sub : E-TENDER FOR SUPPLYING OF STATIONERY AND OTHER ARTICLES TO KARNATAKA STATE BOARD OF AUQAF:

1.	Date of Publication of Tender	28.07.2023
2.	EMD Amount	Rs. 25.000/-(Twenty Five Thousand Only) through Demand Draft shall be drawn in favor of "CEO,Karnataka State Board of Auqaf". For schedule (A,B & C) each
3.	Last date of uploading the tender with details filled and attach the documents required along with E-payment receipt.	**11.08.2023 Before 05:00 p.m.**
4.	Bid Opening & evaluation Date & Time.	**14.08.2023 Before 3:00 p.m.**
5.	E-mail Address.	**karwakf@karnataka.gov.in**
6.	Time and Date of opening of Tenders Financial Bid (Cover- II)	Will be Intimated
7.	For any further details Contact:	080 22264594 / 8197693232

Sd/- Chief Executive Officer Karnataka State Board of Auqaf

DIPR/CP/AAPL/RO689/23-24

ಕರ್ನಾಟಕ ಸರಕಾರ

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ (ಸ್ವಾಯತ್ತ ಸಂಸ್ಥೆ)

ಡಾ. ಬಿ. ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ–590 001,

E-Mail: belgaum.bims@gmail.com

ಸಂಖ್ಯೆ: ಬಿಮ್ಸ್/ಜಿಎನ್‌ಎಲ್/ಟೆಂಡರ್/11/2023–24 ದಿನಾಂಕ:28/07/2023

TENDER NOTIFICATION (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಗೆ ಈ ಕೆಳಗಿನ ಟೆಂಡರ್ ಸೇವೆಗಳಿಗಾಗಿ ಕೆ.ಟಿ.ಪಿ.ಪಿ ನಿಯಮಾವಳಿಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

Sl. No	Tender Notification	Description of Tender	Tender Value (Approximate) (Rs. In lakhs)
1	No:BIMS/GNL/Tender/Canteen/CR-35/2019-20 Date: 28 /07/2023	Tender for Providing of Canteen Services in premises of BIMS Hospital Belagavi	30 Lakhs
2	No:BIMS/GNL/Tender/Canteen/11/2023-24 Date: 28/07/2023	Tender for Providing of Canteen Services in premises of BIMS College Belagavi	9 Lakhs
3	No:BIMS/STP&ETP/GNL/Tender/CR-17/2023-24 Date: 28 /07/2023	Tender for operation and maintenance services of STP (Sewage Treatment Plant) and ETP (Effluent Treatment Plant)	60 Lakhs
4	No:BIMS/BIO-MED-Tender/CR-17/2023-24 Date: 28/07/2023	Tender for Biomedical Waste Treatment Service along with supply of Bio-degradable plastic bags.	55 Lakhs
5	No: BIMS/MEW/Veh-Condemn/Cr-37/2023-24 Date: 28/07/2023	Auction Of 04 Condemned Vehicles 1.Omani Bus 2.Tempo Traveler Ambulance (2) 3. Tata Mobile	7 Lakhs

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟನಲ್ಲಿ https://kppp.karnataka. gov.in/ ಮೂಲಕ ಮಾಹಿತಿ ಪಡೆಯಬಹುದು ಅಥವಾ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರನ್ನು ಕಛೇರಿ ಕೆಲಸದ ವೇಳೆ ಯಲ್ಲಿ ಸಂಪರ್ಕಿಸಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ,ಬೆಳಗಾವಿ.

DIPR/BGM/RO-NO-213/KSMCA/2023-24

ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಎಲ್ಲ 26 ಗೇಟ್‌ಗಳು ಹಾಗೂ ವಿದ್ಯುತ್ ಉತ್ಪಾದನಾ ಘಟಕದ ಮೂಲಕ 1.75 ಲಕ್ಷ ಕ್ಯುಸೆಕ್ ನೀರನ್ನು ಗುರುವಾರ ನದಿ ತಳಪಾತ್ರಕ್ಕೆ ಹರಿಸಲಾಗಿದೆ —ಪ್ರಜಾವಾಣಿ ಚಿತ್ರ: ಚಂದ್ರಶೇಖರ ಕೋಳೇಕರ



ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಭರಚುಕ್ಕಿ ಜಲಪಾತ ಧುಮ್ಮಿಕ್ಕಲು ಆರಂಭಿಸಿದೆ —ಪ್ರಜಾವಾಣಿ ಚಿತ್ರ/ ಅವಿನ್ ಪ್ರಕಾಶ್ ವಿ.

ಮಳೆ ಮಂದ; ನೆರೆ ಆತಂಕ ದೂರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ಮಲೆನಾಡು ಮತ್ತು ದಕ್ಷಿಣ ಒಳನಾಡಿನಲ್ಲಿ ಗುರುವಾರ ಮಳೆ ಪ್ರಮಾಣ ಕಡಿಮೆಯಾಗಿದ್ದರೆ, ಕಲ್ಯಾಣ ಕರ್ನಾಟಕ ಭಾಗದ ಹಲವೆಡೆ ಬಿರುಸಿನ ಮಳೆಯಾಗಿದೆ. ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾಗಿರುವುದರಿಂದ ಕೃಷ್ಣಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ.

ಮಳೆ ಸಂಬಂಧಿ ಅವಘಡಕ್ಕೆ ರಾಜ್ಯದಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಬೆಳಗಾವಿ ಜಿಲ್ಲೆ ಅಥಣಿ ಪಟ್ಟಣದಲ್ಲಿ ಮನೆಯ ಗೋಡೆ ಕುಸಿದು ತಾಸೆ ಗಲ್ಲಿಯ ನಿವಾಸಿ ಕಾಶಿನಾಥ ಅಪ್ಪಾಸಾಬ್ ಸುತಾರ (23) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಕೆಲ ದಿನಗಳಿಂದ ಉಕ್ಕಿ ಹರಿಯುತ್ತಿದ್ದ ಅಘನಾಶಿನಿ, ಕಾಳಿ, ಗಂಗಾವಳಿ ನದಿಗಳಲ್ಲಿ ನೀರಿನ ಮಟ್ಟ ಇಳಿಕೆಯಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲೂ ಮಳೆ ಕಡಿಮೆ ಆಗಿರುವ ಕಾರಣ ಕಾವೇರಿ ನದಿ ನೀರಿನ ಮಟ್ಟ ಇಳಿಕೆಯಾಗಿದೆ. ಪ್ರವಾಹ ಬೀತಿ ಎದುರಿಸುತ್ತಿದ್ದ ಹಲವು ಗ್ರಾಮಗಳ ಜನರು ನಿಟ್ಟುಸಿರು ಬಿಟ್ಟಿದ್ದಾರೆ.

ಆಲಮಟ್ಟಿಯಲ್ಲಿ ಹೆಚ್ಚಿದ ಒಳಹರಿವು: ಮಹಾರಾಷ್ಟ್ರದ ಕೃಷ್ಣಾ ನದಿ ಪಾತ್ರದಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿದೆ. ಗುರುವಾರ ಸಂಜೆಯಿಂದ 1.75 ಲಕ್ಷ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗಿದ್ದು ಅಣೆಕಟ್ಟೆಯ ಕೆಳಭಾಗದ ಬಾಧಿತ ಪ್ರದೇಶದಲ್ಲಿ ವಾಸಿಸುವ ಸಾರ್ವಜನಿಕರಿಗೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಲಾಗಿದೆ.

ಕೃಷ್ಣಾ ಹಾಗೂ ಅದರ ಉಪನದಿಗಳಾದ ವೇದಗಂಗಾ, ದೂಧ್‌ಗಂಗಾ ಉಕ್ಕಿ ಹರಿಯುತ್ತಿದ್ದು, ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ 30 ಸೇತುವೆಗಳು ನೀರಿನಲ್ಲಿ ಮುಳುಗಿವೆ. ಮಳೆಯಿಂದ ಬೀದರ್ ಜಿಲ್ಲೆಯಲ್ಲಿ 30, ವಿಜಯನಗರ ಜಿಲ್ಲೆಯಲ್ಲಿ 27, ಬಳ್ಳಾರಿ ಜಿಲ್ಲೆಯಲ್ಲಿ 4, ರಾಯಚೂರು ಜಿಲ್ಲೆಯಲ್ಲಿ 3 ಮನೆಗಳಿಗೆ ಹಾನಿಯಾಗಿದೆ. ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 1.21 ಲಕ್ಷ ಕ್ಯುಸೆಕ್‌ಗೆ ಹೆಚ್ಚಳವಾಗಿದೆ.

ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ನಾರಾಯಣಪುರ ಬಸವಸಾಗರ ಜಲಾಶಯದಿಂದ ಗುರುವಾರ ಕೃಷ್ಣಾ ನದಿಗೆ 1.19 ಲಕ್ಷ ಕ್ಯುಸೆಕ್‌ಗೂ ಹೆಚ್ಚು ನೀರು ಹರಿಬಿಡಲಾಯಿತು. ಈ ಜಲಾಶಯದಲ್ಲಿ 490.64 ಮೀಟರ್ ಮಟ್ಟವನ್ನು ಕಾಯ್ದುಕೊಂಡು, ಹೆಚ್ಚುವರಿ ನೀರನ್ನು ನದಿಗೆ ಹರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಜುಲೈ 19ರಿಂದ 27ರವರೆಗೆ 358 ಮನೆಗಳು ಕುಸಿದಿವೆ.

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಅಪಾಯಕಾರಿ ಮಟ್ಟದಲ್ಲಿ ಹರಿಯುತ್ತಿದ್ದ ಕಾವೇರಿ ನದಿ ನೀರಿನ ಮಟ್ಟ ಸಹಜ ಸ್ಥಿತಿಗೆ ಬಂದಿದೆ. ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣವೂ ಕಡಿಮೆಯಾಗಿದೆ. ಸದ್ಯ, 9,326 ಕ್ಯುಸೆಕ್ ಒಳಹರಿವು ಇದ್ದು, 5 ಸಾವಿರ ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ.

ಬೆಳೆಗಳಿಗೆ ಆಪತ್ತು: ಕಲಬುರಗಿ ಜಿಲ್ಲೆಯ ಹಲವೆಡೆ ಬುಧವಾರ ತಡರಾತ್ರಿ ಶುರುವಾದ ಮಳೆ ಗುರುವಾರ ಮಧ್ಯಾಹ್ನ 1 ಗಂಟೆವರೆಗೂ ಸುರಿಯಿತು. ಸೇಡಂ ತಾಲ್ಲೂಕಿನ ಮಳಖೇಡ ಸೇತುವೆ ಮೇಲೆ ಕಾಗಿಣಾ ನದಿ ನೀರು ಹರಿಯುತ್ತಿದ್ದು, ವಾಹನ ಸಂಚಾರ ಸ್ಥಗಿತವಾಗಿದೆ. ಬೆನಕನಹಳ್ಳಿ ಗ್ರಾಮದ ಮನೆಗಳಿಗೆ ನಾಲೆಯ ನೀರು ನುಗ್ಗಿದೆ. ಜಿಲ್ಲೆಯಲ್ಲಿ ಇದುವರೆಗೆ 283 ಮನೆಗಳಿಗೆ ಹಾನಿಯಾಗಿದೆ. ಸತತ ಮಳೆಗೆ ಜಮೀನಿನಲ್ಲಿ ತೇವಾಂಶ ಹೆಚ್ಚಾಗಿ ತೊಗರಿ, ಸೋಯಾ, ಹತ್ತಿ, ಹೆಸರು ಸೇರಿ ಇತರೆ ಬೆಳೆಗಳ ಬೇರುಗಳು ಕೊಳೆಯುತ್ತಿವೆ. ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಕಾಫಿ, ಕಾಳುಮೆಣಸಿಗೆ ಕೊಳೆ ರೋಗದ ಭೀತಿ ಎದುರಾಗಿದೆ.

ಮೆಟ್ಟೂರು: ಒಳಹರಿವು ಹೆಚ್ಚಳ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಕಬಿನಿ, ಕೆಆರ್‌ಎಸ್ ಜಲಾಶಯಗಳಿಂದ ಹೆಚ್ಚಿನ ನೀರನ್ನು ಹೊರಕ್ಕೆ ಬಿಡುತ್ತಿರುವುದರಿಂದ ತಮಿಳುನಾಡಿನ ಮೆಟ್ಟೂರು ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚಾಗಿದೆ.

ಬುಧವಾರದಿಂದ ಕಾವೇರಿ ನೀರು ಮೆಟ್ಟೂರು ತಲುಪಲು ಆರಂಭಿಸಿದೆ. ಸಂಜೆ ಜಲಾಶಯದ ಒಳ ಹರಿವು 2,000 ಕ್ಯುಸೆಕ್‌ಗಳಷ್ಟಿತ್ತು. ಗುರುವಾರ ಬೆಳಿಗ್ಗೆ ಎಂಟು ಗಂಟೆಗೆ 3,343 ಕ್ಯುಸೆಕ್‌ಗೆ ಏರಿತ್ತು. ಸಂಜೆ 10 ಸಾವಿರ ಕ್ಯುಸೆಕ್ ತಲುಪಿದೆ ಎಂದು ಮೂಲಗಳು ತಿಳಿಸಿವೆ.

ಸದ್ಯ ಮೆಟ್ಟೂರು ಜಲಾಶಯದ ನೀರಿನ ಮಟ್ಟ 64.870 ಅಡಿಗಳಷ್ಟಿದ್ದು, ಕೃಷಿ ಉದ್ದೇಶಕ್ಕೆ 12 ಸಾವಿರ ಕ್ಯುಸೆಕ್‌ಗಳಷ್ಟು ನೀರನ್ನು ಹೊರ ಬಿಡಲಾಗುತ್ತಿದೆ.

ಆಸ್ಪತ್ರೆಗೆ ಸೇರಿಸಲು ಪರದಾಟ

ಕಾರವಾರ: ಜೊಯಿಡಾ ತಾಲ್ಲೂಕಿನ ಕೆಲೋಲಿ ಗ್ರಾಮದಲ್ಲಿ ಹೃದಯಾಘಾತಕ್ಕೆ ಒಳಗಾಗಿದ್ದ ಮಾಬಳು ನಾರಾಯಣ ಗಾವಡಾ (46) ಎಂಬುವವರನ್ನು ಆಸ್ಪತ್ರೆಗೆ ಸೇರಿಸಲು ಗುರುವಾರ ಪರದಾಡಿದರು. ಕಾನೇರಿ ನದಿಯ ಪ್ರವಾಹದಿಂದ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ನದಿ ನೀರಿನಲ್ಲಿ ಮುಳುಗಡೆಯಾಗಿದ್ದರಿಂದ ಅವರನ್ನು ಆಸ್ಪತ್ರೆಗೆ ಸಾಗಿಸಲು ಅಡ್ಡಿಯಾಗಿತ್ತು. ವಾಟರ್ ರ‍್ಯಾಫ್ಟಿಂಗ್ ಬೋಟ್ ತಂದು ಅದರಲ್ಲಿ ಅವರನ್ನು ನದಿ ದಾಟಿಸಿ ಬಳಿಕ ಜೊಯಿಡಾದ ಆಸ್ಪತ್ರೆಗೆ ದಾಖಲಿಸಲಾಯಿತು.

ಕಾತೇಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಕೆಲೋಲಿ ಗ್ರಾಮ ಕಾಳಿನದಿಯ ಉಪನದಿ ಕಾನೇರಿ ಉಕ್ಕಿ ಹರಿಯುತ್ತಿರುವುದರಿಂದ ಕೆಲವು ದಿನಗಳಿಂದ ಹೊರಜಗತ್ತಿನ ಸಂಪರ್ಕ ಕಡಿದುಕೊಂಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	109.60	37,577	3,071
ಹಾರಂಗಿ	2,859	2,853.82	9,326	5,000
ಕಬಿನಿ	2284.00	2,282.46	21,300	21,300
ಹೇಮಾವತಿ	2,922	2,910.75	15,468	200
ಲಿಂಗನಮಕ್ಕಿ	1,819	1,784.40	42,990	00
ಸೂಪಾ (ಮೀ)	564	542.45	44,573	00
ಮಾಣಿ	595	579.72	5,066	00
ತುಂಗಭದ್ರಾ	1,633	1,615.56	1,13,981	107
ಮಲಪ್ರಭಾ	2079.5	2,060.80	16,930	194
ಘಟಪ್ರಭಾ	2175	2,143.75	30,526	110
ಭದ್ರಾ	186	158	28,296	183
ಆಲಮಟ್ಟಿ (ಮೀ)	519.6	517.37	1,65,833	1,75,000
ನಾರಾಯಣಪುರ (ಮೀ)	492.25	490.67	1,53,000	1,18,980

* ನೆಲಮಟ್ಟದಿಂದ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮಗು ಸಾವು: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಕೋರ (ತುಮಕೂರು): ಸಂಪ್ರದಾಯದ ಹೆಸರಲ್ಲಿ ಹೆರಿಗೆ ನಂತರ ಬಾಣಂತಿ ಮತ್ತು ನವಜಾತ ಶಿಶುವನ್ನು ಊರಾಚೆಯ ಗುಡಿಸಲಲ್ಲಿ ಇಟ್ಟಿದ್ದ ಆರೋಪದ ಮೇಲೆ ಬಾಣಂತಿಯ ತಂದೆ, ತಾಯಿ ಮತ್ತು ಗಂಡನ ವಿರುದ್ಧ ಗುರುವಾರ ಕೋರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಹಾಗೂ ಹೈಕೋರ್ಟ್ ನಿರ್ದೇಶನದ ಮೇರೆಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶೆ ನೂರುನ್ನಿಸಾ ಅವರು ಅಧಿಕಾರಿಗಳ ತಂಡದೊಂದಿಗೆ ಮಲ್ಲೇನಹಳ್ಳಿ ಗೊಲ್ಲರಹಟ್ಟಿ ಗುಡಿಸಲಿಗೆ ಭೇಟಿ ನೀಡಿದರು.

ಕೋಳಿಗೂಡಿನಂತಹ ಪುಟ್ಟ ಗುಡಿಸಲಲ್ಲಿ ಇರಿಸಲಾಗಿದ್ದ ಬಾಣಂತಿ ಅಪೌಷ್ಠಿಕತೆಯಿಂದ ಬಳಲುತ್ತಿರುವುದನ್ನು ಕಂಡು ಕೆಂಡಾಮಂಡಲರಾದ ಅವರು ನವಜಾತ ಶಿಶುವಿನ ಸಾವಿಗೆ ಕಾರಣರಾದವರ ವಿರುದ್ಧ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗೊಲ್ಲ ಸಮುದಾಯದ ಬಾಣಂತಿ ಇರಿಸಲಾಗಿದ್ದ ಊರಾಚೆ ಗುಡಿಸಲಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶೆ ನೂರುನ್ನಿಸಾ ಗುರುವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿದರು.

ತಮ್ಮ ಸಮ್ಮುಖದಲ್ಲಿಯೇ ಗುಡಿಸಲು ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಗುಡಿಸಲು ತೆರವುಗೊಳಿಸಿದ ಬಳಿಕ ಬಾಣಂತಿಯನ್ನು ಗೊಲ್ಲರಹಟ್ಟಿಯ ಆಕೆಯ ಮನೆಗೆ ಕರೆದೊಯ್ಯುವ ಶಾಸ್ತ್ರ ಮುಗಿಸಲಾಯಿತು.

ನಂತರ ಅಧಿಕಾರಿಗಳ ತಂಡದೊಂದಿಗೆ ಗೊಲ್ಲರಹಟ್ಟಿಗೆ ತೆರಳಿದ ನ್ಯಾಯಾಧೀಶೆ, ಆಂಬುಲೆನ್ಸ್ ತರಿಸಿ ಬಾಣಂತಿಯನ್ನು ತುಮಕೂರು ಜಿಲ್ಲಾಸ್ಪತ್ರೆಗೆ ಕಳಿಸಿಕೊಟ್ಟರು. ಆಕೆ ಗುಣಮುಖವಾಗುವವರೆಗೂ ಸೂಕ್ತ ಚಿಕಿತ್ಸೆ ನೀಡಿ ಆರೈಕೆ ಮಾಡುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಗೊಲ್ಲರಹಟ್ಟಿಯ ಶಾಲೆಯ ಆವರಣದಲ್ಲಿ ಅಧಿಕಾರಿಗಳು, ಗೊಲ್ಲ ಸಮುದಾಯದ ಜನರು ಮತ್ತು ಮುಖಂಡರ ಸಭೆ ನಡೆಸಿದರು. ಸಂಪ್ರದಾಯದ ಹೆಸರಲ್ಲಿ ಮೌಢ್ಯಾಚಾರಣೆ ನಿಲ್ಲಿಸುವಂತೆ ತಿಳಿ ಹೇಳಿದರು.

ಅಸಮಾಧಾನದ ಅಹವಾಲು

ಒಂದನೇ ಪುಟದಿಂದ...

'ನಮಗೆ ಎಲ್ಲೂ ಅಸಮಾಧಾನವಿಲ್ಲ. ಕೆಲವು ಸಣ್ಣಪುಟ್ಟ ಸಮಸ್ಯೆಗಳಿವೆ. ಸಚಿವರು ನಮ್ಮ ಬೇಡಿಕೆಗಳಿಗೆ ಸ್ಪಂದಿಸಬೇಕು. ಇದನ್ನಷ್ಟೇ ನಾವು ಕೇಳಿರುವುದು. ಬೇರೆ ಉದ್ದೇಶ ಇಟ್ಟುಕೊಂಡು ಪತ್ರ ಬರೆದಿದ್ದಲ್ಲ. ನಮ್ಮದು ಪಕ್ಷ ವಿರೋಧಿ, ಸರ್ಕಾರದ ವಿರೋಧಿ ನಡೆಯೂ ಅಲ್ಲ. ಇದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ' ಎಂದು ಹೇಳಿದ್ದಾಗಿ ಗೊತ್ತಾಗಿದೆ.

ಆಗ ಗರಂ ಆದ ಮುಖ್ಯಮಂತ್ರಿ, ಬಹಿರಂಗ ಪತ್ರ ಬರೆದಿರುವುದಕ್ಕೆ ಬಸವರಾಜ ರಾಯರಡ್ಡಿಯನ್ನು ತರಾಟೆಗೆ ತೆಗೆದುಕೊಂಡರು. ತಕ್ಷಣ ರಾಯರಡ್ಡಿ, 'ಪತ್ರ ನಾನು ಬರೆದಿಲ್ಲ. ಸಹಿ ಹಾಕಿದ್ದೇನೆ ಅಷ್ಟೆ. ನಿಮ್ಮ ಗಮನ ಸೆಳೆಯಲು ಹೀಗೆ ಮಾಡಿದ್ದೇವೆ' ಎಂದು ಸಮಜಾಯಿಷಿ ನೀಡಲು ಮುಂದಾದರು. 'ನನ್ನ ಗಮನ ಸೆಳೆಯುವುದಾದರೆ ನೇರವಾಗಿ ಬಂದು ಮಾತನಾಡಬೇಕಿತ್ತು. ಹೀಗೆಲ್ಲ ಏಕೆ ಮಾಡುತ್ತೀರಿ? ಎಂದು ಮುಖ್ಯಮಂತ್ರಿ ಅಸಮಾಧಾನ ವ್ಯಕ್ತಪಡಿಸಿದರು ಎಂದು ಹೇಳಲಾಗಿದೆ.

'ರಾಜ್ಯದಲ್ಲಿ ನಮ್ಮದೇ ಸರ್ಕಾರವಿದೆ. ಆದರೆ, ನಮ್ಮ ಮಾತುಗಳೇ ನಡೆಯುತ್ತಿಲ್ಲ. ಅಧಿಕಾರಿಗಳ ವರ್ಗಾವಣೆಯಲ್ಲಿ ತಮ್ಮ ಮಾತಿಗೆ ಬೆಲೆ ಇಲ್ಲ. ಸಚಿವರ ಮನೆ ಬಾಗಿಲಿಗೆ ಹೋದರೂ ಸ್ಪಂದಿಸುತ್ತಿಲ್ಲ. ನಾವು ಹೇಳಿದವರ ವರ್ಗಾವಣೆ ಆಗಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ವರ್ಗಾವಣೆ: ಸಭೆಯಲ್ಲಿ ಮಾರ್ದನಿ

ಒಂದನೇ ಪುಟದಿಂದ...

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರಿಯಾಂಕ್ ಖರ್ಗೆ, ಕೃಷ್ಣಬೈರೇಗೌಡ, ಎನ್.ಚಲುವರಾಯಸ್ವಾಮಿ ಅವರು ವರ್ಗಾವಣೆಯಲ್ಲಿ ಹಸ್ತಕ್ಷೇಪ ನಡೆಸಿಲ್ಲ, ತಮ್ಮಿಂದ ಯಾವುದೇ ತಪ್ಪು ನಡೆದಿಲ್ಲ ಎಂದು ಸಭೆಯಲ್ಲಿ ವಿವರಿಸಿದ್ದಾಗಿ ಮೂಲಗಳು ತಿಳಿಸಿವೆ.

ಶಾಸಕರ ಪತ್ರ ಸಾರ್ವಜನಿಕ ವಲಯದಲ್ಲಿ ಸರ್ಕಾರದ ಬಗ್ಗೆ ತಪ್ಪು ಅಭಿಪ್ರಾಯ ಮೂಡಲು ಕಾರಣವಾಗಿದೆ. ಅಲ್ಲದೇ, ಶಾಸಕರೂ ಅಸಮಾಧಾನಗೊಂಡಿದ್ದಾರೆ. ಅವರನ್ನು ಸಮಾಧಾನಪಡಿಸಬೇಕಾಗಿದೆ. ಈ ವಿದ್ಯಮಾನ ಪ್ರತಿಪಕ್ಷಗಳಿಗೆ ಅಸ್ತ್ರವಾಗುತ್ತಿದೆ ಎಂಬ ಅಭಿಪ್ರಾಯವೂ ಸಭೆಯಲ್ಲಿ ವ್ಯಕ್ತವಾಯಿತು.

ಶಾಸಕ ಬಿ.ಆರ್.ಪಾಟೀಲ ಅವರು ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಗುರಿಯಾಗಿಸಿಕೊಂಡೇ ಪತ್ರ ಬರೆದಿದ್ದಾರೆ ಎಂಬುದಾಗಿ ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯುತ್ತಿರುವುದನ್ನು ಸಭೆಯಲ್ಲಿ ಪರೋಕ್ಷವಾಗಿ ಪ್ರಸ್ತಾಪಿಸಲಾಯಿತು.

ಇದಕ್ಕೆ ಸಮಜಾಯಿಷಿ ನೀಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, 'ನಾನು 1000 ಪಿಡಿಒಗಳನ್ನು ವರ್ಗಾವಣೆ ಮಾಡಿದ್ದೇನೆ ಎಂಬುದು ಸರಿಯಲ್ಲ. ಪಟ್ಟಿಯನ್ನು ಬೇಕಾದರೂ ಕೊಡಲು ಸಿದ್ಧನಿದ್ದೇನೆ. ಹಲವು ಸಂಸದರು ಮತ್ತು ಶಾಸಕರೂ ವರ್ಗಾವಣೆಗೆ ಸಂಬಂಧ ಪತ್ರ ಕೊಟ್ಟಿದ್ದರು. ಅಂತಹ ಪ್ರಕರಣಗಳಲ್ಲಿ ವರ್ಗಾವಣೆ ಮಾಡಿದ್ದೇನೆ' ಎಂದು ಅವರು ಪತ್ರಗಳನ್ನು ತೋರಿಸಲು ಮುಂದಾದರು ಎಂದು ಮೂಲಗಳು ಹೇಳಿವೆ.

'ಒಟ್ಟು ಪಿಡಿಒ ಹುದ್ದೆಗಳ ಪೈಕಿ ಶೇ 25 ರಷ್ಟು ಮಿತಿಯಲ್ಲಿ ವರ್ಗಾವಣೆಗೆ ನನಗೆ ಅಧಿಕಾರವಿದೆ. ಬೇಕಾಬಿಟ್ಟಿ ಮಾಡಿಲ್ಲ' ಎಂದೂ ಖರ್ಗೆ ಹೇಳಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ , 'ನಾನು ಯಾವುದೇ ತಹಶೀಲ್ದಾರ್‌ಗಳನ್ನು ವರ್ಗಾವಣೆ ಮಾಡಿಲ್ಲ. ಅಂತಹ ಬೇಡಿಕೆ ಪತ್ರ ಬಂದರೆ ಅವುಗಳನ್ನು ಮುಖ್ಯಮಂತ್ರಿಗೆ ಕಳಿಸಿದ್ದೇನೆ. ಅವರೇ ತೀರ್ಮಾನ ತೆಗೆದುಕೊಳ್ಳುತ್ತಾರೆ' ಎಂದರು.

ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ, 'ನನ್ನ ಇಲಾಖೆಯಲ್ಲಿ ಯಾವುದೇ ವರ್ಗಾವಣೆಗಳನ್ನು ಮಾಡಿಲ್ಲ. ಕುಮಾರಸ್ವಾಮಿ ವೃಥಾ ಆರೋಪಗಳನ್ನು ಮಾಡಿದ್ದಾರೆ' ಎಂದು ಸಮಜಾಯಿಷಿ ನೀಡಿದರು.

ಡಿ.ಕೆ.ಶಿವಕುಮಾರ್ ಮಾತನಾಡಿ, ಮುಖ್ಯ ಎಂಜಿನಿಯರ್‌ಗಳ ವರ್ಗಾವಣೆ ಮಾಡಿಲ್ಲ. ಆ ಅಧಿಕಾರ ಇರುವುದು ಮುಖ್ಯಮಂತ್ರಿಗೆ. ಬೇರೆ ಯಾವುದೇ ವರ್ಗಾವಣೆ ಮಾಡಿಲ್ಲ ಎಂದು ವಿವರ ನೀಡಿದರು.

ರಹಸ್ಯ ಕ್ಯಾಮೆರಾ ಇರಲಿಲ್ಲ: ಖುಷ್ಬು

ಒಂದನೇ ಪುಟದಿಂದ...

ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3ರವರೆಗೂ ವಿಚಾರಣೆ ನಡೆಸಿ ಮಾಹಿತಿ ಕಲೆ ಹಾಕಿದರು.

ಬಳಿಕ ಮಾತನಾಡಿದ ಅವರು, 'ಪೊಲೀಸ್ ಇಲಾಖೆ ಹಾಗೂ ರಾಷ್ಟ್ರೀಯ ಮಹಿಳಾ ಆಯೋಗ ಪ್ರಕರಣದ ತನಿಖೆ ಆರಂಭಿಸಿದ್ದು ಪೂರ್ಣಗೊಳ್ಳುವವರೆಗೂ ಮಾಧ್ಯಮಗಳು ಆಧಾರರಹಿತ ಸುದ್ದಿ ಪ್ರಕಟಿಸಬಾರದು. ವಿದ್ಯಾರ್ಥಿನಿಯರ ಮೊಬೈಲ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದ್ದು ವರದಿ ಬಂದ ನಂತರ ವಿಡಿಯೊ ಚಿತ್ರೀಕರಣವಾಗಿರುವ ಸತ್ಯಾಸತ್ಯತೆ ಬಯಲಾಗಲಿದೆ' ಎಂದು ಹೇಳಿದರು.

ಇದಕ್ಕೂ ಮುನ್ನ ಬುಧವಾರ ರಾತ್ರಿ ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ಹಾಗೂ ಎಸ್‌ಪಿ ಹಾಕೆ ಅಕ್ಷಯ್ ಮಚ್ಚೀಂದ್ರ ಅವರೊಂದಿಗೆ ಚರ್ಚಿಸಿದ ಖುಷ್ಬು ಪ್ರಕರಣದ ಮಾಹಿತಿ ಪಡೆದುಕೊಂಡರು.

'ವಿದ್ಯಾರ್ಥಿನಿಯರ ಮೂರು ಮೊಬೈಲ್‌ಗಳಲ್ಲಿದ್ದ ಸಂಪೂರ್ಣ ಡೇಟಾವನ್ನು ಪೊಲೀಸರು ಸಂಗ್ರಹಿಸಿದ್ದಾರೆ. ಮೊಬೈಲ್‌ನಲ್ಲಿ ಡಿಲೀಟ್ ಆಗಿದೆ ಎನ್ನಲಾದ ವಿಡಿಯೊ ಮರು ಪಡೆಯಲು 40 ಗಂಟೆಗಳ ಕಾಲ ಯತ್ನಿಸಿದರೂ ಪ್ರಯೋಜನವಾಗಿಲ್ಲ. ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಮೊಬೈಲ್ ಕಳುಹಿಸಬೇಕಾಗಿದ್ದು ಸಾಕ್ಷ್ಯಗಳು ಲಭ್ಯವಾದರೆ ಮಾತ್ರ ಸ್ಪಷ್ಟತೆ ಸಿಗಲಿದೆ' ಎಂದರು.

'ಸಾಕ್ಷ್ಯ ಸಿಗದಿದ್ದರೆ ಪ್ರಕರಣ ದಾಖಲಿಸಲು ಸಾಧ್ಯವಿಲ್ಲ. ಪ್ರಕರಣದಲ್ಲಿ ಭಯೋತ್ಪಾದಕರ ಕೈವಾಡವಿದೆ ಎಂಬ ವಾಟ್ಸ್‌ಆ್ಯಪ್ ಸಂದೇಶಗಳು ಹರಿದಾಡುತ್ತಿದ್ದು ಸಂಶಯಾಸ್ಪದ ಸಂಗತಿಗಳನ್ನು ಹರಿಬಿಡಲಾಗುತ್ತಿದೆ. ಘಟನೆಯ ಹಿಂದೆ ಬಿಗ್ ಥಿಯರಿ ಇದೆ ಎಂದು ಭಾವಿಸಬೇಕಿಲ್ಲ. ನ್ಯಾಯಾಧೀಶರಾಗಿ ತೀರ್ಪು ಕೊಡುವ ಅಗತ್ಯವೂ ಇಲ್ಲ. ಮಹಿಳಾ ಆಯೋಗ ಮತ್ತು ಪೊಲೀಸ್ ಇಲಾಖೆ ಕರ್ತವ್ಯವನ್ನು ಸೂಕ್ತವಾಗಿ ನಿಭಾಯಿಸುತ್ತಿದೆ' ಎಂದು ಖುಷ್ಬು ಹೇಳಿದರು.

ಪ್ರಕರಣದಲ್ಲಿ ಎಳೆಯ ಮನಸ್ಸುಗಳು ಇದ್ದು ಸರಿಯಾದ ಹಾದಿಯಲ್ಲಿ ತನಿಖೆ ಆಗಬೇಕು. ಮುಂಚಿತವಾಗಿ ಅಂತಿಮ ತೀರ್ಮಾನಕ್ಕೆ ಬರಲಾಗದು. ಮಹಿಳಾ ಆಯೋಗ ಮಹಿಳೆಯರ ರಕ್ಷಣೆಗೆ ಇರುವ ಸಂಸ್ಥೆಯಾಗಿದ್ದು ರಾಜಕೀಯ ಒತ್ತಡವಿಲ್ಲದೆ, ಕೋಮು ಪ್ರಭಾವವಿಲ್ಲದೆ ತನಿಖೆ ನಡೆಸಲಿದೆ. ನಿರ್ದಿಷ್ಟ ಕೋಮಿಗೆ ಸೇರಿದ ಮಹಿಳೆಯರ ರಕ್ಷಣೆಗೆ ಬಂದಿಲ್ಲ ಎಂದು ಖುಷ್ಬು ಹೇಳಿದರು.

ತಳ್ಳಾಟ ನೂಕಾಟ

ಕಾಲೇಜಿನ ಶೌಚಾಲಯದಲ್ಲಿ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಣ ಮಾಡಿದ ಯುವತಿಯರ ವಿರುದ್ಧ ಕ್ರಮ ಜರುಗಿಸಬೇಕು ಹಾಗೂ ಪೊಲೀಸ್ ಇಲಾಖೆ ತನಿಖೆಯ ದಿಕ್ಕು ತಪ್ಪಿಸುತ್ತಿದೆ ಎಂದು ಆರೋಪಿಸಿ ನಗರದ ಹುತಾತ್ಮ ಸೈನಿಕರ ಸ್ಮಾರಕದ ಎದುರು ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಘೋಷಣೆ ಕೂಗಿದರು.

ಈ ಸಂದರ್ಭ ಪೊಲೀಸರು ಹಾಗೂ ಪ್ರತಿಭಟನಾಕಾರರ ಮಧ್ಯೆ ವಾಗ್ವಾದ ನಡೆದು ನೂಕಾಟವಾಯಿತು. ಪ್ರತಿಭಟನಾನಿರತರನ್ನು ಪೊಲೀಸರು ಕರೆದೊಯ್ಯಲು ಮುಂದಾದಾಗ ಶಾಸಕ ಯಶ್‌ಪಾಲ್ ಸುವರ್ಣ ಮಧ್ಯೆ ಪ್ರವೇಶಿಸಿ ಅವಕಾಶ ನೀಡಲಿಲ್ಲ.

'ವ್ಯವಸ್ಥಿತ ಷಡ್ಯಂತ್ರ ಶಂಕೆ'

'ಶೌಚಾಲಯದಲ್ಲಿ ವಿದ್ಯಾರ್ಥಿನಿಯ ಖಾಸಗಿ ವಿಡಿಯೊ ಚಿತ್ರೀಕರಿಸಿ ಅನ್ಯ ಗ್ರೂಪ್‌ಗಳಿಗೆ ಕಳುಹಿಸಿರುವ ಸಂಶಯವಿದ್ದು ಪ್ರಕರಣದ ಹಿಂದೆ ವ್ಯವಸ್ಥಿತ ಷಡ್ಯಂತ್ರ ಹಾಗೂ ಜಾಲ ಇದೆ. ತನಿಖೆಯ ಮೇಲೆ ಸರ್ಕಾರ ಪ್ರಭಾವ ಬೀರುತ್ತಿದ್ದು ನ್ಯಾಯ ಸಿಗದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು' ಎಂದು ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತದ ಕಾರ್ಯಕಾರಿಣಿ ಸಮಿತಿ ಸದಸ್ಯ ಶ್ರೀಕಾಂತ್ ಶೆಟ್ಟಿ ಹೇಳಿದ್ದಾರೆ.

'ಕೇರಳದವರ ಕುತಂತ್ರ ಶಂಕೆ'

ಮಂಗಳೂರು: 'ಶೌಚಾಲಯದಲ್ಲಿ ವಿಡಿಯೊ ಮಾಡಿದ್ದರ ಹಿಂದೆ ಕೇರಳದವರ ಕುತಂತ್ರ ಇರುವ ಸಾಧ್ಯತೆ ಇದೆ. ವಿಷಯ ಗೊತ್ತಾಗದೇ ಇದ್ದಿದ್ದರೆ ಈ ವಿಡಿಯೊಗಳು ಎಲ್ಲೆಲ್ಲಿಗೆ ತಲುಪುತ್ತಿದ್ದವು ಎಂಬುದನ್ನು ಯೋಚನೆ ಮಾಡುವುದು ಕಷ್ಟ. ಆದರೆ ಕಾಂಗ್ರೆಸ್ ಒಂದು ವರ್ಗದ ವಿದ್ಯಾರ್ಥಿನಿಯರನ್ನು ರಕ್ಷಿಸುವುದಕ್ಕಾಗಿ ಹೆಣಗಾಡುತ್ತಿದೆ. ಹೀಗಾಗಿ ಪ್ರಕರಣವನ್ನು ಎಸ್‌ಐಟಿಗೆ ವಹಿಸಬೇಕು' ಎಂದು ಮಂಗಳೂರು ಉತ್ತರ ಶಾಸಕ ಡಾ.ಭರತ್ ಶೆಟ್ಟಿ ಒತ್ತಾಯಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬ್ರೇಕಿಂಗ್ ನ್ಯೂಸ್ ಕೊಡಲು ನಾನು ಬಂದಿಲ್ಲ. ಅರ್ಜೆಂಟ್ ಮಾಡಲು ಇದು ಟು ಮಿನಿಟ್ಸ್ ನೂಡಲ್ಸ್ ಅಲ್ಲ. ಸತ್ಯಾಂಶವನ್ನು ಪೊಲೀಸ್ ಇಲಾಖೆ ಬಹಿರಂಗಪಡಿಸಲಿದೆ

ಖುಷ್ಬು ಸುಂದರ್
ಸದಸ್ಯೆ, ರಾಷ್ಟ್ರೀಯ ಮಹಿಳಾ ಆಯೋಗ

ಉಡುಪಿ ಪ್ರಕರಣಕ್ಕೂ ಮಣಿಪುರದಲ್ಲಿ ನಡೆದ ಘಟನೆಗಳಿಗೂ ವ್ಯತ್ಯಾಸವಿದೆ. ಅಲ್ಲಿ ಜನರ ಎದುರಲ್ಲೇ ಅತ್ಯಾಚಾರ ಆಗಿದೆ. ಆದರೂ ಉಡುಪಿಗೆ ಆಯೋಗದ ಸದಸ್ಯೆ ಓಡೋಡಿ ಬಂದಿದ್ದಾರೆ

ಕೃಪಾ ಆಳ್ವಾ
ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ

ವಿಡಿಯೊ ಪ್ರಕರಣ 'ಉಡುಪಿ ಫೈಲ್ಸ್' ಆಗುವುದು ಬೇಡ. ತಂತ್ರಜ್ಞಾನದ ನೆರವು ಪಡೆದುಕೊಂಡು ಇದರ ಹಿಂದಿನ ಉದ್ದೇಶವನ್ನು ಕಂಡು ಹಿಡಿಯಬೇಕು

ಸುದರ್ಶನ,
ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ

ಗೃಹ ಸಚಿವರ ಮನೆ ಮುತ್ತಿಗೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ, ಹುಬ್ಬಳ್ಳಿ ಹಾಗೂ ಶಿವಮೊಗ್ಗ ಗಲಭೆ ಪ್ರಕರಣಗಳಿಂದ ಆರೋಪಿಗಳನ್ನು ಕೈಬಿಡುವ ಬಗ್ಗೆ ಗೃಹ ಸಚಿವ ಜಿ. ಪರಮೇಶ್ವರ ತಮ್ಮ ಹೇಳಿಕೆ ಹಿಂಪಡೆಯಬೇಕು' ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಸಚಿವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಸದಾಶಿವನಗರದಲ್ಲಿರುವ ಸಚಿವ ಪರಮೇಶ್ವರ ಮನೆ ಎದುರು ಗುರುವಾರ ಸೇರಿದ್ದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು, 'ಗಲಭೆಕೋರರನ್ನು ಯಾವುದೇ ಕಾರಣಕ್ಕೂ ಬಿಡುಗಡೆ ಮಾಡಬಾರದು' ಎಂದು ಘೋಷಣೆ ಕೂಗಿದರು. ಬ್ಯಾರಿಕೇಡ್ ತಳ್ಳಿ ಮನೆಯೊಳಗೆ ನುಗ್ಗಲು ಯತ್ನಿಸಿದರು.

ಸ್ಥಳದಲ್ಲಿದ್ದ ಪೊಲೀಸರು, ಕಾರ್ಯಕರ್ತರನ್ನು ವಶಕ್ಕೆ ಪಡೆದು ಸ್ಥಳದಿಂದ ಕರೆದೊಯ್ದರು. ಇದೇ ವೇಳೆ ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ತಳ್ಳಾಟ ಉಂಟಾಯಿತು.

'ದೇವರ ಜೀವನಹಳ್ಳಿ (ಡಿ.ಜೆ. ಹಳ್ಳಿ) ಠಾಣೆಗೆ ಬೆಂಕಿ ಹಚ್ಚಿ ಗಲಭೆ ಸೃಷ್ಟಿಸಿದ್ದ ಆರೋಪಿಗಳಿಗೆ ಕಾಂಗ್ರೆಸ್ ಸರ್ಕಾರ ಬೆಂಬಲ ನೀಡುತ್ತಿದೆ. ಇದರ ವಿರುದ್ಧ ಮುಂದಿನ ದಿನಗಳಲ್ಲಿ ರಾಜ್ಯವ್ಯಾಪಿ ಪ್ರತಿಭಟನೆ ನಡೆಸಲಾಗುವುದು' ಎಂದು ಕಾರ್ಯಕರ್ತರು ಎಚ್ಚರಿಸಿದರು.

ಸದಾಶಿವನಗರದಲ್ಲಿರುವ ಗೃಹ ಸಚಿವ ಜಿ. ಪರಮೇಶ್ವರ ಮನೆಗೆ ಗುರುವಾರ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು – ಪ್ರಜಾವಾಣಿ ಚಿತ್ರ

'ಅಮಾಯಕರ ಮೇಲಿನ ಪ್ರಕರಣ ವಾಪಸ್ ಪಡೆಯುವಂತೆ ಶಾಸಕ ತನ್ವೀರ್ ಸೇಠ್ ಪತ್ರ ಬರೆದಿದ್ದಾರೆ. ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಪರಮೇಶ್ವರ, ಪ್ರಕರಣ ವಾಪಸು ಪಡೆಯಲು ಹೊರಟಿದ್ದಾರೆ. ಇದೇ ಗಲಭೆ ಪ್ರಕರಣದ ಆರೋಪಿಗಳು, ಅಂದಿನ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಮನೆಗೆ ಬೆಂಕಿ ಹಚ್ಚಿ ಹತ್ಯೆಗೆ ಯತ್ನಿಸಿದ್ದರೆಂಬುದನ್ನು ಮರೆಯಬಾರದು' ಎಂದು ಪ್ರತಿಭಟನಕಾರರು ಹೇಳಿದರು.

'ಜವಾಬ್ದಾರಿಯುತ ಸ್ಥಾನದಲ್ಲಿರುವ ಪರಮೇಶ್ವರ, ಏಕ ಪಕ್ಷೀಯ ನಿರ್ಧಾರ ತೆಗೆದುಕೊಂಡ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಇವರ ವರ್ತನೆಯನ್ನು ರಾಜ್ಯದ ಜನರು ಸಹಿಸುವುದಿಲ್ಲ. ರಹಸ್ಯ ಕ್ಯಾಮೆರಾ ಮೂಲಕ ವಿದ್ಯಾರ್ಥಿನಿಯರ ವಿಡಿಯೊ ಚಿತ್ರೀಕರಿಸಿರುವ ಉಡುಪಿ ಪ್ರಕರಣದಲ್ಲೂ ಸಚಿವರು ಬೇಕಾಬಿಟ್ಟಿ ಹೇಳಿಕೆ ನೀಡಿದ್ದಾರೆ' ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಮಹಿಳಾ ಮೋರ್ಚಾ ಪ್ರತಿಭಟನೆ

'ಉಡುಪಿಯ ನೇತ್ರಜ್ಯೋತಿ ಕಾಲೇಜಿನಲ್ಲಿ ಹಿಂದೂ ಯುವತಿಯರ ನಗ್ನ ವಿಡಿಯೊ ಚಿತ್ರೀಕರಣ ಮಾಡಲಾಗಿದ್ದು, ಪ್ರಕರಣವನ್ನು ಸರ್ಕಾರ ಮುಚ್ಚಿಹಾಕುತ್ತಿವೆ. ತಪ್ಪಿತಸ್ಥರನ್ನು ಬಂಧಿಸಿ ಕಠಿಣ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿ ಬಿಜೆಪಿ ಮಹಿಳಾ ಮೋರ್ಚಾದ ಬೆಂಗಳೂರು ಮಹಾನಗರ ಘಟಕದ ಕಾರ್ಯಕರ್ತೆಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಹಣೆಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟಿಸಿದ ಕಾರ್ಯಕರ್ತೆಯರು, 'ಸಮಾಜ ತಲೆತಗ್ಗಿಸುವ ಘಟನೆ ಇದಾಗಿದೆ' ಎಂದು ಆಕ್ರೋಶ ಹೊರಹಾಕಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಬಿಜೆಪಿ ಮಹಿಳಾ ಮೋರ್ಚಾದ ಆಶಾರಾವ್, ರೇಖಾ ಗೋವಿಂದ, ವಿಜಯಲಕ್ಷ್ಮೀ ಆನಂದ್ ಪ್ರತಿಭಟನೆಯಲ್ಲಿದ್ದರು.

ರಸ್ತೆ ಅಭಿವೃದ್ಧಿಗೆ ಪ್ರಾಧಿಕಾರ

ಒಂದನೇ ಪುಟದಿಂದ...

ಪಿಪಿಪಿ ಗುತ್ತಿಗೆಗಳ ಸಂಗ್ರಹಣೆ ಪ್ರಕ್ರಿಯೆಯನ್ನು ಪಾರದರ್ಶಕವಾಗಿ, ಅತ್ಯುತ್ತಮ ಉದ್ಯಮ ಮಾನದಂಡಗಳಿಗೆ ಅನುಗುಣವಾಗಿ ಮಾರ್ಗಸೂಚಿ ಮತ್ತು ಸಂಗ್ರಹಣೆ ವಿಧಾನಗಳನ್ನು ತಯಾರಿಸಲಾಗುವುದು ಎಂದರು.

ಪರಿಸರ ಸೂಕ್ಷ್ಮ ವಲಯ: ರಾಜ್ಯದ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿಧಾಮಗಳ ಸುತ್ತಮುತ್ತಲಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸಲು ಸೂಕ್ತ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಮತ್ತು ಇತರೆ ವಿಷಯಗಳ ಬಗ್ಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಚಿವ ಸಂಪುಟ ಉಪಸಮಿತಿ ರಚಿಸಲು ಮುಖ್ಯಮಂತ್ರಿಯವರಿಗೆ ಅಧಿಕಾರ ನೀಡಲಾಗಿದೆ.

ಮೈತ್ರಿಗೆ ಸೂಪರ್ ನ್ಯೂಮರರಿ ಹುದ್ದೆ: 2011 ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯಲ್ಲಿ ಪರಿಶಿಷ್ಟ ಪಂಗಡ (ಎಸ್‌ಟಿ) ಮಹಿಳಾ ಮೀಸಲಾತಿಯಡಿ ಗ್ರೂಪ್ 'ಎ' ವೃಂದದ ಕೆಎಎಸ್ (ಕಿರಿಯ ಶ್ರೇಣಿ) ಹುದ್ದೆ ನೀಡಬೇಕೆಂಬ ಡಾ. ಮೈತ್ರಿ ಎಚ್.ಪಿ.ಎಸ್. ಅವರ ಮನವಿಯನ್ನು ಪುರಸ್ಕರಿಸಿರುವ ಸಚಿವ ಸಂಪುಟ ಸಭೆ, ಅವರಿಗಾಗಿ ಒಂದು ಸೂಪರ್ ನ್ಯೂಮರರಿ ಹುದ್ದೆ (ಸಂಖ್ಯಾತಿರಿಕ್ತ) ಸೃಜಿಸಿ ನೇಮಕಾತಿ ಮಾಡಲು ನಿರ್ಧರಿಸಿದೆ ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ನಿರ್ಣಯಗಳು

- ನಬಾರ್ಡ್ ಆರ್‌ಐಡಿಎಫ್-28 ಯೋಜನೆಯಡಿ ಕೃಷಿ ಮಾರುಕಟ್ಟೆ ಇಲಾಖೆಗೆ ಅನುಮೋದನೆ ಆಗಿರುವ ₹130.40 ಕೋಟಿಗಳ ಅನುದಾನದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ. ಎಪಿಎಂಸಿಗಳಲ್ಲಿ ಕಾಂಕ್ರಿಟ್ ರಸ್ತೆ, ಒಳಚರಂಡಿ, ಹರಾಜುಕಟ್ಟೆ, ಕಾಂಪೌಂಡ್, ಕ್ಯಾಂಟೀನ್ ಕಟ್ಟಡ, ವಾಣಿಜ್ಯ ಮಳಿಗೆಗಳು ಮತ್ತು ಗ್ರಾಮೀಣ ಗೋದಾಮುಗಳನ್ನು ನಿರ್ಮಿಸಲು ಈ ಅನುದಾನ ಬಳಸಲಾಗುವುದು.
- ಹಿಂದುಳಿದ ವರ್ಗಗಳ ಆಯೋಗಗಳ ಸಲಹೆ ಮತ್ತು ಹೈಕೋರ್ಟ್ ಆದೇಶದಂತೆ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯ ಪ್ರವರ್ಗ-3 ಎ ಕ್ರಮ ಸಂಖ್ಯೆ-2 ರಲ್ಲಿ ನಮೂದಾಗಿರುವ ಕೊಡಗರು ಎಂಬುದರ ಬದಲಾಗಿ ಕೊಡವ ಮತ್ತು ಕೊಡವರು ಎಂದು ಬದಲಿಸಲು ತೀರ್ಮಾನ.

ಅಡುಗೆ ಸಹಾಯಕಿ ಈಗ ಗ್ರಾ.ಪಂ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ

ಆಲೂರು (ಹಾಸನ): ಇಲ್ಲಿನ ಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಅಡುಗೆ ಸಹಾಯಕಿಯಾಗಿದ್ದ ರಾಜೇಶ್ವರಿ ಅವರು ಮಡಬಲು ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಗುರುವಾರ ಅವಿರೋಧವಾಗಿ ಆಯ್ಕೆಯಾದರು.

3,646 ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ಮಕ್ಕಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿದ್ದು, 3,646 ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ಮಕ್ಕಳಿವೆ. ಕೆಲ ಶಾಲೆಗಳು ಶೂನ್ಯ ದಾಖಲಾತಿ ಇದ್ದರೆ, ಹಲವು ಶಾಲೆಗಳಲ್ಲಿ ಕಾಯಂ ಶಿಕ್ಷಕರೇ ಇಲ್ಲ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರತಿನಿಧಿಸುವ ಸೊರಬ ಕ್ಷೇತ್ರದಲ್ಲಿ 52 ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಕನಕಪುರ ತಾಲ್ಲೂಕಿನಲ್ಲಿ 72 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾಹಿತಿ ಪ್ರಕಾರ ರಾಜ್ಯದ 6,529 ಶಾಲೆಗಳು ಏಕ ಶಿಕ್ಷಕ ಶಾಲೆಗಳಾಗಿವೆ. ಅಂತಹ ಶಾಲೆಗಳಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 2021-22ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ 287 ಸರ್ಕಾರಿ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಯೂ ಪ್ರವೇಶ ಪಡೆದಿರಲಿಲ್ಲ.

ಪ್ರಸ್ತುತ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ನಡೆಯುತ್ತಿದ್ದು, ಒಂದೇ ತಾಲ್ಲೂಕಿನಲ್ಲಿ 10 ರಿಂದ 20 ವರ್ಷ ಪೂರೈಸಿದ ಶಿಕ್ಷಕರಿಗೆ ವರ್ಗಾವಣೆಯ ಅವಕಾಶ ಇರುವುದರಿಂದ ಬಹು ತೇಕರು ಬೇರೆ ಶಾಲೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

ವೈವಾಹಿಕ ಪ್ರಕರಣಗಳ ಇತ್ಯರ್ಥಕ್ಕೆ ವರ್ಷದ ಗಡುವು

ಬೆಂಗಳೂರು: 'ವೈವಾಹಿಕ ವ್ಯಾಜ್ಯಗಳನ್ನು ಗರಿಷ್ಠ ಒಂದು ವರ್ಷದ ಮಿತಿಯಲ್ಲಿ ಇತ್ಯರ್ಥಪಡಿಸಬೇಕು' ಎಂದು ಹೈಕೋರ್ಟ್ ವಿಚಾರಣಾ ನ್ಯಾಯಾಲಯಗಳಿಗೆ ಆದೇಶಿಸಿದೆ.

'ವಿವಾಹ ವಿಚ್ಛೇದನ ಅರ್ಜಿಯನ್ನು ತ್ವರಿತಗತಿಯಲ್ಲಿ ಇತ್ಯರ್ಥಪಡಿಸುವಂತೆ ಕೌಟುಂಬಿಕ ನ್ಯಾಯಾಲಯಕ್ಕೆ ನಿರ್ದೇಶನ ನೀಡಬೇಕು' ಎಂದು ಕೋರಿ ಸಲ್ಲಿಸಲಾದ ಅರ್ಜಿಯೊಂದನ್ನು ಮಾನ್ಯ ಮಾಡಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಬದುಕು ತೀರಾ ಚಿಕ್ಕದು ಎಂಬ ಆಂಗ್ಲ ಇತಿಹಾಸಕಾರರೊಬ್ಬರ ಹೇಳಿಕೆ ಉಲ್ಲೇಖಿಸಿರುವ ನ್ಯಾಯಪೀಠ, ಮನುಷ್ಯ ಜೀವನದ ಅಲ್ಪಾವಧಿಯನ್ನು ಗಮನದಲ್ಲಿಟ್ಟುಕೊಂಡು ವೈವಾಹಿಕ ಪ್ರಕರಣಗಳ ವಿಲೇವಾರಿಯನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಚಿವ ನಾರಾಯಣ ಸ್ವಾಮಿ ನೀಡಿದ ಹೇಳಿಕೆಗೆ ಸಿದ್ದರಾಮಯ್ಯ ಪ್ರತಿಕ್ರಿಯೆ

ಬಿಜೆಪಿ ಬೂಟಾಟಿಕೆ ಬಯಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನದಲ್ಲಿ ಒಳಮೀಸಲಾತಿಗೆ ಅವಕಾಶ ಇಲ್ಲ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ನಾರಾಯಣ ಸ್ವಾಮಿ ಅವರು ರಾಜ್ಯಸಭೆಗೆ ನೀಡಿರುವ ಉತ್ತರವು ಒಳಮೀಸಲಾತಿ ಬಗೆಗಿನ ಬಿಜೆಪಿಯ ಬೂಟಾಟಿಕೆ ನಡಾವಳಿಯನ್ನು ಬಯಲುಗೊಳಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಒಳಮೀಸಲಾತಿಗಾಗಿ ಸಂವಿಧಾನದ 341ನೇ ಪರಿಚ್ಛೇದಕ್ಕೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಅಭಿಪ್ರಾಯಗಳನ್ನು ಕೋರಿದಾಗ 20 ರಾಜ್ಯ ಸರ್ಕಾರಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳು ಮಾತ್ರ ಅಭಿಪ್ರಾಯ ತಿಳಿಸಿವೆ. 7 ರಾಜ್ಯಗಳು ಒಳಮೀಸಲಾತಿಗೆ ಒಪ್ಪಿಗೆ ನೀಡಿದ್ದು, 13 ರಾಜ್ಯಗಳು ವಿರೋಧಿಸಿವೆ' ಎಂದು ಸಚಿವರು ಉತ್ತರಿಸಿದ್ದಾರೆ.

ಚುನಾವಣೆ ವೇಳೆ ಯಾಕೆ ಈ ಸತ್ಯವನ್ನು ಹೇಳಿಲ್ಲ? ಒಳಮೀಸಲಾತಿ ಜಾರಿಗೆ ಡಬಲ್ ಎಂಜಿನ್ ಸರ್ಕಾರ ಬದ್ಧವಾಗಿದ್ದು ನರೇಂದ್ರ ಮೋದಿ ಸರ್ಕಾರ ಶೀಘ್ರದಲ್ಲಿಯೇ ನಿರ್ಧಾರ ಕೈಗೊಳ್ಳಲಿದೆ ಎಂದು ಯಾಕೆ ಸುಳ್ಳು ಭರವಸೆ ನೀಡಿದರು? 2020ರ ಆಗಸ್ಟ್ ತಿಂಗಳಲ್ಲಿಯೇ ಐವರು ನ್ಯಾಯಮೂರ್ತಿಗಳ ಪೀಠವು ಏಳು ನ್ಯಾಯಮೂರ್ತಿಗಳ ಪೀಠ ರಚಿಸುವಂತೆ ಕೋರಿಕೆ ಸಲ್ಲಿಸಿದ್ದರೂ ಇಲ್ಲಿಯ ವರೆಗೆ ಯಾಕೆ ಕೇಂದ್ರ ಸರ್ಕಾರ ತೀರ್ಮಾನ ಕೈಗೊಂಡಿಲ್ಲ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಬಹಿರಂಗವಾಗಿ ದಲಿತ ಸಮುದಾಯದ ಬಗ್ಗೆ ಹುಸಿ ಪ್ರೀತಿ-ಕಾಳಜಿ ವ್ಯಕ್ತಪಡಿಸುವ ಬಿಜೆಪಿ ಮತ್ತು ಸಂಘ ಪರಿವಾರ,ಅಂತರಂಗದಲ್ಲಿ ಮೀಸಲಾತಿಯೂ ಸೇರಿದಂತೆ ಸಾಮಾಜಿಕ ನ್ಯಾಯದ ಎಲ್ಲ ಉಪಕ್ರಮಗಳಿಗೆ ವಿರುದ್ಧವಾಗಿದೆ ಎನ್ನುವುದು ಮತ್ತೆ ಮತ್ತೆ ಸಾಬೀತಾಗಿದೆ ಎಂದೂ ಅವರು ಟೀಕಿಸಿದ್ದಾರೆ.

ಕಪ್ಪುಬಟ್ಟೆ ಧರಿಸಿದರೆ ಕಳಂಕ ಹೋಗಲ್ಲ: 'ಇಂಡಿಯಾ' ವಿರುದ್ಧ ಸಚಿವ ಪೀಯೂಷ್ ವ್ಯಂಗ್ಯ

ಕಲಾಪಕ್ಕೆ ಮೋದಿ ಗೈರು– ಗದ್ದಲ ಜೋರು

ನವದೆಹಲಿ (ಪಿಟಿಐ): ಮಣಿಪುರದ ಜನಾಂಗೀಯ ಹಿಂಸಾಚಾರ ಹಾಗೂ ಮುಂಗಾರು ಅಧಿವೇಶನದ ಕಲಾಪಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಗೈರುಹಾಜರಾಗಿರುವ ವಿಷಯವು ಸಂಸತ್ತಿನ ಉಭಯ ಸದನಗಳಲ್ಲಿ ಗುರುವಾರ ಆಡಳಿತಾರೂಢ ಬಿಜೆಪಿ ಮತ್ತು 'ಇಂಡಿಯಾ' ಸದಸ್ಯರ ನಡುವೆ ಕೋಲಾಹಲ ಸೃಷ್ಟಿಸಿತು.

ಅಧಿವೇಶನ ಆರಂಭವಾದ ಆರನೇ ದಿನವೂ ಮಣಿಪುರ ಸಂಘರ್ಷವು ಸುಗಮ ಕಲಾಪಕ್ಕೆ ಸವಾಲಾಗಿ ಪರಿಣಮಿಸಿತು. ಗದ್ದಲ ಮುಂದುವರಿದ ಕಾರಣ ಎರಡೂ ಸದನಗಳ ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಪ್ರತಿಪಕ್ಷಗಳ ಸದಸ್ಯರ ವಿರೋಧದ ನಡುವೆಯೇ ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಎರಡು ಮಸೂದೆಗಳನ್ನು ಮಂಡಿಸಿ ಧ್ವನಿಮತದ ಮೂಲಕ ಅಂಗೀಕಾರ ಪಡೆಯಿತು.

ಕಲಾಪಕ್ಕೆ ಮೋದಿ ಗೈರು: ಪ್ರಧಾನಿ ಅವರು ಕಲಾಪಕ್ಕೆ ಗೈರುಹಾಜರಾಗುತ್ತಿದ್ದಾರೆ. ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಹೇಳಿಕೆ ನೀಡಲು ಹಿಂಜರಿಯುತ್ತಿದ್ದಾರೆ ಎಂದು ಆರೋಪಿಸಿದ ಪ್ರತಿಪಕ್ಷಗಳ ಸದಸ್ಯರು, ಪ್ರತಿಭಟನೆಯನ್ನು ತೀವ್ರಗೊಳಿಸಿದರು. ಮಸೂದೆಗಳ ಪ್ರತಿಗಳನ್ನು ಹರಿದು ಸ್ಪೀಕರ್ ಪೀಠದತ್ತ ತೂರಿದರು.

ವಿಪಕ್ಷಗಳ ಪ್ರತಿಭಟನೆಯಿಂದಾಗಿ ಸ್ಪೀಕರ್ ಓಂ ಬಿರ್ಲಾ ಅವರು, ಮೂರು ಬಾರಿ ಕಲಾಪ ಮುಂದೂಡಿದರು. ಮಧ್ಯಾಹ್ನ 3ಗಂಟೆಗೆ ಮತ್ತೆ ಶುರುವಾದಾಗ ಗದ್ದಲ ಮುಂದುವರಿದಿದ್ದರಿಂದ ಸದನವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು. ರಾಜ್ಯಸಭೆಯಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಯಿತು.

ಮಲ್ಲಿಕಾರ್ಜುನ ಖರ್ಗೆ ರಾಜ್ಯಸಭೆಯಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು

ಕುಟುಕಿದ ಪಿಯೂಷ್: ಕಲಾಪದಲ್ಲಿ ಬೆಳಿಗ್ಗೆ ಕಲಾಪ ಆರಂಭವಾದಾಗ ವಿಪಕ್ಷಗಳ ಸದಸ್ಯರು ಕಪ್ಪುಬಟ್ಟೆ ಧರಿಸಿ ಹಾಜರಾಗಿದ್ದರು. ಕಪ್ಪುಬಣ್ಣ, ಕಪ್ಪುಬಟ್ಟೆ ಮತ್ತು ಹಾಗೂ ಬಿಜೆಪಿ ಮತ್ತು 'ಇಂಡಿಯಾ' ನಡುವೆ ವಾಕ್ಸಮರಕ್ಕೆ ಕಾರಣವಾಯಿತು. ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ರಾಷ್ಟ್ರಪತಿ, ಉಪರಾಷ್ಟ್ರಪತಿ ಹಾಗೂ ಪ್ರಧಾನಿ ಕೈಗೊಂಡಿರುವ ವಿದೇಶ ಪ್ರವಾಸಕ್ಕೆ ಸಂಬಂಧಿಸಿದಂತೆ ವಿದೇಶಾಂಗ ಸಚಿವ ಎಸ್. ಜೈಶಂಕರ್, ಸದನದಲ್ಲಿ ಹೇಳಿಕೆ ನೀಡಲು ಮುಂದಾದರು. ಈ ವೇಳೆ ಪ್ರತಿಪಕ್ಷಗಳ ಸದಸ್ಯರು 'ಇಂಡಿಯಾ...' 'ಇಂಡಿಯಾ...' ಎಂದು ಘೋಷಣೆ ಕೂಗಿ ಅಡ್ಡಿಪಡಿಸಿದರು.

ಬಳಿಕ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರಿಗೆ ಮಾತನಾಡಲು ಸ್ಪೀಕರ್ ಅವಕಾಶ ನೀಡಿದರು. ಇದಕ್ಕೆ ಸಚಿವ ಪಿಯೂಷ್ ಗೋಯಲ್ ತೀವ್ರವಾಗಿ ಆಕ್ಷೇಪಿಸಿದರು. ಆಗ ಗದ್ದಲ ಜೋರಾಯಿತು.

ಜನ ವಿಶ್ವಾಸ (ನಿಬಂಧನೆಗಳ ತಿದ್ದುಪಡಿ) ಮಸೂದೆಯ ಮಂಡನೆ ವೇಳೆ ಪಿಯೂಷ್ ಅವರು, ಕಪ್ಪುಬಟ್ಟೆ ಧರಿಸಿ ಬಂದಿದ್ದ 'ಇಂಡಿಯಾ' ಸದಸ್ಯರ ಕಾಲೆಳೆದರು. 'ಕಪ್ಪುಹಣದ ಲೂಟಿ ಮರೆಮಾಚಲು ಕಪ್ಪುಬಟ್ಟೆ ಧರಿಸಿಕೊಂಡು ಬಂದಿದ್ದಾರೆ. ಇದರಿಂದ ನಿಮಗೆ ಅಂಟಿರುವ ಕಳಂಕ ತೊಳೆಯಲು ಸಾಧ್ಯವಿಲ್ಲ ಎಂದು ಕುಟುಕಿದ ಅವರು, ಎಎಪಿ ಸಂಸದ ರಾಘವ್ ಛಡ್ಡಾ ಮೇಲೆ ಕಾಗೆ ದಾಳಿ ನಡೆಸಿದ್ದ ಘಟನೆಯನ್ನೂ ಮಾತಿನ ನಡುವೆ ಎಳೆದು ತಂದರು. 'ಕಾಗೆಗಳೂ ಕಪ್ಪುಬಟ್ಟೆಗಳು ಬಹುಬೇಗ ಆಕರ್ಷಿತವಾಗುತ್ತವೆ' ಎಂದು ಸಂಸದರ ಹೆಸರು ಪ್ರಸ್ತಾಪಿಸದೇ ಪಿಯೂಷ್ ಗೋಯಲ್ ವ್ಯಂಗ್ಯವಾಡಿದರು.

'ಮೋದಿಯಿಂದ ಪ್ರಜಾತಂತ್ರಕ್ಕೆ ಕಳಂಕ'

ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನಲ್ಲಿ ಮಾತನಾಡದೇ ಹೊರಗಡೆ ರಾಜಕೀಯ ಭಾಷಣಗಳನ್ನು ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಸಿ ಬಳಿಯುವ ಕಾರ್ಯ ಮಾಡುತ್ತಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಟೀಕಿಸಿದ್ದಾರೆ.

ಸಂಸತ್ತಿನ ಇತಿಹಾಸದಲ್ಲಿ ಇಂತಹ ಕರಾಳ ದಿನಗಳನ್ನು ದೇಶ ಕಂಡಿಲ್ಲ ಎಂದು ಹೇಳಿದ್ದಾರೆ. ಹಿಂದಿಯಲ್ಲಿ ಟ್ವೀಟ್ ಮಾಡಿರುವ ಅವರು, 'ಕಳೆದ 85 ದಿನಗಳಿಂದ ಹೊತ್ತಿ ಉರಿಯುತ್ತಿರುವ ಮಣಿಪುರ ಕುರಿತು ಉದಾಸೀನತೆ ತೋರುತ್ತಿರುವ ಕೇಂದ್ರ ಸರ್ಕಾರ ಮನುಕುಲಕ್ಕೇ ಒಂದು ಕಳಂಕವಾಗಿದೆ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಮೋದಿ ಅವರು ವಿರೋಧ ಪಕ್ಷಗಳನ್ನು ವಿವಿಧ ಹೆಸರುಗಳಿಂದ ಜರಿಯುವ ಮೂಲಕ ತಮ್ಮ ಸರ್ಕಾರದ ವೈಫಲ್ಯಗಳನ್ನು ಮುಚ್ಚಿ ಹಾಕಲು ಸಾಧ್ಯ ಇಲ್ಲ. ಜನರಲ್ಲಿ ಜಾಗೃತಿ ಮೂಡಿದ್ದು, ಇಂತಹ ರಾಜಕಾರಣ ವಿರುದ್ಧ ಹೋರಾಡಲಿದ್ದಾರೆ' ಎಂದೂ ಖರ್ಗೆ ಹೇಳಿದ್ದಾರೆ.

'ಬಿಜೆಪಿ ಸಂಸದರು ನನಗೆ ಸಂಸತ್ತಿನಲ್ಲಿ ಮಾತನಾಡಲು ಬಿಡುತ್ತಿಲ್ಲ. ಮಣಿಪುರ ವಿಧ್ವಂಸದ ಕುರಿತು ಚರ್ಚೆಗೆ ಬಿಡದ ಧೋರಣೆ ಖಂಡಿಸಿ ಕಪ್ಪುಬಟ್ಟೆ ಧರಿಸಿದ ವಿರೋಧ ಪಕ್ಷಗಳ ಸದಸ್ಯರನ್ನು ನೋಡಿ ಹುಹಕಾರಿಸಿದ್ದಾರೆ. ಪರಿಶಿಷ್ಟರು, ಬುಡಕಟ್ಟು ಜನರು ಹಾಗೂ ಹಿಂದುಳಿದವರ ವಿರೋಧಿ ಮನಸ್ಥಿತಿ ಹೊಂದಿರುವವರು ಮಾತ್ರ ಕಪ್ಪುಬಟ್ಟೆ ಕುರಿತು ಈ ರೀತಿ ಗೇಲಿ ಮಾಡಲು ಸಾಧ್ಯ' ಎಂದು ಟೀಕಿಸಿದ್ದಾರೆ.

ಸುಗ್ರೀವಾಜ್ಞೆ: ಕಲಾಪ ಸಮಿತಿ ಸಭೆಗೆ ಬಹಿಷ್ಕಾರ

ಸಭಾಪತಿ ಜಗದೀಪ್ ಧನಕರ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ರಾಜ್ಯಸಭೆಯ ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯನ್ನು ಪ್ರತಿಪಕ್ಷಗಳ ಸದಸ್ಯರು ಬಹಿಷ್ಕರಿಸಿದರು.

ದೆಹಲಿಯ ಸುಗ್ರೀವಾಜ್ಞೆಗೆ ಕಾಯ್ದೆ ರೂಪ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಹಾಗಾಗಿ, ಮಸೂದೆ ಮಂಡನೆಗಾಗಿ ಕಲಾಪ ಪಟ್ಟಿಗೆ ಸೇರಿಸುವ ಸಂಬಂಧ ಧನಕರ್ ಅವರು ಈ ಸಭೆ ಕರೆದಿದ್ದರು.

ಕಾಂಗ್ರೆಸ್‌ನ ಜೈರಾಮ್ ರಮೇಶ್, ಎಲ್. ಹನುಮಂತಯ್ಯ, ತೃಣಮೂಲ ಕಾಂಗ್ರೆಸ್‌ನ ಡೆರಿಕ್ ಒಬ್ರಿಯಾನ್, ಆರ್‌ಜೆಡಿಯ ಮಿಸಾ ಭಾರತಿ, ಬಿಆರ್‌ಎಸ್‌ನ ಕೆ. ಕೇಶವರಾವ್ ಸಭೆಯಿಂದ ಹೊರಗುಳಿದಿದ್ದರು ಎಂದು ಮೂಲಗಳು ತಿಳಿಸಿವೆ. ವೈಎಸ್‌ಆರ್‌ನ ವಿ. ವಿಜಯಸಾಯಿ ರೆಡ್ಡಿ, ಬಿಜೆಡಿಯ ಸಸ್ಮಿತ್ ಪಾತ್ರ, ಬಿಜೆಪಿಯ ಪ್ರಕಾಶ್ ಜಾವಡೇಕರ್, ಪಿ.ಟಿ. ಉಷಾ, ಸಚಿವರಾದ ಪಿಯೂಷ್ ಗೋಯಲ್, ವಿ. ಮುರಳೀಧರನ್ ಸೇರಿದಂತೆ ಆಡಳಿತಾರೂಢ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ದೆಹಲಿ ಕೇಂದ್ರಾಡಳಿತ ಪ್ರದೇಶ (ತಿದ್ದುಪಡಿ) ಮಸೂದೆ 2023 ಅಸಾಂವಿಧಾನಿಕವಾಗಿದೆ ಎಂದು 'ಇಂಡಿಯಾ' ದೂರಿದೆ.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ಈಚೆಗಷ್ಟೇ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಆದರೂ, ದೆಹಲಿ ಸರ್ಕಾರದ ಮೇಲೆ ನಿಯಂತ್ರಣ ಸಾಧಿಸಲು ಸುಗ್ರೀವಾಜ್ಞೆಗೆ ಕಾಯ್ದೆ ರೂಪ ತರಲು ಹೊರಟಿರುವ ಕೇಂದ್ರದ ನಡೆಯು ಸಾಂವಿಧಾನಿಕವಾಗಿಲ್ಲ ಎಂದು ಆಪಾದಿಸಿದೆ.

ಕಳೆದ ವಾರ ನಡೆದ ಸಮಿತಿಯ ಸಭೆಯನ್ನೂ ವಿರೋಧ ಪಕ್ಷಗಳ ಸದಸ್ಯರು ಬಹಿಷ್ಕರಿಸಿದ್ದರು.

'ವಿಚ್ಛೇದನಕ್ಕೆ ಬಂಜೆತನ ಸಕಾರಣವಾಗದು'

ಪ್ರಜಾವಾಣಿ ವಾರ್ತೆ

ಪಟ್ನಾ: ಹಿಂದೂ ವಿವಾಹ ಕಾಯ್ದೆಯಡಿ ವಿಚ್ಛೇದನ ಪಡೆಯಲು ಬಂಜೆತನ ಸಕಾರಣವಾಗದು ಎಂದು ಪಟ್ನಾ ಹೈಕೋರ್ಟ್ ಹೇಳಿದೆ.

ಮಗುವಿಗೆ ಜನ್ಮ ನೀಡುವ ಸಾಮರ್ಥ್ಯ ಹೊಂದದಿರುವುದು ವೈವಾಹಿಕ ಜೀವನದ ಸಮಸ್ಯೆಯ ಒಂದು ಅಂಶ ಮಾತ್ರ. ಹೀಗಾಗಿ, ದತ್ತು ತೆಗೆದುಕೊಳ್ಳುವುದು ಅಥವಾ ಮಕ್ಕಳನ್ನು ಪಡೆಯಲು ಪರ್ಯಾಯ ಆಯ್ಕೆಗಳ ಕುರಿತು ದಂಪತಿ ಆಲೋಚಿಸಬೇಕು ಎಂದು ನ್ಯಾಯಮೂರ್ತಿಗಳಾದ ಜಿತೇಂದ್ರಕುಮಾರ್ ಹಾಗೂ ಪಿ.ಬಿ. ಭಜಂತ್ರಿ ಅವರಿದ್ದ ನ್ಯಾಯಪೀಠ ಹೇಳಿದೆ.

ನ್ಯಾಯಪೀಠವು ಸೋನುಕುಮಾರ್ ವಿರುದ್ಧ ರೀನಾ ದೇವಿ ಪ್ರಕರಣದ ವಿಚಾರಣೆ ನಡೆಸಿತು.

'ಮಗುವನ್ನು ಹೊಂದುವ ಸಾಮರ್ಥ್ಯ ಇಲ್ಲದಿರುವುದು ಮದುವೆಯನ್ನು ರದ್ದುಗೊಳಿಸಲು ಆಧಾರವಾಗದು. ದಂಪತಿ ಪೈಕಿ ಯಾರಲ್ಲಿಯೂ ಸಮಸ್ಯೆ ಕಂಡುಬರಬಹುದು. ಇಂತಹ ಸಂದರ್ಭಗಳಲ್ಲಿ ಹಿಂದೂ ವಿವಾಹ ಕಾಯ್ದೆಯಡಿ ವಿಚ್ಛೇದನ ನೀಡಲು ಆಗದು' ಎಂದು ನ್ಯಾಯಪೀಠ ಹೇಳಿದೆ.

ಹಿಂದೂ ವಿವಾಹ ಕಾಯ್ದೆಯಡಿ ವಿಚ್ಛೇದನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸೋನುಕುಮಾರ್ ಸಲ್ಲಿಸಿದ್ದ ಮರುಪರಿಶೀಲನಾ ಮೇಲ್ಮನವಿಯನ್ನು ನ್ಯಾಯಪೀಠ ವಜಾಗೊಳಿಸಿತು.

ಜ್ಞಾನವಾಪಿ ಮಸೀದಿ ವೈಜ್ಞಾನಿಕ ಸಮೀಕ್ಷೆ: ಆಗಸ್ಟ್ 3ಕ್ಕೆ ತೀರ್ಪು

ಪ್ರಜಾವಾಣಿ ವಾರ್ತೆ

ಲಖನೌ: ಜ್ಞಾನವಾಪಿ ಮಸೀದಿ ಆವರಣದ ವಿಸ್ತೃತ ವೈಜ್ಞಾನಿಕ ಸಮೀಕ್ಷೆಗೆ ತಡೆಯಾಜ್ಞೆ ಕೋರಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ಆಗಸ್ಟ್ 3ರಂದು ನೀಡಲಿದೆ. ಅಲ್ಲಿಯವರೆಗೂ ಈ ಕುರಿತ ತಡೆಯಾಜ್ಞೆ ಮುಂದುವರಿಯಲಿದೆ.

ಗುರುವಾರ ಎರಡೂ ಕಡೆಯ ವಾದ ಆಲಿಸಿದ ಮುಖ್ಯ ನ್ಯಾಯಮೂರ್ತಿ ಪ್ರೀತಿಂಕರ್ ದಿವಾಕರ್ ಅವರಿದ್ದ ಏಕಸದಸ್ಯ ಪೀಠ ತೀರ್ಪು ಕಾಯ್ದಿರಿಸಿತು. ಮಸೀದಿಯ ನಿರ್ವಹಣೆ ಉಸ್ತುವಾರಿ ಹೊಂದಿರುವ ಅಂಜುಮನ್ ಇಂತೆಜಾಮಿಯಾ ಸಮಿತಿ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿತ್ತು.

ಇದಕ್ಕೂ ಮುನ್ನ ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣು ಶಂಕರ್ ಜೈನ್ ಅವರು, 'ಈ ಮೊದಲು ಕಮಿಷನರ್ ಅವರು ಸಮೀಕ್ಷೆ ನಡೆಸಿದ್ದ ವೇಳೆ ಅಲ್ಲಿ 'ಸ್ವಸ್ತಿಕ್ ಚಿಹ್ನೆ' ಕಂಡುಬಂದಿದೆ. ಇದು, ದೇವಸ್ಥಾನ ಸ್ಥಳದಲ್ಲಿ ಮಸೀದಿ ನಿರ್ಮಿಸಿರುವುದರ ದ್ಯೋತಕವಾಗಿದೆ' ಎಂದು ವಾದಿಸಿದರು.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ನಡೆಸಲಿರುವ ಸಮೀಕ್ಷೆಯನ್ನು ಇನ್ನಷ್ಟು ನಿರ್ಣಾಯಕವಾದ ಪುರಾವೆಗಳನ್ನು ಬಹಿರಂಗ ಪಡಿಸಬಹುದಾಗಿದೆ ಎಂದು ಪ್ರತಿಪಾದಿಸಿದರು.

17ನೇ ಶತಮಾನದಲ್ಲಿ ಮೊಘಲ್ ದೊರೆ ಔರಂಗಜೇಬ್, ದೇಗುಲವನ್ನು ಭಾಗಶಃ ನೆಲಸಮಗೊಳಿಸಿದ್ದಾರೆ ಎಂಬುದು ಹಿಂದೂ ಅರ್ಜಿದಾರರ ವಾದ. ಮುಸ್ಲಿಂ ಅರ್ಜಿದಾರರು, 'ಔರಂಗಜೇಬ್ ಆಳ್ವಿಕೆಗೆ ಮೊದಲೇ ಮಸೀದಿ ಇತ್ತು. ಪೂರಕವಾಗಿ ಭೂದಾಖಲೆಗಳಿವೆ' ಎಂದು ವಾದಿಸಿದ್ದಾರೆ.

ವಿಸ್ತರಣೆಗೆ ಮತ್ತೆ ಅರ್ಜಿ ಸಲ್ಲಿಸಿದರೆ ಪುರಸ್ಕರಿಸುವುದಿಲ್ಲ – ಕೇಂದ್ರಕ್ಕೆ 'ಸುಪ್ರೀಂ' ಸ್ಪಷ್ಟನೆ

ಸೆ.15ರವರೆಗೆ ಇ.ಡಿ ನಿರ್ದೇಶಕರ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಜಾರಿ ನಿರ್ದೇಶನಾಲಯದ (ಇ.ಡಿ) ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರವಧಿಯನ್ನು ಸುಪ್ರೀಂ ಕೋರ್ಟ್ ಸೆ.15ರವರೆಗೆ ವಿಸ್ತರಿಸಿದೆ. 'ಕೇಂದ್ರದ ವಾದ ಪುರಸ್ಕರಿಸಿ 'ಸಾರ್ವಜನಿಕ ಮತ್ತು ರಾಷ್ಟ್ರೀಯ ಹಿತಾಸಕ್ತಿ' ಆಧರಿಸಿ ವಿಸ್ತರಿಸಲಾಗಿದೆ' ಎಂದು ತಿಳಿಸಿತು.

ಮಿಶ್ರಾ

ಅವಧಿ ವಿಸ್ತರಣೆ ಕೋರಿದ್ದ ಕೇಂದ್ರ ಸರ್ಕಾರವು, 'ಹಣಕಾಸು ಕ್ರಿಯಾ ಯೋಜನೆ ಪಡೆ (ಎಫ್‌ಎಟಿಎಫ್) ಈಗ ಪರಿಶೀಲನೆ ನಡೆಸುತ್ತಿದೆ. ನೆರೆ ರಾಷ್ಟ್ರಗಳು ಭಾರತವು ಎಫ್‌ಎಟಿಎಫ್‌ನ 'ಕಂದುಪಟ್ಟಿ'ಯಲ್ಲಿರಬೇಕು ಎಂದು ಬಯಸುತ್ತಿವೆ. ಹೀಗಾಗಿ, ಮಿಶ್ರಾ ಮುಂದುವರಿಕೆ ಅಗತ್ಯ' ಎಂದು ಪ್ರತಿಪಾದಿಸಿತು.

'ಪ್ರಸ್ತುತ, ಹಣಕಾಸು ಕ್ರಿಯಾ ಯೋಜನೆ ಪಡೆಯು (ಎಫ್‌ಎಟಿಎಫ್) ನೀಡಲಿರುವ ಶ್ರೇಣಿಯು ಮುಖ್ಯವಾಗುತ್ತದೆ. ಹೀಗಾಗಿ, ಮುಖ್ಯಸ್ಥರ ಅವಧಿಯನ್ನು ವಿಸ್ತರಿಸಬೇಕಾಗಿದೆ' ಎಂದು ಸಾಲಿಸಿಟರ್ ಜನರಲ್ ಪೀಠದ ಗಮನಕ್ಕೆ ತಂದರು.

ಇದಕ್ಕೂ ಮುನ್ನ ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್ ತೀವ್ರ ವಾಗ್ದಾಳಿ ನಡೆಸಿತು. ಬಳಿಕ ಮನವಿಗೆ ಸ್ಪಂದಿಸಿ, 'ಮತ್ತೆ ಅವಧಿ ವಿಸ್ತರಣೆ ಕೋರಿ ಅರ್ಜಿಯನ್ನು ಸಲ್ಲಿಸಬಾರದು' ಎಂದು ತಾಕೀತು ಮಾಡಿತು.

'ಹಾಲಿ ನಿರ್ದೇಶಕರನ್ನು ಹೊರತುಪಡಿಸಿ ಇ.ಡಿ ಪೂರ್ಣ ಅಸಮರ್ಥರಿಂದಲೇ ತುಂಬಿದೆಯೇ?' ಎಂದೂ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಪೀಠ ಕೇಂದ್ರವನ್ನು ಕಟುವಾಗಿ ಪ್ರಶ್ನಿಸಿತು. ನ್ಯಾಯಮೂರ್ತಿಗಳಾದ ವಿಕ್ರಂನಾಥ್, ಸಂಜಯ್ ಕರೋಲ್ ಈ ಪೀಠದ ಇತರ ಸದಸ್ಯರು.

ಕೇಂದ್ರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಮಿಶ್ರಾ ಅವಧಿಯನ್ನು ಅ. 15ರವರೆಗಾದರೂ ವಿಸ್ತರಿಸಬೇಕು' ಎಂದು ಕೋರಿದರು. ಇದನ್ನು ತಳ್ಳಿಹಾಕಿದ ಪೀಠ, ರಾಷ್ಟ್ರೀಯ ಹಿತಾಸಕ್ತಿ ಆಧರಿಸಿ ಸೆ.15ರ ಮಧ್ಯರಾತ್ರಿವರೆಗಷ್ಟೇ ವಿಸ್ತರಿಸಲಾಗಿದೆ' ಎಂದು ಸ್ಪಷ್ಟಪಡಿಸಿತು.

'ಸಾಮಾನ್ಯ ಸಂದರ್ಭಗಳಲ್ಲಿ ಈ ಬೇಡಿಕೆ ಪರಿಗಣಿಸುತ್ತಿರಲಿಲ್ಲ. ರಾಷ್ಟ್ರೀಯ ಹಿತಾಸಕ್ತಿಯ ಕಾರಣ ನೀಡಿರುವುದರಿಂದ ಒಪ್ಪಿದ್ದೇವೆ. ಮತ್ತೆ ಇಂತಹ ಯಾವುದೇ ಅರ್ಜಿಗಳನ್ನು ಪುರಸ್ಕರಿಸುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿತು.

ನ್ಯಾಯಮೂರ್ತಿ ಗವಾಯಿ ಅವರು, ಆದೇಶವನ್ನು ಬರೆಸುತ್ತಿದ್ದಾಗಲೂ ತುಷಾರ್ ಮೆಹ್ತಾ ಅವರು, ಕನಿಷ್ಠ ಸೆ. 30ರವರೆಗಾದರೂ ಅವಕಾಶ ಕಲ್ಪಿಸಿ ಎಂದು ಕೋರಿದರು. ಪೀಠ ಇದನ್ನು ತಳ್ಳಿಹಾಕಿತು.

ಕಾಂಗ್ರೆಸ್ ನಾಯಕ ಅರ್ಜಿದಾರರಾದ ಜಯಾ ಠಾಕೂರ್ ಅವರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಎ.ಎಂ.ಸಿಂಘ್ವಿ ಅವರು, ಇಡೀ ರಾಷ್ಟ್ರದ ಹೊಣೆ ಒಬ್ಬರ ಮೇಲಿದೆ ಎಂಬಂತೆ ಕೇಂದ್ರ ಬಿಂಬಿಸುತ್ತಿದೆ ಎಂದರು.

ಮಿಶ್ರಾ ಅಧಿಕಾರವಧಿಯ ಅವಧಿ ವಿಸ್ತರಣೆಯನ್ನು ವಿರೋಧಿಸಿದ ಅವರು, 'ಎಫ್‌ಎಟಿಎಫ್ ತನ್ನ ಕಾರ್ಯವನ್ನು ಇದೇ ವರ್ಷ ಆರಂಭಿಸಿದ್ದು, 2024ರಲ್ಲಿ ಮುಗಿಯಲಿದೆ. ಒಟ್ಟು 40 ಮಾನದಂಡಗಳಿದ್ದು, ಇದರಲ್ಲಿ ಹಣ ವರ್ಗಾವಣೆ ಪ್ರಕರಣಗಳು ಸೇರಿವೆ' ಎಂದು ಪೀಠದ ಗಮನಕ್ಕೆ ತಂದರು.

ಎನ್‌ಜಿಒ ಕಾಮನ್ ಕ್ವಾಸ್ ಪ್ರತಿನಿಧಿಸಿದ್ದ ವಕೀಲ ಪ್ರಶಾಂತ್ ಭೂಷಣ್, 'ಮಿಶ್ರಾ ಅಷ್ಟೊಂದು ಪ್ರಮುಖರಾಗಿದ್ದರೆ, ಸರ್ಕಾರ ಸಲಹೆಗಾರರಾಗಿ ನೇಮಿಸಬಹುದು. ಎಫ್‌ಎಟಿಎಫ್ ಪರಿಶೀಲನೆ ಮುಂದಿನ ವರ್ಷದವರೆಗೂ ನಡೆಯುವಾಗ ಅವಧಿ ವಿಸ್ತರಣೆ ಏಕೆ ಬೇಕು' ಎಂದು ಆಕ್ಷೇಪಿಸಿದರು.

ಸುಪ್ರೀಂ ಕೋರ್ಟ್ ಈ ಹಿಂದೆ ಜುಲೈ 11ರಂದು, ಮಿಶ್ರಾ ಅವರಿಗೆ ಎರಡು ಬಾರಿ 'ನಿಯಮಬಾಹಿರ'ವಾಗಿ ತಲಾ ಒಂದು ವರ್ಷದವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಅಭಿಪ್ರಾಯ ಪಟ್ಟಿತ್ತು.

ಐಆರ್‌ಎಸ್ ಶ್ರೇಣಿಯ ಅಧಿಕಾರಿಗಳಿಗೆ ಎರಡನೇ ಅವಧಿಗೆ ಮುಂದುವರಿಸಬಾರದು ಎಂದು ಸುಪ್ರೀಂ ಕೋರ್ಟ್ 2021ರಲ್ಲಿ ನೀಡಿದ್ದ ತೀರ್ಪಿನ ಉಲ್ಲಂಘನೆಯಾಗಿದೆ ಎಂದು ಸ್ಪಷ್ಟವಾಗಿ ಹೇಳಿತ್ತು. ಅಲ್ಲದೆ, ಅವರ ಅವಧಿಯನ್ನು ನವೆಂಬರ್‌ನಿಂದ ಜುಲೈ 31ರವರೆಗೆ ಮೊಟಕುಗೊಳಿಸಿತ್ತು.

'ಇ.ಡಿ ಅಸಮರ್ಥರಿಂದ ತುಂಬಿದೆಯೇ?'

'ಇ.ಡಿ ಪೂರ್ಣ ಅಸಮರ್ಥರಿಂದ ತುಂಬಿದೆಯೇ? 'ಹಾಲಿ ನಿರ್ದೇಶಕರನ್ನು ಬಿಟ್ಟು ಇಡೀ ಇಲಾಖೆಯಲ್ಲಿ ಬೇರಾರೂ ಸಮರ್ಥರೇ ಇಲ್ಲವೆ' ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಪೀಠ ಕೇಂದ್ರ ಸರ್ಕಾರವನ್ನು ಕಟುವಾಗಿ ಪ್ರಶ್ನಿಸಿತು.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ, 'ಹಾಲಿ ನಿರ್ದೇಶಕರನ್ನು ಹೊರತುಪಡಿಸಿ ಬೇರಾರು ಸಮರ್ಥರಲ್ಲ ಎಂಬಂತೆ ನಮಗೆ ಚಿತ್ರಣವನ್ನು ನೀಡಲಾಗುತ್ತಿದೆ ಎಂದು ನಿಮಗನ್ನಿಸುವುದಿಲ್ಲವೇ' ಎಂದು ಪೀಠ ಪ್ರಶ್ನಿಸಿತು.

ನ್ಯಾಯಮೂರ್ತಿ ಗವಾಯಿ ಅವರು, 'ಈ ವ್ಯಕ್ತಿ (ಮಿಶ್ರಾ) ನಿರ್ದೇಶಕರಾಗಿ ಇಲ್ಲದಿದ್ದರೆ ಕಾರ್ಯನಿರ್ವಹಿಸಲಾಗದು ಎಂದು ಬಿಂಬಿಸಿದರೆ ಇಲಾಖೆಯ ನೈತಿಕ ಸ್ಥೈರ್ಯ ಕುಸಿಯುವುದಿಲ್ಲವೇ? ಎಂದು ಪ್ರಶ್ನಿಸಿದರು.

ಅಲ್ಲದೆ, 'ನಾನು ಮುಖ್ಯ ನ್ಯಾಯಮೂರ್ತಿ ಆಗಬೇಕಾಗಿದೆ. ಅಕಸ್ಮಾತ್ ಆಗದಿದ್ದರೆ ಸುಪ್ರೀಂ ಕೋರ್ಟ್ ಕುಸಿದುಬೀಳುವುದೇ' ಎಂದು ಪ್ರಶ್ನಿಸಿದರು.

ಚೆನ್ನೈ: ಪರಿಸರ ಸಂರಕ್ಷಣೆ– ಸಂವಾದ

ಪ್ರಜಾವಾಣಿ ವಾರ್ತೆ

ಚೆನ್ನೈ: ಜಿ–20 ಪರಿಸರ ಮತ್ತು ಹವಾಮಾನ ಸುಸ್ಥಿರತೆ ಕುರಿತ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ನಗರಕ್ಕೆ ಬಂದಿರುವ ಅಮೆರಿಕದ ಪರಿಸರ ಸಂರಕ್ಷಣಾ ಸಂಸ್ಥೆಯ (ಯುಎಸ್‌ಇಪಿಎ) ಆಡಳಿತಾಧಿಕಾರಿ ಮೈಕೇಲ್ ಎಸ್.ರೇಗನ್ ಅವರು ಶಾಲಾ ವಿದ್ಯಾರ್ಥಿಗಳೊಂದಿಗೆ ಗುರುವಾರ ಸಂವಾದ ನಡೆಸಿದರು.

ಹವಾಮಾನ ಬದಲಾವಣೆಯ ಪರಿಣಾಮಗಳು, ಸಮುದ್ರಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅವರು ನಡೆಸಬಹುದಾದ ಪ್ರಯತ್ನಗಳ ಕುರಿತು ಅವರು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದರು.

ಹವಾಮಾನ ಬದಲಾವಣೆಯು ಕರಾವಳಿ ಮೇಲೆ ಬೀರುವ ಪರಿಣಾಮಗಳನ್ನು ತಿಳಿದುಕೊಳ್ಳುವ ಸಲುವಾಗಿ ಆಯೋಜಿಸಿದ್ದ ಸಮುದ್ರ ತೀರ ನಡಿಗೆಯಲ್ಲಿ ಅವರು ವಿದ್ಯಾರ್ಥಿಗಳೊಂದಿಗೆ ಹೆಜ್ಜೆ ಹಾಕಿದರು ಎಂದು ಮೂಲಗಳು ಹೇಳಿವೆ.

ಅಮೆರಿಕ ಕಾನ್ಸುಲೇಟ್, ದಿ ಎನರ್ಜಿ ಅಂಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್ (ತೇರಿ) ಸಹಯೋಗದಲ್ಲಿ 'ಓಷನ್ ಮ್ಯಾಟರ್ಸ್' ಯೋಜನೆ ಭಾಗವಾಗಿ ಈ ಸಂವಾದವನ್ನು ಆಯೋಜಿಸಲಾಗಿತ್ತು.

ಅಮೆರಿಕ ಕಾನ್ಸುಲೇಟ್‌ನ ಸಾರ್ವಜನಿಕ ವ್ಯವಹಾರಗಳ ಅಧಿಕಾರಿ ಜೆನ್ನಿಫರ್ ಬುಲಾಕ್, ಮದ್ರಾಸ್ ಕ್ರೊಕೊಡೈಲ್ ಬ್ಯಾಂಕ್ ಟ್ರಸ್ಟ್‌ನ ಶಿಕ್ಷಣ ಅಧಿಕಾರಿ ಸ್ಟೆಫಿ ಜಾನ್, 'ತೇರಿ' ಫೆಲೊ ಮತ್ತು ಓಷನ್ ಮ್ಯಾಟರ್ಸ್ ಯೋಜನೆಯ ಉಸ್ತುವಾರಿ ಸಲ್ತಾನತ್ ಎಂ.ಕಾಜಿ ಪಾಲ್ಗೊಂಡಿದ್ದರು.

ಸಂಕ್ಷಿಪ್ತ ಸುದ್ದಿ

ಗಗನಯಾನ: ಮತ್ತೆ ಎರಡು ಪರೀಕ್ಷೆ ಯಶಸ್ವಿ– ಇಸ್ರೊ

ಬೆಂಗಳೂರು: ಮಾನವಸಹಿತ ಬಾಹ್ಯಾಕಾಶ ಕಾರ್ಯಕ್ರಮ 'ಗಗನಯಾನ'ದ 'ಸರ್ವೀಸ್ ಮಾಡ್ಯೂಲ್ ಪ್ರೊಪಲ್ಷನ್ ಸಿಸ್ಟಮ್' (ಎಸ್‌ಎಂಪಿಎಸ್)ನ ಕಾರ್ಯಕ್ಷಮತೆ ಮತ್ತು ಸನ್ನದ್ಧತೆಯನ್ನು ಒರೆಗೆ ಹಚ್ಚುವ ಮತ್ತೆ ಎರಡು ಪರೀಕ್ಷೆಗಳನ್ನು (ಹಾಟ್ ಟೆಸ್ಟ್) ಯಶಸ್ವಿಯಾಗಿ ನಡೆಸಲಾಗಿದೆ ಎಂದು ಇಸ್ರೊ ತಿಳಿಸಿದೆ.

ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯ ಮಹೇಂದ್ರಗಿರಿಯಲ್ಲಿರುವ ಸಂಸ್ಥೆಯ ಪ್ರೊಪಲ್ಷನ್ ಕೇಂದ್ರದಲ್ಲಿ ಎರಡು ಮತ್ತು ಮೂರನೇ 'ಹಾಟ್ ಟೆಸ್ಟ್'ಗಳನ್ನು ಬುಧವಾರ ನಡೆಸಲಾಯಿತು ಎಂದು ಇಸ್ರೊ ತಿಳಿಸಿದೆ. ಮೊದಲ ಪರೀಕ್ಷೆಯನ್ನು ಜುಲೈ 19ರಂದು ನಡೆಸಲಾಗಿತ್ತು.

ಗಗನಯಾನಕ್ಕೆ ಸಂಬಂಧಿಸಿದ ಇನ್ನೂ ಮೂರು ಪರೀಕ್ಷೆಗಳನ್ನು ನಿಗದಿತ ದಿನಗಳನ್ನು ನಡೆಸಲಾಗುವುದು ಎಂದೂ ಇಸ್ರೊ ತಿಳಿಸಿದೆ.

ಸಾಗರವಿಜ್ಞಾನ ಸಂಸ್ಥೆಯ ಹಡಗು ರಕ್ಷಣೆ

ಮುಂಬೈ: ಗೋವಾ–ಕಾರವಾರದ ಕರಾವಳಿ ಭಾಗದಲ್ಲಿ ಅರಬ್ಬಿ ಸಮುದ್ರದಲ್ಲಿ ಸಿಲುಕಿದ್ದ, 36 ಜನರಿದ್ದ ರಾಷ್ಟ್ರೀಯ ಸಾಗರ ವಿಜ್ಞಾನ ಸಂಸ್ಥೆಯ (ಎನ್‌ಐಒ) ಹಡಗನ್ನು ಭಾರತೀಯ ಕರಾವಳಿ ಕಾವಲು ಪಡೆಯು (ಐಸಿಜಿ) ಸುರಕ್ಷಿತವಾಗಿ ದಡ ಮುಟ್ಟಿಸಿದೆ.

ಹಡಗಿನಲ್ಲಿದ್ದ 36 ಜನರನ್ನು ರಕ್ಷಿಸುವುದರ ಜೊತೆಗೆ ಮೌಲ್ಯಯುತವಾಗಿದ್ದ ವಿಜ್ಞಾನ ಪರಿಕರಗಳು ಮತ್ತು ಸಂಶೋಧನಾ ದತ್ತಾಂಶಗಳನ್ನೂ ಸಿಬ್ಬಂದಿ ರಕ್ಷಿಸಿದ್ದಾರೆ. ಭಾರಿ ಮಳೆ ಮತ್ತು ಗಾಳಿಯಿಂದಾಗಿ ಈಗ ಸಮುದ್ರದಲ್ಲಿ ಪ್ರತಿಕೂಲ ವಾತಾವರಣ ಇದೆ.

ಘಟನೆಯನ್ನು ಮುಂಬೈನಲ್ಲಿ ಇರುವ ಐಸಿಜಿಯ ಪ್ರಾದೇಶಿಕ ಮುಖ್ಯ ಕಚೇರಿ ದೃಢಪಡಿಸಿದೆ.

ಹಡಗಿನಲ್ಲಿ ಎಂಟು ಮಂದಿ ವಿಜ್ಞಾನಿಗಳು ಇದ್ದರು. 'ಪರಿಸ್ಥಿತಿಯು ಗಂಭೀರವಾಗಿತ್ತು. ವಿಜ್ಞಾನ ಪರಿಕರಗಳು, ದತ್ತಾಂಶಗಳು ಅದರಲ್ಲಿದ್ದವು. ಪ್ರಾಕೃತಿಕವಾಗಿ ಸೂಕ್ಷ್ಮವಾಗಿರುವ ಕಾರವಾರ ಕರಾವಳಿ ತೀರಕ್ಕೆ ಹತ್ತಿರದಲ್ಲಿದ್ದುದರಿಂದ ಅವಘಡ ವಾದಲ್ಲಿ ತೈಲ ಸೋರಿಕೆಯಾಗಿ ಮಾಲಿನ್ಯಕ್ಕೆ ಕಾರಣವಾಗುವ ಅಪಾಯವಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಮಹಿಳಾ ಮೀಸಲಾತಿ: ಒಮ್ಮತ ಅಗತ್ಯ'

ನವದೆಹಲಿ (ಪಿಟಿಐ): ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಎಲ್ಲಾ ರಾಜಕೀಯ ಪಕ್ಷಗಳ ಒಮ್ಮತದ ಒಪ್ಪಿಗೆ ಬೇಕಾಗುತ್ತದೆ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಅವರು ರಾಜ್ಯಸಭೆಯಲ್ಲಿ ಗುರುವಾರ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಲಿಂಗಾಧಾರಿತ ನ್ಯಾಯವು ಕೇಂದ್ರ ಸರ್ಕಾರದ ಅತ್ಯಂತ ಪ್ರಮುಖ ಬದ್ಧತೆ ಎಂದು ಹೇಳಿರುವ ಮೇಘ್ವಾಲ್ ಅವರು, ಈ ಮಸೂದೆಗೆ ಸಾಂವಿಧಾನಿಕ ತಿದ್ದುಪಡಿ ತಂದು ಸಂಸತ್ತಿನಲ್ಲಿ ಮಂಡಿಸುವ ಮೊದಲು, ಇದಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಎಲ್ಲಾ ರಾಜಕೀಯ ಪಕ್ಷಗಳ ಅಭಿಪ್ರಾಯ ಸಂಗ್ರಹಿಸಿ 'ಎಚ್ಚರಿಕೆಯಿಂದ ಪರಿಗಣಿಸಬೇಕಾಗುತ್ತದೆ' ಎಂದು ಅವರು ತಿಳಿಸಿದ್ದರೆ.

ಮಣಿಪುರಕ್ಕೆ 'ಇಂಡಿಯಾ' ನಿಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಜನಾಂಗೀಯ ಸಂಘರ್ಷದಿಂದ ನಲುಗಿರುವ ಮಣಿಪುರಕ್ಕೆ ಇದೇ 29, 30ರಂದು ಭೇಟಿ ನೀಡಲಿರುವ ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ ಸಂಸದರು ಮತ್ತು ಪ್ರತಿನಿಧಿಗಳ ನಿಯೋಗ ಪರಿಸ್ಥಿತಿಯ ಅವಲೋಕನ ನಡೆಸಲಿದೆ.

ಎನ್‌ಡಿಎಯೇತರ ಸರ್ಕಾರಗಳ 10 ಮುಖ್ಯಮಂತ್ರಿಗಳನ್ನು ಮಣಿಪುರಕ್ಕೆ ಕಳುಹಿಸಬೇಕು ಎಂಬುದು 'ಇಂಡಿಯಾ'ದ ಆರಂಭಿಕ ಯೋಜನೆಯಾಗಿತ್ತು. ಆದರೆ, ವ್ಯವಸ್ಥೆ ಕಷ್ಟವಾಗುವ ಹಿನ್ನೆಲೆಯಲ್ಲಿ ಸಂಸದರು, ಪ್ರತಿನಿಧಿಗಳನ್ನು ಮಾತ್ರವೇ ಕಳುಹಿಸಲು ನಿರ್ಧರಿಸಲಾಗಿದೆ.

ಎರಡು ದಿನ ಮಣಿಪುರದಲ್ಲಿ ಉಳಿಯಲಿರುವ 'ಇಂಡಿಯಾ'ದ ನಿಯೋಗ ಮೊದಲು ಪರಿಹಾರ ಶಿಬಿರಗಳಿಗೆ ಭೇಟಿ ನೀಡಲಿದೆ. ನಂತರ ವಿವಿಧ ಸಮುದಾಯಗಳ ಜನರನ್ನು ಸಂಪರ್ಕಿಸಲಿದೆ.

ತೃಣಮೂಲ ಕಾಂಗ್ರೆಸ್ ಸಂಸದೆ ಸುಶ್ಮಿತಾ ದೇವ್, ಎನ್‌ಸಿಪಿಯ ವಂದನಾ ಚೌಹಾಣ್, ಜೆಎಂಎಂನ ಮಹುವಾ ಮಜ್ಜಿ ಈ ನಿಯೋಗದಲ್ಲಿ ಇರಲಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಂಸದರಾದ ಹಿಬಿ ಎಡೆನ್, ಡೀನ್ ಕುರಿಯಕ್ಕೊ, ಡೆರಿಕ್ ಒ ಬ್ರಿಯಾನ್ ನೇತೃತ್ವದ ತೃಣಮೂಲ ಕಾಂಗ್ರೆಸ್ ನಿಯೋಗ, ಸಂಸದರಾದ ಜಾನ್ ಬ್ರಿಟ್ಟಾಸ್, ಬಿನೊಯ್ ವಿಶ್ವಮ್ ಅವರನ್ನು ಒಳಗೊಂಡ ಎಡಪಕ್ಷಗಳ ನಿಯೋಗ ಈಗಾಗಲೇ ಮಣಿಪುರಕ್ಕೆ ಭೇಟಿ ನೀಡಿ, ಪರಿಸ್ಥಿತಿಯ ಅವಲೋಕನ ನಡೆಸಿವೆ.

ಬುಡಕಟ್ಟು ಸಮುದಾಯಗಳಿಗೆ ಪ್ರತ್ಯೇಕ ಆಡಳಿತ ಒದಗಿಸಲು ಆಗ್ರಹಿಸಿ ಧರಣಿ

ಇಂಫಾಲ್ (ಪಿಟಿಐ): ಬುಡಕಟ್ಟು ಸಮುದಾಯಗಳಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ ಒದಗಿಸಲು ಆಗ್ರಹಿಸಿ ಕುಕಿ–ಜೋ ಸಮುದಾಯವು ಮಣಿಪುರದ ಕಾಂಗ್ಪೋಕ್ಪಿ ಜಿಲ್ಲೆಯಲ್ಲಿ ಗುರುವಾರ ಧರಣಿ ನಡೆಸಿತು.

ಸಾದರ್ ಹಿಲ್ಸ್ ಜಿಲ್ಲೆಯ ಬುಡಕಟ್ಟು ಸಮಿತಿ(ಸಿಒಟಿಯು) ಆಶ್ರಯದಲ್ಲಿ ಧರಣಿ ನಡೆಯಿತು. 'ನಾವು ಶಾಂತಿಯುತವಾಗಿ ಧರಣಿ ನಡೆಸುತ್ತಿದ್ದೇವೆ. ಸರ್ಕಾರ ನಮಗೆ (ಬುಡಕಟ್ಟು ಜನರಿಗೆ) ಪ್ರತ್ಯೇಕ ಆಡಳಿತ ಕಲ್ಪಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು. ಇದರ ಜತೆಗೆ, ಕಾರ್ಯಾಚರಣೆ ಅಮಾನತಿಗೆ(ಸಸ್ಪೆಂನ್ಶನ್ ಆಫ್ ಆಪರೇಷನ್) ಸಂಬಂಧಿಸಿದಂತೆ ಸರ್ಕಾರಗಳ ಜತೆ ಒಪ್ಪಂದ ಮಾಡಿಕೊಂಡಿರುವ ಕುಕಿ ಸಮುದಾಯದ ಸಂಘಟನೆಗಳ ಜತೆ ಕೇಂದ್ರ ಸರ್ಕಾರ ಮಾತುಕತೆ ನಡೆಸಬೇಕು ಎಂದೂ ಒತ್ತಾಯಿಸಿದರು.

ತಮ್ಮ ಸಮುದಾಯಕ್ಕೆ ಪ್ರತ್ಯೇಕ ಆಡಳಿತ ವ್ಯವಸ್ಥೆ ಕಲ್ಪಿಸುವಂತೆ ಚಿನ್–ಕುಕಿ–ಮಿಜೊ–ಜೋಮಿ ಸಮುದಾಯದ ಹತ್ತು ಶಾಸಕರು ಈ ಹಿಂದೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು. ಮುಖ್ಯಮಂತ್ರಿ ಬಿರೇನ್ ಸಿಂಗ್ ಈ ಬೇಡಿಕೆಯನ್ನು ತಿರಸ್ಕರಿಸಿದ್ದರು.

ಮುಂಬೈನಲ್ಲಿ ಆ.25,26ರಂದು 'ಇಂಡಿಯಾ' ಸಭೆ

ನವದೆಹಲಿ (ಪಿಟಿಐ): ವಿರೋಧಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಮೂರನೇ ಸಭೆಯು ಮುಂಬೈನಲ್ಲಿ ಆಗಸ್ಟ್ 25, 26ರಂದು ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಶಿವಸೇನೆ (ಉದ್ಧವ್ ಬಣ) ಮತ್ತು ಎನ್‌ಸಿಪಿ (ಶರದ್ ಪವಾರ್ ಬಣ) ಜಂಟಿಯಾಗಿ ಸಭೆಯ ಆತಿಥ್ಯ ವಹಿಸಿದ್ದು, ಕಾಂಗ್ರೆಸ್ ಪಕ್ಷ ಅಗತ್ಯ ಬೆಂಬಲ ನೀಡಿದೆ ಎಂದು ತಿಳಿಸಿವೆ.

'ಇಂಡಿಯಾ'ದ ಮೊದಲ ಸಭೆ ಪಟ್ನಾದಲ್ಲಿ ನಡೆದಿದ್ದು ಜೆಡಿಯು ಆತಿಥ್ಯ ವಹಿಸಿದ್ದರೆ, ಬೆಂಗಳೂರಿನಲ್ಲಿ ನಡೆದ ಎರಡನೇ ಸಭೆಯ ಆತಿಥ್ಯವನ್ನು ಕಾಂಗ್ರೆಸ್ ಪಕ್ಷ ವಹಿಸಿತ್ತು. ಮುಂಬೈನಲ್ಲಿ ನಡೆಯಲಿರುವ ಸಭೆಯಲ್ಲಿ ಸೀಟು ಹಂಚಿಕೆ ವಿಷಯ ಚರ್ಚೆಗೊಳಪಡುವ ಸಂಭವವಿದೆ.

ಟೋಲ್: ವರ್ಷದಲ್ಲೇ ₹14,121 ಕೋಟಿ ವರಮಾನ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯವು ಟೋಲ್ ಸಂಗ್ರಹದ ಮೂಲಕ 2022–23ನೇ ಸಾಲಿನಲ್ಲಿ ₹48 ಸಾವಿರ ಕೋಟಿ ವರಮಾನ ಗಳಿಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ವರಮಾನ ಪ್ರಮಾಣ ₹14,121 ಕೋಟಿ ಹೆಚ್ಚಾಗಿದೆ.

ಲೋಕಸಭೆಯಲ್ಲಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಗುರುವಾರ ಕೇಳಿರುವ ಪ್ರಶ್ನೆಗೆ ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಈ ಸಂಬಂಧ ಉತ್ತರ ನೀಡಿದರು. ಫಾಸ್ಟ್ ಟ್ಯಾಗ್ ವ್ಯವಸ್ಥೆ ಜಾರಿಗೆ ಬಂದ ಬಳಿಕ ಟೋಲ್ ವಸೂಲಿ ಗಣನೀಯವಾಗಿ ಜಾಸ್ತಿ ಆಗಿದೆ ಎಂಬ ಅಂಶ ಉತ್ತರದಲ್ಲಿದೆ.

ಹೆದ್ದಾರಿಗಳಲ್ಲಿ ಫಾಸ್ಟ್‌ಟ್ಯಾಗ್ ವ್ಯವಸ್ಥೆಯನ್ನು 2016–17ರಿಂದ ಪ್ರಾರಂಭಿಸಲಾಯಿತು. ಶುಲ್ಕ ಪ್ಲಾಜಾಗಳ ಎಲ್ಲ ಲೇನ್‌ಗಳನ್ನು 2021ರಿಂದ ಫಾಸ್ಟ್ ಟ್ಯಾಗ್ ಲೇನ್‌ಗಳನ್ನಾಗಿ ಪರಿವರ್ತಿಸಲಾಯಿತು. ಪ್ರಸ್ತುತ ಶೇ 97.6ರಷ್ಟು ಶುಲ್ಕ ಸಂಗ್ರಹವು ಫಾಸ್ಟ್ ಟ್ಯಾಗ್ ಮೂಲಕ ನಡೆಯುತ್ತಿದೆ. ಈ ವ್ಯವಸ್ಥೆ ಜಾರಿಗೆ ಬಂದ ಬಳಿಕ ದೊಡ್ಡ ವಾಣಿಜ್ಯ ವಾಹನಗಳಿಂದ ಬಳಕೆದಾರರ ಶುಲ್ಕ ಸಂಗ್ರಹ ಭಾರಿ ಹೆಚ್ಚಳ ಆಗಿದೆ ಎಂದು ಹೇಳಿದರು.

ವರ್ಷ	ಟೋಲ್ ಸಂಗ್ರಹ (₹ಕೋಟಿಗಳಲ್ಲಿ)
2015-16	17,759
2016-17	18,511
2017-18	22,664
2018-19	25,145
2019-20	27,645
2020-21	27,923
2021-22	33,907
2022-23	48,028

ಐದು ವರ್ಷಗಳಲ್ಲಿ ₹41,282 ಕೋಟಿ: ಬಿಜೆಪಿ ಸಂಸದ ಅಣ್ಣಾಸಾಹೇಬ್ ಜೊಲ್ಲೆ ಅವರ ಪ್ರಶ್ನೆಗೆ ಉತ್ತರಿಸಿರುವ ಸಚಿವರು, 'ದೇಶದಲ್ಲಿ 2014ರಲ್ಲಿ 91,287 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಇತ್ತು. ಈಗ 1,46,145 ಕಿ.ಮೀ. ಹೆದ್ದಾರಿ ಇದೆ. ಕರ್ನಾಟಕದಲ್ಲಿ 2014ರಲ್ಲಿ 6,177 ಕಿ.ಮೀ ಹೆದ್ದಾರಿ ಇದ್ದರೆ, ಈಗ 8,191 ಕಿ.ಮೀ ಆಗಿದೆ. ಕಳೆದ ಐದು ವರ್ಷಗಳಲ್ಲಿ ಕರ್ನಾಟಕಕ್ಕೆ ₹41,282 ಕೋಟಿ ಮೊತ್ತದ 2,628 ಕಿ.ಮೀ. ಉದ್ದದ ಹೆದ್ದಾರಿ ಯೋಜನೆಗಳನ್ನು ಮಂಜೂರು ಮಾಡಲಾಗಿದೆ ಎಂದರು.

ರಾಜ್ಯದಲ್ಲಿ 94 ಹೆದ್ದಾರಿ ಯೋಜನೆಗಳು ಪ್ರಗತಿಯಲ್ಲಿವೆ. ಈ ಯೋಜನೆಗಳ ಒಟ್ಟು ಉದ್ದ 3,080 ಕಿ.ಮೀ. ಆಗಿದ್ದು, ಯೋಜನಾ ಮೊತ್ತ ₹63,628 ಕೋಟಿ ಎಂದು ಅವರು ವಿವರ ನೀಡಿದರು.

ರಾಜಸ್ಥಾನ: ಕಾಂಗ್ರೆಸ್ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

'ಕೆಂಪು ಡೈರಿ 'ಲೂಟ್ ಕಿ ದುಕಾನ್'ನ ಹೊಸ ಉತ್ಪನ್ನ'

ಸೀಕರ್ (ರಾಜಸ್ಥಾನ)(ಪಿಟಿಐ): 'ವಜಾಗೊಂಡಿರುವ ಸಚಿವ ರಾಜೇಂದ್ರ ಗುಢಾ ಅವರ 'ಕೆಂಪು ಡೈರಿ' ಕಾಂಗ್ರೆಸ್‌ನ ಲೂಟ್ ಕಿ ದುಕಾನ್‌ನ (ಲೂಟಿಯ ಅಂಗಡಿ) ಹೊಸ ಉತ್ಪನ್ನ. ಪಕ್ಷದ ಕರಾಳ ಕೆಲಸಗಳನ್ನು ಈ ಡೈರಿಯಲ್ಲಿ ದಾಖಲಿಸಲಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಸೀಕರ್‌ನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, 'ಕೆಂಪು ಡೈರಿಯಲ್ಲಿ ದಾಖಲಿಸಲಾಗಿರುವ ಕಾಂಗ್ರೆಸ್‌ನ ಕೆಟ್ಟ ಕಾರ್ಯಗಳೇ ರಾಜಸ್ಥಾನದಲ್ಲಿ ನಡೆಯುವ ಚುನಾವಣೆಯಲ್ಲಿ ಪಕ್ಷವನ್ನು ಸೋಲಿಸಲಿವೆ' ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಅವ್ಯವಹಾರಗಳ ಕುರಿತ ವಿವರಗಳನ್ನು ಒಳಗೊಂಡ ಕೆಂಪು ಡೈರಿಯಲ್ಲಿನ ಮಾಹಿತಿ ಬಹಿರಂಗ ಮಾಡಲು ಅನುಮತಿ ನೀಡುವಂತೆ ಇತ್ತೀಚೆಗೆ ರಾಜೇಂದ್ರ ಗುಢಾ ವಿಧಾನಸಭೆಯಲ್ಲಿ ಒತ್ತಾಯಿಸಿದ್ದರು. ಇದಕ್ಕೆ ವಿರೋಧ ಪಕ್ಷದ ಬಿಜೆಪಿ ಶಾಸಕರೂ ದನಿಗೂಡಿಸಿದ್ದರು.

ವಿವಿಧ ನೇಮಕಾತಿ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದ್ದನ್ನು ಪ್ರಸ್ತಾಪಿಸಿದ ಮೋದಿ, 'ರಾಜಸ್ಥಾನದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಉದ್ಯಮ ನಡೆಯುತ್ತಿದೆ. ಹೀಗಾಗಿ, ಯುವ ಸಮುದಾಯದ ಕನಸುಗಳನ್ನು ನನಸು ಮಾಡುವುದಕ್ಕಾಗಿ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಕಿತ್ತೊಗೆಯಬೇಕು' ಎಂದು ಹೇಳಿದರು.

'ತಮ್ಮ ಸಹೋದರಿಯರು ಮತ್ತು ಪುತ್ರಿಯರ ಮೇಲಿನ ದೌರ್ಜನ್ಯವನ್ನು ರಾಜ್ಯದ ಜನರು ಸಹಿಸುವುದಿಲ್ಲ. ಹಾಗಾಗಿ, ಈ ಬಾರಿ 'ರಾಜಸ್ಥಾನ ಸಹಿಸುವುದಿಲ್ಲ'(ನಹಿ ಸಹೇಗಾ ರಾಜಸ್ಥಾನ್) ಎಂಬ ಏಕೈಕ ಘೋಷಣೆ ಮೊಳಗುವುದು. ಅದೇ ರೀತಿ, 'ಕಮಲ ಗೆಲ್ಲುವುದು, ಕಮಲ ಅರಳುವುದು' ಎಂಬ ಒಂದೇ ಮಾತು ಕೇಳಿಬರುವುದು' ಎಂದು ಹೇಳಿದರು.

ಲೋಕಾರ್ಪಣೆ: ಇದಕ್ಕೂ ಮುನ್ನ ನಡೆದ ಕಾರ್ಯಕ್ರಮದಲ್ಲಿ 1.25 ಲಕ್ಷ ಪಿ.ಎಂ. ಕಿಸಾನ್ ಸಮೃದ್ಧಿ ಕೇಂದ್ರಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಲೋಕಾರ್ಪಣೆ ಮಾಡಿದರು. ವಿವಿಧ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿದರು.

ಭಾಷಣಕ್ಕೆ ಸಿಗದ ಅವಕಾಶ: ಟೀಕೆ

ಜೈಪುರ (ರಾಜಸ್ಥಾನ) (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿಕ ಸೀಕರ್ ನಗರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ನನಗೆ ಭಾಷಣ ಪಿಎಂಒ ಅವಕಾಶ ನೀಡಲಿಲ್ಲ' ಎಂದು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಗುರುವಾರ ಆರೋಪಿಸಿದ್ದಾರೆ.

ಪ್ರಧಾನ ಮಂತ್ರಿ ಕಚೇರಿಯು (ಪಿಎಂಒ) ಮುಖ್ಯಮಂತ್ರಿ ಗೆಹಲೋತ್ ಅವರ ಈ ಆರೋಪಗಳನ್ನು ತಳ್ಳಿ ಹಾಕಿದೆ. 'ನೀವು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ ಎಂಬುದಾಗಿ ನಿಮ್ಮ ಕಚೇರಿಯೇ ಮಾಹಿತಿ ನೀಡಿತ್ತು' ಎಂದು ಪಿಎಂಒ ಉತ್ತರಿಸಿದೆ. 'ಸೀಕರ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೂರು ನಿಮಿಷಗಳ ಅವಧಿಯ ಭಾಷಣ ಮಾಡಬೇಕಿತ್ತು. ಆದರೆ, ಪಿಎಂಒ ನನ್ನ ಈ ಪೂರ್ವನಿಗದಿತ ಭಾಷಣಕ್ಕೆ ಅವಕಾಶ ನೀಡಲಿಲ್ಲ. ಹೀಗಾಗಿ ಟ್ವೀಟ್ ಮೂಲಕವೇ ನಿಮಗೆ ಸ್ವಾಗತ ಕೋರುತ್ತೇನೆ' ಎಂದು ಗೆಹಲೋತ್ ಹಿಂದಿಯಲ್ಲಿ ಟ್ವೀಟ್ ಮಾಡಿದ್ದರು.

ಗೆಹಲೋತ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದೇ, ವರ್ಚುವಲ್ ಆಗಿ ವೀಕ್ಷಿಸಿದರು ಎಂದು ಮೂಲಗಳು ಹೇಳಿವೆ.

ಅಯೋಧ್ಯೆಯಲ್ಲಿ ರಾಮನ ವಿಗ್ರಹ ಪ್ರತಿಷ್ಠಾಪನೆ: ಮೋದಿಗೆ ಆಹ್ವಾನ

ಅಯೋಧ್ಯೆ (ಉತ್ತರಪ್ರದೇಶ) (ಪಿಟಿಐ): ರಾಮ ಮಂದಿರದಲ್ಲಿ ಮುಂದಿನ ವರ್ಷ ಜನವರಿಯಲ್ಲಿ ನಡೆಯಲಿರುವ ಶ್ರೀರಾಮ ದೇವರ ವಿಗ್ರಹ ಪ್ರತಿಷ್ಠಾಪನೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಔಪಚಾರಿಕವಾಗಿ ಆಹ್ವಾನಿಸಲಾಗಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಗುರುವಾರ ತಿಳಿಸಿದ್ದಾರೆ.

'2024ರ ಜನವರಿ 15 ಮತ್ತು 24ರ ನಡುವೆ ಸಮಾರಂಭ ನಡೆಯಲಿರುವುದಾಗಿ ಮೋದಿ ಅವರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದೇವೆ. ಆದರೆ ನಿಖರವಾದ ದಿನಾಂಕವನ್ನು ಅವರೇ ನಿರ್ಧರಿಸಲಿದ್ದಾರೆ' ಎಂದೂ ಅವರು ಹೇಳಿದ್ದಾರೆ.

ಸಮಾರಂಭಕ್ಕೆ ಅಂದಾಜು 10 ಸಾವಿರ ಮಂದಿ ಅತಿಥಿಗಳನ್ನು ಆಹ್ವಾನಿಸಲಾಗುವುದು ಎಂದು ಹೇಳಿದ್ದಾರೆ.

'ಪ್ರಧಾನಿ ಮೋದಿ ಅವರಿಗೆ ಬರೆದಿರುವ ಪತ್ರಕ್ಕೆ ಟ್ರಸ್ಟ್ ಅಧ್ಯಕ್ಷ ಮಹಾಂತ ನೃತ್ಯ ಗೋಪಾಲ್ ದಾಸ್ ಅವರು ಸಹಿ ಹಾಕಿದ್ದಾರೆ. ಪ್ರಧಾನಿ ಅವರು ಈ ಸಮಾರಂಭದಲ್ಲಿ ಪಾಲ್ಗೊಂಡರೆ ದೇಶದ ಪ್ರತಿಷ್ಠೆ ಜಗತ್ತಿನಾದ್ಯಂತ ಇನ್ನಷ್ಟು ಹೆಚ್ಚಲಿದೆ' ಎಂದೂ ತಿಳಿಸಿದ್ದಾರೆ.

ದೇಗುಲದ ನೆಲ ಮಹಡಿಯ ಕೆಲಸವನ್ನು ಡಿಸೆಂಬರ್‌ನೊಳಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಮತ್ತು ಮುಂದಿನ ವರ್ಷದ ಜನವರಿಯೊಳಗೆ ಅದನ್ನು ಭಕ್ತರಿಗೆ ತೆರೆಯಲಾಗುವುದು ಎಂದೂ ರಾಯ್ ಅವರು ಹೇಳಿದ್ದಾರೆ. 2020ರ ಆಗಸ್ಟ್‌ನಲ್ಲಿ ಮೋದಿ ಅವರು ರಾಮ ಮಂದಿರ ನಿರ್ಮಾಣದ ಭೂಮಿಪೂಜೆ ನೆರವೇರಿಸಿದ್ದರು.



ಸುಭಾಷಿತ

ಒಬ್ಬ ಉನ್ನತ ವ್ಯಕ್ತಿಯು ಮಾತಿಗಿಂತ ಕೃತ್ಯಕ್ಕೆ ಹೆಚ್ಚು ಮಹತ್ವ ನೀಡುತ್ತಾನೆ, ನಂತರ ತನ್ನ ಕೃತ್ಯಕ್ಕೆ ತಕ್ಕಂತೆ ಮಾತನಾಡುತ್ತಾನೆ.

-ಕನ್‌ಫ್ಯೂಷಿಯಸ್

ಸಹಕಾರ ಬ್ಯಾಂಕ್‌ಗಳ ಸಂಕಷ್ಟ ವೃತ್ತಿಪರರು ಬೇಕು, ಕಣ್ಗಾವಲು ಇರಬೇಕು

ಸಣ್ಣ ಸಮೂಹಗಳಿಗೆ ಬೃಹತ್ ಬ್ಯಾಂಕುಗಳಲ್ಲಿ ಸಿಗುವುದಕ್ಕಿಂತಲೂ ಹೆಚ್ಚಿನ ಹಣಕಾಸು ನೆರವು ಸಹಕಾರ ಬ್ಯಾಂಕುಗಳಲ್ಲಿ ಸಿಗುವುದು. ಬೃಹತ್ ಪ್ರಮಾಣದ ವಹಿವಾಟು, ದೇಶದಾದ್ಯಂತ ಶಾಖೆಗಳು ಹಾಗೂ ಗ್ರಾಹಕರನ್ನು ಹೊಂದಿರುವ ಬ್ಯಾಂಕುಗಳು ತೀರಾ ಸಣ್ಣ ಗ್ರಾಹಕರ ಅಗತ್ಯಗಳನ್ನು ಸರಿಯಾಗಿ ಗಮನಿಸದೆಯೂ ಇರಬಹುದು. ಆದರೆ ಸಹಕಾರ ಬ್ಯಾಂಕುಗಳು ಸಾಮಾನ್ಯವಾಗಿ ಸಣ್ಣ ಗ್ರಾಹಕರ ಅಗತ್ಯಗಳಿಗೆ ಸ್ಪಂದಿಸುತ್ತವೆ. ಆದರೆ, ಈ ಮಾತುಗಳು ಈಗ ಕಾಗದದ ಮೇಲಷ್ಟೇ ಚೆನ್ನಾಗಿ ಕಾಣಿಸುತ್ತಿರಬಹುದು. ವಾಸ್ತವದಲ್ಲಿ ಸಹಕಾರ ಬ್ಯಾಂಕ್‌ಗಳು ಗ್ರಾಹಕರ ವಿಶ್ವಾಸ ಉಳಿಸಿಕೊಳ್ಳುವಲ್ಲಿ ವಿಫಲವಾಗುತ್ತಿವೆ. ಬೆಂಗಳೂರಿನ ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿನ ಅವ್ಯವಹಾರದಿಂದಾಗಿ ಅಮಾಯಕ ಠೇವಣಿದಾರರು ಸಂಕಷ್ಟಕ್ಕೆ ಸಿಲುಕಿರುವ ಸಂಗತಿ ನೆನಪಿನಿಂದ ಮರೆಯಾಗುವ ಮುನ್ನವೇ, ಬೆಂಗಳೂರಿನ ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್‌ಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಆರು ತಿಂಗಳ ಅವಧಿಗೆ ಹಣಕಾಸಿನ ನಿರ್ಬಂಧಗಳನ್ನು ಹೇರಿದೆ. ಈ ಸಹಕಾರ ಬ್ಯಾಂಕ್ ಇನ್ನು ಆರು ತಿಂಗಳವರೆಗೆ ಹೊಸದಾಗಿ ಸಾಲ ಕೊಡುವಂತೆ ಇಲ್ಲ, ಹೊಸದಾಗಿ ಠೇವಣಿಗಳನ್ನು ಸ್ವೀಕರಿಸುವಂತೆ ಇಲ್ಲ. ಈ ಬ್ಯಾಂಕಿನ ವಹಿವಾಟುಗಳ ಮೇಲೆ ವಿಶ್ವಾಸ ಇರಿಸಿ, ಇಲ್ಲಿ ಹಣ ಠೇವಣಿ ಇರಿಸಿದ್ದವರು ಈಗಿನ ಪರಿಸ್ಥಿತಿಯಲ್ಲಿ ₹ 50 ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ಹಿಂದಕ್ಕೆ ಪಡೆಯಲು ಅಸಾಧ್ಯವಾಗಿದ್ದು. ತಮ್ಮದೇ ಹಣವನ್ನು ಅವರು ಪೂರ್ತಿಯಾಗಿ ವಾಪಸ್ ಪಡೆಯಲು ಇನ್ನೆಷ್ಟು ಕಾಲ ಕಾಯಬೇಕು ಎಂಬುದು ಸದ್ಯಕ್ಕಂತೂ ಸ್ಪಷ್ಟವಾಗುವಂತಿಲ್ಲ.

ಸಹಕಾರ ಬ್ಯಾಂಕುಗಳ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟ ಬಳಿಕ ನಿರ್ಬಂಧಗಳನ್ನು ವಿಧಿಸುವ ಬದಲು, ಪರಿಸ್ಥಿತಿ ಕೈಮೀರಿ ಹೋಗದಂತೆ ನಿಗಾ ವಹಿಸುವ ವ್ಯವಸ್ಥೆ ರೂಪುಗೊಳ್ಳಬೇಕು

ರಾಜ್ಯದಲ್ಲಿ ಇನ್ನೂ ಕೆಲವು ಸಹಕಾರ ಬ್ಯಾಂಕುಗಳು ಆರ್‌ಬಿಐ ನಿರ್ಬಂಧಕ್ಕೆ ಒಳಗಾಗಿವೆ. ಮಹಾರಾಷ್ಟ್ರ ಮೂಲದ ಪಿಎಂಸಿ ಬ್ಯಾಂಕ್ ಮೇಲೆ ಆರ್‌ಬಿಐ ವಿಧಿಸಿದ್ದ ನಿರ್ಬಂಧವೂ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. ಏಕೆಂದರೆ ಆ ಬ್ಯಾಂಕಿನ ವಹಿವಾಟು ಹಲವು ರಾಜ್ಯಗಳಲ್ಲಿ ವಿಸ್ತರಿಸಿತ್ತು. ಆ ಪ್ರಕರಣವು ಸಹಕಾರ ಬ್ಯಾಂಕ್‌ಗಳ ವಹಿವಾಟುಗಳ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿತ್ತು. ಹಣಕಾಸಿನ ಒಳಗೊಳ್ಳುವಿಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕಿರುವ ಸಹಕಾರ ಬ್ಯಾಂಕುಗಳು ದಿವಾಳಿಯ ಸ್ಥಿತಿ ತಲುಪುತ್ತಿರುವುದು ಏಕೆ ಎಂಬ ಪ್ರಶ್ನೆಯೂ ಮೂಡಿತ್ತು. ವಾಣಿಜ್ಯ ಬ್ಯಾಂಕುಗಳ ಮೇಲೆ ಇರುವಂತಹ ಬಿಗಿ ಕಣ್ಗಾವಲನ್ನು ಆರ್‌ಬಿಐ ಸಹಕಾರ ಬ್ಯಾಂಕುಗಳ ವಿಚಾರದಲ್ಲಿ ಇರಿಸುವುದಿಲ್ಲ. ಇದು ಈ ಬ್ಯಾಂಕುಗಳ ಹಣಕಾಸು ಸ್ಥಿತಿ ತೀರಾ ಹದಗೆಡುವವರೆಗೂ 'ಎಲ್ಲವೂ ಸರಿ ಇದೆ' ಎಂಬ ಚಿತ್ರಣವು ಠೇವಣಿದಾರರಲ್ಲಿ ಮೂಡುವಂತೆ ಮಾಡುತ್ತಿದೆ. ವಾಣಿಜ್ಯ ಬ್ಯಾಂಕುಗಳು ಬಂಡವಾಳ ಮಾರುಕಟ್ಟೆಗೆ ಉತ್ತರದಾಯಿ ಆಗಿರುತ್ತವೆ. ಪ್ರತಿ ಮೂರು ತಿಂಗಳಿಗೊಮ್ಮೆ ಅವು ತಮ್ಮ ಹಣಕಾಸಿನ ಸ್ಥಿತಿಯ ಬಗ್ಗೆ ಬಂಡವಾಳ ಮಾರುಕಟ್ಟೆಗಳಿಗೆ ವಿವರಣೆ ನೀಡಬೇಕು. ತಾವು ಪಾರದರ್ಶಕವಾಗಿ ಇರಬೇಕು ಎಂಬ ಒತ್ತಡವೇ ಒಂದಿಷ್ಟು ಸಮಸ್ಯೆಗಳನ್ನು ಸ್ವಯಂಪ್ರೇರಣೆಯಿಂದ ನೋಡಿಕೊಳ್ಳುತ್ತದೆ. ಸಹಕಾರ ಬ್ಯಾಂಕುಗಳು ಕೂಡ ತಮ್ಮ ಹಣಕಾಸಿನ ಸ್ಥಿತಿಯನ್ನು ವಾಣಿಜ್ಯ ಬ್ಯಾಂಕುಗಳ ಮಾದರಿಯಲ್ಲೇ ಪ್ರಕಟಿಸಬೇಕು ಎಂಬ ಒತ್ತಡವೊಂದು ಸೃಷ್ಟಿಯಾಗಬೇಕು. ಅಲ್ಲದೆ, ಈ ಬ್ಯಾಂಕುಗಳ ಲೆಕ್ಕಪತ್ರಗಳು ಇನ್ನಷ್ಟು ಕಠಿಣ ಪರಿಶೀಲನೆಗೆ ಒಳಗಾಗಬೇಕು. ಸಹಕಾರ ಬ್ಯಾಂಕುಗಳ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟ ನಂತರದಲ್ಲಿ ಆ ಬ್ಯಾಂಕಿನ ಮೇಲೆ ನಿರ್ಬಂಧಗಳನ್ನು ವಿಧಿಸುವ ಬದಲು, ಆರ್ಥಿಕ ಸ್ಥಿತಿಯನ್ನು ಕಾಲಕಾಲಕ್ಕೆ ಪರಿಶೀಲಿಸುತ್ತ, ಪರಿಸ್ಥಿತಿಯು ಕೈಮೀರಿ ಹೋಗದಂತೆ ನಿಗಾ ವಹಿಸುವ ವ್ಯವಸ್ಥೆ ರೂಪುಗೊಳ್ಳಬೇಕು.

ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಗಳು ರಾಜಕೀಯ ವ್ಯಕ್ತಿಗಳ ಪಾಲಿಗೆ ಆಶ್ರಯ ಕೇಂದ್ರದಂತೆ ಆಗಬಾರದು. ಇಂತಹ ಬ್ಯಾಂಕುಗಳನ್ನು ಕೂಡ ವೃತ್ತಿಪರರು ಮುನ್ನಡೆಸಿಕೊಂಡು ಹೋಗುವ ವ್ಯವಸ್ಥೆ ಆಗಬೇಕು. ಇಲ್ಲಿ ಹೆಚ್ಚಿನ ಹೊಣೆಗಾರಿಕೆ ಇರುವುದು ಬ್ಯಾಂಕುಗಳ ಷೇರುದಾರರ ಮೇಲೆ. ಆಡಳಿತ ಮಂಡಳಿಯಲ್ಲಿ ಹಾಗೂ ಆಡಳಿತದ ಪ್ರಮುಖ ಹುದ್ದೆಗಳಲ್ಲಿ ವೃತ್ತಿಪರರು ಇರುವಂತೆ ಆಗಲು ಪೂರಕವಾದ ನೀತಿಗಳನ್ನು ಸರ್ಕಾರ ರೂಪಿಸಬೇಕು. ಸಹಕಾರ ಬ್ಯಾಂಕುಗಳ ಆಯಕಟ್ಟಿನ ಜಾಗಗಳಲ್ಲಿ ವೃತ್ತಿಪರರು ಮಾತ್ರ ಇರುವಂತೆ ಮಾಡುವ ಕೆಲಸವನ್ನು ಷೇರುದಾರರು ಚುನಾವಣೆಗಳಲ್ಲಿ ತಮ್ಮ ಹಕ್ಕನ್ನು ಜವಾಬ್ದಾರಿಯಿಂದ ಚಲಾಯಿಸುವ ಮೂಲಕವೂ ಮಾಡಬೇಕು. ನಿಯಮಗಳಲ್ಲಿ ಬದಲಾವಣೆ ಆಗದೇ ಇದ್ದರೆ, ಸಹಕಾರ ಬ್ಯಾಂಕುಗಳ ಸಂರಚನೆಯಲ್ಲಿ ಅಗತ್ಯ ಮಾರ್ಪಾಡುಗಳು ಆಗದೇ ಇದ್ದರೆ ಈಗ ನ್ಯಾಷನಲ್ ಸಹಕಾರ ಬ್ಯಾಂಕಿನ ಗ್ರಾಹಕರಂತೆಯೇ ಮುಂದೆ ಬೇರೆ ಕೆಲವು ಸಹಕಾರ ಬ್ಯಾಂಕುಗಳ ಗ್ರಾಹಕರೂ ಸಮಸ್ಯೆಗೆ ಸಿಲುಕಬಹುದು.

ದಿನದ ಟ್ವೀಟ್

ಹಿರಿಯರಿಗೂ ಅಂಟಿದ ಚಟ!

ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಅಥವಾ ವಾಟ್ಸ್‌ಆ್ಯಪ್ ಯಾವುದೇ ಇರಲಿ, ಹಿರಿಯ ನಾಗರಿಕರು ಸಹ ನಿರಂತರವಾಗಿ ಆನ್‌ಲೈನ್‌ನಲ್ಲಿ ಇರುತ್ತಿದ್ದು, ಇದು ಅವರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ತಮಗೆ ಎದುರಾಗುವ ಕ್ಷುಲ್ಲಕ ಪೋಸ್ಟ್‌ಗಳನ್ನು ಕಂಡು ಅವರು ತೀವ್ರವಾಗಿ ಕೆರಳುವುದು ನಮ್ಮದೇ ಕೌಟುಂಬಿಕ ವಲಯಗಳಲ್ಲಿ ಕಂಡುಬರುತ್ತಿದೆ. ವರ್ಚುವಲ್ ಪ್ರಪಂಚ ಮತ್ತು ವಾಸ್ತವದ ನಡುವಿನ ಗೆರೆಗಳು ನಾನು ನಿರೀಕ್ಷಿಸಿದ್ದಕ್ಕಿಂತ ವೇಗವಾಗಿ ಅಳಿಯುತ್ತಿವೆ. ಕಿರಿಯರೊಂದಿಗೆ ಕುಳಿತು ತಮ್ಮ ಜೀವನಾನುಭವಗಳನ್ನು ಹಂಚಿಕೊಳ್ಳಲು ಅವರಿಗೆ ಈಗ ಸಮಯವಾಗಲೀ ಆಸಕ್ತಿಯಾಗಲೀ ಇರುವಂತೆ ಕಾಣುತ್ತಿಲ್ಲ.

ಚೇತನ್ ಅನಂತರಾಮು

ಕಿಡಿನುಡಿ

ಸಂಸತ್ತಿನಲ್ಲಿ ಭಿತ್ತಿಪತ್ರಗಳನ್ನು ಪ್ರದರ್ಶಿಸುವುದು ನಿಯಮ ಮತ್ತು ನಿಬಂಧನೆಗಳಿಗೆ ವಿರುದ್ಧವಾಗಿದ್ದು, ಅವುಗಳನ್ನು ಒಳಗೆ ತರುವುದಕ್ಕೆ ಅನುಮತಿ ಇಲ್ಲವಾದರೂ ಸದಸ್ಯರು ತರುತ್ತಾರೆ ಮತ್ತು ಸ್ಪೀಕರ್ ಎದುರು ಪ್ರದರ್ಶಿಸುತ್ತಾರೆ. ಈ ನಡೆಯ ವಿರುದ್ಧ ಸದಸ್ಯರಿಗೆ ಸ್ಪೀಕರ್ ಎಚ್ಚರಿಕೆ ನೀಡಬೇಕು. ಅದಕ್ಕೆ ತಲೆಬಾಗದವರನ್ನು ಉಚ್ಚಾಟಿಸಬೇಕು ಅಥವಾ ಮಾರ್ಷಲ್‌ಗಳ ಮೂಲಕ ಹೊರಕ್ಕೆ ದೂಡಬೇಕು.



ರಾಜೇಶ್ ಅರೋರ

25 ವರ್ಷಗಳ ಹಿಂದೆ

ಮಂಗಳವಾರ, 28-7-1998

• ಕಾಲೇಜು ಉಪನ್ಯಾಸಕರಿಗೆ ಪರಿಷ್ಕೃತ ವೇತನ

ನವದೆಹಲಿ, ಜುಲೈ 27 (ಯುಎನ್‌ಐ)- ವಿಶ್ವವಿದ್ಯಾಲಯಗಳ ಹಾಗೂ ಕಾಲೇಜು ಉಪನ್ಯಾಸಕರ ಪರಿಷ್ಕೃತ ವೇತನವನ್ನು ಸರ್ಕಾರ ಇಂದು ಘೋಷಿಸಿದೆ. ಜತೆಗೆ ನಿವೃತ್ತಿ ವಯಸ್ಸನ್ನು 62ಕ್ಕೆ ಏರಿಸಿ, ಕಾಲೇಜುಗಳಲ್ಲಿ ಪ್ರೊಫೆಸರ್‌ಗಳ ಹುದ್ದೆಗಳನ್ನೂ ಸೃಷ್ಟಿಸಲಾಗಿದೆ.

ಮೂರು ತಿಂಗಳ ಹಿಂದೆ ಸರ್ಕಾರ ಘೋಷಿಸಿದ್ದ ವೇತನ ಶ್ರೇಣಿಯನ್ನು ದೇಶದಾದ್ಯಂತ ಶಿಕ್ಷಕರು ವಿರೋಧಿಸಿದ್ದರು. ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಸಲಹೆಗೆ ಅನುಗುಣವಾಗಿ ವೇತನ ಪರಿಷ್ಕರಿಸಬೇಕೆಂಬುದು ಅವರ ಬೇಡಿಕೆಯಾಗಿತ್ತು.

• ವರ್ಗವಾದ ಸ್ಥಳಕ್ಕೆ ಹೋಗದ ಕೃಷಿ ಅಧಿಕಾರಿಗಳ ಅಮಾನತು

ಬೆಂಗಳೂರು, ಜುಲೈ 27- ವರ್ಗಾವಣೆಯಾದ ಸ್ಥಳಗಳಿಗೆ ಹೋಗಿ ಕರ್ತವ್ಯದ ಮೇಲೆ ಹಾಜರಾಗದ ಕೃಷಿ ಇಲಾಖೆಯ ಒಂಬತ್ತು ಅಧಿಕಾರಿಗಳೂ ಸೇರಿ 22 ನೌಕರರನ್ನು ಅಮಾನತುಗೊಳಿಸಲಾಗಿದೆ.

ಕರ್ತವ್ಯದ ಮೇಲೆ ಹಾಜರಾಗಲು ನೀಡಿದ್ದ ಗಡುವು ಮುಗಿದು ಹತ್ತು ದಿನಗಳು ಕಳೆದ ನಂತರವೂ ಕೆಲಸಕ್ಕೆ ಹಾಜರಾಗದೆ ಸರ್ಕಾರದ ಆದೇಶ ಉಲ್ಲಂಘಿಸಿದ 9 ಕೃಷಿ ಅಧಿಕಾರಿಗಳು, 11 ಕೃಷಿ ಸಹಾಯಕರು ಹಾಗೂ ಇಬ್ಬರು ಗುಮಾಸ್ತರನ್ನು ಅಮಾನತಿನಲ್ಲಿ ಇಡಲಾಗಿದೆ ಎಂದು ಕೃಷಿ ಸಚಿವ ಸಿ. ಬೈರೇಗೌಡ ಅವರು ಇಂದು 'ಪ್ರಜಾವಾಣಿ'ಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 28-7-1973

• 'ಕರ್ನಾಟಕ' ಮಸೂದೆ ಮಂಡನೆ: ಲೋಕಸಭೆಯಲ್ಲಿ ಸರ್ವರ ಸ್ವಾಗತ

ನವದೆಹಲಿ, ಜುಲೈ 27- ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಪುನರ್‌ನಾಮಕರಣ ಮಾಡುವ ಮಸೂದೆಯನ್ನು ಇಂದು ಲೋಕಸಭೆಯಲ್ಲಿ ಎಲ್ಲ ವರ್ಗದವರೂ ಹಾರ್ದಿಕವಾಗಿ ಸ್ವಾಗತಿಸಿದರು.

ಮಸೂದೆಯ ಬಗ್ಗೆ ನಡೆದ ಚರ್ಚೆಯಲ್ಲಿ ಎಲ್ಲ ಸದಸ್ಯರೂ ಒಬ್ಬರ ನಂತರ ಒಬ್ಬರು, ಮೂರು ಕೋಟಿ ಕನ್ನಡಿಗರ ಬಹುಕಾಲದ ಕನಸು ನನಸಾಗುತ್ತಿರುವುದಕ್ಕಾಗಿ ಅಭಿನಂದಿಸಿದರು.

ಗೃಹ ಖಾತೆ ರಾಜ್ಯ ಸಚಿವ ಕೆ.ಸಿ. ಪಂತ್ ಅವರು ಮಂಡಿಸಿದ 'ಮೈಸೂರು ರಾಜ್ಯ ಪುನರ್‌ನಾಮಕರಣ ಮಸೂದೆಯು' ಕಳೆದ ವರ್ಷ ಮೈಸೂರು ರಾಜ್ಯ ವಿಧಾನಮಂಡಲ ಸರ್ವಾನುಮತದಿಂದ ಅನುಮೋದಿಸಿದ ನಿರ್ಣಯದ ಆಧಾರದ ಮೇಲೆ ಮಂಡಿಸಲ್ಪಟ್ಟಿದೆ.

ಮೈಸೂರು ರಾಜ್ಯದ ಹೆಸರು ಬದಲಾಯಿಸಲು ಭಾಷಾವಾರು ರಾಜ್ಯಗಳ ರಚನೆಯಾದ ನಂತರ 17 ವರ್ಷ ಕಾಲ ಬೇಕಾಯಿತು.

• ಮಧುಪುರ ಬಳಿ ಎಕ್ಸ್‌ಪ್ರೆಸ್ ರೈಲುಗಳ ಡಿಕ್ಕಿ: 19 ಸಾವು

ಕಲ್ಕತ್ತ, ಜುಲೈ 27- ಮಧುಪುರ ರೈಲ್ವೆ ನಿಲ್ದಾಣದ ಹೊರ ಸಿಗ್ನಲ್ ಬಳಿ ನಿಂತಿದ್ದ ಅಮೃತಸರ ಮೇಲ್ ರೈಲಿನ ಹಿಂಭಾಗಕ್ಕೆ ಬಿಹಾರ ಎಕ್ಸ್‌ಪ್ರೆಸ್ ರೈಲು ಇಂದು ಬೆಳಿಗ್ಗೆ ಡಿಕ್ಕಿ ಹೊಡೆದ ಪರಿಣಾಮ 19 ಜನ ಸತ್ತರಲ್ಲದೆ, ಐವತ್ತು ಜನ ಗಾಯಗೊಂಡರು. ಇವರಲ್ಲಿ ಹತ್ತು ಜನರಿಗೆ ತೀವ್ರ ಗಾಯಗಳಾಗಿವೆ.

ಹುಲಿಗಳ ಆವಾಸ ಕ್ಷೀಣಿಸುತ್ತಿರುವುದನ್ನು ತಡೆಗಟ್ಟಲು ಬೇಕಿದೆ ತುರ್ತು ಕ್ರಮ

ಏರಿತು ಹುಲಿ ಸಂಖ್ಯೆ: ಸಂರಕ್ಷಣೆ?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ದೇಶದ ಹುಲಿಗಳ ಸಂರಕ್ಷಣೆ ಉದ್ದೇಶದ ಹುಲಿ ಯೋಜನೆಗೆ ಐವತ್ತು ವರ್ಷ ತುಂಬಿದೆ. ಹುಲಿ ಕುರಿತ ಸಂಶೋಧನೆಗೆ ಏಳು ದಶಕ ತುಂಬಿದೆ. ಹುಲಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯೂ ಆಗಿದೆ. ವನ್ಯಜೀವಿಪ್ರಿಯರು ಖುಷಿಯಾಗಿದ್ದಾರೆ. ಸಂರಕ್ಷಣಾ ತಜ್ಞರು, ಸಂಶೋಧಕರು ಮತ್ತಷ್ಟು ಉತ್ತಮ ಕೆಲಸ ಮಾಡುವ ಉಮೇದಿನಲ್ಲಿದ್ದಾರೆ.

ಇತ್ತೀಚೆಗೆ ಬಂಡೀಪುರದ ಕಾಡಿಗೆ ಬಂದ ಪ್ರಧಾನಿ ನರೇಂದ್ರ ಮೋದಿ ಅವರು ಖುದ್ದು ಹುಲಿ ಗಣತಿ ವರದಿ ಬಿಡುಗಡೆ ಮಾಡಿ, ಉತ್ತಮ ಸಂರಕ್ಷಣಾ ಕೆಲಸಗಳಿಂದಾಗಿ ಇದು ಸಾಧ್ಯವಾಗಿದೆ ಎಂದು ಸಂಬಂಧಿಸಿದವರನ್ನೆಲ್ಲಾ ಮನಸಾರೆ ಹೊಗಳಿ ಹುರಿದುಂಬಿಸಿದರು. ಅಲ್ಲದೆ, ವಿಶ್ವದ ಇತರ ದೇಶಗಳ ಹುಲಿಗಳ ಸಂರಕ್ಷಣೆಗೆ ನಮ್ಮ 'ಪ್ರಾಜೆಕ್ಟ್ ಟೈಗರ್' ಮಾದರಿ ಯೋಜನೆಯ ಅವಶ್ಯಕತೆ ಇದೆಯೆಂದು ಪ್ರತಿಪಾದಿಸಿದರು. ಆದರೆ, ಈಗ ನಮ್ಮಲ್ಲಿ ಆಗುತ್ತಿರುವುದೇ ಬೇರೆ.

ಜಾರಿಯಲ್ಲಿರುವ ಹುಲಿ ಯೋಜನೆಗಳಿಗೆ ಕೇಂದ್ರದ ಬಜೆಟ್‌ನಲ್ಲಿ ತೆಗೆದಿರಿಸಿರುವ ಅನುದಾನವು ಜುಲೈ ತಿಂಗಳು ಮುಗಿಯುತ್ತಿದ್ದರೂ ಅರಣ್ಯ ಇಲಾಖೆಗೆ ಬಂದಿಲ್ಲ. ಕಾರಣವೇನು ಗೊತ್ತೇ? ಹಣಕಾಸು ಇಲಾಖೆಯ ಅತಿಯಾದ ನಿಬಂಧನೆಗಳಿಂದಾಗಿ ಹಣ ಬಿಡುಗಡೆಯಾಗುವುದು ತಡವಾಗಿದೆಯಂತೆ. ಹಾಗಾದಲ್ಲಿ ಇದುವರೆಗೆ ಅತ್ಯಂತ ಮುತುವರ್ಜಿಯಿಂದ ಕೈಗೊಂಡಿದ್ದ ಹುಲಿ ಯೋಜನೆ ಹಳ್ಳ ಹಿಡಿಯುತ್ತದೆ ಎಂಬ ಆತಂಕ ತಜ್ಞರದ್ದು. ಇದರ ಜೊತೆ ಕೇಂದ್ರ ಪರಿಸರ, ಅರಣ್ಯ ಮತ್ತು ವಾಯುಗುಣ ಬದಲಾವಣೆ ಸಚಿವಾಲಯವು ವನ್ಯಜೀವಿ ತಜ್ಞರೊಂದಿಗೆ ಯಾವುದೇ ಚರ್ಚೆ, ಪರಾಮರ್ಶೆ ನಡೆಸದೆ ಹುಲಿ ಮತ್ತು ಆನೆ ಯೋಜನೆಗಳೆರಡನ್ನೂ ವಿಲೀನಗೊಳಿಸಿ ಹೊರಡಿಸಿರುವ ಆದೇಶವು ಹುಲಿ ಯೋಜನೆಗೆ ಇತಿಶ್ರೀ ಹಾಡಲಿದೆ ಎಂಬ ಆತಂಕ ವನ್ಯಜೀವಿ ತಜ್ಞರಲ್ಲಿ ಹೆಚ್ಚಾಗಿದೆ.

ಇದು ಸಂರಕ್ಷಣೆಯ ಹೆಸರಿನಲ್ಲಿ ಆಗುತ್ತಿರುವ ಅವಾಂತರ, ಇದನ್ನು ತಡೆಯಲು, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಮುಖ್ಯಸ್ಥರಾಗಿರುವ ಪ್ರಧಾನಿಯವರೇ ಮಧ್ಯಪ್ರವೇಶಿಸಿ ಆದೇಶವನ್ನು ಹಿಂಪಡೆಯುವಂತೆ ಸಚಿವಾಲಯಕ್ಕೆ ತಾಕೀತು ಮಾಡಬೇಕು ಎಂಬ ಅಭಿಪ್ರಾಯ ಬಲವಾಗುತ್ತಿದೆ. ಅಭಿವೃದ್ಧಿ ಕಾರ್ಯಗಳಿಂದಾಗಿ ಹುಲಿಯ ಆವಾಸದ ವ್ಯಾಪ್ತಿ ಕಡಿಮೆಯಾದದ್ದರ ಬಗ್ಗೆಯೂ ನೊಂದುಕೊಂಡಿದ್ದ ಸಂರಕ್ಷಣಾ ವಿಜ್ಞಾನಿಗಳು, ಸರ್ಕಾರದ ಈ ನಿರ್ಧಾರದಿಂದ ಇನ್ನಷ್ಟು ನಿರುತ್ಸಾಹಗೊಂಡಿದ್ದಾರೆ.

ಹದಿನೇಳು ವರ್ಷಗಳ ಹಿಂದೆ ಸಾವಿರದ ಐನೂರಕ್ಕೂ ಕಡಿಮೆ ಇದ್ದ ಹುಲಿಗಳ ಸಂಖ್ಯೆ ಈಗ ದುಪ್ಪಟ್ಟಿಗಿಂತ ಹೆಚ್ಚಾಗಿರುವುದು ಸರಿಯಾದ ನಿಗಾ ಮತ್ತು ಸಂರಕ್ಷಣಾ ಕ್ರಮಗಳಿಂದ ಎಂಬುದರ ಬಗ್ಗೆ ಎರಡು ಮಾತಿಲ್ಲ. ಆದರೆ 2006ರಲ್ಲಿ 92,000 ಚದರ ಕಿ.ಮೀ.ನಷ್ಟಿದ್ದ ಹುಲಿ ಸಂರಕ್ಷಿತ ಪ್ರದೇಶದ ವಿಸ್ತೀರ್ಣವು ಹನ್ನೆರಡು ವರ್ಷಗಳ ಅಂತರದಲ್ಲಿ 88,000 ಚದರ ಕಿ.ಮೀ.ನಷ್ಟಾಗಿದೆ. ಅಂದರೆ ಹುಲಿಯ ಆವಾಸ ಬರೋಬ್ಬರಿ 4,000 ಚದರ ಕಿ.ಮೀ.ನಷ್ಟು ಕಡಿಮೆಯಾಗಿದೆ. ಹುಲಿಗಳನ್ನು ನಿಗದಿತ ಆವರಣಗಳಿಗೆ ಸೀಮಿತಗೊಳಿಸಿ, ಮೃಗಾಲಯದಲ್ಲಿ ಇಟ್ಟಂತೆ ಸಂರಕ್ಷಿಸಲಾಗುತ್ತಿದೆ ಎಂಬ ಮಾತಿದೆ.

2018ರ ಸಮೀಕ್ಷೆಯಂತೆ ಶೇ 65ರಷ್ಟು ಹುಲಿಗಳು ಬೇಲಿಯೊಳಗೆ ಬದುಕುತ್ತಿರುವುದು ಪತ್ತೆಯಾಗಿತ್ತು. ಉಳಿದ ಹುಲಿಗಳು ಕೋರ್ ಏರಿಯಾದ ಹೊರಗೆ ಮನುಷ್ಯರ ಆವಾಸದ ಸನಿಹ ಬದುಕುತ್ತಿವೆ. ಕೆಲವು ಹುಲಿ ತಜ್ಞರ ಪ್ರಕಾರ, ಭಾರತದಲ್ಲಿನ ಹುಲಿಗಳ ಸಂಖ್ಯೆ ಆವಾಸದಲ್ಲಿ ಇರಬಹುದಾದ ಗರಿಷ್ಠ ಮಟ್ಟ ತಲುಪಿದೆ. ಗ್ಲೋಬಲ್ ಟೈಗರ್ ಫೋರಂನ ಕಾರ್ಯದರ್ಶಿ ರಾಜೇಶ್ ಗೋಪಾಲ್, ಈಗಿನ ಹುಲಿಗಳ ಜೊತೆ ಇನ್ನೂ ಒಂದು ಸಾವಿರ ಹುಲಿಗಳಿಗೆ ನಮ್ಮ ಕಾಡುಗಳಲ್ಲಿ ಜಾಗವಿದೆ ಎನ್ನುತ್ತ, ಬರೀ ಸಂಖ್ಯೆ ಮುಖ್ಯವಲ್ಲ, ಅವುಗಳ ರಕ್ಷಣೆ ಹಾಗೂ ಮಾನವ- ಹುಲಿ ಸಂಘರ್ಷದ ಪ್ರಕರಣ ತಡೆಯುವುದು ಸದ್ಯದ ತುರ್ತುಗಳಲ್ಲೊಂದು ಎಂದಿದ್ದಾರೆ.

ಹುಲಿಗಳ ಸಂಖ್ಯೆ ಹೆಚ್ಚಿದ್ದರಿಂದ ಅವುಗಳ ಸಹಜ ಜೀವನಕ್ಕೆ ಹುಲಿ ಕಾರಿಡಾರ್‌ಗಳ ಅವಶ್ಯಕತೆ ಈಗ ಹೆಚ್ಚಾಗಿದೆ. ವ್ಯತಿರಿಕ್ತ ಎಂಬಂತೆ 2022ರ ಹುಲಿ ಗಣತಿ ವರದಿಯಲ್ಲಿ ಅರಣ್ಯ ಒತ್ತುವರಿ ಮತ್ತು ಹುಲಿ ಆವಾಸ ಕೆಡಿಸುವ ಗಣಿಗಾರಿಕೆ, ಜಲವಿದ್ಯುತ್ ಸ್ಥಾವರ, ಹೆದ್ದಾರಿ, ಅಣೆಕಟ್ಟು ಯೋಜನೆಗಳ ಕುರಿತು ಪ್ರಸ್ತಾಪವಿದೆ. ಸಂಖ್ಯೆಯಲ್ಲಿ ಹೆಚ್ಚಾಗಿರುವ ಹುಲಿಗಳು ತಮ್ಮದೇ ಸೀಮಿತ ವಲಯಗಳಲ್ಲಿ ಇರುವುದರಿಂದ ಬೇರೆ ಆವಾಸದ ಹುಲಿಗಳ ಸಂಪರ್ಕಕ್ಕೆ ಬರದೆ ಒಳವಂಶವರ್ಧನೆಯ ಅಪಾಯ ಎದುರಿಸುತ್ತಿವೆ. ನೂರಾರು ಕಿ.ಮೀ. ಕ್ರಮಿಸುವ ಹುಲಿಗಳಿಗೆ ಇತರ ಭಾಗಗಳ ಹುಲಿಗಳ ಸಂಪರ್ಕ ಸಾಧ್ಯವಾಗದಿದ್ದರೆ, ಹುಲಿಗಳ ಸಂಖ್ಯೆಯನ್ನು ಬಹುಕಾಲ ಗರಿಷ್ಠ ಮಟ್ಟದಲ್ಲಿ ಕಾಪಾಡಿಕೊಳ್ಳುವುದು ಕಷ್ಟ.

ಸಂರಕ್ಷಿತ ವಲಯಗಳ ಹೊರಗೆ ಬಹಳಷ್ಟು ಹುಲಿಗಳಿರುವ, ಹುಲಿ- ಮಾನವ ಸಂಘರ್ಷ ನಿರಂತರವಾಗಿ ಇರುವ ಬಗ್ಗೆ ಹುಲಿ ತಜ್ಞ ಉಲ್ಲಾಸ ಕಾರಂತರು ಬಹುಕಾಲದಿಂದ ಎಚ್ಚರಿಸುತ್ತಲೇ ಬಂದಿದ್ದಾರೆ. ನಮ್ಮ ಸಂರಕ್ಷಣಾ ಮಾದರಿಗಳೆಲ್ಲ ಮಾನವಕೇಂದ್ರಿತ ಕ್ರಮಗಳೇ ಆಗಿದ್ದು ಬುಡಕಟ್ಟುಗಳನ್ನು ಹುಲಿಯ ವಿರುದ್ಧ ನಿಲ್ಲಿಸುವಂಥವೇ ಆಗಿವೆ. ಬುಡಕಟ್ಟು ಜನರಿಂದ ಹುಲಿಗಳಿಗೆ ತೊಂದರೆ ಆಗುತ್ತಿದೆ ಎಂಬ ಕಾರಣ ನೀಡಿ ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಿದ ನಂತರ ಸರ್ಕಾರ ಮಾಡಿದ್ದೇನು? ದುಬಾರಿ

ಪ್ರವಾಸೋದ್ಯಮ ಅಲ್ಲಿಗೆ ಕಾಲಿಟ್ಟು ಮೊದಲಿಗಿಂತ ಹೆಚ್ಚಿನ ಅಧ್ವಾನಗಳಾಗಿವೆ.

ಏರಿದ ಹುಲಿ ಸಂಖ್ಯೆಯ ಬಗ್ಗೆ ಖುಷಿಯಿದೆಯಾದರೂ ಕೆಲವು ಸಂರಕ್ಷಿತ ಪ್ರದೇಶಗಳಲ್ಲಿ ಅಭಿವೃದ್ಧಿ ಯೋಜನೆಗಳ ಫಲವಾಗಿ ಹುಲಿಯ ಆವಾಸ ನಾಶವಾಗುವುದನ್ನು ಸಹಿಸಲಾಗದು ಎಂದಿರುವ ಸಂರಕ್ಷಣಾ ತಜ್ಞೆ ಪ್ರೇರಣಾ ಭಿಂದ್ರ, ನದಿ ಜೋಡಣೆಯಿಂದಾಗಿ ಪನ್ನಾ ಅರಣ್ಯದಲ್ಲಿ 90 ಚದರ ಕಿ.ಮೀ. ವ್ಯಾಪ್ತಿಯ ಹುಲಿ ಆವಾಸ ಮತ್ತು 20 ಲಕ್ಷ ಮರಗಳು ಮುಳುಗಡೆಯಾಗುತ್ತಿರುವುದನ್ನು ಪ್ರಶ್ನಿಸಿದ್ದಾರೆ. ಜಿಮ್ ಕಾರ್ಬೆಟ್ ಉದ್ಯಾನ, ಗೋವಾ ಮತ್ತು ಉತ್ತರ ಕನ್ನಡದ ಕಾಡುಗಳಲ್ಲಿ ಹೆದ್ದಾರಿ, ರೈಲು ಮಾರ್ಗ ನಿರ್ಮಾಣ ಕೆಲಸಗಳು ಹುಲಿಯ ಆವಾಸವನ್ನು ಮತ್ತಷ್ಟು ಸಂಕುಚಿತಗೊಳಿಸಲಿವೆ. ಅರಣ್ಯ ಸಂರಕ್ಷಣಾ ಕಾಯ್ದೆಯ ತಿದ್ದುಪಡಿಯು ಹುಲಿಗಳ ಸಂರಕ್ಷಣೆಯ ಬದಲು ನಾಶಕ್ಕೆ ಕಾರಣವಾಗಲಿದೆ ಮತ್ತು ಹುಲಿ ವಾಸದ ಅರಣ್ಯವನ್ನು ಪದೇಪದೇ ಡಿನೋಟಿಫೈ ಮಾಡುತ್ತಿರುವ ನ್ಯಾಷನಲ್ ಬೋರ್ಡ್ ಫಾರ್ ವೈಲ್ಡ್‌ಲೈಫ್‌ನ ಅವಶ್ಯಕತೆಯಾದರೂ ಏನು ಎನ್ನುವ ಪ್ರಶ್ನೆ ಅನೇಕ ಹುಲಿ ತಜ್ಞರದ್ದು.

ಶತಮಾನದ ಹಿಂದೆ ನಮ್ಮ ನೆಲದಲ್ಲಿ ಅಂದಾಜು 10 ಸಾವಿರ ಹುಲಿಗಳಿದ್ದವು. ಈಗಿರುವ ಕಾಡಿನ ವ್ಯಾಪ್ತಿಯಲ್ಲಿ ಅಷ್ಟೊಂದು ಹುಲಿಗಳಿಗೆ ಜಾಗವಿಲ್ಲ. ಆದರೆ, ಅಸ್ತಿತ್ವದಲ್ಲಿರುವ ಹುಲಿ ಸಂರಕ್ಷಿತ ಅರಣ್ಯಗಳ ಶೇ 50ರಷ್ಟು ಭಾಗಗಳಲ್ಲಿ ಹುಲಿಗಳಿಲ್ಲ. ಹೆಚ್ಚು ಹುಲಿಗಳಿರುವ ಕಾಡಿನಿಂದ ಅಲ್ಲಿಗೆ ಸ್ಥಳಾಂತರ ಮಾಡಬಹುದಲ್ಲವೇ ಎನ್ನುವ ಪ್ರಶ್ನೆ ಕೆಲವರದ್ದು. ಛತ್ತೀಸಗಢದ ಇಂದ್ರಾವತಿ, ಜಾರ್ಖಂಡ್‌ನ ಪಲಮುವಿನಲ್ಲಿ ಹುಲಿಗಳ ಸಂಖ್ಯೆ ಅಲ್ಲಿನ ಕಾಡಿನ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆ ಇದೆ. ಅಸ್ಸಾಂ, ಒಡಿಶಾ, ಅರುಣಾಚಲ ಪ್ರದೇಶ, ಮಿಜೋರಾಂನಲ್ಲಿ ಹುಲಿಗಳಿಲ್ಲ. ಇಲ್ಲಿನ ಕಾಡುಗಳಲ್ಲಿ ಹುಲಿ ಧಾರಣಾ ಸಾಮರ್ಥ್ಯವನ್ನು ಮೊದಲು ಸ್ಥಾಪಿಸಬೇಕು. ಬೇಟೆ ಪ್ರಾಣಿಗಳ ಸಂತತಿ ಹೆಚ್ಚಾಗುವಂತೆ ಮಾಡಿ ನಂತರ ಹುಲಿಗಳನ್ನು ಸ್ಥಳಾಂತರಿಸಬೇಕು ಎನ್ನುವುದು ತಜ್ಞರ ಸಲಹೆ.

ಹುಲಿ ಸಂಖ್ಯಾವೃದ್ಧಿಯ ಸಂತಸ ಸಾರ್ಥಕವಾಗಲು, ಸಂರಕ್ಷಿತ ಅರಣ್ಯ ಪ್ರದೇಶಗಳ ಸುತ್ತ ವಾಸಿಸುತ್ತ ಹುಲಿ ದಾಳಿಗಳಿಂದ ಪ್ರಾಣಹಾನಿಗೆ ಒಳಗಾದವರಿಗೆ ಶೀಘ್ರವಾಗಿ ಮತ್ತು ತುರ್ತಾಗಿ ಪರಿಹಾರ ನೀಡಬೇಕು. ಹುಲಿ ಆವಾಸದ ಸುತ್ತಲಿನ ಜಾಗಗಳಲ್ಲಿ ಸುಸ್ಥಿರ ಅಭಿವೃದ್ಧಿಯಾಗಬೇಕು. ಅರಣ್ಯ ಸರಹದ್ದುಗಳಲ್ಲಿ ವಾಸಿಸುವವರಿಗೆ ಸಂರಕ್ಷಣಾ ಯೋಜನೆಗಳಿಂದ ನೇರ ಆದಾಯ ಮತ್ತು ಕೆಲಸಗಳಲ್ಲಿ ಹೆಚ್ಚಿನ ಪಾಲು ಸಿಗಬೇಕು. 2005ರ ಟೈಗರ್ ಟಾಸ್ಕ್‌ಫೋರ್ಸ್ ವರದಿಯಲ್ಲಿ ಅಭಯಾರಣ್ಯ, ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಹೋಟೆಲ್‌ಗಳಿಗೆ ಶೇ 30ರ ಸೆಸ್ ವಿಧಿಸಬೇಕೆಂಬ ಬೇಡಿಕೆ ಇತ್ತು. ಈ ಹಣ ಹುಲಿ- ಅರಣ್ಯದ ಸುತ್ತ ವಾಸಿಸುವ ಸ್ಥಳೀಯರಿಗೆ ಸಿಗಬೇಕು ಮತ್ತು ಅರಣ್ಯಗಳ ಬಳಿಯ ಹೋಮ್ ಸ್ಟೇ ಉದ್ಯಮದಲ್ಲಿ ಸ್ಥಳೀಯರೇ ಇರಬೇಕು ಎಂಬ ಒತ್ತಾಯವೂ ಇತ್ತು.

ಹುಲಿ ಪ್ರವಾಸೋದ್ಯಮದಲ್ಲಿ ಸ್ಥಳೀಯರನ್ನು ಪಾಲುದಾರರು ಇಲ್ಲವೆ ಮಾಲೀಕರನ್ನಾಗಿ ಮಾಡಿಕೊಳ್ಳಬೇಕು. ಹುಲಿ ಪ್ರವಾಸೋದ್ಯಮ ಆದಾಯದ ದೊಡ್ಡ ಪಾಲು ಸ್ಥಳೀಯರಿಗೆ ದೊರಕುವಂತೆ ಆಗಬೇಕು. ಹುಲಿಯ ವರ್ತಮಾನ ಮತ್ತು ಭವಿಷ್ಯಗಳೆರಡರಲ್ಲೂ ಸ್ಥಳೀಯರಿಗೆ ಹೆಚ್ಚಿನ ಪಾಲು ಇದೆ ಎಂಬುದನ್ನು ಸರ್ಕಾರಗಳು ಹಾಗೂ ಯೋಜನಾಕರ್ತರು ಅರಿತಾಗ ಮಾತ್ರ ಹುಲಿಯ ಸಂರಕ್ಷಣೆ ಇನ್ನೂ 50 ವರ್ಷಗಳ ಕಾಲ ಸರಿಯಾಗಿ ನಡೆಯುತ್ತದೆ.

ಚುರುಮುರಿ



ಕೂಡಿಕೆ ಸಂಸಾರ!

• ಬಿ.ಎನ್.ಮಲ್ಲೇಶ್

ಕಮಲವ್ವ, ತೆನೆಯಕ್ಕ ಲೋಕಾಭಿರಾಮ ಮಾತಾಡುತ್ತ ಕೂತಿದ್ದರು. ಅದೇ ದಾರೀಲಿ ಬಂದ ಕೈಯಪ್ಪ 'ಓ... ಏನ್ ತೆನೆಯಕ್ಕ, ಆಪರೇಷನ್ ಮಾಡಾಕೆ ಸಿಂಗಪುರ್‌ಗೆ ಹೋಗಿದ್ಯೆಂತಲ್ಲ, ಯಾವಾಗ್ ಬಂದೆ?' ಎಂದು ಕಾಲೆಳೆದ.

'ನಾ ಎಲ್ಲಿಗಾದ್ರೂ ಹೋಗ್ತೀನಿ, ನಿಂಗ್ಯಾಕೆ?' ತೆನೆಯಕ್ಕಗೆ ಸಿಟ್ಟು ಬಂತು.

'ಅಲ್ಲ, ನಮ್ಮ ವಿರುದ್ಧ ಏನೋ ಸಂಚು ಗಿಂಚು ನಡೆಸಿದೀರಿ ಅಂತಿದ್ರಪ, ಅದ್ಕೆ ಕೇಳಿದೆ'.

'ನಿಮ್ ಅಧ್ಯಕ್ಷರಿಗೆ ಧಮ್ ಇದ್ರೆ, ತಾಕತ್ ಇದ್ರೆ ಅದನ್ನ ಪ್ರೂವ್ ಮಾಡಾಕೆ ಹೇಳು...' ಕಮಲವ್ವನೂ ರಾಂಗಾದಳು.

'ಬೆಂಕಿ ಇಲ್ದೆ ಹೊಗಿ ಆಡಲ್ಲಂತೆ, ಹೋಗ್ಲಿ ಬಿಡಿ, ನೀವಿಬ್ರೂ ಅದೇನೋ ಕೂಡಿಕೆ ಸಂಸಾರ ಮಾಡ್ಕಂತೀರಂತೆ?' ಕೈಯಪ್ಪ ನಕ್ಕ.

'ಅದು ನಮ್ಮಿಷ್ಟ, ಬೆಂಕಿ ಹುಟ್ಕಂಡಿರಾದು ನಿಮ್ಮಲ್ಲಿ, ನಮ್ಮಲ್ಲಲ್ಲ...' ತೆನೆಯಕ್ಕ ತಿರುಗೇಟು ನೀಡಿದಳು.

'ನಮ್ಮಲ್ಲಾ? ಏನ್ ಬೆಂಕಿ?'

'ಅದೇ... ಸಿಎಂನ ಕೆಳಗಿಳಿಸೋದು, ಏರ್ಸೋದು, ಲೆಟರ್ ಬಾಂಬ್‌ಗಳು... ಇವೆಲ್ಲ ಅಲ್ವಾ?'

'ನಿಮ್ತೆಲಿ, ಮನಿ ಅಂದ್ಮೇಲೆ ಕಸ ಬೀಳ್ತಾನೇ ಇರ್ತತಿ, ನಾವು ಹೊಡೀತಾನೇ ಇರ್ಬೇಕು. ಅಷ್ಟಕ್ಕೇ ನೀವು ಜೆ.ಎಚ್. ಪಟೇಲರು ಹೇಳ್ತಿದ್ದ ಹೋರಿ ಬೀಜದ ಕನಸು ಕಂಡ್ರೆ ಹೆಂಗೆ?'

'ಆತು, ಮುಂದೇನಾಗುತ್ತೆ ನೋಡ್ತಿರಿ ಬ್ರದರ್, ನಾವೇನು ಕೈ ಕಟ್ಕಂಡು ಕುಂತಿಲ್ಲ'.

'ಅದಿರ್ಲಿ, ನೀವಿಬ್ರೂ ವಿಲೀನ ಮಾಡ್ಕಂತೀರೋ ಹೊಂದಾಣಿಕೆ ಮಾಡ್ಕಂತೀರೋ? ನೀವಿಬ್ರೂ ಒಂದಾದ್ರೆ ಕಮಲವ್ವ ತೆನೆ ಹೊತ್ಕಂತಾಳೋ, ತೆನೆಯಕ್ಕ ಕಮಲ ಮುಡ್ಕಂತಾಳೋ?'

'ನಾವು ಏನರೆ ಮಾಡ್ಕಂತೀವಿ ನಿಂಗ್ಯಾಕೆ?'

'ಅಲ್ಲ, ನಿಮ್ ಸಂಸಾರದಲ್ಲಿ ಮನಿ ಯಜಮಾನಿ ಯಾರಾಗ್ತೀರಿ ಅಂತ...'

'ಯಾಕೆ?'

'ನಮ್ ಗೃಹಲಕ್ಷ್ಮಿ ಯೋಜನೇದು ಎರಡು ಸಾವುರ ದುಡ್ಡು ಯಾರಿಗೆ ಹಾಕ್ಬೇಕು ಅಂತ ಅಷ್ಟೆ...' ಕೈಯಪ್ಪ ಕಿಸಕ್ಕೆಂದ.

ಕಮಲವ್ವ, ತೆನೆಯಕ್ಕ ಮುಖಮುಖ ನೋಡಿಕೊಂಡರು.

ಸಂಗತ

ಕ್ಷಣ ನಿಲ್ಲಿ, ಬೀಳದಿರಿ 'ಲೈಕ್' ಹಪಹಪಿಗೆ

ಸೆಲ್ಫಿ, ರೀಲ್ಸ್ ಕ್ರೇಜ್‌ಗೆ ಬಿದ್ದಿರುವ ಜನ, ಒಂದು ಫೋಟೊ, ಒಂದು ವಿಡಿಯೊ ಸಲುವಾಗಿ ಅಪಾಯವನ್ನು ಲೆಕ್ಕಿಸದೆ ತಮ್ಮ ಜೀವವನ್ನೇ ಪಣಕ್ಕೆ ಇಡುತ್ತಿದ್ದಾರೆ

• ಡಾ. ಕೆ.ಎಸ್.ಚೈತ್ರಾ

ಧಾರಾಕಾರ ಮಳೆಯಲ್ಲಿ ತುಂಬಿ ಭೋರ್ಗರೆಯುತ್ತಿದ್ದ ಅರಸಿನಗುಂಡಿ ಜಲಪಾತ ವೀಕ್ಷಣೆಗೆ ತೆರಳಿದ್ದ ಯುವಕ ಕಾಲು ಜಾರಿ ನೀರು ಪಾಲಾಗಿದ್ದು, ಆತನಿಗಾಗಿ ಸತತ ಶೋಧ ನಡೆದಿದೆ. ಬೆಳಗಾವಿಯ ಸಮೀಪದ ಜಲಪಾತದ ಬಳಿ ನಾಲ್ವರು ಹುಡುಗಿಯರು ಕಾಲು ಜಾರಿ ಬಿದ್ದು ಪ್ರಾಣ ಕಳೆದುಕೊಂಡಿದ್ದಾರೆ... ದಿನದಿನವೂ ವರದಿಯಾಗುತ್ತಿರುವ ನೋವಿನ ಪ್ರಕರಣಗಳಿವು. ಭವಿಷ್ಯದ ಭರವಸೆಯಾದ ಯುವಕ, ಯುವತಿಯರು ಈ ರೀತಿ ಅಪಘಾತಕ್ಕೆ ಒಳಗಾಗಲು ಕಾರಣ ಸೆಲ್ಫಿ ಅಥವಾ ರೀಲ್ಸ್ ಮಾಡುವ ದುಸ್ಸಾಹಸ ಪ್ರವೃತ್ತಿ. ಹಾಗೆ ನೋಡಿದರೆ ಸೆಲ್ಫಿ, ರೀಲ್ಸ್ ಮಾಡುವಾಗ ಮರಣಕ್ಕೆ ಈಡಾಗುವವರ ಸಂಖ್ಯೆಯಲ್ಲಿ ವಿಶ್ವದಲ್ಲೇ ಭಾರತಕ್ಕೆ ಮೊದಲ ಸ್ಥಾನ!

ಕೈಯಲ್ಲಿ ಮೊಬೈಲ್ ಹಿಡಿದು ದೂರ ಚಾಚಿ, ಬೇಕಾದ ಭಂಗಿ, ಭಾವನೆ ನೀಡಿ ತಮ್ಮ ಭಾವಚಿತ್ರವನ್ನು ತಾವೇ ತೆಗೆದುಕೊಂಡರೆ ಅದು ಸೆಲ್ಫಿ. ಮೊಬೈಲ್‌ನಿಂದಲೇ 15ರಿಂದ 20 ಸೆಕೆಂಡುಗಳ ಕಾಲ ವಿಡಿಯೊವನ್ನು ಚಿತ್ರೀಕರಿಸಿದರೆ ಅದು ರೀಲ್ಸ್. ಈ ರೀತಿ ತಂತ್ರಜ್ಞಾನವನ್ನು ಬಳಸಿ ಅದಕ್ಕೆ ನಾನಾ ರೀತಿಯ ಚಿತ್ರ, ಹಾಡುಗಳನ್ನು ಸೇರಿಸಿ ಚಂದಗೊಳಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅದನ್ನು ಹಾಕುವುದು ಯುವಜನರಲ್ಲಿ ಪ್ರಮುಖವಾದ ಪ್ರೀತಿಯ ಹವ್ಯಾಸ. ಹೀಗೆ ಹಾಕಿದೊಡನೆ ಪರಿಚಿತರು, ಅಪರಿಚಿತರಿಂದ ಬರುವ ಲೈಕ್, ವ್ಯೂಸ್, ಕಮೆಂಟುಗಳು ಇದರ ಅಂತಿಮ ಗುರಿ. ಇವುಗಳೇ ಯುವಜನರ ಜನಪ್ರಿಯತೆಯ ಮಾನದಂಡ. ಲೈಕ್‌ಗಳು ಹೆಚ್ಚುತ್ತಾ ಹೋದಂತೆ ಮತ್ತಷ್ಟು ಗಳಿಸುವ ಹಂಬಲ. ಗರಿಷ್ಠ ಮಟ್ಟದಲ್ಲಿ ಮೆಚ್ಚುಗೆ ಪಡೆಯುವ ಸ್ಪೆಷಲ್ ಫೋಟೊಗಾಗಿ ಸತತ ಪ್ರಯತ್ನ. ಲೈಕ್‌ಗಾಗಿ ಶುರುವಾಗಿದ್ದು ಲೈಫನ್ನೇ ಆಕ್ರಮಿಸುತ್ತದೆ, ಕೆಲವೊಮ್ಮೆ ಕಸಿಯುತ್ತದೆ!

ಹದಿಹರೆಯದಲ್ಲಿ ಇತರರು ತನ್ನನ್ನು ಗುರುತಿಸಬೇಕು, ಮೆಚ್ಚಬೇಕು ಎಂಬ ಆಸೆ ಸಹಜವೇ. ಸ್ವತಃ ತೆಗೆದುಕೊಳ್ಳಬಹುದಾದ ಈ ಸೆಲ್ಫಿ, ರೀಲ್ಸ್‌ಗೆ ಬರುವ ಪ್ರತಿಕ್ರಿಯೆಗಳು ಖುಷಿಯನ್ನು ನೀಡಿ, ಕೆಲಮಟ್ಟಿಗೆ ಆತ್ಮವಿಶ್ವಾಸವನ್ನೂ ಹೆಚ್ಚಿಸುವುದು ನಿಜ. ಸ್ಮಾರ್ಟ್ ಫೋನ್‌ಗಳ ಸೆಲ್ಫಿಸ್ಟಿಕ್‌ಗಳಿಂದ ಎಲ್ಲರೂ ದಿನವೂ ಸೆಲ್ಫಿ, ರೀಲ್ಸ್ ಅಪ್‌ಲೋಡ್ ಮಾಡುವವರೇ. ಹೀಗಿರುವಾಗ, ಇತರರಿಗಿಂತ ಭಿನ್ನವಾಗಿ ಗಮನ ಸೆಳೆಯುವುದು ಹೇಗೆ? ಅಪಾಯಕಾರಿ ಸ್ಥಳಗಳಲ್ಲಿ, ಊಹಿಸಲಾರದ ಭಂಗಿಗಳಲ್ಲಿ ರೀಲ್ಸ್ ಮಾಡುವುದು ಒಂದು ಮಾರ್ಗ. ಹೀಗಾಗಿ ಸಮುದ್ರದ ಅಲೆಗಳ ನಡುವೆ, ವೀಲಿಂಗ್ ಮಾಡುತ್ತಾ ಬೈಕಿನಲ್ಲಿ, ಚಲಿಸುವ ರೈಲಿನ ಬಾಗಿಲಲ್ಲಿ, ಸೇತುವೆಯ ಅಂಚಿನಲ್ಲಿ... ಹೀಗೆ ಹೊಸ ಹೊಸ ಅಪಾಯಕಾರಿ ಸ್ಥಳಗಳನ್ನು ಜನ ಹುಡುಕುತ್ತಿದ್ದಾರೆ.

ಈಗಂತೂ ಮಳೆಗಾಲ. ನದಿ, ಸಮುದ್ರಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಕೆಲವು ಜಲಪಾತಗಳು ಭೋರ್ಗರೆಯುತ್ತಿವೆ. ಇಂಥ ವೇಳೆ ಸಮುದ್ರದ ಅಲೆ, ಜಲಪಾತದ ಹಿನ್ನೆಲೆಯಲ್ಲಿ ತೆಗೆಯುವ ಸೆಲ್ಫಿ, ರೀಲ್ಸ್ ಮೈ ಝುಮ್ಮೆನ್ನಿಸುತ್ತವೆ. ಬಿಸಿರಕ್ತ, ವಿವೇಚನೆ ಇಲ್ಲದ ಬುದ್ಧಿ, ಲೈಕ್‌ಗಳ ಸುತ್ತಲೇ ತಿರುಗುವ ಮನಸ್ಸು... ನಾನಾ ರೀತಿಯ ದುಸ್ಸಾಹಸಗಳನ್ನು ಮಾಡಲು ಪ್ರಚೋದನೆ ನೀಡುತ್ತವೆ. ಗಮನಿಸಬೇಕಾದ ಅಂಶವೆಂದರೆ, ಸತತ ಸುರಿಯುವ ಮಳೆಯಿಂದಾಗಿ ಬಂಡೆಗಳ ಮೇಲೆ ಪಾಚಿ ಬೆಳೆದಿರುತ್ತದೆ. ನೆಲದಲ್ಲಿನ ಮಣ್ಣು ಕೂಡ ಹಸಿಯಾಗಿ, ಜಾರುತ್ತದೆ. ಇಂತಹ ಬಂಡೆಗಳ ಮೇಲೆ ನಿಂತು, ಕ್ಯಾಮೆರಾ ನೋಡುತ್ತಾ ಪೋಸ್ ಕೊಡುವಾಗ ಜಾರುವ ಎಲ್ಲ ಸಾಧ್ಯತೆಯೂ ಇರುತ್ತದೆ. ಜಲಪಾತಗಳಲ್ಲಿ ಎತ್ತರದಿಂದ ಆಳಕ್ಕೆ ಧುಮುಕುವ ನೀರಿಗೆ ರಭಸ ಹೆಚ್ಚು. ಆಳದಲ್ಲಿ ನೀರಿನ ಸುಳಿಗಳೂ ಇರುತ್ತವೆ. ಸಮುದ್ರದ ಅಲೆಗಳು ಕ್ಷಣಕ್ಷಣಕ್ಕೂ ಬದಲಾಗುತ್ತವೆ. ಅದನ್ನು ಊಹಿಸಲೂ ಯಾರಿಗೂ ಸಾಧ್ಯವಿಲ್ಲ. ಮಿಂಚಿನ ವೇಗದಲ್ಲಿ ದೈತ್ಯ ಅಲೆಗಳಾಗಿ ತೀರಕ್ಕೆ ಅಪ್ಪಳಿಸುವುದಷ್ಟೇ ಅಲ್ಲ ಜೀವಗಳನ್ನು ಸೆಳೆಯುವ ಶಕ್ತಿ ಸಮುದ್ರಕ್ಕಿದೆ. ಒದ್ದೆಯಾದ ಮರಳಿನಲ್ಲಿ ಕಾಲಿಟ್ಟಂತೆ ಕಾಲು ಕೆಳಗೆ ಕುಸಿಯುತ್ತದೆ. ಹಾಗಾಗಿ ಮಳೆಗಾಲದಲ್ಲಿ ಸಮುದ್ರದೊಡನೆ ಸರಸ ಸಲ್ಲದು!

ಮೇಲಿಂದ ಮೇಲೆ ಆಗುತ್ತಿರುವ ಈ ಪ್ರಕರಣಗಳ ಕುರಿತಾಗಿ ಪೊಲೀಸರು ಬಹಳಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಕರ್ನಾಟಕದಲ್ಲಿ ಗೋಕಾಕ್ ಫಾಲ್ಸ್, ಜೋಗ್ ಫಾಲ್ಸ್ ಮತ್ತು ಜನಪ್ರಿಯ ಸಮುದ್ರ ತೀರಗಳಲ್ಲಿ ಪೊಲೀಸರು ಜನರನ್ನು ಎಚ್ಚರಿಸುತ್ತಿದ್ದಾರೆ. ಸೆಲ್ಫಿ ತೆಗೆಯಬಾರದು ಎಂದು ಸೂಚನಾ ಫಲಕಗಳನ್ನು ಅಳವಡಿಸಲಾಗುತ್ತಿದೆ. ಮುಂಬೈ, ಗೋವಾದಂತಹ ಪ್ರವಾಸಿ ತಾಣಗಳಲ್ಲಿ ಮಾಡಿದಂತೆ 'ನೋ ಸೆಲ್ಫಿ ಝೋನ್' ಎಂದು ಗುರುತಿಸುವ ಬಗ್ಗೆ ಚಿಂತನೆ ನಡೆದಿದೆ. ವಿಷಾದದ ಸಂಗತಿ ಎಂದರೆ, ಸೆಲ್ಫಿ, ರೀಲ್ಸ್ ಕ್ರೇಜ್‌ಗೆ ಬಿದ್ದಿರುವ ಜನ ಅವನ್ನೆಲ್ಲಾ ಗಾಳಿಗೆ ತೂರಿ ಒಂದು ಫೋಟೊ, ಒಂದು ವಿಡಿಯೊ ಸಲುವಾಗಿ ತಮ್ಮ ಜೀವವನ್ನೇ ಪಣಕ್ಕೆ ಇಡುತ್ತಿದ್ದಾರೆ. ಲಕ್ಷ ಲೈಕ್ಸ್, ವ್ಯೂಸ್ ಯಾವುವೂ ಜೀವವನ್ನು ಮರಳಿಸುವುದಿಲ್ಲ, ಕಳೆದುಕೊಂಡವರ ನೋವನ್ನು ಮರೆಸುವುದಿಲ್ಲ ಎನ್ನುವುದನ್ನು ನೆನಪಿನಲ್ಲಿಡಬೇಕು.

ಬದುಕಿಗೆ ಆಸರೆಯಾಗಿದ್ದ ಮಗನನ್ನು ಕಳೆದುಕೊಂಡ ತಂದೆ ತಾಯಿ, ಅಮ್ಮನನ್ನು ಕಳೆದುಕೊಂಡ ಮುದ್ದು ಮಕ್ಕಳು, ಪತಿಯನ್ನು ಕಳೆದುಕೊಂಡ ಮಡದಿ, ಹೀಗೆ ಒಂದೊಂದೇ ಮುಖವನ್ನು ನೆನೆಸಿಕೊಂಡಾಗಲೆಲ್ಲ ಹೊಟ್ಟೆಯಲ್ಲಿ ಸಂಕಟ. ಕ್ಷಣದ ಸಂತೋಷಕ್ಕಾಗಿ, ಒಂದಷ್ಟು ಲೈಕುಗಳ ಹಪಹಪಿಗಾಗಿ ಅಮೂಲ್ಯವಾದ ಬದುಕನ್ನೇ ಈ ರೀತಿ ಬಲಿ ಕೊಡುವುದು ಸರಿಯೇ?

'ಏನೂ ಆಗಲ್ಲ' ಎನ್ನುವ ಅತಿಯಾದ ಆತ್ಮವಿಶ್ವಾಸ, 'ನಮಗೆಲ್ಲಾ ಗೊತ್ತಿದೆ' ಎನ್ನುವ ಅಹಂ, ಅನುಭವದ ಮಾತಿಗೆ ಕಿವಿಗೊಡದ ಹಟ, ರೀಲ್ಸ್‌ಗೆ ಹೊರತಾದ ರಿಯಲ್ ಬದುಕಿನ ಬಗ್ಗೆ ಬೇಜವಾಬ್ದಾರಿ... ಇಂಥವುಗಳಿಂದ ಹೊರಬಂದರೆ ಈ ಪ್ರಾಣಬಲಿ ನಿಂತೀತು!

ವಾಚಕರ ವಾಣಿ

ಗಲಭೆ ಪ್ರಕರಣ: ಸರ್ಕಾರದ ಹಸ್ತಕ್ಷೇಪ ಸಲ್ಲ

ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ನಡೆದಿರುವ ಗಲಭೆಗಳಲ್ಲಿ ನಿರ್ದಿಷ್ಟ ಕೋಮಿನ ಅಮಾಯಕ ಯುವಕರು ಹಾಗೂ ವಿದ್ಯಾರ್ಥಿಗಳ ವಿರುದ್ಧ ದಾಖಲಿಸಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕೆಂಬ ಬೇಡಿಕೆಯ ಪರಿಶೀಲನೆಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚನೆ ನೀಡಿರುವುದು (ಪ್ರ.ವಾ., ಜುಲೈ 27) ನ್ಯಾಯಾಂಗದ ಕುರಿತು ನಂಬಿಕೆ ಇರುವವರಲ್ಲಿ ಗೊಂದಲ ಮೂಡಿಸುತ್ತದೆ. ಯುವಕರು ನಿಜವಾಗಿಯೂ ಅಮಾಯಕರಾಗಿದ್ದರೆ ಅವರ ಭವಿಷ್ಯದ ದೃಷ್ಟಿಯಿಂದ ಬಿಡುಗಡೆ ಮಾಡಲಿ. ಆದರೆ ಅವರು ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗಿರುವುದು ಸಾಬೀತಾದಲ್ಲಿ ಶಿಕ್ಷೆಯಿಂದ ಕೈಜಾರದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಸರ್ಕಾರದ್ದಾಗಿದೆ.

ಈ ನೆಲದ ಕಾನೂನನ್ನು ಗೌರವಿಸಬೇಕಾದುದು, ಪಾಲಿಸಬೇಕಾಗಿರುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇಲ್ಲಿ ಅಲ್ಪಸಂಖ್ಯಾತ, ಬಹುಸಂಖ್ಯಾತ ಎಂಬ ಪ್ರಶ್ನೆ ಬರುವುದೇ ಇಲ್ಲ. ತಪ್ಪು ತಪ್ಪೇ. ತಪ್ಪಾದಾಗ ಶಿಕ್ಷಿಸಿ ಮತ್ತೆ ತಪ್ಪು ಮಾಡದಂತೆ ತಿಳಿ ಹೇಳುವುದು ನ್ಯಾಯಾಲಯ. ಅದು ನೀಡುವ ತೀರ್ಪಿಗೆ ತಲೆಬಾಗಲೇಬೇಕು. ಸರ್ಕಾರ ಇಂತಹ ಗಂಭೀರ ವಿಚಾರಗಳಲ್ಲಿ ಮೂಗು ತೂರಿಸುವುದು ಸರಿಯಲ್ಲ. ಬೇಲಿಯೇ ಎದ್ದು ಹೊಲ ಮೇಯ್ದರೆ ಬೆಳೆಯನ್ನು ರಕ್ಷಿಸುವವರಾರು? ನ್ಯಾಯಾಂಗ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ. ತಪ್ಪಿತಸ್ಥರಾಗಿದ್ದರೆ ಶಿಕ್ಷೆಯಾಗಲಿ, ಅಮಾಯಕರಾದರೆ ಹೊರಬರಲಿ.

ಎಚ್.ಎನ್.ಕಿರಣ್ ಕುಮಾರ್ ಹಳೇಹಳ್ಳಿ, ಗೌರಿಬಿದನೂರು

ಅರ್ಧ ಹೆಲ್ಮೆಟ್: ವಾಹನ ಸವಾರರಿಗಲ್ಲ

'ಅರ್ಧ ಹೆಲ್ಮೆಟ್' ಧರಿಸುವವರ ಮೇಲೆ ಪೊಲೀಸರು ಕ್ರಮ ಕೈಗೊಳ್ಳುವ ಬದಲು, ಇಂತಹ ಹೆಲ್ಮೆಟ್‌ಗಳ ತಯಾರಿಕೆಯನ್ನೇ ಮೊದಲು ನಿರ್ಬಂಧಿಸಬೇಕು ಎಂದು ಹೇಮಂತ್ ಆಚಾರ್ ಎಂಬುವರು ಟ್ವೀಟ್ ಮಾಡಿರುವುದು ಪ್ರಕಟವಾಗಿದೆ (ಪ್ರ.ವಾ., ಜುಲೈ 27). ಬಹುಶಃ ಮರೆತಿರುವ ಸಂಗತಿಯೆಂದರೆ, ಈ ಹೆಲ್ಮೆಟ್‌ಗಳನ್ನು ತಯಾರಿಸಲು ಶುರು ಮಾಡಿದ್ದು ದ್ವಿಚಕ್ರ ವಾಹನ ಸವಾರರಿಗಲ್ಲ. ಗಣಿ ಕಾರ್ಮಿಕರು, ರಸ್ತೆ ಕಾಮಗಾರಿ ನಡೆಸುವವರು, ಅಗ್ನಿಶಾಮಕ ದಳ ಹಾಗೂ ಅನೇಕ ಸಂಘಟಿತ ವಲಯದ ಕಾರ್ಮಿಕರು ತಮ್ಮ ಸಮವಸ್ತ್ರದ ಭಾಗವಾಗಿ ಇಂಥ ಹೆಲ್ಮೆಟ್ ಧರಿಸುತ್ತಾರೆ. ಹೀಗಿರುವಾಗ, ಏಕ್‌ದಂ ಇದರ ತಯಾರಿಕೆಯನ್ನು ನಿಲ್ಲಿಸುವುದು ಸಮಂಜಸವಲ್ಲ ಮತ್ತು ಅಸಾಧ್ಯ ಕೂಡ.

ದ್ವಿಚಕ್ರ ವಾಹನ ಸವಾರರು ತಮ್ಮ ಪ್ರಾಣರಕ್ಷಣೆಗೆಂದು ಕೊಂಚ ದುಬಾರಿಯಾದರೂ ಒಳ್ಳೆಯ ಹೆಲ್ಮೆಟ್ ಖರೀದಿಸದೆ ಬರೀ ಪೊಲೀಸರು ಹಾಕುವ ದಂಡದಿಂದ ತಪ್ಪಿಸಿಕೊಳ್ಳಲು, ತಮಗೆ ರಕ್ಷಣೆಯನ್ನೇ ನೀಡದ ಅರ್ಧ ಹೆಲ್ಮೆಟ್ ಧರಿಸುತ್ತಾರೆ. ಅಂತಹವರ ವಿರುದ್ಧ ಪೊಲೀಸರು ಸೂಕ್ತ ಕ್ರಮ ಜರುಗಿಸುವುದು ನ್ಯಾಯಸಮ್ಮತವಾಗಿಯೇ ಇದೆ.

ರವಿಕಿರಣ್ ಶೇಖರ್, ಬೆಂಗಳೂರು

ಇವರಿಗೆ ಹೇಗೆ ನಷ್ಟವಾಗುತ್ತದೆ?

ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವುದರಿಂದ ಆಟೊ ಚಾಲಕರಿಗೆ ನಷ್ಟವಾಗುತ್ತದೆ ಎಂಬ ವಾದ ಹೇಗೆ ಸರಿ? ಅದಕ್ಕಾಗಿ ಮುಷ್ಕರಕ್ಕೆ ಕರೆ ನೀಡುವುದು ಅಷ್ಟೊಂದು ಸಮಂಜಸ ಅನ್ನಿಸದು. ಸರ್ಕಾರಿ ಬಸ್‌ಗಳು ಮಹಿಳೆಯರನ್ನು ಒಂದು ಊರಿನಿಂದ ಮತ್ತೊಂದು ಊರಿಗೆ ಉಚಿತವಾಗಿ ಕೊಂಡೊಯ್ಯುತ್ತವೆ. ಅದು ಆಟೊದವರ ಮಾರ್ಗವಂತೂ ಅಲ್ಲ. ನಗರ- ಪಟ್ಟಣಗಳಲ್ಲಿ ಸರ್ಕಾರಿ ಬಸ್‌ಗಳನ್ನು ಎಲ್ಲರ ಮನೆಯ ಹತ್ತಿರದಿಂದ ಓಡಿಸುವುದಿಲ್ಲವಲ್ಲ. ಅದೂ ಅಲ್ಲದೆ ಆಟೊಗಳಲ್ಲಿ ಈವರೆಗೆ ಬರೀ ಮಹಿಳೆಯರೇ ಪ್ರಯಾಣಿಸಿದ ಉದಾಹರಣೆಗಳಿಲ್ಲ. ಎಲ್ಲರೂ ಬಳಸುತ್ತಾರೆ. ಉಚಿತ ಪ್ರಯಾಣದಿಂದ ತನಗೆ ನಷ್ಟವಾಗಿಲ್ಲ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವೇ ಹೇಳಿಕೊಂಡಿದೆ. ಮತ್ತೇಕೆ ಅಪಸ್ವರ?

ಕುಮಾರ ಚಲವಾದಿ, ಹಾಸನ

ಜನಪ್ರತಿನಿಧಿಗಳಿಗೆ ಇರಲಿ ವೆಬ್‌ಸೈಟ್

ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳು ನಿಗದಿತ ಸ್ಥಳದಲ್ಲಿ ನಿಲ್ಲಿಸದೇ ಹೋದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ಸಲ್ಲಿಸಲು ವೆಬ್‌ಸೈಟ್ ವ್ಯವಸ್ಥೆ ಇದೆ. ಆದರೆ ವಿಧಾನಸಭಾ ಕ್ಷೇತ್ರದ ಕುಂದುಕೊರತೆಗಳು ಮತ್ತು ಆಗುಹೋಗುಗಳನ್ನು ಹಂಚಿಕೊಳ್ಳಲು ಶಾಸಕರಿಗೆ ಒಂದು ವೆಬ್‌ಸೈಟ್ ಬೇಡವೇ? ಶಾಸಕರು, ಸಚಿವರು ಮತ್ತು ಉಸ್ತುವಾರಿ ಸಚಿವರು ವೆಬ್‌ಸೈಟ್ ಹೊಂದುವಂತೆ ಆಗಲಿ. ಈ ಮೂಲಕ ಸಾರ್ವಜನಿಕರ ಆಗುಹೋಗುಗಳಿಗೆ ಕ್ರಿಯಾಶೀಲವಾಗಿ ಸ್ಪಂದಿಸಲಿ.

ಯಾರು ಎಷ್ಟು ಸಮರ್ಪಕವಾಗಿ ಸ್ಪಂದಿಸಿದ್ದಾರೆ ಎಂಬ ಅಂಕಿ ಅಂಶವನ್ನು ಶಾಸಕಾಂಗ ಪಕ್ಷದ ನಾಯಕ ಅಥವಾ ಆಯಾ ಪಕ್ಷದ ಅಧ್ಯಕ್ಷರು ಪರಿಶೀಲಿಸುವ ವ್ಯವಸ್ಥೆ ಇದ್ದರೆ ಒಳಿತು. ಸಾರ್ವಜನಿಕರಿಗೆ ತಮ್ಮ ದೂರು ದುಮ್ಮಾನಗಳನ್ನು ದಾಖಲಿಸಲು ಆನ್‌ಲೈನ್ ವ್ಯವಸ್ಥೆಯೊಂದು ಸಿಕ್ಕಂತೆ ಆಗುತ್ತದೆ. ವೆಬ್‌ಸೈಟ್‌ಗಳು ಆರಂಭವಾಗಿ ಅವುಗಳ ವಿಳಾಸಗಳು ಮಾಧ್ಯಮಗಳಲ್ಲಿ ಆಗಾಗ ಪ್ರಕಟಗೊಳ್ಳಲಿ.

ಮಲ್ಲಿಕಾರ್ಜುನ, ಸುರಧೇನುಪುರ

ಬಹುಮತಕ್ಕೆ ಇಲ್ಲವೇ ಬೆಲೆ?!

ದೇಶದಲ್ಲಿ ಇತ್ತೀಚೆಗೆ ನಡೆಯುತ್ತಿರುವ ರಾಜಕೀಯ ಚಟುವಟಿಕೆಗಳು ಹಾಗೂ ಸರ್ಕಾರಗಳನ್ನು ಕಟ್ಟುವುದು, ಉರುಳಿಸುವುದನ್ನು ಗಮನಿಸಿದರೆ, ಮುಂದಿನ ದಿನಮಾನಗಳಲ್ಲಿ ಪ್ರಜಾಪ್ರಭುತ್ವ ಉಳಿಯುವುದೇ ಎಂಬ ಸಂದೇಹ ಕಾಡುತ್ತದೆ. ಯಾಕೆಂದರೆ, ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಮುಗಿದು ಇನ್ನೂ ಮೂರು ತಿಂಗಳು ಕೂಡ ಆಗಿಲ್ಲ. ಜೊತೆಗೆ ಈ ಬಾರಿ ಪೂರ್ಣ ಬಹುಮತದೊಂದಿಗೆ ಸರ್ಕಾರ ರಚನೆಯಾಗಿದ್ದರೂ 'ಸರ್ಕಾರ ಅತಂತ್ರವಾಗಿದೆ', 'ಕೆಡವಲು ಸಂಚು ನಡೆಯುತ್ತಿದೆ' ಎಂಬಂತಹ ಹೇಳಿಕೆಗಳು ಕೇಳಿಬರುತ್ತಿವೆ. ಹಾಗೇ ಮಹಾರಾಷ್ಟ್ರದಲ್ಲಿ ನಡೆದ ರಾಜಕೀಯ ಬದಲಾವಣೆಗಳನ್ನು ಅವಲೋಕಿಸಿದಾಗ, ಮುಂದಿನ ದಿನಗಳಲ್ಲಿ ರಾಜಪ್ರಭುತ್ವ ಅಥವಾ ಸರ್ವಾಧಿಕಾರಿ ವ್ಯವಸ್ಥೆಯು ಜಾರಿಗೆ ಬರುವುದೇ ಎಂಬ ಸಂಶಯ ಮೂಡುತ್ತದೆ.

ಆರ್.ರಾಜೇಶ್, ಪಾವಗಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಏಕರೂಪ ನಾಗರಿಕ ಸಂಹಿತೆ ಚರ್ಚೆ

ದತ್ತು: ಎಲ್ಲರಿಗೂ ಅನ್ವಯವಾಗುವ ಜೂವನೈಲ್ ಜಸ್ಟಿಸ್ ಕಾಯ್ದೆ

ಪ್ರಜಾವಾಣಿ ವಾರ್ತೆ

'ದತ್ತು ಸ್ವೀಕಾರ ಎಂಬುದು ಪೌರಾಣಿಕ ಭಾರತದಿಂದಲೂ ಚಾಲ್ತಿಯಲ್ಲಿರುವ ಒಂದು ಸಂಗತಿ. ಮಗ ಮಾತ್ರವೇ ತಂದೆಗೆ ಮೋಕ್ಷ ದೊರಕಿಸಿಕೊಡಬಲ್ಲ ಎಂಬ ನಂಬಿಕೆಯ ಕಾರಣ, ಗಂಡುಮಕ್ಕಳು ಇಲ್ಲದವರು ದತ್ತು ತೆಗೆದುಕೊಳ್ಳುವ ಪರಿಪಾಟಕ್ಕೆ ಕಾರಣ. ಹಿಂದೂ ಧಾರ್ಮಿಕ ಗ್ರಂಥಗಳಲ್ಲೂ ಇದನ್ನು ಉಲ್ಲೇಖಿಸಲಾಗಿದೆ. ಈಗಿನ ಕಾಲದಲ್ಲೂ ದತ್ತು ಸ್ವೀಕಾರ ಎಂಬುದು ಅತ್ಯಂತ ಪ್ರಸ್ತುತವಾದ ಸಂಗತಿಯಾಗಿದೆ' ಎನ್ನುತ್ತದೆ ಕಾನೂನು ಆಯೋಗ. ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯ ಕಾರ್ಯಸಾಧ್ಯತೆಗಳ ಬಗ್ಗೆ ವರದಿ ನೀಡಿ ಎಂದು ಕೇಂದ್ರ ಸರ್ಕಾರ ನೀಡಿದ್ದ ಸೂಚನೆ ಪ್ರಕಾರ, ಕಾನೂನು ಆಯೋಗವು ಸಿದ್ಧಪಡಿಸಿದ್ದ ವರದಿಯಲ್ಲಿ ಇರುವ ಉಲ್ಲೇಖವಿದು.

ಎಲ್ಲಾ ಧರ್ಮಗಳೂ ದತ್ತಕವನ್ನು ಭಿನ್ನವಾಗಿ ಪರಿಗಣಿಸುತ್ತವೆ. ಕೆಲವು ಧರ್ಮಗಳಲ್ಲಿ ದತ್ತು ಸ್ವೀಕಾರಕ್ಕೆ ಅವಕಾಶವಿದ್ದರೆ, ಕೆಲವು ಧರ್ಮಗಳಲ್ಲಿ ದತ್ತು ಸ್ವೀಕಾರ ನಿಷಿದ್ಧ. ಇನ್ನೂ ಕೆಲವು ಧರ್ಮಗಳಲ್ಲಿ ಮೃತ ವ್ಯಕ್ತಿಯ ಅಂತ್ಯಸಂಸ್ಕಾರ ನೆರವೇರಿಸುವವರಿಗೆ ಮಾತ್ರ ದತ್ತುಪುತ್ರನಾಗಲು ಅವಕಾಶವಿದೆ. ದತ್ತು ಸ್ವೀಕಾರದ ಸಂಬಂಧದ ಕಾನೂನುಗಳೂ ವೈಯಕ್ತಿಕ ಕಾನೂನುಗಳ ಅಡಿಯಲ್ಲೇ ಬರುವ ಕಾರಣ ಏಕರೂಪ ನಾಗರಿಕ ಸಂಹಿತೆಯ ಕಾರ್ಯಸಾಧ್ಯತೆಯ ಬಗ್ಗೆ ನಡೆಸಿದ ಅಧ್ಯಯನದಲ್ಲಿ, ಈ ಕಾನೂನುಗಳನ್ನೂ ಕಾನೂನು ಆಯೋಗವು ಒಳಗೊಂಡಿತ್ತು.

ಭಾರತದ ವೈಯಕ್ತಿಕ ಕಾನೂನುಗಳಲ್ಲಿ ದತ್ತು ಸ್ವೀಕಾರದ ಅವಕಾಶ, ಪ್ರಕ್ರಿಯೆಗಳು, ದತ್ತು ಪಡೆದ ಮಕ್ಕಳ ಹಕ್ಕುಗಳ, ದತ್ತು ಪಡೆದವರ ಹಕ್ಕು ಮತ್ತು ಕರ್ತವ್ಯಗಳು, ದತ್ತು ನೀಡಿದವರ ಹಕ್ಕು ಮತ್ತು ಕರ್ತವ್ಯಗಳನ್ನು ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ. ದೇಶದಲ್ಲಿರುವ ಎಲ್ಲಾ ವೈಯಕ್ತಿಕ ಕಾನೂನುಗಳಲ್ಲಿ ಹಿಂದೂ ದತ್ತಕ ಕಾಯ್ದೆಯೇ ಅತ್ಯಂತ ವಿಸ್ತೃತ ಹಾಗೂ ಸ್ಪಷ್ಟತೆಯಿಂದ ಕೂಡಿದೆ. ಆರಂಭದಲ್ಲಿ ಈ ಕಾಯ್ದೆಯನ್ನು ರಚಿಸಿದಾಗ ಹಲವು ಕೊರತೆಗಳಿದ್ದವು. ಕಾನೂನು ಆಯೋಗವು ನೀಡಿದ ಶಿಫಾರಸುಗಳ ಆಧಾರದಲ್ಲಿ ಈ ಕಾಯ್ದೆಯನ್ನು ಹಲವು ಬಾರಿ ತಿದ್ದುಪಡಿ ಮಾಡಲಾಗಿದೆ. ಹೀಗೆ ಈ ಕಾಯ್ದೆಯು ಸುಧಾರಣೆ ಆಗಿದ್ದರೂ, ಇನ್ನೂ ಕೆಲವು ಅಂಶಗಳನ್ನು ಸುಧಾರಿಸಲು ಅವಕಾಶ ವಿದೆ ಎಂದು ಕಾನೂನು ಆಯೋಗವು ಹೇಳಿದೆ.

ಮುಸ್ಲಿಮರಲ್ಲಿ ದತ್ತು ಸ್ವೀಕಾರಕ್ಕೆ ಅವಕಾಶವಿಲ್ಲ. ಹೀಗಾಗಿ ದತ್ತು ಸ್ವೀಕಾರದ ಸಂಬಂಧ ಯಾವುದೇ ಕಾನೂನು ಇಲ್ಲ. ಆದರೆ, ಮುಸ್ಲಿಂ ವೈಯಕ್ತಿಕ ಕಾನೂನುಗಳಲ್ಲಿ ಏತಕ್ಕಾಗಿ ದತ್ತು ಸ್ವೀಕರಿಸಬಾರದು ಎಂಬುದನ್ನು ವಿವರಿಸಲಾಗಿದೆ. ಭಾರತೀಯ ಕ್ರೈಸ್ತರಲ್ಲಿ ದತ್ತು ಸ್ವೀಕಾರಕ್ಕೆ ಅವಕಾಶವಿದ್ದರೂ, ಈ ಸಂಬಂಧ ಯಾವುದೇ ಪ್ರತ್ಯೇಕ ಕಾನೂನುಗಳು ಭಾರತದಲ್ಲಿ ಇಲ್ಲ. ಪಾರ್ಸಿಗಳಲ್ಲೂ ದತ್ತು ಸ್ವೀಕಾರಕ್ಕೆ ಅವಕಾಶವಿಲ್ಲ.

ಹೀಗೆ ಪ್ರತಿಯೊಂದು ಧರ್ಮವೂ ದತ್ತು ಸ್ವೀಕಾರವನ್ನು ಸಂಪೂರ್ಣ ಭಿನ್ನವಾಗಿಯೇ ನೋಡುತ್ತವೆ. ಆದರೆ ದತ್ತು ಸ್ವೀಕಾರ ನಿಷೇಧವಿದ್ದರೂ, ದತ್ತು ಸ್ವೀಕರಿಸಬೇಕಾದ ಅನಿವಾರ್ಯತೆ ಎಲ್ಲಾ ಧರ್ಮೀಯರಿಗೆ ಬಂದೊದಗಿದೆ. ಈ ಸಂಬಂಧ ಭಾರತದ ವಿವಿಧ ನ್ಯಾಯಾಲಯಗಳಲ್ಲಿ ಹಲವು ಪ್ರಕರಣಗಳು ನಡೆದು, ದತ್ತು ಸ್ವೀಕಾರಕ್ಕೆ ಅವಕಾಶ ನೀಡಿದ ಮತ್ತು ಅವಕಾಶ ನಿರಾಕರಿಸಿದಂತಹ ತೀರ್ಪುಗಳು ಬಂದಿವೆ. ಹಿಂದೂಗಳನ್ನು ಹೊರತುಪಡಿಸಿ ಬೇರೆ ಧರ್ಮಗಳಲ್ಲಿ ದತ್ತು ಸ್ವೀಕಾರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕಾನೂನು ಇಲ್ಲದಿರುವುದು ಒಂದು ತೊಡಕಾಗಿದೆ ಎಂದು ಕಾನೂನು ಆಯೋಗವು ಅಭಿಪ್ರಾಯಪಟ್ಟಿದೆ.

ಮುಸ್ಲಿಮರಲ್ಲಿ ದತ್ತು ಸ್ವೀಕಾರಕ್ಕೆ ನಿಷೇಧವಿದ್ದರೂ ಮುಸ್ಲಿಂ ದಂಪತಿ, ಮುಸ್ಲಿಂ ವ್ಯಕ್ತಿಗಳು ದತ್ತು ಸ್ವೀಕರಿಸಲು ಅವಕಾಶ ಮಾಡಿಕೊಡುವ ಕಾನೂನೊಂದು ಭಾರತದಲ್ಲಿ ಜಾರಿಯಲ್ಲಿದೆ. ಜೂವನೈಲ್ ಜಸ್ಟಿಸ್ (ಆರೈಕೆ ಮತ್ತು ಮಕ್ಕಳ ರಕ್ಷಣೆ) ಕಾಯ್ದೆ–2015ರಲ್ಲಿ ದೇಶದ ಪ್ರತಿಯೊಬ್ಬ ನಾಗರಿಕರೂ ದತ್ತು ಪಡೆಯಲು ಅವಕಾಶ ನೀಡಲಾಗಿದೆ. ಈ ಕಾಯ್ದೆ ಪ್ರಕಾರ ಎಲ್ಲಾ ಅರ್ಹ ನಾಗರಿಕರೂ ದತ್ತು ಸ್ವೀಕರಿಸಬಹುದಾಗಿದೆ. ಈ ಕಾಯ್ದೆಯನ್ನೇ ಇನ್ನಷ್ಟು ಸುಧಾರಿಸಿ, ಅದರ ವ್ಯಾಪ್ತಿಯನ್ನು ಹೆಚ್ಚಿಸಿದರೆ ಇದು ಎಲ್ಲಾ ಧರ್ಮದವರಿಗೂ ಸಮಾನವಾಗಿ ಅನ್ವಯವಾಗುವ ಕಾಯ್ದೆಯಾಗಲಿದೆ. ಹೀಗಾಗಿ ಏಕರೂಪ ನಾಗರಿಕ ಸಂಹಿತೆ ರಚನೆಯ ಬದಲಿಗೆ, ಈ ಕಾಯ್ದೆಯನ್ನೇ ಸುಧಾರಿಸುವತ್ತ ಗಮನ ಹರಿಸಬಹುದು ಎಂದು ಕಾನೂನು ಆಯೋಗವು ತಾನು ಸಲ್ಲಿಸಿದ್ದ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

ಆಧಾರ: ಕಾನೂನು ಆಯೋಗದ 'ಕೌಟುಂಬಿಕ ಕಾನೂನುಗಳ ಸುಧಾರಣೆ ಸಮಾಲೋಚನಾ ವರದಿ–2018', ಹಿಂದೂ ದತ್ತಕ ಮತ್ತು ನಿರ್ವಹಣಾ ಕಾಯ್ದೆ–1956, ಮುಸ್ಲಿಂ ವೈಯಕ್ತಿಕ ಕಾನೂನು ಅನ್ವಯ ಕಾಯ್ದೆ, ಜೂವನೈಲ್ ಜಸ್ಟಿಸ್ (ಆರೈಕೆ ಮತ್ತು ಮಕ್ಕಳ ರಕ್ಷಣೆ) ಕಾಯ್ದೆ–2015

ಹಿಂದೂ ದತ್ತಕ ಕಾಯ್ದೆ–1956

- ಈ ಕಾಯ್ದೆಯನ್ನು ರೂಪಿಸಿದಾಗ ಹಿಂದೂ ಪುರುಷ ಮಾತ್ರ ದತ್ತು ಸ್ವೀಕರಿಸಲು ಅರ್ಹ ಎಂಬ ಷರತ್ತು ಹಾಕಲಾಗಿತ್ತು. ಹಿಂದೂ ಮಹಿಳೆ ದತ್ತು ಸ್ವೀಕರಿಸಲು ಈ ಕಾಯ್ದೆಯಲ್ಲಿ ಅವಕಾಶವಿರಲಿಲ್ಲ. ಜತೆಗೆ ಪುರುಷನೊಬ್ಬ ದತ್ತು ಸ್ವೀಕರಿಸುವಾಗ ತನ್ನ ಪತ್ನಿಯ ಒಪ್ಪಿಗೆ ಪಡೆಯಬೇಕು ಎಂದಷ್ಟೇ ಮೂಲ ಕಾಯ್ದೆಯಲ್ಲಿ ಹೇಳಲಾಗಿತ್ತು. ಆದರೆ, 2010ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ತರಲಾಯಿತು. ಹಿಂದೂ ವಿವಾಹಿತ ಮಹಿಳೆಯೂ ದತ್ತು ಸ್ವೀಕರಿಸಲು 'ವೈಯಕ್ತಿಕ ಕಾನೂನುಗಳ ತಿದ್ದುಪಡಿ ಕಾಯ್ದೆ–2010'ರಲ್ಲಿ ಅವಕಾಶ ಮಾಡಿಕೊಡಲಾಯಿತು
- ಈ ಕಾಯ್ದೆಯು ಹಿಂದೂಗಳು, ಬೌದ್ಧ, ಜೈನ, ಸಿಖ್ ಧರ್ಮದವರಿಗೆ ಅನ್ವಯವಾಗುತ್ತದೆ. ಆದರೆ ದತ್ತು ಪಡೆಯಲು ಈ ಕಾಯ್ದೆಯ ಅಡಿಯಲ್ಲಿ ಹಲವು ನಿಬಂಧನೆಗಳಿವೆ
- ದತ್ತಕಕ್ಕೆ ಒಳಗಾಗಲಿರುವ ಮಗು 15 ವರ್ಷಕ್ಕಿಂತ ಕಡಿಮೆ ವಯಸ್ಸಿನದ್ದಾಗಿರಬೇಕು. ಹಿಂದೂಗಳು ದತ್ತು ಪಡೆಯುತ್ತಿದ್ದರೆ, ಆ ಮಗು ಹಿಂದೂವೇ ಆಗಿರಬೇಕು. ಧಾರ್ಮಿಕ ಆಚರಣೆಯ ಕಾರಣದಿಂದ ಕೆಲವು ಸಂದರ್ಭಗಳಲ್ಲಿ 15 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರನ್ನು ದತ್ತು ಪಡೆಯಲು ಅವಕಾಶವಿದ್ದರೂ, ದತ್ತಕಕ್ಕೆ ಒಳಗಾಗಲಿರುವ ವ್ಯಕ್ತಿ ವಿವಾಹವಾಗಿರಬಾರದು
- ಯಾವುದೇ ಹಿಂದೂ ದಂಪತಿ ಗಂಡು ಮಗುವನ್ನು ದತ್ತು ಪಡೆಯುತ್ತಿದ್ದರೆ, ದತ್ತಕದ ಸಂದರ್ಭದಲ್ಲಿ ಅವರಿಗೆ ಅವರದ್ದೇ ಆದ ಗಂಡುಮಗು ಇರಬಾರದು. ಆ ದಂಪತಿಯ ಗಂಡುಮಗ ಮೃತಪಟ್ಟಿದ್ದು, ಆತನಿಗೂ ಗಂಡುಮಗುವಿರಬಾರದು
- ಯಾವುದೇ ಹಿಂದೂ ದಂಪತಿ ಹೆಣ್ಣುಮಗುವನ್ನು ದತ್ತು ಪಡೆಯುತ್ತಿದ್ದರೆ, ದತ್ತಕದ ಸಂದರ್ಭದಲ್ಲಿ ಅವರಿಗೆ ಅವರದ್ದೇ ಆದ ಹೆಣ್ಣುಮಗು ಇರಬಾರದು. ಆ ದಂಪತಿಯ ಗಂಡುಮಗ ಮೃತಪಟ್ಟಿದ್ದು, ಆತನಿಗೂ ಹೆಣ್ಣುಮಗುವಿರಬಾರದು
- ದತ್ತು ಪಡೆಯುವ ವ್ಯಕ್ತಿ ಪುರುಷನಾಗಿದ್ದು, ಹೆಣ್ಣುಮಗುವನ್ನು ದತ್ತು ಪಡೆಯುವಂತಿದ್ದರೆ ಆತನಿಗೆ ಕನಿಷ್ಠ 21 ವರ್ಷ ವಯಸ್ಸಾಗಿರಬೇಕು
- ದತ್ತು ಪಡೆಯುವ ವ್ಯಕ್ತಿ ಮಹಿಳೆಯಾಗಿದ್ದು, ಗಂಡುಮಗುವನ್ನು ದತ್ತು ಪಡೆಯುವಂತಿದ್ದರೆ ಆಕೆಗೆ ಕನಿಷ್ಠ 21 ವರ್ಷ ವಯಸ್ಸಾಗಿರಬೇಕು
- ಈ ಕಾಯ್ದೆಯ ಅಡಿಯಲ್ಲಿ ಹೆಣ್ಣುಮಗುವನ್ನು ದತ್ತು ಪಡೆಯುವಾಗ ಅನ್ವಯವಾಗುವ ನಿಯಮಗಳು ಬೇರೆ, ಗಂಡುಮಗುವನ್ನು ದತ್ತು ಪಡೆಯುವಾಗ ಅನ್ವಯವಾಗುವ ನಿಯಮಗಳು ಬೇರೆ
- ಈ ಕಾಯ್ದೆ ಅಡಿ ದತ್ತು ಪಡೆದ ಮಗುವಿಗೆ ಆ ಕುಟುಂಬದ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಎಲ್ಲಾ ಹಕ್ಕುಗಳೂ ದೊರೆಯುತ್ತವೆ

ಪಾರ್ಸಿಗಳಲ್ಲಿ ಅಂತ್ಯಸಂಸ್ಕಾರಕ್ಕೇ ಸೀಮಿತ

- ಪಾರ್ಸಿಗಳಲ್ಲಿ ದತ್ತು ಸ್ವೀಕರಿಸಲು ಅವಕಾಶವಿಲ್ಲ
- ಪಾರ್ಸಿ ಕುಟುಂಬವೊಂದರ ಯಜಮಾನ ಮೃತಪಟ್ಟಿದ್ದು, ಆತನಿಗೆ ಗಂಡುಮಕ್ಕಳು ಇಲ್ಲದೇ ಇದ್ದರೆ ಮಾತ್ರ ಆತನ ಪತ್ನಿ ಗಂಡುಮಗುವನ್ನು ದತ್ತು ಸ್ವೀಕರಿಸಬಹುದು. ಅದೂ ಮೃತ ವ್ಯಕ್ತಿಯ ಅಂತ್ಯಸಂಸ್ಕಾರ ಮತ್ತು ನಂತರದ ವಿಧಿವಿಧಾನಗಳನ್ನು ಪೂರೈಸುವವರೆಗಷ್ಟೇ ದತ್ತಕಕ್ಕೆ ಮಾನ್ಯತೆ ಇರುತ್ತದೆ. ಈ ಅವಧಿಯಲ್ಲಿ ದತ್ತು ಮಗನಿಗೆ ಬೇರೆ ಯಾವುದೇ ಹಕ್ಕುಗಳು ಇರುವುದಿಲ್ಲ

ಮುಸ್ಲಿಮರಲ್ಲಿ ದತ್ತಕ ಇಲ್ಲ

- ಯಾವುದೇ ಮಗುವನ್ನು ಅವರ ನಿಜವಾದ ತಂದೆ ಮತ್ತು ತಾಯಿಯಿಂದ ಬೇರ್ಪಡಿಸಬಾರದು ಎಂಬ ನಂಬಿಕೆ ಇರುವ ಕಾರಣ ದತ್ತು ಸ್ವೀಕಾರಕ್ಕೆ ಅನುಮತಿ ಇಲ್ಲ. ಜತೆಗೆ ಮುಸ್ಲಿಂ ವ್ಯಕ್ತಿಯ ಸ್ವಂತ ಮಕ್ಕಳಷ್ಟೇ ಆತನ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಹಕ್ಕುದಾರರು ಎಂಬ ನಂಬಿಕೆ ಇರುವ ಕಾರಣದಿಂದಲೂ ದತ್ತು ಸ್ವೀಕಾರಕ್ಕೆ ಅವಕಾಶವಿಲ್ಲ
- ಆದರೆ ಯಾವುದೇ ಮುಸ್ಲಿಂ ಕುಟುಂಬದ ಸಂಬಂಧಿ ಕುಟುಂಬದಲ್ಲಿ ಮಕ್ಕಳು ಅನಾಥರಾದರೆ, ಅಂತಹ ಮಕ್ಕಳನ್ನು ಸಲಹುವ ಹೊಣೆಗಾರಿಕೆಯನ್ನು ಹೊರಲು ಅವಕಾಶವಿದೆ. ಆದರೆ, ಅಂತಹ ಮಕ್ಕಳಿಗೆ ಸ್ವಂತ ಮಕ್ಕಳ ಸ್ಥಾನ ಮತ್ತು ಹಕ್ಕುಗಳು ದೊರೆಯುವುದಿಲ್ಲ. ಅವರನ್ನು ಸಲಹಿದ ಕುಟುಂಬದ ಆಸ್ತಿ, ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಹಕ್ಕುಗಳು ಅಂತಹ ಮಕ್ಕಳಿಗೆ ದೊರೆಯುವುದಿಲ್ಲ
- ದತ್ತಕಕ್ಕೆ ಅವಕಾಶವಿಲ್ಲದೇ ಇರುವ ಕಾರಣದಿಂದಲೇ ಮುಸ್ಲಿಮರಲ್ಲಿ ಉಯಿಲು ಬರೆದಿಡಲೂ ಅವಕಾಶವಿಲ್ಲ. ಮುಸ್ಲಿಂ ವ್ಯಕ್ತಿಯು ತಾವು ಸಲಹಿದ, ತಮ್ಮ ಸಂಬಂಧಿಗಳ ಮಕ್ಕಳಿಗೆ ಉಯಿಲು ಬರೆದುಕೊಡಲು ಅವಕಾಶವಿಲ್ಲ. ಹೆಚ್ಚೆಂದರೆ ತಮ್ಮ ಆಸ್ತಿಯ ಮೂರನೇ ಒಂದರಷ್ಟು ಭಾಗವನ್ನು ಅಂತಹ ಮಕ್ಕಳಿಗೆ ನೀಡಬಹುದಷ್ಟೆ

ಜೂವನೈಲ್ ಜಸ್ಟಿಸ್ ಕಾಯ್ದೆ

ಇದು ಮೂಲತಃ ದತ್ತಕ ಕಾಯ್ದೆ ಅಲ್ಲ. ಇದು ಕಾನೂನಿನೊಟ್ಟಿಗೆ ಸಂಘರ್ಷಕ್ಕೆ ಒಳಗಾದ ಮಕ್ಕಳ ಆರೈಕೆ ಮತ್ತು ರಕ್ಷಣೆಯ ಉದ್ದೇಶದ ಕಾಯ್ದೆ. ಅನಾಥರಾದ ಮಕ್ಕಳಿಗೆ ಪುನರ್ವಸತಿ ಕಲ್ಪಿಸಲು ಈ ಕಾಯ್ದೆ ಅವಕಾಶ ಮಾಡಿಕೊಡುತ್ತದೆ. ಪುನರ್ವಸತಿ ಷರತ್ತಿನ ಅಡಿಯಲ್ಲಿ ಅಂತಹ ಮಕ್ಕಳನ್ನು ದತ್ತು ನೀಡಲು, ದತ್ತು ಸ್ವೀಕರಿಸಲು ಅವಕಾಶವಿದೆ. ದತ್ತು ಸ್ವೀಕಾರ ಸಂಬಂಧ ಎಲ್ಲರಿಗೂ ಅನ್ವಯವಾಗುವ ಕಾಯ್ದೆ ಇಲ್ಲದೇ ಇರುವ ಸಂದರ್ಭದಲ್ಲಿ, ದತ್ತು ಸ್ವೀಕಾರಕ್ಕೆ ಈ ಕಾಯ್ದೆಯನ್ನೇ ಬಳಸಿಕೊಳ್ಳಲಾಗುತ್ತಿದೆ. ಸರ್ಕಾರದ ಸಂಸ್ಥೆಗಳ ಮೂಲಕವಷ್ಟೇ ಈ ದತ್ತಕ ಪ್ರಕ್ರಿಯೆ ನಡೆಯುತ್ತದೆ

- ಯಾವುದೇ ಧರ್ಮದ ದಂಪತಿ ಅಥವಾ ವ್ಯಕ್ತಿ, ಯಾವುದೇ ಧರ್ಮದ ಮಗುವನ್ನು ಈ ಕಾಯ್ದೆಯ ಅಡಿಯಲ್ಲಿ ದತ್ತು ಪಡೆಯಬಹುದು. ಇದು ಸಂಪೂರ್ಣ ಕಾನೂನುಬದ್ಧವಾಗಿದ್ದು, ದತ್ತು ಸ್ವೀಕರಿಸಲಾದ ಮಗುವಿಗೆ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಹಕ್ಕುಗಳು ದೊರೆಯುತ್ತವೆ
- ಮುಸ್ಲಿಂ ಪುರುಷ ಅಥವಾ ಮುಸ್ಲಿಂ ಮಹಿಳೆ ಅಥವಾ ಮುಸ್ಲಿಂ ದಂಪತಿ ಯಾವುದೇ ಧರ್ಮದ ಮಗುವನ್ನು ಈ ಕಾಯ್ದೆ ಅಡಿಯಲ್ಲಿ ದತ್ತು ಪಡೆಯಬಹುದು. ಇದು ಸಂಪೂರ್ಣ ಕಾನೂನುಬದ್ಧವಾಗಿದ್ದು, ದತ್ತು ಸ್ವೀಕರಿಸಲಾದ ಮಗುವಿಗೆ ವಾರಸುದಾರಿಕೆ ಮತ್ತು ಉತ್ತರಾಧಿಕಾರದ ಹಕ್ಕುಗಳು ದೊರೆಯುತ್ತವೆ
- ಕೇರಳದ ತಿರುವಾಂಕೂರಿನ ಸಿರಿಯನ್ ಕ್ರೈಸ್ತರಿಗೆ ಮಾತ್ರ ದತ್ತು ಸ್ವೀಕರಿಸಲು ಪ್ರತ್ಯೇಕ ಕಾನೂನು ಇದೆ. ಆದರೆ, ದೇಶದ ಎಲ್ಲಾ ಕ್ರೈಸ್ತರೂ ಈ ಕಾಯ್ದೆಯ ಅಡಿಯಲ್ಲಿ ದತ್ತು ಸ್ವೀಕರಿಸಲು ಅವಕಾಶವಿದೆ
- ದತ್ತು ಸ್ವೀಕಾರಕ್ಕೆ ಪಾರ್ಸಿ ವೈಯಕ್ತಿಕ ಕಾನೂನಿನಲ್ಲಿ ನಿಷೇಧವಿದ್ದರೂ, ಈ ಕಾಯ್ದೆ ಅಡಿ ಪಾರ್ಸಿ ದಂಪತಿ ಅಥವಾ ಪಾರ್ಸಿ ಪುರುಷ ಅಥವಾ ಪಾರ್ಸಿ ಮಹಿಳೆಯು ದತ್ತು ಪಡೆಯಬಹುದು
- ಈ ಕಾಯ್ದೆ ಅಡಿಯಲ್ಲಿ ದತ್ತು ಸ್ವೀಕರಿಸುವವರಿಗೆ ಗರಿಷ್ಠ ವಯಸ್ಸಿನ ಮಿತಿ ಇಲ್ಲ. ವ್ಯಕ್ತಿ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ಸುಸ್ಥಿತಿಯಲ್ಲಿ ಇರಬೇಕು

'ಪ್ರೇತ'ವಾದ ಹರೀಶ್ ರಾಜ್!

ಹರೀಶ್ ರಾಜ್

'ದ್ವೀಪ' ಸಿನಿಮಾದಿಂದ ಜನಪ್ರಿಯರಾದ ಕಿರುತೆರೆ ಹಾಗೂ ಹಿರಿತೆರೆ ನಟ ಹರೀಶ್ ರಾಜ್ ಮತ್ತೆ ಹಿರಿತೆರೆಗೆ ಮರಳಿದ್ದಾರೆ. ಚಿತ್ರರಂಗದಲ್ಲಿ 25 ವರ್ಷಗಳನ್ನು ಪೂರೈಸಿರುವ ಅವರು, ತಮ್ಮದೇ ಹರೀಶ್ ರಾಜ್ ಪ್ರೊಡಕ್ಷನ್‌ನಡಿ 'ಪ್ರೇತ' ಎಂಬ ಚಿತ್ರವನ್ನು ಘೋಷಿಸಿದ್ದಾರೆ. ಚಿತ್ರ ನಿರ್ದೇಶನದ ಹೊಣೆಯನ್ನು ಅವರೇ ಹೊತ್ತುಕೊಂಡಿದ್ದಾರೆ. ಈ ಚಿತ್ರದ ಫಸ್ಟ್ ಲುಕ್ ಬಿಡುಗಡೆಗೊಂಡಿದ್ದು, ಮೊಬೈಲ್ ಟಾರ್ಚ್ ಬೆಳಕಿನೊಂದಿಗೆ ಕಾಡಿನಲ್ಲಿ ಭಯಭೀತರಾಗಿ ನಿಂತಿರುವ ಹರೀಶ್ ರಾಜ್ ಅವರ ಹಿಂದೊಂದು ಪ್ರೇತದ ಆಕೃತಿಯಿದೆ.

'ಇದೊಂದು ಹಾರರ್ ಸಿನಿಮಾ. ಕನ್ನಡ, ತಮಿಳು, ಹಿಂದಿ, ಮಲಯಾಳಂ ಹಾಗೂ ತೆಲುಗು ಭಾಷೆಯಲ್ಲಿ ಮೂಡಿಬರುತ್ತಿದೆ. ಈಗಾಗಲೇ ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಆಗಸ್ಟ್ ಅಥವಾ ಸೆಪ್ಟೆಂಬರ್ ವೇಳೆಗೆ ತೆರೆಗೆ ತರುವ ಯೋಚನೆಯಿದೆ' ಎಂದು ಹರೀಶ್ ರಾಜ್ ಹೇಳಿದ್ದಾರೆ.

ಅಹಿರಾ ಶೆಟ್ಟಿ, ಅಮೂಲ್ಯ ಭಾರದ್ವಾಜ್, ಬಿ.ಎಂ.ವೆಂಕಟೇಶ್, ಅಮಿತ್ ತಾರಾಬಳಗದಲ್ಲಿದ್ದಾರೆ. ವಿರಾಜಪೇಟೆ, ಮಡಿಕೇರಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಪ್ರವೀಣ್ ಶ್ರೀನಿವಾಸ್ ಮೂರ್ತಿ ಸಂಗೀತ, ಶಿವಶಂಕರ್ ಛಾಯಾಗ್ರಹಣ, ಜೀವನ್ ಪ್ರಕಾಶ್ ಸಂಕಲನ ಚಿತ್ರಕ್ಕಿದೆ.

ಬಿಡುಗಡೆಗೆ ಸಜ್ಜಾಗುತ್ತಿರುವ ಬ್ಲ್ಯಾಕ್ ಶೀಪ್

ನಿಶಾ ಹೆಗ್ಡೆ

ಬಹುತೇಕ ಹೊಸಬರೇ ಇರುವ 'ಬ್ಲ್ಯಾಕ್ ಶೀಪ್' ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ತಂಡ ಚಿತ್ರ ಬಿಡುಗಡೆಗೆ ಸಿದ್ಧತೆ ನಡೆಸಿದೆ. 'ದೇವ್ ಸನ್ ಆಫ್ ಮುದ್ದೆಗೌಡ' ಚಿತ್ರದಲ್ಲಿ ಚಾರ್ಮಿ ಕೌರ್‌ಗೆ ಜೋಡಿಯಾಗಿದ್ದ ಜೀವನ್ ಹಳ್ಳಿಕಾರ್ ಚಿತ್ರಕಥೆ ಬರೆದು, ಈ ಸಿನಿಮಾ ನಿರ್ದೇಶಿಸಿದ್ದಾರೆ. ಗ್ಲಿಟ್ಟರ್ಸ್ ಸ್ಟಾರ್ ಹೌಸ್ ಪ್ರೊಡಕ್ಷನ್ಸ್ ಮೂಲಕ ಅಶ್ವಿನಿ ಗುರುಚರಣ್ ಬಂಡವಾಳ ಹೂಡಿದ್ದಾರೆ.

'ನಾಯಕ ಮತ್ತು ಖಳನಾಯಕ ಒಂದು ಸಂಘರ್ಷದಲ್ಲಿ ನಡೆದ ಕೆಲ ಘಟನೆಗಳನ್ನು ಮರೆತು ಹೇಗೆ ಜೀವನ ಸಾಗಿಸುತ್ತಾರೆ ಎಂಬುದರ ಸುತ್ತ ಕಥೆ ಸಾಗುತ್ತದೆ. ಕುತೂಹಲಕಾರಿ ಕಥಾಹಂದರ ಹೊಂದಿರುವ ಚಿತ್ರ' ಎಂದು ನಿರ್ದೇಶಕ ಜೀವನ್ ಹೇಳಿದ್ದಾರೆ.

ವಿಶಾಲ್‌ಕಿರಣ್, ಪ್ರಶಾಂತ್.ವಿ.ಹರಿ, ನಿಶಾ ಹೆಗ್ಡೆ, ಶಿವಾಂಗಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೃಷ್ಣ ಹೆಬ್ಬಾಳೆ, ಕೆ.ಎಸ್.ಶ್ರೀಧರ್, ಸುಂದರ್ ವೀಣಾ, ಭಜರಂಗಿ ಪ್ರಸನ್ನ ಮುಂತಾದವರು ತಾರಾಗಣದಲ್ಲಿದ್ದಾರೆ. ಪೀಪಲ್ ಟ್ರೀ ಸಂಗೀತ, ದೇವು ಛಾಯಾಗ್ರಹಣ ದೇವೂ, ಆಕಾಶ್.ಎಸ್.ಮಹೇಂದ್ರಕರ್ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಮಂಗಳೂರು, ಮುಂಬೈ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಜೂಮ್ ಮಾಡಿ ಎಡಬದಿಗೆ ನೋಡಿ. ಒಂದು ಪುಸ್ತಕ ಇದೆ. ಅದರ ಹೆಸರು 'How to convert India into Christian nation' ಎಂಬುದಾಗಿದೆ. ಇದಕ್ಕಿಂತ ಬೇರೆ ಉದಾಹರಣೆಯ ಅವಶ್ಯಕತೆ ಇದೆಯೇ?' ಎಂದು ಕೇಳಿರುವ ಬರಹದೊಂದಿಗೆ ಫೋಟೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹಂಚಿಕೊಳ್ಳಲಾಗುತ್ತಿದೆ. ಇದೇ ರೀತಿಯ ಅಭಿಪ್ರಾಯ ಇರುವ ಬರಹ ಹಾಗೂ ಫೋಟೊವನ್ನು 2021ರಿಂದಲೂ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ತಿರುಚಲಾದ ಚಿತ್ರವಾಗಿದೆ.

2020ರ ಮೇ 27ರಂದು ಬಿಹಾರ ಚುನಾವಣೆಯನ್ನು ಉದ್ದೇಶಿಸಿ ಸೋನಿಯಾ ಗಾಂಧಿ ಅವರು ಮಾತನಾಡಿದ್ದ ವಿಡಿಯೊವನ್ನು ಕಾಂಗ್ರೆಸ್ ಟ್ವೀಟ್ ಮಾಡಿತ್ತು. ಆ ವಿಡಿಯೊವಿನ ಸ್ಕ್ರೀನ್‌ಶಾಟ್ ಅನ್ನು ಪಿಟಿಐ ಪ್ರಕಟಿಸಿತ್ತು. @noconversion ಟ್ವಿಟ್ಟರ್ ಖಾತೆಯು ಮೊದಲ ಬಾರಿಗೆ (2021) ಈ ಫೋಟೊವನ್ನು ಹಂಚಿಕೊಂಡಿತ್ತು. @noconversion ಹೆಸರಿಗೆ ವಾಟರ್‌ಮಾರ್ಕ್ ಕೂಡ ಆ ಚಿತ್ರದಲ್ಲಿತ್ತು. ಆದರೆ, ಈಗ ಹಂಚಿಕೆಯಾಗುತ್ತಿರುವ ಫೋಟೊದಲ್ಲಿ ಈ ಗುರುತು ಇಲ್ಲ. ಈ ಗುರುತು ಇರುವ ಕಡೆಯಿಂದ ಫೋಟೊವನ್ನು ಕತ್ತರಿಸಲಾಗಿದೆ. ಹಂಚಿಕೆಯಾಗಿರುವ ಚಿತ್ರದಲ್ಲಿ ಗುರುತು ಮಾಡಿರುವ ಪುಸ್ತಕಗಳು ಮೂಲ ಚಿತ್ರದಲ್ಲಿ ಇಲ್ಲ. ಆ ಪುಸ್ತಕಗಳನ್ನು ಎಡಿಟ್ ಮಾಡಿ ಚಿತ್ರದಲ್ಲಿ ಸೇರಿಸಲಾಗಿದೆ. ತಿರುಚಲಾದ ಚಿತ್ರವನ್ನು ಬಳಸಿಕೊಂಡು, ಸೋನಿಯಾ ಗಾಂಧಿ ಅವರ ಬಗ್ಗೆ ತಪ್ಪಾಗಿ ಪ್ರಚಾರ ಮಾಡಲಾಗುತ್ತಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜುಲೈ 28, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ದಶಮಿ ಗಂ. 14-52, ನಕ್ಷತ್ರ: ಅನುರಾಧಾ ಗಂ. 24-55 ಯೋಗ: ಶುಕ್ಲ (ಶುಕ್ರ) ಗಂ. 11-56 ಕರಣ: ಗರ ಗಂ. 14-52, ಕರ್ಕಾಟಕ ಮಾಸದ 11 ನೇ ದಿನ, ಮಳೆನಕ್ಷತ್ರ: ಪುಷ್ಯ 3.
ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-18 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 09 ಮೊಹರಮ್
ಅದೃಷ್ಟ ಸಂಖ್ಯೆ : 1, 4

ಮೇಷ: ಸಹೋದರರ ಜತೆ ಸಣ್ಣಪುಟ್ಟ ವಿಷಯಗಳಿಗೆ ತಾಳ್ಮೆ ಕಳೆದುಕೊಂಡು ಕಲಹಗಳನ್ನು ಮಾಡುವ ಸಾಧ್ಯತೆ ಇದೆ. ತಾಯಿಯ ಕಡೆಯ ಅಪರೂಪದ ನೆಂಟರು ಬರುವರು. ವಿಶೇಷ ಖಾದ್ಯ ತಿನ್ನುವಿರಿ.

ವೃಷಭ: ವೃತ್ತಿಯಲ್ಲಿ ಅನಿರೀಕ್ಷಿತವಾಗಿ ಸ್ಥಾನ-ಮಾನದಲ್ಲಿ ಏರುಪೇರಾಗುವಂಥ ಬದಲಾವಣೆಗಳಾಗಬಹುದು. ಉತ್ತಮವಾಗಿ ಅಂಕಗಳನ್ನು ಪಡೆಯುತ್ತಿದ್ದ ಮಕ್ಕಳು ಏಕಾಗ್ರತೆ ಕಡಿಮೆ ಮಾಡಿದ ಕಾರಣ ನೀವು ಗಮನ ಹರಿಸಬೇಕಾಗುತ್ತದೆ.

ಮಿಥುನ: ಕುಟುಂಬದ ಮಾತುಕತೆಯಲ್ಲಾಗಲಿ ಅಥವಾ ಆಫೀಸಿನ ಸಭೆಯಲ್ಲಾಗಲಿ ಒಳ್ಳೆಯ ಮಾತುಗಳಿಂದ ಸಮಸ್ಯೆ ಪರಿಹರಿಸಿಕೊಳ್ಳುವಿರಿ. ಅಕ್ಕಪಕ್ಕದವರ ಕಷ್ಟ ಸುಖ ವಿಚಾರಿಸುವುದರಿಂದ ಪ್ರಯೋಜನ ದೊರೆಯುವುದು.

ಕರ್ಕಾಟಕ: ಮಧ್ಯದಲ್ಲಿ ನಿಂತ ವಿದ್ಯಾಭ್ಯಾಸ ಮುಂದುವರಿಸುವ ಪ್ರಯತ್ನ ಮಾಡಿದಲ್ಲಿ ಸಫಲವಾಗುವುದು. ನಿಮ್ಮ ಸುತ್ತ ಮುತ್ತ ಎಂಥ ಪ್ರಸಂಗಗಳು ನಡೆದರೂ ಮನಸ್ಸಿನ ಸಮತೋಲನವನ್ನು ತಪ್ಪಲು ಬಿಡದಿರಿ.

ಸಿಂಹ: ಇತರರಿಗೆ ಸಹಾಯ ಮಾಡಲೆಂದು ಹೋದ ನಿಮಗೆ ಸಂಕೋಚದ ಸ್ವಭಾವದಿಂದಾಗಿ ಆರ್ಥಿಕವಾಗಿ ನಷ್ಟವಾಗಬಹುದು. ಯಾರೊಂದಿಗೂ ವಾಗ್ವಾದ ಬೇಡ. ಅನಾರೋಗ್ಯದ ಕಾರಣ ವೈದ್ಯರ ಭೇಟಿ ಮಾಡುವಿರಿ.

ಕನ್ಯಾ: ಹಿರಿಯರ ಕಸುಬನ್ನೇ ಮುಂದುವರಿಸುತ್ತಿರುವವರು ಅವರು ಹಾಕಿ ಕೊಟ್ಟಂಥ ಪಥದಲ್ಲಿಯೇ ನಡೆಯುವುದರಿಂದ ಶ್ರೇಯಸ್ಸು ಲಭಿಸುತ್ತದೆ. ಬಂಧು ಬಾಂಧವರೊಂದಿಗೆ ಅತ್ಯಂತ ಗೌಪ್ಯವಾದ ವಿಷಯವನ್ನು ತಿಳಿಸದಿರಿ.

ತುಲಾ: ತರಕಾರಿ ಬೆಳೆಗಾರರಿಗೆ ಮುಂಜಾಗ್ರತಾ ಕ್ರಮಗಳು ಇಲ್ಲದಿದ್ದಲ್ಲಿ ಅಧಿಕ ವೃಷ್ಟಿಯಿಂದಾಗಿ ಅಧಿಕ ಹಾನಿ ಸಂಭವಿಸಬಹುದು. ಕೆಲಸದ ಗುಣಮಟ್ಟ ಹೆಚ್ಚಿಸಿಕೊಳ್ಳುವ ಸಲುವಾಗಿ ಕಾರ್ಯಾಗಾರಗಳಲ್ಲಿ ಭಾಗವಹಿಸುವಿರಿ.

ವೃಶ್ಚಿಕ: ಅವಿವಾಹಿತರು ಮನೆಯಲ್ಲಿ ತೋರಿಸಿರುವ ಎಲ್ಲಾ ಸಂಬಂಧಗಳಿಗೆ ನಕಾರ ಮಾಡುತ್ತಿರುವುದರ ಬದಲು ಅಪೇಕ್ಷಿತ ವ್ಯಕ್ತಿಯನ್ನೇ ಮನೆಯವರ ಮುಂದೆ ಪ್ರಸ್ತಾಪಿಸುವುದು ಒಳ್ಳೆಯದು. ವಿವಿಧ ಮೂಲದಿಂದ ಧನಾಗಮವಿದೆ.

ಧನು: ನವದಂಪತಿ ಪರಸ್ಪರ ಬೇಕು ಬೇಡಗಳನ್ನು ಅರಿತು ಬಹಳ ಎಚ್ಚರಿಕೆ ವಹಿಸಿ ಪ್ರತಿ ಹೆಜ್ಜೆ ಇಡಿ. ರಿಯಾಯಿತಿ ದರದ ಮಾರಾಟದ ಹೆಸರಿನ ಖರೀದಿಯಲ್ಲಿ ದುಂದುವೆಚ್ಚ ಮಾಡದಿರಿ. ಆರೋಗ್ಯ ನಿರ್ಲಕ್ಷಿಸಬೇಡಿ.

ಮಕರ: ಹೊಸ ಪ್ರಯತ್ನಗಳಲ್ಲಿ ಯಾರ ಸಹಕಾರವೂ ಸಿಗದ ಕಾರಣ ಹಿನ್ನಡೆಯಾಗುವ ಸಾಧ್ಯತೆ ಇದೆ. ಆದರೆ ಪ್ರಯತ್ನ ನಿಲ್ಲಿಸುವುದು ಸರಿಯಲ್ಲ. ಕೋರ್ಟಿನ ಮೆಟ್ಟಿಲು ಹತ್ತಿಳಿಯಬೇಕಾಗುವುದು. ಜಯ ನಿಮ್ಮದೇ ಆಗಿರುತ್ತದೆ.

ಕುಂಭ: ಕಾರ್ಯಕ್ಷೇತ್ರದಲ್ಲಿ ಜಯಕ್ಕೆ ಪರಿಶ್ರಮದಷ್ಟೇ ವಾಗ್ಚಾತುರ್ಯವು ಪಾತ್ರವಹಿಸುತ್ತದೆ. ಕೃಷಿಯಲ್ಲಿ ವಿಶೇಷ ಆಸಕ್ತಿ ಇರುವುದರಿಂದಾಗಿ ಅದರಲ್ಲಿ ಲಾಭ ಗಳಿಸುವಿರಿ. ಮನೆಯಲ್ಲಿ ಸಂತೋಷದ ವಾತಾವರಣವಿರಲಿದೆ.

ಮೀನ: ಶುಭ ಕಾರ್ಯಕ್ರಮಗಳಿಗೆ ಅಶೌಚದ ಆತಂಕ ಎದುರಾಗುವುದು. ವ್ಯಾಪಾರ ವ್ಯವಹಾರದಲ್ಲಿ ನಿಮ್ಮ ಪರಿಶ್ರಮ ಹಾಗೂ ಕಲ್ಪನೆಗೂ ಮೀರಿದ ಲಾಭವನ್ನು ಗಳಿಸುವಿರಿ. ಜಡತ್ವವನ್ನು ಹೋಗಲಾಡಿಸಿಕೊಳ್ಳಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪದ್ಯ - ಅಧಿಕಪ್ರಸಂಗಿ

ಹೃದ್ಯ ಹೃದಯೇಂಗಿತಕೆ ರಾಗ ತಾಳದ ಕಟ್ಟು |
ಗದ್ಯ ಲೌಕಿಕ ತಾತ್ತ್ವಿಕಕ್ಕಚ್ಚುಕಟ್ಟು ||
ಮಧ್ಯದಲಿ ಮಿಸುಕಿ, ನೆಲಬಿಟ್ಟು, ಬಾನ್ ಮುಟ್ಟದಿಹ
ಪದ್ಯವಧಿಕಪ್ರಸಂಗಿ – ಮಂಕುತಿಮ್ಮ || 937 ||

ಪದ-ಅರ್ಥ: ಹೃದ್ಯ = ಮನೋಹರವಾದ, ಹೃದಯಕ್ಕೆ ತಟ್ಟುವ, ಹೃದಯೇಂಗಿತಕೆ = ಹೃದಯ + ಇಂಗಿತಕೆ, ತಾತ್ತ್ವಿಕಕ್ಕಚ್ಚುಕಟ್ಟು = ತಾತ್ತ್ವಿಕಕ್ಕೆ + ಅಚ್ಚುಕಟ್ಟು, ಮಿಸುಕಿ = ಅಲುಗಾಡಿ, ಬಾನ್ + ಆಕಾಶ, ಮುಟ್ಟದಿಹ = ಮುಟ್ಟದೆ + ಇಹ(ಇರುವ), ಪದ್ಯವಧಿಕಪ್ರಸಂಗಿ = ಪದ್ಯವು + ಅಧಿಕಪ್ರಸಂಗಿ.

ವಾಚ್ಯಾರ್ಥ: ಮನೋಹರವಾದ ಹೃದಯದ ಭಾವನೆಗಳನ್ನು ತಿಳಿಸಲು ಸಂಗೀತದ ರಾಗ, ತಾಳಗಳ ಕಟ್ಟು ಉಚಿತವಾದದ್ದು. ಲೌಕಿಕದ ತತ್ವಗಳನ್ನು ವಿವರಿಸಲು ಗದ್ಯ ಅಚ್ಚುಕಟ್ಟಾದದ್ದು. ಆದರೆ ಮಧ್ಯದಲ್ಲಿ ಒದ್ದಾಡುತ್ತ ನೆಲಬಿಟ್ಟರೂ, ಆಕಾಶ ತಲುಪದ ಪದ್ಯ ಅಧಿಕಪ್ರಸಂಗಿ.

ವಿವರಣೆ: ದೇಹ ಬುದ್ಧಿಗಳನ್ನು ಏಕಕಾಲದಲ್ಲಿ, ವಿಲೀನಗೊಳಿಸಿ ಪರಮಾನಂದ ಸ್ವರೂಪಿಯ ಪರಮ ಆನಂದವನ್ನು ಕರುಣಿಸುವ ಚೈತನ್ಯವೇ ಸಂಗೀತ. ಅದು ಹೃದಯದ ಭಾಷೆ. ಎಲ್ಲಿ ಪದಗಳು ಶಕ್ತಿಯನ್ನು ಕಳೆದುಕೊಂಡು ನಿಂತುಬಿಡುತ್ತವೋ ಅಲ್ಲಿ ಸಂಗೀತದ ಪದಚಲನೆ ಪ್ರಾರಂಭವಾಗುತ್ತದೆ. ಮನೋಹರವಾದ, ಹೃದಯಕ್ಕೆ ತಟ್ಟುವ ಭಾವನೆಗಳಿಗೆ ಸಂಗೀತವೇ ಸರಳ ಹಾಗೂ ಖಚಿತವಾದ ಸಾಧನ. ಅದಕ್ಕೆ ರಾಗ, ತಾಳಗಳ ಕಟ್ಟು ಇದ್ದರೆ, ಅದು ನೇರವಾಗಿ ಹೃದಯವನ್ನೇ ಸೇರುತ್ತದೆ. ಆದರೆ ಗದ್ಯ ಹಾಗಲ್ಲ, ಕೆಲವೊಮ್ಮೆ ನಾದಸೌಂದರ್ಯಕ್ಕಿಂತ ನುಡಿಗಟ್ಟಿನ ಸೌಂದರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರಕಬೇಕಾಗುತ್ತದೆ. ಇಂಥ ಸನ್ನಿವೇಶದಲ್ಲಿ ಭಾಷೆಯು ಗದ್ಯರೂಪವನ್ನು ತಾಳುತ್ತದೆ. ಇಲ್ಲಿ ಅಭಿದಾವೃತ್ತಿಯ ವ್ಯವಸ್ಥೆಯೆಲ್ಲ ಲಕ್ಷಣಾವೃತ್ತಿಗೆ ಅಧೀನವಾಗಿ ದುಡಿಯುತ್ತದೆ. ಪದ್ಯದ ಚೆಲುವು ಶಬ್ದಾರ್ಥಗಳೆರಡರಲ್ಲಿಯೂ ಇರಬೇಕಾದ ಕಾರಣ ಅಲ್ಲಿ ನಾದದ ಪಾತ್ರ ದೊಡ್ಡದು. ಗದ್ಯದ ಸುಂದರತೆ ಮುಖ್ಯವಾಗಿ ಅರ್ಥಗತವಾದ ಕಾರಣ ಅಲ್ಲಿ ನಾದಕ್ಕಿಂತ ನುಡಿಗಟ್ಟಿನ ಪಾತ್ರ ಪ್ರಮುಖವಾದದ್ದು. ಹೀಗಾಗಿ ಲೌಕಿಕದ ಚಿಂತನೆಗಳನ್ನು, ತತ್ವಗಳನ್ನು ವಿಶದೀಕರಿಸುವುದಕ್ಕೆ ಗದ್ಯ ಅಚ್ಚುಕಟ್ಟಾದ ಮಾಧ್ಯಮ. ಡಿ.ವಿ.ಜಿ ಹೇಳುತ್ತಾರೆ, ಈ ಪದ್ಯದ್ದೊಂದು ವಿಚಿತ್ರ ಪರಿಸ್ಥಿತಿ. ಇದಕ್ಕೆ ಸಂಗೀತದ ಸ್ವರ, ರಾಗ, ತಾಳಗಳು ಇಲ್ಲ. ಗದ್ಯಕ್ಕಿರುವ ಸುಲಭತೆಯೂ, ಸರಳತೆಯೂ ಇಲ್ಲ. ಅದಕ್ಕೇ ಅದನ್ನು ನೆಲದ ಭಾಷೆಯಾದ ಗದ್ಯವೂ ಅಲ್ಲದ, ಅಂತ:ಕರಣವನ್ನು ಕಲಕುವ ಎತ್ತರದ ಭಾಷೆಯಾದ ಸಂಗೀತವೂ ಅಲ್ಲದ ಅಧಿಕಪ್ರಸಂಗಿ ಎನ್ನುತ್ತಾರೆ. ಹಾಗೆಂದರೆ, ಅದು ಅಪ್ರಯೋಜಕವೆಂದಲ್ಲ. ಬದಲಾಗಿ ಅದು ಸಂಗೀತ ಮತ್ತು ಗದ್ಯದ ಎರಡೂ ಪ್ರಕಾರಗಳ ಸೌರಭವನ್ನು ಹೀರಿಕೊಂಡು ಪುಷ್ಟವಾದ ಬಗೆ. ತಾವು ಕಗ್ಗಕ್ಕೆ ಬಳಸಿದ್ದು ಈ ಪ್ರಕಾರವಾದ್ದರಿಂದ ತಮಾಷೆಗೆ ಅದನ್ನು ಅಧಿಕಪ್ರಸಂಗಿ ಎಂದು ಕರೆದಿದ್ದಾರೆ. ಕಗ್ಗದ ಪದ್ಯಗಳನ್ನು ಗುನುಗುನಿಸಿದವರಿಗೆ ಗದ್ಯ, ಸಂಗೀತಗಳೆರಡರ ಅನುಭೂತಿಯಾಗುವುದು ಸತ್ಯ.

ಪದಬಂಧ 5393

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
4.ಉತ್ತರದವರ ಪರವಾಗಿ ಸ್ವೀಕರಿಸಿದ ವೇತನ! (3)
5.ವನಿತೆ ಸರಿಸಿದ ಪರದೆ! (4)
6. ನಕ್ಷತ್ರಗಳ ಗುಂಪು ಇಲ್ಲಿದೆ (4)
7.ವನದಲ್ಲಿ ತಿರುಗಿದರೆ ಹೊಸತು ಕಂಡೀತೇ? (2)
9.ನಗರದಲ್ಲಿ ಖರೀದಿಸಿದ ಆಭರಣ (2)
13.ತಾಯಿಯ ಮನೆಯ ಕಿಟಕಿ (4)
14.ಆಹಾರವನ್ನು ಸೇವಿಸದಿರುವುದು (4)
15.ಬನದಲ್ಲಿ ನೀಡಿರುವ ಮುತ್ತು (3)
16.ಚಿನ್ನ ಬೆಳ್ಳಿ ಇತ್ಯಾದಿಗಳ ತಂತಿ (2)

ಮೇಲಿಂದ ಕೆಳಕ್ಕೆ
1.ನಡುವೆ ಪತ್ರವಿದ್ದರೆ ಈ ತೊಂದರೆ! (4)
2.ಕೈಯ್ಯನ್ನು ತಟ್ಟಿ ಹೊಡೆದಿರುವ ಚಪ್ಪಾಳೆ (5)
3.ಮುನಿಗೆ ಬಂದಿರುವ ಸಿಟ್ಟು (3)
5.ಮಾನವುಳ್ಳ ಒಡೆಯ (4)
8.ಕಾಡಿನಲ್ಲಿ ವಾಸಮಾಡುವುದು (4)
10.ಆಕಾಶವನ್ನು ಮುಟ್ಟುವಂಥ ಕಟ್ಟಡ (5)
11.ತುಸುವೇ ಬೀರಿರುವ ಮಂದಹಾಸ (4)
12.ಜೊಂಪು ಅಥವಾ ತೂಕಡಿಕೆ (3)



5392ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂವಾದ 4.ನಗುಮೊಗ
6.ರಥೋತ್ಸವ 8.ಹಿಜರಿ
11.ಜುಲುಮೆ 13.ಮಹಾರಾಣಿ
17.ಗಜಾನನ 18.ತುರಗ

ಮೇಲಿಂದ ಕೆಳಕ್ಕೆ:
1.ಸಂದಣಿ 2.ದನಗಾಹಿ
3.ಭೀಭತ್ಸ 5.ಗರ
7.ವದಂತಿ 9.ರಿವಾಜು
10.ಗುಲಾಮ 12.ಮೆಹನತು
14.ಹಾವಸೆ 15.ಣಿಗ
16.ಗಿಡುಗ

ಸುಡೊಕು 5779

3	5		7		2		8	
						3		4
	7	8	3		9		1	
1		4	8				2	3
				3				
8		7			1		5	9
2		3	9		6	5		8
		6						
	8		5		4		3	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5778ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ದೋಣಿ ಮಗುಚಿ 23 ಸಾವು

ಮನಿಲಾ, ಫಿಲಿಪ್ಪೀನ್ಸ್ (ಎಎಫ್‌ಪಿ): ಮನಿಲಾದಿಂದ 37 ಕಿ.ಮೀ ದೂರವಿರುವ ಲಗುನಾ ಸರೋವರದಲ್ಲಿ ಸಣ್ಣ ದೋಣಿಯೊಂದು ಮಗುಚಿ 23 ಜನರು ಮೃತಪಟ್ಟಿದ್ದು, ಆರು ಮಂದಿ ನಾಪತ್ತೆಯಾಗಿದ್ದಾರೆ.

ಉತ್ತರ ಫಿಲಿಪ್ಪೀನ್ಸ್‌ಗೆ 'ದೊಕ್ಸುರಿ' ಚಂಡಮಾರುತ ಅಪ್ಪಳಿಸಿದ ಕೆಲ ಗಂಟೆಗಳ ನಂತರ ಈ ದುರ್ಘಟನೆ ನಡೆದಿದೆ ಎಂದು ಕರಾವಳಿ ರಕ್ಷಣಾ ಪಡೆಯ ವಕ್ತಾರ ರಿಯರ್ ಅಡ್ಮಿರಲ್ ಅರ್ಮಾಂಡೊ ಬಾಲಿಲೊ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,778
ಇಂದಿನ ಅಂತ್ಯ	19,659
▼	118
ದಿನದ ಕನಿಷ್ಠ	19,867

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1870 (1865)
ಸೋಯಾ (ರಿಫೈನ್ಡ್)	₹985 (985)
ಸೂರ್ಯಕಾಂತಿ (ರಿಫೈನ್ಡ್)	₹985 (980)
ಪಾಮೋಲಿನ್	₹900 (897)

ಕೊಬ್ಬರಿ ಧಾರಣೆ

ತುಮಕೂರು	₹8400-9950
ಪುತ್ತೂರು	₹8000-10000
ತುರುವೇಕೆರೆ	₹9900-10200

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹233;488
ದ್ವಿತಳಿ (ಬಿ.ವಿ)	₹222;593

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹128

(ಪ್ರತಿ ಕೆ.ಜಿಗೆ)

'ದಾಳಿ ಎದುರಿಸಲು ಪಾಕ್ ಸಮರ್ಥ'

ಇಸ್ಲಾಮಾಬಾದ್ (ಪಿಟಿಐ): 'ಭಾರತವು ತನ್ನ ಘನತೆ, ಗೌರವಗಳ ರಕ್ಷಣೆಗಾಗಿ ಗಡಿ ನಿಯಂತ್ರಣಾ ರೇಖೆ (ಎಲ್‌ಒಸಿ)ಯನ್ನೂ ದಾಟಲಿದೆ' ಎಂಬ ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿಕೆಗೆ ಪಾಕಿಸ್ತಾನ ಆಕ್ರೋಶ ವ್ಯಕ್ತಪಡಿಸಿದ್ದು, 'ಯುದ್ಧೋನ್ಮಾದವು ಪ್ರಾದೇಶಿಕ ಸ್ಥಿರತೆ ಮತ್ತು ಶಾಂತಿಗೆ ಭಂಗ ತರಲಿದೆ' ಎಂದು ಹೇಳಿದೆ.

'ಯಾವುದೇ ದಾಳಿಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಪಾಕಿಸ್ತಾನ ಸಮರ್ಥವಾಗಿದೆ. ಪ್ರಾದೇಶಿಕ ಸ್ಥಿರತೆ, ಶಾಂತಿಗೆ ಯುದ್ಧೋನ್ಮಾದ ಭಂಗ ತರುತ್ತದೆ. ದಕ್ಷಿಣ ಏಷ್ಯಾದ ರಕ್ಷಣಾ ಕಾರ್ಯತಂತ್ರದ ವಾತಾವರಣವನ್ನು ಅಸ್ಥಿರಗೊಳಿಸ ಲಿದೆ. ಹೀಗಾಗಿ ಭಾರತ ಎಚ್ಚರಿಕೆಯಿಂದ ವರ್ತಿಸಬೇಕು' ಎಂದು ಬುಧವಾರ ವಿದೇಶಾಂಗ ಇಲಾಖೆ ಹೇಳಿಕೆಯಲ್ಲಿ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಶ್ರೀ|| ಎಲ್.ಟಿ.ಕಾರ್ಲೆ
(ಮಾಜಿ-ಎಂ.ಎಲ್.ಸಿ)

ನಿಮ್ಮ ಆದರ್ಶ ಜೀವನ ನಮಗೆ
ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು
ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.

ಸದಾ ಸ್ಮರಿಸುವ
ಕುಟುಂಬ ವರ್ಗದವರು

ದ್ವಿತೀಯ ವರ್ಷದ ಚಿರಸ್ಮರಣೆ

ಬಿ.ಕೆ. ವಿನೋದ್‌ಕುಮಾರ್
(21-06-1971 - 28-07-2021)
ಪ್ರಥಮ ದರ್ಜೆ ಗುತ್ತಿಗೆದಾರರು, KPWD & BBMP, ವಿಜಯನಗರ, ಬೆಂಗಳೂರು

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷಗಳು ಕಳೆದರೂ ನಿಮ್ಮ ಸರಳತೆ, ಪ್ರೀತಿ ಆದರ್ಶಗಳೇ ನಮಗೆ ದಾರಿದೀಪ, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...

ದುಃಖತಪ್ತರು: ಧರ್ಮಪತ್ನಿ-ಪ್ರಭಾವತಿ ವಿನೋದ್‌ಕುಮಾರ್
ಮಕ್ಕಳು-ಉಲ್ಲಾಸ್. ವಿ. ಮತ್ತು ಪೃಥ್ವಿ ವಿ.
ಹಾಗೂ ಕುಟುಂಬದವರು

LOOKING TO BUILD, BUY OR SELL A PROPERTY

Please refer Classifieds on Sunday

ಲೋಕಸಭೆಯಲ್ಲಿ ವರದಿ ಮಂಡಿಸಿದ ಕನಿಮೋಳಿ ನೇತೃತ್ವದ ಸ್ಥಾಯಿ ಸಮಿತಿ

ಪಿಎಂಜಿಎಸ್‌ವೈ: ಕಳಪೆ ಕಾಮಗಾರಿ

ನವದೆಹಲಿ(ಪಿಟಿಐ): ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ) ಅಡಿಯಲ್ಲಿ ದೇಶದಲ್ಲಿ ನಿರ್ಮಿಸಲಾಗಿರುವ ಹಲವು ರಸ್ತೆಗಳು ಕಳಪೆಯಾಗಿವೆ ಎಂದು ಸಂಸತ್ತಿನ ಸ್ಥಾಯಿ ಸಮಿತಿ ಗುರುವಾರ ಲೋಕಸಭೆಗೆ ತಿಳಿಸಿದೆ.

ಪಿಎಂಜಿಎಸ್‌ವೈ ಯೋಜನೆಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ, ಡಿಎಂಕೆ ಸಂಸದೆ ಕನಿಮೋಳಿ ನೇತೃತ್ವದ ಸ್ಥಾಯಿ ಸಮಿತಿ ಗುರುವಾರ ಲೋಕ ಸಭೆಯಲ್ಲಿ ತನ್ನ ವರದಿ ಮಂಡಿಸಿತು. ಭಾರತದ ಮಹತ್ವಾಕಾಂಕ್ಷಿ ಯೋಜನೆ ಪಿಎಂಜಿಎಸ್‌ವೈ ಅಡಿ ದೇಶದಲ್ಲಿ ನಿರ್ಮಾಣವಾಗಿರುವ ರಸ್ತೆಗಳ ಕಾಮಗಾರಿ ಗುಣಮಟ್ಟದಲ್ಲಿ ರಾಜಿಯಾಗಿದೆ. ಇದು ಒಪ್ಪತಕ್ಕದ್ದಲ್ಲ ಎಂದು ಸಮಿತಿ ಹೇಳಿತು.

ಈ ಯೋಜನೆಯಲ್ಲಿ ರಸ್ತೆಗಳು 20 ಎಂ.ಎಂನಷ್ಟು ಮಂದವಾಗಿರಬೇಕು ಎಂದು ಮಾನದಂಡ ನಿಗದಿ ಮಾಡಲಾಗಿದೆ. ಆದರೆ, ರಸ್ತೆಗಳು 30 ಎಂ.ಎಂ ನಷ್ಟು ಮಂದವಾಗಿರಬೇಕು ಎಂದು ಸಮಿತಿಯು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಪಿಎಂಜಿಎಸ್‌ವೈನ ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಹಕಾರ ಅಗತ್ಯವಿದೆ ಎಂದು ಪ್ರತಿಪಾದಿಸಿದೆ.

'ರಸ್ತೆಗಳ ಗುಣಮಟ್ಟವು ಇಡೀ ಭಾರತವನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಯಾಗಿದೆ. ಕಳಪೆ ಕಾಮಗಾರಿಯು ಮಹತ್ವಾಕಾಂಕ್ಷೆಯ ಯೋಜನೆಗೆ ಮಸಿ ಬಳಿದಿದೆ. ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಆಗಿರುವ ರಾಜಿಯನ್ನು ಒಪ್ಪಲಾಗದು. ಇದನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಬೇಕು' ಎಂದು ಸಮಿತಿ ಆಗ್ರಹಿಸಿದೆ.

'ಹಲವು ಕಡೆಗಳಲ್ಲಿ ರಸ್ತೆಗಳಿಗೆ ಕಳಪೆ ಸಾಮಗ್ರಿ ಬಳಸಲಾಗಿದೆ. ಹೀಗಾಗಿ ಒಂದು ಋತುವಿಗೂ ಬಾಳಿಕೆ ಬಾರದ ಸ್ಥಿತಿಯಲ್ಲಿವೆ. ವಾಹನ ದಟ್ಟಣೆಯನ್ನು ತಾಳಿಕೊಳ್ಳಲಾಗದಷ್ಟು ಕಳಪೆ ರಸ್ತೆಗಳನ್ನು ನಿರ್ಮಿಸಲಾಗಿದೆ. ಮುಂಗಾರಿನ ಋತುವಿನಲ್ಲೇ ರಸ್ತೆಗಳು ಕಿತ್ತುಹೋಗುವಂತಿವೆ' ಎಂದು ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ಈ ಯೋಜನೆಯಲ್ಲಿ 2023ರ ಜನವರಿ 20ರ ವರೆಗೆ ₹2,269.631 ಕೋಟಿ ಬಳಕೆಯಾಗದೇ ಉಳಿದಿರುವ ಬಗ್ಗೆಯೂ ಸಮಿತಿ ಆತಂಕ ವ್ಯಕ್ತಪಡಿಸಿದೆ.

ನರೇಗಾ ಅನುದಾನ ಕಡಿತ: ಸಂಸದೀಯ ಸಮಿತಿ ಆಕ್ರೋಶ

ನವದೆಹಲಿ (ಪಿಟಿಐ): ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ನರೇಗಾ) ಅನುದಾನ ಕಡಿತ ಮಾಡಿರುವುದಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕುರಿತ ಸಂಸದೀಯ ಸಮಿತಿಯು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ.

ಅನುದಾನ ಕಡಿತ ಮಾಡಿರುವುದಕ್ಕೆ ಕಾರಣ ನೀಡದಿರುವುದಕ್ಕೆ ಗ್ರಾಮೀಣಾಭಿ ವೃದ್ಧಿ ಇಲಾಖೆಯನ್ನು ಟೀಕಿಸಿದೆ. ಈ ವರ್ಷದ ಜನವರಿ 25ರೊಳಗೆ ಕೇಂದ್ರ ಸರ್ಕಾರವು ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ನೀಡುವ ವೇತನದಲ್ಲಿ ₹6,231 ಕೋಟಿ ಬಾಕಿ ಉಳಿಸಿಕೊಂಡಿದೆ ಎಂದು ಲೋಕಸಭೆಯಲ್ಲಿ ಗುರುವಾರ ಮಂಡಿಸಿದ ವರದಿಯಲ್ಲಿ ಸಮಿತಿಯು ಹೇಳಿದೆ.

ಈ ಬಾರಿಯ ಬಜೆಟ್‌ನಲ್ಲಿ ನರೇಗಾಕ್ಕೆ ₹60 ಸಾವಿರ ಕೋಟಿ ಅನುದಾನ ಘೋಷಿಸಲಾಗಿದೆ. ಈ ಹಿಂದಿನ ಬಜೆಟ್‌ನಲ್ಲಿ ₹73 ಸಾವಿರ ಕೋಟಿ ಹಂಚಿಕೆ ಮಾಡಲಾಗಿತ್ತು ಮತ್ತು ಬಜೆಟ್‌ನಲ್ಲಿ ಪರಿಷ್ಕೃತ ಅಂದಾಜಿನ ಪ್ರಕಾರ ₹89,400 ಕೋಟಿ ಘೋಷಿಸಲಾಗಿತ್ತು.

3,000 ಕಾರುಗಳಿದ್ದ ಹಡಗಿಗೆ ಬೆಂಕಿ

ಭಾರತ ಮೂಲದ ಸಿಬ್ಬಂದಿ ಸಾವು; 20 ಮಂದಿಗೆ ಗಾಯ

ಲಂಡನ್ (ಪಿಟಿಐ): ಮೂರು ಸಾವಿರ ಕಾರು ಹೊತ್ತು ಜರ್ಮನಿಯಿಂದ ಈಜಿಪ್ಟ್‌ಗೆ ತೆರಳುತ್ತಿದ್ದ ಸರಕು ಸಾಗಣೆ ಹಡಗಿಗೆ ನೆದರ್ಲೆಂಡ್ಸ್ ಸಮುದ್ರ ತೀರದಲ್ಲಿ ಬೆಂಕಿ ಬಿದ್ದಿದ್ದು, ಭಾರತ ಮೂಲದ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ.

ಘಟನೆಯಲ್ಲಿ 20 ಮಂದಿ ಗಾಯಗೊಂಡಿದ್ದಾರೆ. ಹಡಗಿಗೆ ಹೊತ್ತಿಕೊಂಡಿರುವ ಬೆಂಕಿ ಇನ್ನೂ ಕೆಲವು ದಿನ ಉರಿಯಲಿದೆ ಎಂದು ಡಚ್ ಕರಾವಳಿ ಕಾವಲು ಪಡೆ ಹೇಳಿದೆ.

ಪನಾಮದ 'ಫ್ರೀಮೆಂಟಲ್ ಹೈವೇ' ಹೆಸರಿನ ಹಡಗಿನಲ್ಲಿ ಮಂಗಳವಾರ ರಾತ್ರಿ ಬೆಂಕಿ ಕಾಣಿಸಿಕೊಂಡಿತ್ತು. ಹೀಗಾಗಿ ಸಿಬ್ಬಂದಿ ಸಮುದ್ರಕ್ಕೆ ಹಾರಿ ಪಾರಾಗಲು ಪ್ರಯತ್ನಿಸಿದ್ದರು. ಈ ಪೈಕಿ 7 ಮಂದಿಯನ್ನು ಕರಾವಳಿ ಕಾವಲು ಪಡೆ ರಕ್ಷಿಸಿದೆ. ಭಾರತ ಮೂಲದ ಸಿಬ್ಬಂದಿಯೊಬ್ಬರು ಮೃತಪಟ್ಟಿರುವುದಾಗಿ ನೆದರ್ಲೆಂಡ್ಸ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಮಾಹಿತಿ ನೀಡಿದೆ.

ನೆದರ್ಲೆಂಡ್ಸ್‌ನ ಆ್ಯಮ್ಲೆಂಡ್ ದ್ವೀಪದ ಸಮೀಪ ಬೆಂಕಿಗಾಹುತಿಯಾಗಿರುವ 'ಫ್ರೀಮೆಂಟಲ್ ಹೈವೇ' ಹೆಸರಿನ ಸರಕು ಸಾಗಣೆ ಹಡಗು – ಎಪಿ ಚಿತ್ರ

ಶಿವಮೊಗ್ಗದಿಂದ ತಿರುಪತಿಗೆ ವಿಮಾನ

ಬೆಂಗಳೂರು: ಶಿವಮೊಗ್ಗದಿಂದ ತಿರುಪತಿ, ಗೋವಾ ಹಾಗೂ ಹೈದರಾಬಾದ್‌ಗೆ ವಿಮಾನಯಾನ ಸೇವೆ ಶೀಘ್ರ ಆರಂಭವಾಗಲಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಆಗಸ್ಟ್ 31ರಂದು ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಮೊದಲ ವಿಮಾನ ಹಾರಾಟ ನಡೆಸಲಿದೆ. ಇಂಡಿಗೊ ಏರ್‌ಲೈನ್ಸ್ ಈಗಾಗಲೇ ಬುಕ್ಕಿಂಗ್ ಸೇವೆ ಆರಂಭಿಸಿದೆ. ಉಡಾನ್ ಯೋಜನೆಯಡಿ ಅನುಮತಿ ಪಡೆದಿರುವ ಸ್ಪೈಸ್ ಜೆಟ್, ಸ್ಟಾರ್ ಏರ್‌ಲೈನ್ಸ್ ಹಾಗೂ ಅಲಯನ್ಸ್ ಸಂಸ್ಥೆಗಳು ವಿಮಾನ ಸಂಚಾರಕ್ಕೆ ಸಿದ್ಧತೆ ನಡೆಸಿವೆ. ನಾಗರಿಕ ವಿಮಾನಯಾನ ನಿರ್ದೇಶನಾಲಯದ ಅನುಮತಿ ದೊರೆತ ನಂತರ ಸೇವೆ ಆರಂಭಿಸಲಿವೆ ಎಂದು ಮಾಹಿತಿ ನೀಡಿದರು.

ಜಿಯೊ-ಬ್ಲ್ಯಾಕ್‌ರಾಕ್‌ನಿಂದ ಆಸ್ತಿ ನಿರ್ವಹಣಾ ಕಂಪನಿ

ಮುಂಬೈ (ರಾಯಿಟರ್ಸ್): ಮುಕೇಶ್ ಅಂಬಾನಿ ಮಾಲೀಕತ್ವದ ರಿಲಯನ್ಸ್ ಸಮೂಹಕ್ಕೆ ಸೇರಿರುವ ಜಿಯೊ ಫೈನಾನ್ಶಿಯಲ್ ಸರ್ವಿಸಸ್ (ಜೆಎಫ್‌ಎಸ್) ಕಂಪನಿಯು ಅಮೆರಿಕದ ಹೂಡಿಕೆ ನಿರ್ವಹಣಾ ಕಂಪನಿ ಬ್ಲ್ಯಾಕ್‌ರಾಕ್ ಜೊತೆಗೂಡಿ ಭಾರತದಲ್ಲಿ ಆಸ್ತಿ ನಿರ್ವಹಣಾ ಸೇವೆಗಳನ್ನು ಆರಂಭಿಸಲಿದೆ. ಈ ಉದ್ದೇಶದಿಂದ ಜೆಎಫ್‌ಎಸ್ ಮತ್ತು ಬ್ಲ್ಯಾಕ್‌ರಾಕ್ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿವೆ.

ಆರಂಭಿಕ ಹಂತದಲ್ಲಿ ಎರಡೂ ಕಂಪನಿಗಳು ತಲಾ ₹1,230 ಕೋಟಿ ಹೂಡಿಕೆ ಮಾಡಲಿವೆ. ಜೆಎಫ್‌ಎಸ್ ಕಂಪನಿಯು ರಿಲಯನ್ಸ್ ಇಂಡಸ್ಟ್ರೀಸ್‌ನಿಂದ ಪ್ರತ್ಯೇಕಗೊಂಡ ಕೆಲವೇ ದಿನಗಳಲ್ಲಿ ಈ ಪ್ರಕಟಣೆ ಹೊರಬಿದ್ದಿದೆ.

40ಕ್ಕೂ ಹೆಚ್ಚಿನ ಮ್ಯೂಚುವಲ್ ಫಂಡ್ ಕಂಪನಿಗಳನ್ನೂ ಒಳಗೊಂಡಿರುವ ಭಾರತದ ಆಸ್ತಿ ನಿರ್ವಹಣಾ ಉದ್ದಿಮೆಯು ಈಚಿನ ವರ್ಷಗಳಲ್ಲಿ ತೀವ್ರ ಬೆಳವಣಿಗೆ ಕಂಡಿದೆ. ಈಗ ಈ ಉದ್ಯಮವು ಒಟ್ಟು ₹44 ಲಕ್ಷ ಕೋಟಿ ಮೌಲ್ಯದ ಆಸ್ತಿಯನ್ನು ನಿರ್ವಹಿಸುತ್ತಿದೆ.

ಬ್ಲ್ಯಾಕ್‌ರಾಕ್ ಕಂಪನಿಯು ಈ ಹಿಂದೆ ಡಿಎಸ್‌ಪಿ ಸಮೂಹದ ಜೊತೆ ಪಾಲುದಾರಿಕೆ ಹೊಂದಿತ್ತು. ನಂತರ ಬ್ಲ್ಯಾಕ್‌ರಾಕ್ ಭಾರತದಿಂದ ಹೊರನಡೆದಿತ್ತು. ಈಗ ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಜೊತೆಗಿನ ಪಾಲುದಾರಿಕೆ ಮೂಲಕ ಮತ್ತೆ ಭಾರತದ ಮಾರುಕಟ್ಟೆ ಪ್ರವೇಶಿಸುತ್ತಿದೆ.

ಹೂಡಿಕೆ ಉತ್ಪನ್ನಗಳು ಭಾರತದಲ್ಲಿ ತೀವ್ರಗತಿಯಲ್ಲಿ ಬೆಳವಣಿಗೆ ಕಂಡಿದ್ದರೂ, ದೇಶದ ಅರ್ಥ ವ್ಯವಸ್ಥೆಯ ಗಾತ್ರವನ್ನು ಪರಿಗಣಿಸಿದರೆ, ಹೂಡಿಕೆ ಉತ್ಪನ್ನಗಳು ಹೆಚ್ಚು ಜನರನ್ನು ತಲುಪಿಲ್ಲ. ದೇಶದ ಒಟ್ಟು ಜಿಡಿಪಿಗೆ ಹೋಲಿಸಿದರೆ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಿರುವ ಹೂಡಿಕೆಯ ಪ್ರಮಾಣವು ಶೇ 16ರಷ್ಟು ಮಾತ್ರ. ಆದರೆ ಇದರ ಜಾಗತಿಕ ಸರಾಸರಿ ಪ್ರಮಾಣ ಶೇ 63ರಷ್ಟು ಇದೆ ಎಂದು ಬ್ರೋಕರೇಜ್ ಕಂಪನಿ ಏಂಜಲ್‌ಒನ್ ಮೇ ತಿಂಗಳಲ್ಲಿ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 500-550
ನಡುಗೋಲು 600-650
ರಾಶಿ 700-800
ರಾಶಿ ಉತ್ತಮ 900-950
ಜರಡಿ 1000 - 1050
ಹೆರಕಿದ್ದು 1300-1400
ಹಸಿರು ಸಾಧಾರಣ 1000-1100
ಹಸಿರು ಉತ್ತಮ 1250-1350
ಹಸಿರು ಅತಿ ಉತ್ತಮ 1600-1800
ಕಾಳುಮೆಣಸು - 560
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-43200
ಹಳತು 46000-48000
ಕಾರ್ಕಳ
ಹೊಸತು 30000-43700
ಹಳತು 40000-48000
ಕುಮಟಾ
ಚಿಪ್ಪು 29199-35222
ಕೋಕ 22209-34899
ಹಳೆಚಾಲಿ 37706-41179
ಹೊಸಚಾಲಿ 37199-41679
ಕುಂದಾಪುರ
ಹಳೆಚಾಲಿ 43500-47000
ಹೊಸಚಾಲಿ 37000-41500
ಸಾಗರ
ಬಿಳಿಗೋಟು 24399-34570
ಚಾಲಿ 37399-40999
ಕೋಕ 20099-36989
ಕೆಂಪುಗೋಟು 28989-41899
ರಾಶಿ 41699-54339
ಸಿಪ್ಪೆಗೋಟು 17910-23079
ಶಿವಮೊಗ್ಗ
ಬೆಟ್ಟೆ 49528-55120
ಗೊರಬಲು 17008-43999
ರಾಶಿ 35036-56612
ಸರಕು 55099-83396
ಸಿದ್ದಾಪುರ
ಬಿಳಿಗೋಟು 32699-35599
ಚಾಲಿ 39079-42099
ಕೋಕ 31699-35499
ಕೆಂಪುಗೋಟು 34399-35691
ರಾಶಿ 49099-51899
ತಟ್ಟಿಬೆಟ್ಟೆ 39799-51099
ಶಿರಸಿ
ಬೆಟ್ಟೆ 32599-46099
ಬಿಳಿಗೋಟು 29469-36170
ಚಾಲಿ 38499-42588
ಕೆಂಪುಗೋಟು 23099-38799
ರಾಶಿ 48099-52108
ಯಲ್ಲಾಪುರ
ಬಿಳಿಗೋಟು 28899-36800
ಚಾಲಿ 38699-42333
ಕೋಕ 21318-34899
ಕೆಂಪುಗೋಟು 33155-37000
ರಾಶಿ 46450-55555
ತಟ್ಟಿಬೆಟ್ಟೆ 40419-48709

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14250	14000	163.75 ಸೆಂಟ್ಸ್
ಎಸಿ	7140	7100	7000	
ಆರ್‌ಪಿ	10100	10300	10200	ಲಂಡನ್
ಆರ್‌ಸಿ	6225	-	5950	2639 ಡಾಲರ್ಸ್

'ಸ್ಟಾರ್ ಚಿಹ್ನೆಯ ನೋಟು ಅಮಾನ್ಯವಲ್ಲ'

ಮುಂಬೈ (ಪಿಟಿಐ): ಸ್ಟಾರ್ ಚಿಹ್ನೆ (*) ಇರುವ ಕರೆನ್ಸಿ ನೋಟುಗಳು ಮಾನ್ಯತೆ ಹೊಂದಿರುವ ನೋಟುಗಳೇ ಆಗಿವೆ ಎಂದು ಆರ್‌ಬಿಐ ಗುರುವಾರ ಸ್ಪಷ್ಟಪಡಿಸಿದೆ.

ಮುದ್ರಣದ ಸಂದರ್ಭದಲ್ಲಿ ಲೋಪಗಳು ಆದಲ್ಲಿ, ಅಂತಹ ನೋಟುಗಳ ಬದಲಿಗೆ ಬೇರೆ ನೋಟು ಮುದ್ರಣ ಮಾಡಲಾಗುತ್ತದೆ. ಹಾಗೆ ಮುದ್ರಣ ಮಾಡಲಾದ ನೋಟುಗಳ ಸಂಖ್ಯೆಯ ಜೊತೆಯಲ್ಲಿ ಒಂದು ಸ್ಟಾರ್ ಚಿಹ್ನೆಯನ್ನು ಸೇರಿಸಲಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

ಮುಂಬೈ ಧಾರಣೆ

ಶೇಂಗಾ
27-07-2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	12100-12200
ದಪ್ಪ ಗುಜರಾತ್(ಹೊಸ)	12900-13000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1880 (1875)
ಒಂದು ವಾರದ ಡೆಲಿವರಿ	1875 (1870)
ಸೋಯಾ ಕಚ್ಚಾ	935 (945)
ಪಾಮ್ ವಾರದ ಡೆಲಿವರಿ	898 (895)
ಸೂರ್ಯಕಾಂತಿ ಎಣ್ಣೆ ಕಚ್ಚಾ	940 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
59,100 (59,350)
ಬೆಳ್ಳಿ ಕೆ.ಜಿ 74,700 (74,450)
ಆವರಣದಲ್ಲಿ ಹಿಂದಿನ ದಿನದ ಧಾರಣೆ

2027ಕ್ಕೆ ಮೂರನೇ ಅತಿದೊಡ್ಡ ಆರ್ಥಿಕತೆ

ಮುಂಬೈ (ಪಿಟಿಐ): ಭಾರತವು 2027ರ ವೇಳೆಗೆ ವಿಶ್ವದ ಮೂರನೆಯ ಅತಿದೊಡ್ಡ ಅರ್ಥ ವ್ಯವಸ್ಥೆಯನ್ನು ಹೊಂದಲಿದೆ ಎಂದು ಎಸ್‌ಬಿಐ ಅರ್ಥಶಾಸ್ತ್ರಜ್ಞರು ಅಂದಾಜು ಮಾಡಿದ್ದಾರೆ.

'2014ರ ನಂತರದಲ್ಲಿ ಭಾರತವು ನಡೆದುಬಂದಿರುವ ಹಾದಿಯನ್ನು ಗಮನಿಸಿದರೆ, ದೇಶವು 2027ರಲ್ಲಿ ವಿಶ್ವದ ಮೂರನೆಯ ಅರ್ಥ ವ್ಯವಸ್ಥೆ ಎಂಬ ಹೆಗ್ಗಳಿಕೆಯನ್ನು ಹೊಂದುವ ಸಾಧ್ಯತೆ ಇದೆ ಎಂಬುದು ಗೊತ್ತಾಗುತ್ತದೆ' ಎಂದು ಎಸ್‌ಬಿಐ ವರದಿ ಹೇಳಿದೆ.

ರೆಲಿಗೇರ್, ನಾಸ್ಕಾಂ ಸಹಭಾಗಿತ್ವ

ಬೆಂಗಳೂರು: ಹಣಕಾಸು ಸೇವಾ ಕಂಪನಿ ರೆಲಿಗೇರ್ ಎಂಟರ್‌ಪ್ರೈಸಸ್ ಹಾಗೂ 'ಕೃತಕ ಬುದ್ಧಿಮತ್ತೆ ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್ ಕುರಿತ ನಾಸ್ಕಾಂ ಶ್ರೇಷ್ಠತಾ ಕೇಂದ್ರ'ವು ಪಾಲುದಾರಿಕೆಯೊಂದಕ್ಕೆ ಸಹಿ ಮಾಡಿವೆ. ರೆಲಿಗೇರ್‌ಗೆ ಅಗತ್ಯವಿರುವ ತಂತ್ರಜ್ಞಾನ ಸೇವೆಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಇದು ಹೊಂದಿದೆ.

ಕೃತಕ ಬುದ್ಧಿಮತ್ತೆ, ಮಷೀನ್ ಲರ್ನಿಂಗ್, ಡ್ರೋನ್ ಮುಂತಾದ ತಂತ್ರಜ್ಞಾನ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳೊಂದಿಗೆ ನಾಸ್ಕಾಂ ಹೊಂದಿರುವ ಸಂಪರ್ಕವನ್ನು ರೆಲಿಗೇರ್ ಸಮೂಹಕ್ಕೆ ಅಗತ್ಯವಿರುವ ರೀತಿಯಲ್ಲಿ ಬಳಸಿಕೊಳ್ಳುವ ಅಂಶ ಕೂಡ ಒಪ್ಪಂದದಲ್ಲಿ ಇದೆ.

'ತಂತ್ರಜ್ಞಾನದ ಹೊಸತನವನ್ನು ಅಳವಡಿಸಿಕೊಂಡು ಪರಿಣಾಮಕಾರಿ ಯಾಗಿ ಹಣಕಾಸು ಸೇವೆ ನೀಡಲು ನಾಸ್ಕಾಂ ಜೊತೆಗಿನ ಸಹಭಾಗಿತ್ವವು ನಮ್ಮ ಪಾಲಿಗೆ ಮಹತ್ವದ ಮೈಲಿಗಲ್ಲು' ಎಂದು ಈ ಒಪ್ಪಂದ ಕುರಿತು ರೆಲಿಗೇರ್ ಎಂಟರ್ ಪ್ರೈಸಸ್‌ನ ಕಾರ್ಯನಿರ್ವಾಹಕ ಅಧ್ಯಕ್ಷೆ ಡಾ. ರಶ್ಮಿ ಸಾಲುಜಾ ಅವರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಎಂಎನ್ಸಿಗೆ &ಇತರೆ ಕಂಪನಿಗಳಿಗೆ ಡಿಪ್ಲೋಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪೆನಿಗಳಿಗೆ ಯುಕೆ ಯುಎಸ್ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

Marketing & Sales

THE BANGALORE PRESS
(No. 88, Mysore Road, Chamarajapet, Bangalore-18)
REQUIRES

ROLE	REQUIREMENT
1. Marketing Manager	Graduates with experience in senior roles in consumer goodsl stationery/book marketing & fluency in Kannada & English
2. Marketing Officers	Matriculates with at least 2-3 years experience in filed sales of consumer goods / stationeries, etc.

Apply with your work experience & expected salary, to
bangalorepressjobs@gmail.com | 97422 59829

Drivers

ನಾವು ಆಟೋ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಫುಲ್ ಟೈಮ್ ಮತ್ತು ಪಾರ್ಟ್ ಟೈಮ್ ಗಳ ಸಂಬಳ ರೂ. 25000/-. ರೆಫರಲ್ ಬೋನಸ್ ರೂ. 10000/-. ಸೇರುವ ಬೋನಸ್ ರೂ.6000/-. ಆಸಕ್ತಿಯುಳ್ಳವರು ನಮ್ಮನ್ನು ಸಂಪರ್ಕಿಸಿ: 080-68507441

General

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್ ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ರಾವ್ ಸಂಸ್ಥೆಗೆವಯಸ್ಸಾದವರನ್ನು , ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟವಾಸತಿವಿದೆ 13,000 - 17,000. 8951315839 , 9880120052

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ವ್ಯಾಪಾರ

Business Offers

Machinery & Tools

required for purchase
OFFSET PRINTING MACHINES
2-Colour | 4-Colour
KOMORI, MITSUBISHI
25"-36" | 28"-40" | 19"-26"
models after 2000 preferred
e-mail : Jayarama585@gmail.com
WhatsApp : 8660865901

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

General

FOR RENT Mulki Karnad industrial area 1 acre land , Premium RCC built up Contact for Godown/ warehouse/ Factory 8779224183

ಪ್ರವಾಸ

Travel

9 ದಿನಗಳ ಕಾಶಿ,ಗಯಾ ಅಲಹಾಬಾದ್. 8 ದಿನಗಳ ನೇಪಾಳ,ಮುಕ್ತಿನಾಥ ವಿಶೇಷ. 8 ದಿನಗಳ ಸಿಂಗಾಪುರ್ ಮಲೇಶಿಯಾ. 5 ದಿನಗಳ ಬಾಲಿ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080796

31.9.2023 ಪ್ರಯಾಗ್‌ರಾಜ್, ಅಯೋಧ್ಯಾ,ಮುಕ್ತಿನಾಥ,ಪೋಕ್ರಾ, ಕಠ್ಮಂಡು,ಕಾಶಿ 4.9.2023ಕಾಶಿ,ಗಯಾ, ಪ್ರಯಾಗ್‌ರಾಜ್,ಅಯೋಧ್ಯಾ23. 9.2023,24.10.2023 ಯಮುನೋತ್ರಿ,ಗಂಗೋತ್ರಿ,ಕೇದಾರನಾಥ್,ಬದ್ರಿನಾಥ್23.9.2023, ಮದ್ಯಪ್ರದೇಶ್,ಗುಜರಾತ್ ಪ್ರವಾಸಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ)9482435755,9845035349

8ದಿನಗಳ ಸೌತ್ ಆಫ್ರಿಕಾ, 7ದಿನಗಳ ಬಾಕು, 7/11ದಿನಗಳ ಸಿಂಗಾಪುರ, ಮಲೇಶಿಯಾ, ಥೈಲ್ಯಾಂಡ್, 6ದಿನಗಳ ಬಾಲಿ, 7ದಿನಗಳ ಶ್ರೀಲಂಕಾ. ಭಟ್ ಟ್ರಾವೆಲ್ ಅಂಡ್ ಟೂರ್ಸ್, ಚಾಮರಾಜಪೇಟೆ, ಬೆಂಗಳೂರು. 9844037295 / 9844166555

19.09.2023 17.11.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 11.10.2023 29.11.2023 ನೇಪಾಳ 9 ದಿನಗಳು. 11.09.2023 09.10.2023 17.11.2023 ಶ್ರೀಲಂಕಾ 6 ದಿನಗಳು. 19.09.2023 06.10.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 11.09.2023 09.10.2023 ಗುಜರಾತ್ 8 ದಿನಗಳು. 13.10.2023 25.11.2023 ರಾಜಸ್ಥಾನ್ 9 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ಭವಿಷ್ಯ

Astrology

100% ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ ಹೋದವರಿಗೆ ಕಲ್ಕತ್ತಾ ಕೊಳ್ಳೇಗಾಲದ ಪೂಜೆಯಿಂದ, ಗಂಡಹೆಂಡತಿ ಸಮಸ್ಯೆಗಳಿಗೆ 3ಗಂಟೆಗಳಲ್ಲಿ ಶೀಘ್ರ ಪರಿಹಾರ. 9448687421

ವೈಯಕ್ತಿಕ

Change of Name

I, GOBICHETTIPALAYAM Nageswaran Lavanya, hereby change my name to Lavanya Udhay Shankar for all purposes.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

PROPERTY
To Place your Classified Ads Contact
9845114560

ಏಕದಿನ ಕ್ರಿಕೆಟ್: ವಿಂಡೀಸ್ ವಿರುದ್ಧ ಭಾರತಕ್ಕೆ 5 ವಿಕೆಟ್ ಗೆಲುವು; ಇಶಾನ್ ಅರ್ಧಶತಕ

ಜಡೇಜ, ಕುಲದೀಪ್ ಕೈಚಳಕ

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ಎಡಗೈ ಸ್ಪಿನ್ ಜೋಡಿ ರವೀಂದ್ರ ಜಡೇಜ ಹಾಗೂ ಕುಲದೀಪ್ ಯಾದವ್ ಅವರ ಮೋಡಿಯ ಮುಂದೆ ವೆಸ್ಟ್ ಇಂಡೀಸ್ ತಂಡವು ನೆಲಕಚ್ಚಿತು.

ಗುರುವಾರ ಇಲ್ಲಿ ನಡೆದ ಮೊದಲ ಏಕದಿನ ಪಂದ್ಯವನ್ನು ಭಾರತ ತಂಡ ಐದು ವಿಕೆಟ್‌ಗಳಿಂದ ಗೆದ್ದುಕೊಂಡು, ಮೂರು ಪಂದ್ಯಗಳ ಸರಣಿಯಲ್ಲಿ 1–0 ರಿಂದ ಮುನ್ನಡೆ ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ, ಕುಲದೀಪ್ (6ಕ್ಕೆ4) ಹಾಗೂ ಜಡೇಜ (37ಕ್ಕೆ3) ಅವರ ಮಾರಕ ದಾಳಿಗೆ ನಲುಗಿ 23 ಓವರ್‌ಗಳಲ್ಲಿ 114 ರನ್‌ಗಳಿಗೆ ಆಲೌಟಾಯಿತು. ಅಲ್ಪ ಗುರಿ ಬೆನ್ನಟ್ಟು-ವಲ್ಲಿ ಐದು ವಿಕೆಟ್ ಕಳೆದುಕೊಂಡ ಭಾರತ, 22.5 ಓವರ್‌ಗಳಲ್ಲಿ 118 ರನ್ ಗಳಿಸಿತು.

ಆರಂಭಿಕ ಬ್ಯಾಟರ್ ಇಶಾನ್ ಕಿಶನ್ (52) ಅರ್ಧಶತಕ ಗಳಿಸಿ ಗೆಲುವಿನ ಹಾದಿ ಸುಗಮಗೊಳಿಸಿದರು. ಸುಲಭ ಗುರಿ ಭಾರತಕ್ಕೆ ಸವಾಲಾಗಲೇ ಇಲ್ಲ. ಆದರೂ ಎಡಗೈ ಸ್ಪಿನ್ನರ್ ಗುಡಕೇಶ್ ಮೋಟೀ (26ಕ್ಕೆ 2) ರೋಹಿತ್ ಶರ್ಮಾ ಬಳಗವನ್ನು ಅಲ್ಪ ಕಾಡುವಲ್ಲಿ ಯಶಸ್ವಿಯಾದರು.

ಭಾರತ ತಂಡ ಬ್ಯಾಟಿಂಗ್ ಕ್ರಮಾಂಕದಲ್ಲಿ ಬದಲಾವಣೆ ಮಾಡಿತು. ರೋಹಿತ್ ಏಳನೆಯವರಾಗಿ ಕ್ರೀಸ್‌ಗೆ ಬಂದರು. ವಿರಾಟ್ ಕೊಹ್ಲಿ ಬ್ಯಾಟಿಂಗ್‌ಗೆ ಬರಲಿಲ್ಲ. ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್ ಮತ್ತು ಹಾರ್ದಿಕ್ ಪಾಂಡ್ಯ ಬೇಗನೇ ಔಟಾದರು. ಜಡೇಜ ಮತ್ತು ರೋಹಿತ್ ತಂಡವನ್ನು ಜಯದತ್ತ ಕೊಂಡೊಯ್ದರು.

ವಿಂಡೀಸ್ ಅಲ್ಪ ಮೊತ್ತ: ಮೊದಲು ಬ್ಯಾಟ್ ಮಾಡಿದ ವಿಂಡೀಸ್ ತಂಡವು ತವರಿನಂಗಳದಲ್ಲಿ ಭಾರತದ ಎದುರು ಅತಿ ಕಡಿಮೆ ಮೊತ್ತ ಗಳಿಸಿತು. 1997ರಲ್ಲಿ ಪೋರ್ಟ್ ಆಫ್ ಸ್ಪೇನ್‌ನಲ್ಲಿ ವಿಂಡೀಸ್, 121 ರನ್ ಗಳಿಸಿತ್ತು. ಕೆರಿಬಿಯನ್ ಪಡೆಯು 2004ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಕೇಪ್‌ಟೌನ್‌ನಲ್ಲಿ ಗಳಿಸಿದ್ದ 54 ರನ್‌ಗಳು ಇದುವರೆಗಿನ ಕನಿಷ್ಠ ಮೊತ್ತವಾಗಿದೆ. ಜಡೇಜ ಮತ್ತು ಕುಲದೀಪ್ ಅವರ ಪರಿಣಾಮಕಾರಿ ದಾಳಿಗೆ ವಿಂಡೀಸ್ ಬ್ಯಾಟರ್‌ಗಳು ತಡಬಡಾಯಿಸಿದರು.

ಮೂರನೇ ಓವರ್‌ನಲ್ಲಿಯೇ ಹಾರ್ದಿಕ್ ಪಾಂಡ್ಯ ಎಸೆತದಲ್ಲಿ ಕೈಲ್ ಮೇಯರ್ಸ್ ಔಟಾದರು. ಐದು ಓವರ್‌ಗಳ ನಂತರ ಮುಕೇಶ್ ಕುಮಾರ್ ಎಸೆತದಲ್ಲಿ ಅಲಿಕ್ ಅಥನೇಝ್ ವಿಕೆಟ್ ಗಳಿಸಿದರು. ಮುಕೇಶ್ ಅವರಿಗೆ ಇದು ಪದಾರ್ಪಣೆಯ ಪಂದ್ಯವಾಗಿದ್ದು, ಚೊಚ್ಚಲ ವಿಕೆಟ್ ಗಳಿಸಿ ಸಂಭ್ರಮಿಸಿದರು.

ಈ ಹಂತದಲ್ಲಿ ನಾಯಕ ಶಾಯ್ ಹೋಪ್ ಏಕಾಂಗಿ ಹೋರಾಟ ಮಾಡಿದರು. 45 ಎಸೆತಗಳಲ್ಲಿ 43 ರನ್ ಗಳಿಸಿದರು. ಆದರೆ ಇನ್ನೊಂದು ಬದಿಯಲ್ಲಿ ಭಾರತದ ಇಬ್ಬರೂ ಸ್ಪಿನ್ನರ್‌ಗಳ ದಾಳಿಗೆ ಬ್ಯಾಟರ್‌ಗಳು ಪೆವಿ-ಲಿಯನ್‌ನತ್ತ ಮುಖ ಮಾಡಿದರು.

16ನೇ ಓವರ್‌ನಲ್ಲಿ ಜಡೇಜ, ಹೆಟ್ಮೆಯರ್ ವಿಕೆಟ್ ಉರುಳಿಸಿದರು. ಜಡೇಜ 18ನೇ ಓವರ್ ಒಂದರಲ್ಲಿಯೇ ರೊವ್ಮನ್ ಪೊವೆಲ್ ಮತ್ತು ರೊಮೆರಿಯೊ ಶೆಫರ್ಡ್ ವಿಕೆಟ್‌ಗಳನ್ನು ಗಳಿಸಿದರು. ಇದರಿಂದಾಗಿ ಮಧ್ಯಮ ಕ್ರಮಾಂಕ ಕುಸಿಯಿತು. ತಂಡವು ನೂರು ರನ್‌ಗಳ ಮೊತ್ತದೊಳಗೆ ಕುಸಿಯುವುದನ್ನು ತಪ್ಪಿಸಿದ ಶಾಯ್ ಹೋಪ್ ಅವರನ್ನು ಕುಲದೀಪ್ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಶಿಮ್ರಾನ್ ಹೆಟ್ಮೆಯರ್ ವಿಕೆಟ್ ಪಡೆದ ಭಾರತದ ರವೀಂದ್ರ ಜಡೇಜ (ಬಲ) ಅವರು ರೋಹಿತ್ ಶರ್ಮಾ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ವೆಸ್ಟ್ ಇಂಡೀಸ್ 114 (23 ಓವರ್‌ಗಳಲ್ಲಿ)
ಬ್ರೆಂಡನ್ ಬಿ ಠಾಕೂರ್ 17 (23ಎ, 4X3)
ಮೇಯರ್ಸ್ ಸಿ ರೋಹಿತ್ ಬಿ ಹಾರ್ದಿಕ್ 2 (9ಎ)
ಅಲಿಕ್ ಸಿ ಜಡೇಜ ಬಿ ಮುಕೇಶ್ 22 (18ಎ, 4X3, 6X1)
ಹೋಪ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 43 (45ಎ, 4X4, 6X1)
ಶಿಮ್ರಾನ್ ಬಿ ಜಡೇಜ 11 (19ಎ, 4X1)
ಪೊವೆಲ್ ಸಿ ಶುಭಮನ್ ಬಿ ಜಡೇಜ 4 (4ಎ, 4X1)
ಶೆಫರ್ಡ್ ಸಿ ಕೊಹ್ಲಿ ಬಿ ಜಡೇಜ 0 (2ಎ)
ಡಾಮ್ನಿಕ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 3 (5ಎ)
ಯಾನಿಕ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 3 (9ಎ)
ಮೋಟೀ ಔಟಾಗದೆ 0 (3ಎ)
ಜೇಡನ್ ಸಿ ಹಾರ್ದಿಕ್ ಬಿ ಕುಲದೀಪ್ 0 (3ಎ)
ಇತರೆ: 9 (ಲೆಗ್‌ಬೈ 1, ವೈಡ್ 6, ನೋಬಾಲ್ 2)
ವಿಕೆಟ್ ಪತನ: 1–7 (ಕೈಲ್ ಮೇಯರ್ಸ್; 2.4), 2–45 (ಅಲಿಕ್ ಅಥನೇಝ್ 7.5), 3–45 (ಬ್ರೆಂಡನ್ ಕಿಂಗ್;8.3), 4–88 (ಶಿಮ್ರಾನ್ ಹೆಟ್ಮೆಯರ್; 15.4), 5–96 (ರೋವ್ಮನ್ ಪೊವೆಲ್‌ 17.2), 6–96 (ರೊಮೆರಿಯೊ ಶೇಫರ್ಡ್; 17.4), 7–99 (ಡಾಮ್ನಿಕ್ ಡ್ರೇಕ್ಸ್;18.3), 8–107 (ಯಾನಿಕ್ ಕೆರೈ; 20.4), 9–114 (ಶಾಯ್ ಹೋಪ್;22.3), 10–114 (ಜೇಡನ್ ಸೀಲ್ಸ್; 22.6)
ಬೌಲಿಂಗ್: ಹಾರ್ದಿಕ್ ಪಾಂಡ್ಯ 3–0–17–1, ಮುಕೇಶ್ ಕುಮಾರ್ 5–1–22–1, ಶಾರ್ದೂಲ್ ಠಾಕೂರ್ 3–1–14–1, ರವೀಂದ್ರ ಜಡೇಜ 6–0–37–3, ಉಮ್ರಾನ್ ಮಲಿಕ್ 3–0–17–0, ಕುಲದೀಪ್ 3–2–6–4

ಭಾರತ: 5ಕ್ಕೆ 118 (22.5 ಓವರ್‌ಗಳಲ್ಲಿ)
ಇಶಾನ್ ಸಿ ಪೊವೆಲ್ ಬಿ ಮೋಟೀ 52 (46 ಎ., 4X7, 6X1)
ಗಿಲ್ ಸಿ ಕಿಂಗ್ ಬಿ ಸೀಲ್ಸ್ 7 (16 ಎ., 4X1)
ಸೂರ್ಯಕುಮಾರ್ ಎಲ್‌ಬಿಡಬ್ಲ್ಯು ಬಿ ಮೋಟೀ 19 (25 ಎ., 4X3, 6X1)
ಹಾರ್ದಿಕ್ ರನೌಟ್ 5 (7 ಎ)
ಜಡೇಜ ಔಟಾಗದೆ 16 (21 ಎ., 4X1)
ಶಾರ್ದೂಲ್ ಸಿ ಅಥನೇಝ್ ಬಿ ಕೆರೈ 1 (4 ಎ)
ರೋಹಿತ್ ಔಟಾಗದೆ 12 (19 ಎ., 4X2)
ಇತರೆ: 6 (ಲೆಗ್‌ಬೈ 2, ನೋಬಾಲ್ 1, ವೈಡ್ 3)
ವಿಕೆಟ್ ಪತನ: 1–18 (ಶುಭಮನ್ ಗಿಲ್; 3.6), 2–54 (ಸೂರ್ಯಕುಮಾರ್ ಯಾದವ್; 10.5), 3–70 (ಹಾರ್ದಿಕ್ ಪಾಂಡ್ಯ; 13.1), 4–94 (ಇಶಾನ್ ಕಿಶನ್; 16.2), 5–97 (ಶಾರ್ದೂಲ್ ಠಾಕೂರ್; 17.2)
ಬೌಲಿಂಗ್: ಡಾಮ್ನಿಕ್ ಡ್ರೇಕ್ಸ್ 4–0–19–0, ಜೇಡನ್ ಸೀಲ್ಸ್ 4–0–21–1, ಕೈಲ್ ಮೇಯರ್ಸ್ 1–0–6–0, ರೊಮೆರಿಯೊ ಶೆಫರ್ಡ್ 1–0–2–0, ಗುಡಕೇಶ್ ಮೋಟೀ 6.5–0–26–2, ಯಾನಿಕ್ ಕೆರೈ 5–0–35–1, ಅಥನೇಝ್ 1–0–7–0
ಫಲಿತಾಂಶ: ಭಾರತ ತಂಡಕ್ಕೆ 5 ವಿಕೆಟ್ ಗೆಲುವು

ಮೊಹಮ್ಮದ್ ಸಿರಾಜ್‌ಗೆ ವಿಶ್ರಾಂತಿ

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್ ತಂಡದ ಎದುರಿನ ಏಕದಿನ ಕ್ರಿಕೆಟ್ ಸರಣಿಯಿಂದ ಭಾರತದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಅವರು ತವರಿಗೆ ಮರಳಿದ್ದಾರೆ.

ಎಂಟರ ಘಟ್ಟಕ್ಕೆ ಪ್ರಣಯ್

ಜಪಾನ್ ಓಪನ್: ಚಿರಾಗ್–ಸಾತ್ವಿಕ್ ಜೋಡಿಗೆ ಗೆಲುವು

ಟೋಕಿಯೊ (ಪಿಟಿಐ): ಭಾರತದ ಎಚ್.ಎಸ್.ಪ್ರಣಯ್, ಮೂರು ಗೇಮ್‌ಗಳ ಸೆಣಸಾಟದಲ್ಲಿ ಸ್ವದೇಶದ ಕಿದಂಬಿ ಶ್ರೀಕಾಂತ್ ಅವರನ್ನು ಸೋಲಿಸಿ ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ತಲುಪಿದರು. ಭಾರತದ ಇನ್ನೊಬ್ಬ ತಾರೆ ಲಕ್ಷ್ಯ ಸೇನ್ ಕೂಡ ಗುರುವಾರ ಎಂಟರ ಘಟ್ಟಕ್ಕೆ ಕಾಲಿಟ್ಟರು.

ಉತ್ತಮ ಲಯದಲ್ಲಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಪುರುಷರ ಡಬಲ್ಸ್ ವಿಭಾಗದಲ್ಲಿ ಅಂತಿಮ ಎಂಟರ ಘಟ್ಟಕ್ಕೆ ತಲುಪಿದರು.

21 ವರ್ಷದ ಲಕ್ಷ್ಯ 21–14, 21–16 ರಲ್ಲಿ ಜಪಾನ್‌ನ ಕಾಂಟಾ ತ್ಸುಮೆಯಾಮಾ ಅವರನ್ನು ನೇರ ಆಟಗಳಿಂದ ಸೋಲಿಸಿದರು. 27 ವರ್ಷದ ಜಪಾನ್ ಆಟಗಾರನ ಮೇಲೆ ಗೆಲ್ಲಲು 50 ನಿಮಿಷ ತೆಗೆದುಕೊಂಡರು.

ಕಳೆದ ವಾರವಷ್ಟೇ ಕೊರಿಯಾ ಓಪನ್‌ನಲ್ಲಿ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡ ಉತ್ಸಾಹದಲ್ಲಿರುವ ಸಾತ್ವಿಕ್– ಚಿರಾಗ್ ಜೋಡಿ ಎರಡನೇ ಸುತ್ತಿನ ಪಂದ್ಯದಲ್ಲಿ 21–17, 21–11 ರಿಂದ ಡೆನ್ಮಾರ್ಕ್‌ನ ಲಾಸ್ಸೆ ಮೊಲ್ಹೆಡೆ-ಜೆಪ್ಪೆ ಬೇ ಜೋಡಿಯನ್ನು ಸೋಲಿಸಿತು.

ಎಚ್.ಎಸ್.ಪ್ರಣಯ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಉತ್ತಮ ಲಯದಲ್ಲಿರುವ ಸಾತ್ವಿಕ್–ಚಿರಾಗ್ ಜೋಡಿ ಗೆಲ್ಲಲು ಪ್ರಯಾಸಪ-ಡಲಿಲ್ಲ. ಹಾಲಿ ಏಷ್ಯನ್ ಚಾಂಪಿಯನ್ ಆಗಿರುವ ಭಾರತದ ಈ ಜೋಡಿ, ಈ ವರ್ಷ ಕೊರಿಯಾ ಓಪನ್, ಸ್ವಿಸ್ ಓಪನ್, ಇಂಡೊನೇಷ್ಯಾ ಓಪನ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿದೆ.

ಭಾರತದ ಆಟಗಾರರು ಮುಖಾ-ಮುಖಿಯಾಗಿದ್ದ ಪ್ರಿಕ್ವಾರ್ಟರ್‌ಫೈನ-ಲ್ ಪಂದ್ಯದಲ್ಲಿ ಪ್ರಣಯ್ 19–21, 21–19, 21–9 ರಿಂದ ಶ್ರೀಕಾಂತ್ ಅವರನ್ನು ಸೋಲಿಸಿದರು.

ಡೆನ್ಮಾರ್ಕ್‌ನ ವಿಕ್ಟರ್ ಆಕ್ಸೆಲ್‌ಸನ್ 21–19, 21–19 ರಿಂದ ಇಂಡೊನೇಷ್ಯಾದ ಚಿಕೊ ದ್ವಿ ವಾರ್ಡೊಯೊ ಅವರನ್ನು ಮಣಿಸಿದರು.

ಆದರೆ ಮಹಿಳಾ ಡಬಲ್ಸ್‌ನಲ್ಲಿ ಗಾಯತ್ರಿ ಗೋಪಿಚಂದ್– ತ್ರೀಸಾ ಜೋಳಿ ಹೊರಬಿದ್ದರು. ಜಪಾನ್‌ನ ನಾಮಿ ಮಾತ್ಸುಯಾಮ– ಚಿರಾರು ಶಿಡಾ 23–21, 21–19 ರಿಂದ ಭಾರತದ ಆಟಗಾರ್ತಿಯರನ್ನು ಸೋಲಿಸಿದರು.

ವಿಶ್ವಕಪ್ ವೇಳಾಪಟ್ಟಿ ಬದಲಾವಣೆಗೆ ಮನವಿ

ನವದೆಹಲಿ (ಪಿಟಿಐ): ಭಾರತದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಕೆಲವು ಪಂದ್ಯಗಳ ದಿನಾಂಕಗಳ ಬದಲಾವಣೆಗಾಗಿ ಕೋರಿ ಮೂರು ರಾಷ್ಟ್ರಗಳ ಕ್ರಿಕೆಟ್ ಮಂಡಳಿಗಳು ಐಸಿಸಿಗೆ ಮನವಿ ಸಲ್ಲಿಸಿವೆ.

ಗುರುವಾರ ಸುದ್ದಿಗಾರರೊಂ-ದಿಗೆ ಮಾತನಾಡಿದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ, 'ವೇಳಾಪಟ್ಟಿ-ಯಲ್ಲಿ ಬದಲಾವಣೆಗಾಗಿ ಕೋರಿ ಮೂರು ಮಂಡಳಿಗಳು ಮನವಿ ಸಲ್ಲಿಸಿವೆ. ಎರಡು ಪಂದ್ಯಗಳ ನಡುವೆ ಆರು ದಿನಗಳ ಅಂತರ ಇದ್ದರೆ ಅದನ್ನು ನಾಲ್ಕು ಅಥವಾ ಐದು ದಿನಗಳಿಗೆ ಕಡಿತಗೊಳಿಸಲು ಪ್ರ-ಯತ್ನಿಸಲಾಗುತ್ತಿದೆ' ಎಂದರು.

'ಐಸಿಸಿಯೊಂದಿಗೆ ಮಾತುಕತೆ ನಡೆಸಲಾಗುತ್ತಿದೆ. ವೇಳಾಪಟ್ಟಿಯಲ್ಲಿ ಬದಲಾವಣೆಯ ಬಗ್ಗೆ ಮೂರ್ನಾಲ್ಕು ದಿನಗಳಲ್ಲಿ ಸ್ಪಷ್ಟವಾಗಲಿದೆ. ದಿನಾಂಕಗಳು ಆಚೀಚೆ ಆಗಬಹುದು. ಆದರೆ ತಾಣಗಳು ಬದಲಾಗುವುದಿಲ್ಲ ' ಎಂದರು.

ಆದರೆ ವೇಳಾಪಟ್ಟಿ ಬದಲಾವಣೆಗೆ ಕೋರಿರುವ ಮೂರು ಮಂಡಳಿಗಳು ಯಾವುವು ಎಂಬುದನ್ನು ಮಾತ್ರ ಬಹಿರಂಗ ಮಾಡಲಿಲ್ಲ.

ಅಹಮದಾಬಾದಿನಲ್ಲಿ ಆಯೋ-ಜನೆಯಾಗಿರುವ ಭಾರತ ಪಾಕಿಸ್ತಾನ ನಡುವಣ ಪಂದ್ಯವು ಅಕ್ಟೋಬರ್ 15ರ ಬದಲು 14ರಂದು ನಡೆಸುವ ಕುರಿತ ಪ್ರಶ್ನೆಗೆ ಅವರು,'ಈ ಮೊದಲೇ ಹೇಳಿದಂತೆ ಕೆಲವು ಮಂಡಳಿಗಳು ಐಸಿಸಿಗೆ ಪತ್ರ ಬರೆದಿವೆ. ವೇಳಾಪಟ್ಟಿಯ-ಲ್ಲಿ ಬದಲಾವಣೆಯ ಕುರಿತು ತೀರ್ಮಾನ ಕೈಗೊಂಡ ನಂತರ ಹೇಳುತ್ತೇವೆ' ಎಂದರು. ವಿಶ್ವಕಪ್ ಟೂರ್ನಿಯಲ್ಲಿ 48 ಪಂದ್ಯಗಳು ನಡೆಯಲಿವೆ. 10 ತಾಣಗಳಲ್ಲಿ ಅಕ್ಟೋಬರ್ 5ರಿಂದ ನವೆಂಬರ್ 19ರವರೆಗೆ ಟೂರ್ನಿ ನಡೆಯುವುದು.

ಸಂಕ್ಷಿಪ್ತ ಸುದ್ದಿ

ಶ್ರೀಹರಿಗೆ ನಿರಾಸೆ

ಫುಕುವೊಕಾ (ಜಪಾನ್), (ಪಿಟಿಐ): ಭಾರತದ ಈಜುತಾರೆ ಶ್ರೀಹರಿ ನಟರಾಜ್, ಫಿನಾ ವಿಶ್ವ ಈಜು ಚಾಂಪಿಯನ್‌ಷಿಪ್‌ನ 200 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಗುರುವಾರ ನಿರಾಶೆ ಅನುಭವಿಸಿದರು. 39 ಮಂದಿಯಿದ್ದ ಈ ಸ್ಪರ್ಧೆಯಲ್ಲಿ 21 ವರ್ಷದ ಈಜುಪಟು 31ನೇ ಸ್ಥಾನ ಪಡೆದರು.

ಕನ್ನಡಿಗ ಶ್ರೀಹರಿ ನಿಗದಿತ ದೂರವನ್ನು 2ನಿ.04.42 ಸೆ.ಗಳಲ್ಲಿ ಪೂರೈಸಿದರು. ಸ್ಪರ್ಧೆಯಲ್ಲಿ ಮೊದಲ 16 ಸ್ಥಾನ ಪಡೆದವರು ಮಾತ್ರ ಸೆಮಿ-ಫೈನಲ್‌ನಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ.

ಈ ಸ್ಪರ್ಧೆಯಲ್ಲಿ ಶ್ರೀಹರಿ ಅವರ ಉತ್ತಮ ಸಾಧನೆ 2ನಿ.00.82 ಸೆ. ಕಳೆದ ವರ್ಷ ಬರ್ಮಿಂಗ್‌ಹ್ಯಾಮ್‌ನ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅವರು ಈ ಸಾಧನೆ ದಾಖಲಿಸಿದ್ದರು.

ಕಳೆದ ವಾರ ನಡೆದ ಇದೇ ಕೂಟದ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲೂ ಶ್ರೀಹರಿ 31ನೇ ಸ್ಥಾನ ಪಡೆದಿದ್ದರು. ಅವರು ಭಾನುವಾರ ನಡೆಯುವ 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲೂ ಕಣಕ್ಕಿಳಿಯಲಿದ್ದಾರೆ.

ರಾಜ್ಯ ರ‍್ಯಾಂಕಿಂಗ್ ಟಿಟಿ ಇಂದಿನಿಂದ

ಬೆಂಗಳೂರು: ಮಲ್ಲೇಶ್ವರದ ಕೆನರಾ ಯೂನಿಯನ್ ಆಶ್ರಯದಲ್ಲಿ ಇದೇ ತಿಂಗಳ 28 ರಿಂದ 31ರವರೆಗೆ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ ನಡೆಯಲಿದೆ. 13 ವಿಭಾಗಗಳಲ್ಲಿ ರಾಜ್ಯದ ವಿವಿಧೆಡೆಯಿಂದ 750ಕ್ಕೂ ಹೆಚ್ಚು ಪ್ರವೇಶಗಳು ಬಂದಿವೆ ಎಂದು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ಜಿ.ಉಪಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೇಸ್ ಮುಂದೂಡಿಕೆ

ಬೆಂಗಳೂರು: ಶನಿವಾರ (ಜುಲೈ 29) ಮತ್ತು ಭಾನುವಾರ (ಜುಲೈ 30) ನಡೆಯಬೇಕಿದ್ದ ಬೆಂಗಳೂರು ರೇಸ್‌ಗಳನ್ನು ಮಳೆಯ ಕಾರಣ ಮುಂದೂಡಲಾಗಿದೆ. ಮುಂದೂಡಿದ ರೇಸ್‌ಗಳನ್ನು ಆಗಸ್ಟ್ 11 ಮತ್ತು 12 ರಂದು ನಡೆಸಲಾಗುವುದು ಎಂದು ಬಿಟಿಸಿ ಪ್ರಕಟಣೆ ತಿಳಿಸಿದೆ.

ಟಿ20 ವಿಶ್ವಕಪ್: ಐರ್ಲೆಂಡ್ ಅರ್ಹತೆ

ಎಡಿನ್‌ಬರ್ಗ್ (ಪಿಟಿಐ): ಐರ್ಲೆಂಡ್ ಕ್ರಿಕೆಟ್ ತಂಡವು ಮುಂದಿನ ವರ್ಷ ನಡೆಯುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಅರ್ಹತೆ ಗಿಟ್ಟಿಸಿದೆ.

2024ರಲ್ಲಿ ಟಿ20 ವಿಶ್ವಕಪ್ ಟೂರ್ನಿಯು ವೆಸ್ಟ್ ಇಂಡೀಸ್ ಮತ್ತು ಅಮೆರಿಕದ ಸಹಭಾಗಿತ್ವದಲ್ಲಿ ನಡೆಯಲಿದೆ.

ವಿಶ್ವಕಪ್ ಅರ್ಹತಾ ಟೂರ್ನಿಯಲ್ಲಿ ಐರ್ಲೆಂಡ್ ಮತ್ತು ಜರ್ಮನಿ ನಡುವಣ ಪಂದ್ಯವು ಮಳೆಯಿಂದಾಗಿ ರದ್ದಾಯಿತು. ಇದರೊಂದಿಗೆ ಐರ್ಲೆಂಡ್ ಹಾದಿಯೂ ಸುಗಮವಾಯಿತು. ಅಂಕಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿರುವ ಐರ್ಲೆಂಡ್ ಅರ್ಹತಾ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಈಗಾಗಲೇ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆದಿರುವ ಸ್ಕಾಟ್ಲೆಂಡ್ ಎದುರು ಸೆಣಸಲಿದೆ. ಟೂರ್ನಿಯಲ್ಲಿ ಐದು ಪಂದ್ಯಗಳನ್ನು ಆಡಿರುವ ಐರ್ಲೆಂಡ್ ತಂಡವು ನಾಲ್ಕರಲ್ಲಿ ಜಯಿಸಿದೆ. ಸ್ಕಾಟ್ಲೆಂಡ್ ವಿರುದ್ಧ ಗೆದ್ದರೆ ಅಗ್ರಸ್ಥಾನಕ್ಕೇರಲಿದೆ.

5 ವರ್ಷದ ತೇಜಸ್‌ಗೆ ಫಿಡೆ ರೇಟಿಂಗ್

ಚೆನ್ನೈ (ಪಿಟಿಐ): ಭಾರತದ ತೇಜಸ್ ತಿವಾರಿ ಅವರು ವಿಶ್ವ ಚೆಸ್ ಫೆಡರೇಷನ್‌ನ (ಫಿಡೆ) ರೇಟಿಂಗ್ ಪಡೆದ ವಿಶ್ವದ ಅತಿಕಿರಿಯ ಚೆಸ್ ಸ್ಪರ್ಧಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ಐದು ವರ್ಷದ ತೇಜಸ್ ಅವರು 1,149 ಫಿಡೆ ರೇಟಿಂಗ್ ಹೊಂದಿದ್ದಾರೆ. 'ಉತ್ತರಾಖಂಡದ ರುದ್ರಪುರದಲ್ಲಿ ನಡೆದ ಧೀರಜ್ ಸಿಂಗ್ ರಘುವಂಶಿ ಓಪನ್ ಫಿಡೆ ರೇಟೆಡ್ ಚೆಸ್ ಟೂರ್ನಿಯಲ್ಲಿ ತೇಜಸ್, ಮೊದಲ ರೇಟಿಂಗ್ (1,149) ಪಡೆದುಕೊಂಡರು' ಎಂದು ಫಿಡೆ ಪ್ರಕಟಣೆ ತಿಳಿಸಿದೆ.

ತೇಜಸ್, 4 ವರ್ಷವಾಗಿದ್ದಾಗ-ಲೇ ರಾಜ್ಯಮಟ್ಟದ ಟೂರ್ನಿಗಳಲ್ಲಿ ಪಾಲ್ಗೊಳ್ಳಲು ಶುರು ಮಾಡಿದ್ದರು.

ಇಂಗ್ಲೆಂಡ್ ನೆರವಿಗೆ ಬ್ರೂಕ್

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡ, ಓವಲ್‌ನಲ್ಲಿ ಗುರುವಾರ ಆರಂಭವಾದ ಆ್ಯಷಸ್ ಸರಣಿಯ ಐದನೇ ಹಾಗೂ ಅಂತಿಮ ಟೆಸ್ಟ್‌ನಲ್ಲಿ ಚಹ ವಿರಾಮದ ನಂತರ 283 ರನ್‌ಗಳಿಗೆ ಆಲೌಟ್ ಆಯಿತು. ಹ್ಯಾರಿ ಬ್ರೂಕ್ ಅವರು 85 ರನ್ (91ಎ, 4x11, 6x2) ಗಳಿಸಿ ಇಂಗ್ಲೆಂಡ್ ಮೊತ್ತದಲ್ಲಿ ಪ್ರಮುಖ ಕಾಣಿಕೆ ನೀಡಿದರು.

ಒಂದು ಹಂತದಲ್ಲಿ 3 ವಿಕೆಟ್‌ಗೆ 184 ರನ್ ಗಳಿಸಿದ್ದ ಆತಿಥೇಯ ತಂಡ ನಂತರ 28 ರನ್ ಅಂತರದಲ್ಲಿ ಬ್ರೂಕ್ ಅವರನ್ನೂ ಒಳಗೊಂಡು 4 ವಿಕೆಟ್‌ಗಳನ್ನು ಕಳೆದುಕೊಂಡು ಕುಸಿತ ಅನುಭವಿಸಿತು. ಕ್ರಿಸ್ ವೋಕ್ಸ್ ಮತ್ತು ಮಾರ್ಕ್ ವುಡ್ ಎಂಟನೇ ವಿಕೆಟ್‌ಗೆ 41 ರನ್ ಸೇರಿಸಿದರು. ಆರಂಭ ಆಟಗಾರ ಬೆನ್ ಡಕೆಟ್ 41 ರನ್ ಗಳಿಸಿದ್ದರು.

ಕೊನೆಯವರಾಗಿ ನಿರ್ಗಮಿಸಿದ ವೋಕ್ಸ್ ಅವರ ವಿಕೆಟ್ ಸೇರಿದಂತೆ 82 ರನ್‌ಗಳಿಗೆ 4 ವಿಕೆಟ್ ಪಡೆದ ಮಿಚೆಲ್ ಸ್ಟಾರ್ಕ್ ಯಶಸ್ವಿ ಬೌಲರ್ ಎನಿಸಿದರು.

ಮೊದಲ ಇನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾ ತಂಡ ದಿನದಾಟದ ಅಂತ್ಯಕ್ಕೆ 25 ಓವರ್‌ಗಳಲ್ಲಿ 1 ವಿಕೆಟ್‌ಗೆ 61 ರನ್ ಗಳಿಸಿದೆ. ಡೇವಿಡ್ ವಾರ್ನರ್ 24 ರನ್ ಗಳಿಸಿ ಔಟಾದರು.

ಉಸ್ಮಾನ್ ಖ್ವಾಜಾ (ಬ್ಯಾಟಿಂಗ್ 26) ಮತ್ತು ಮಾರ್ನಸ್ ಲಾಬುಷೇನ್ (ಬ್ಯಾಟಿಂಗ್ 2) ಕ್ರೀಸ್‌ನಲ್ಲಿದ್ದರು. ಆಸ್ಟ್ರೇಲಿಯಾ 222 ರನ್‌ಗಳಿಂದ ಹಿನ್ನಡೆಯಲ್ಲಿದೆ.

2–1 ರಿಂದ ಮುಂದಿದ್ದು, ಈಗಾಗಲೇ 'ಆ್ಯಷಸ್' ಉಳಿಸಿಕೊಂಡಿರುವ ಆಸ್ಟ್ರೇಲಿಯಾ, ಈ ಟೆಸ್ಟ್‌ನಲ್ಲಿ ಸೋಲು ತಪ್ಪಿಸಿಕೊಂಡರೆ, ಇಂಗ್ಲೆಂಡ್ ನೆಲದಲ್ಲಿ 22 ವರ್ಷಗಳಲ್ಲಿ ಮೊದಲ ಬಾರಿ ಸರಣಿ ಗೆದ್ದಂತೆ ಆಗುತ್ತದೆ.

ನಾಲ್ಕು ವಿಕೆಟ್ ಪಡೆದ ಮಿಷೆಲ್ ಸ್ಟಾರ್ಕ್ –ಎಎಫ್‌ಪಿ ಚಿತ್ರ

ಕ್ರಿಕೆಟ್: ಲಂಕಾ ವಿರುದ್ಧ ಪಾಕ್‌ಗೆ ಭಾರಿ ಜಯ

ನೊಮಾನ್ ದಾಳಿಗೆ ಲಂಕಾ ಪತನ

ಕೊಲಂಬೊ (ಎಎಫ್‌ಪಿ): ಎಡಗೈ ಸ್ಪಿನ್ನರ್ ನೊಮಾನ್ ಅಲಿ (70ಕ್ಕೆ7) ಅವರ ಅಮೋಘ ಬೌಲಿಂಗ್ ನೆರವಿನಿಂದ ಪಾಕಿಸ್ತಾನ ಎರಡನೇ ಟೆಸ್ಟ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ನಾಲ್ಕನೇ ದಿನವಾದ ಗುರುವಾರವೇ ಇನಿಂಗ್ಸ್ ಮತ್ತು 222 ರನ್‌ಗಳಿಂದ ಸದೆಬಡಿಯಿತು. ಸರಣಿಯನ್ನು 2–0 ಯಿಂದ ಕ್ಲೀನ್ ಸ್ವೀಪ್ ಮಾಡಿತು.

15ನೇ ಟೆಸ್ಟ್ ಆಡುತ್ತಿರುವ ನೊಮಾನ್ ಅಲಿ ಮೊದಲ ಏಳು ವಿಕೆಟ್‌ಗಳನ್ನು ಕಬಳಿಸಿದರೆ, ಕೊನೆಯ ಮೂರು ವಿಕೆಟ್‌ಗಳು ವೇಗದ ಬೌಲರ್ ನಸೀಮ್ ಶಾ ಪಾಲಾದವು. ಎರಡನೇ ಇನಿಂಗ್ಸ್‌ನಲ್ಲಿ ಆತಿಥೇಯರು 188 ರನ್‌ಗಳಿಗೆ ಕುಸಿದರು. ಇದು ಸ್ವದೇಶದಲ್ಲಿ ಲಂಕಾ ಅನುಭವಿಸಿದ ಅತಿ ದೊಡ್ಡ ಅಂತರದ ಪರಾಭವ ಆಗಿದೆ. ಮೊದಲ ಟೆಸ್ಟ್ ಅನ್ನು ಪ್ರವಾಸಿ ತಂಡ 4 ವಿಕೆಟ್‌ಗಳಿಂದ ಗೆದ್ದುಕೊಂಡಿತ್ತು.

ನೊಮಾನ್ ಅಲಿ

ಪಾಕಿಸ್ತಾನ (ಬುಧವಾರ: 132 ಓವರ್‌ಗಳಲ್ಲಿ 5 ವಿಕೆಟ್‌ಗೆ 563) ತನ್ನ ಮೊದಲ ಇನಿಂಗ್ಸ್‌ಅನ್ನು ದಿನದ ಎರಡನೇ ಓವರ್ ನಂತರ 5 ವಿಕೆಟ್‌ಗೆ 576 ರನ್‌ಗಳಾಗಿದ್ದಾಗ ಡಿಕ್ಲೇರ್ ಮಾಡಿಕೊಂಡಿತ್ತು. ಅಂದರೆ 410 ರನ್‌ಗಳ ಮುನ್ನಡೆ. ಬುಧವಾರ 5 ವಿಕೆಟ್‌ಗೆ 563 ರನ್ ಗಳಿಸಿದ್ದ ಪಾಕ್ ಇಂದು ಆಡಿದ್ದು ಎರಡು ಓವರ್ ಮಾತ್ರ.

ನಾಯಕ ದಿಮುತ್ ಕರುಣಾರತ್ನೆ (41) ಮತ್ತು ನಿಶಾಂಕ ಮದುಷ್ಕ ಮೊದಲ ವಿಕೆಟ್‌ಗೆ 69 ರನ್ ಸೇರಿಸಿ ಉತ್ತಮ ಆರಂಭ ನೀಡಿದ್ದರು. ಮಧ್ಯಮ ಕ್ರಮಾಂಕದಲ್ಲಿ ಏಂಜೆಲೊ ಮ್ಯಾಥ್ಯೂಸ್ (ಔಟಾಗದೇ 63) ಬಿಟ್ಟರೆ ಉಳಿದವರು ಪ್ರತಿರೋಧ ತೋರಲಿಲ್ಲ.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 166, ಪಾಕಿಸ್ತಾನ: 134 ಓವರುಗಳಲ್ಲಿ 5 ವಿಕೆಟ್‌ಗೆ 576 ಡಿಕ್ಲೇರ್ಡ್ (ಅಬ್ದುಲ್ಲಾ ಶಫೀಕ್ 201, ಆಗಾ ಸಲ್ಮಾನ್ ಔಟಾಗದೇ 132, ಮೊಹಮ್ಮದ್ ರಿಜ್ವಾನ್ ಔಟಾಗದೇ 50); 2ನೇ ಇನಿಂಗ್ಸ್: ಶ್ರೀಲಂಕಾ: 67.4 ಓವರುಗಳಲ್ಲಿ 188 (ಮದುಷ್ಕ 33, ಕರುಣಾರತ್ನೆ 41, ಮ್ಯಾಥ್ಯೂಸ್ ಔಟಾಗದೇ 63; ನೊಮಾನ್ ಅಲಿ 70ಕ್ಕೆ7, ನಸೀಮ್ ಶಾ 44ಕ್ಕೆ3)

ಹಾಕಿ: ಭಾರತದ ಸೋಲು ತಪ್ಪಿಸಿದ ನವನೀತ್ ಕೌರ್

ನವದೆಹಲಿ (ಪಿಟಿಐ): ನವನೀತ್ ಕೌರ್ ಗಳಿಸಿದ ಎರಡು ಗೋಲುಗಳ ಬಲದಿಂದ ಭಾರತ ತಂಡವು ಗುರುವಾರ ಇಲ್ಲಿ ನಡೆದ ಸ್ಪಾನಿಷ್ ಹಾಕಿ ಫೆಡರೇಷನ್ ಶತಮಾನೋತ್ಸವ ಅಂತರರಾಷ್ಟ್ರೀಯ ಹಾಕಿ ಟೂರ್ನಿಯ ಪಂದ್ಯದಲ್ಲಿ ಸ್ಪೇನ್ ಎದುರು ಡ್ರಾ ಸಾಧಿಸಿತು.

ಸ್ಪೇನ್ ತಂಡದ ಝೊಂಟಲ್ ಗೈನ್ (13ನೇ ನಿಮಿಷ) ಮತ್ತು ಲೈಯಾ ವಿಡೊಸಾ (26ನೇ ನಿಮಿಷ) ಗೋಲು ಗಳಿಸಿದರು. ಭಾರತದ ನವನೀತ್ 14ನೇ ಮತ್ತು 29ನೇ ನಿಮಿಷದಲ್ಲಿ ಗೋಲು ಹೊಡೆದರು. ಇದರಿಂದಾಗಿ ಉಭಯ ತಂಡಗಳು ಸಮಬಲ ಸಾಧಿಸಿದವು.

ಭಾರತ ತಂಡವು ಶುಕ್ರವಾರ ಇಂಗ್ಲೆಂಡ್ ಎದುರು ಕಣಕ್ಕಿಳಿಯಲಿದೆ.

ಡ್ರಾ ಪಂದ್ಯದಲ್ಲಿ ಪುರುಷರು: ಇದೇ ಟೂರ್ನಿಯಲ್ಲಿ ಆಡುತ್ತಿರುವ ಭಾರತದ ಪುರುಷರ ತಂಡದವರು ಬುಧವಾರ ನಡೆದ ಪಂದ್ಯದಲ್ಲಿ ನೆದರ್ಲೆಂಡ್ಸ್ ಜತೆ 1–1 ರಿಂದ ಡ್ರಾ ಸಾಧಿಸಿದರು.

ನಾಯಕ ಹರ್ಮನ್‌ಪ್ರೀತ್ ಸಿಂಗ್ 12ನೇ ನಿಮಿಷದಲ್ಲಿ ಭಾರತಕ್ಕೆ ಮುನ್ನಡೆ ತಂದಿತ್ತರೆ, ನೆದರ್ಲೆಂಡ್ಸ್‌ನ ಜಾಸ್ಪೆರ್ ಬ್ರಿಂಕ್‌ಮನ್ 40ನೇ ನಿಮಿಷದಲ್ಲಿ ಸಮಬಲದ ಗೋಲು ಗಳಿಸಿದರು.

ನವನೀತ್ ಕೌರ್ –ಟ್ವಿಟರ್ ಚಿತ್ರ

ಜೂನಿಯರ್ ಹಾಕಿ ತಂಡಕ್ಕೆ ಉತ್ತಮ್ ಸಿಂಗ್ ನಾಯಕ

ನವದೆಹಲಿ (ಪಿಟಿಐ): ಜರ್ಮನಿಯ ಡಸೆಲ್‌ಡಾರ್ಫ್‌ನಲ್ಲಿ ನಡೆಯಲಿರುವ ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯಲ್ಲಿ ಭಾಗವಹಿಸುವ ಭಾರತ ಜೂನಿಯರ್ ಹಾಕಿ ತಂಡವನ್ನು ಫಾರ್ವರ್ಡ್ ಆಟಗಾರ ಉತ್ತಮ್ ಸಿಂಗ್ ಮುನ್ನಡೆಸಲಿದ್ದು, ಬಾಬಿ ಸಿಂಗ್ ಧಾಮಿ ಉಪನಾಯಕ-ರಾಗಿದ್ದಾರೆ ಎಂದು ಹಾಕಿ ಇಂಡಿಯಾ ಗುರುವಾರ ತಿಳಿಸಿದೆ.

ಮೋಹಿತ್ ಮತ್ತು ರಣವಿಜಯ್ ಸಿಂಗ್ ಯಾದವ್ ಅವರು ಗೋಲ್‌ಕೀ-ಪರ್‌ಗಳಾಗಿದ್ದಾರೆ. ಶಾರದಾ ನಂದ್ ತಿವಾರಿ, ರೋಹಿತ್, ಅಮನದೀಪ್ ಲಾಖ್ರಾ, ಅಮಿರ್ ಅಲಿ, ವರಿಬಮ್ ನೀರಜ್ ಕುಮಾರ್ ಸಿಂಗ್ ಮತ್ತು ಯೋಗೆಂಬರ್ ರಕ್ಷಣಾ ವಿಭಾಗದಲ್ಲಿ ಇರುವವರು. ಸಿ.ಬಿ.ಪೂವಣ್ಣ, ವಿಷ್ಣು ಕಾಂತ್, ರಾಜಿಂದರ್, ಅಮನದೀಪ್, ಸುನಿತ್, ಚೇತನ್ ಶರ್ಮಾ ಮತ್ತು ಅಮಿತ್ ಕುಮಾರ್ ಯಾದವ್ ಅವರು ಮಿಡ್‌ಫೀಲ್ಡರ್‌ಗಳು. ಅರೈಜಿತ್, ಅಂಗದ್, ಬಾಬಿ ಸಿಂಗ್, ಉತ್ತಮ್ ಸಿಂಗ್ ಮತ್ತು ಸುದೀಪ್ ಚಿರ್ಮಾಕೊ ಅವರು ಮುನ್ಪಡೆಯಲ್ಲಿ ಇರಲಿದ್ದಾರೆ.

ಆಸ್ಟ್ರೇಲಿಯಾ ಮಣಿಸಿದ ನೈಜೀರಿಯಾ

ಬ್ರಿಸ್ಬೇನ್ (ಎಎಫ್‌ಪಿ): ಒಸಿನಚಿ ಒಹಾಲೆ ಮತ್ತು ಅಸಿಸತ್ ಒಶೋಲಾ ಅವರು ಎರಡನೇ ಅವಧಿಯಲ್ಲಿ ತಂದಿತ್ತ ಗೋಲುಗಳ ನೆರವಿನಿಂದ ನೈಜೀರಿಯಾ ತಂಡ, ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಆತಿಥೇಯ ಆಸ್ಟ್ರೇಲಿ-ಯಾಕ್ಕೆ ಆಘಾತ ನೀಡಿತು.

ಬ್ರಿಸ್ಬೇನ್ ಕ್ರೀಡಾಂಗಣದಲ್ಲಿ 50 ಸಾವಿರ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಪಂದ್ಯದಲ್ಲಿ ನೈಜೀರಿಯಾ 3–2 ಗೋಲುಗಳ ಗೆಲುವು ಸಾಧಿಸಿತು.

ಈ ಸೋಲಿನ ಕಾರಣ ಆಸ್ಟ್ರೇಲಿಯಾ, ಲೀಗ್ ಹಂತದಲ್ಲೇ ಹೊರಬೀಳುವ ಅಪಾಯಕ್ಕೆ ಸಿಲುಕಿದೆ. 16ರ ಘಟ್ಟ ಪ್ರವೇಶಿಸಬೇಕಾದರೆ ಅಂತಿಮ ಲೀಗ್ ಪಂದ್ಯದಲ್ಲಿ ಕೆನಡಾ ವಿರುದ್ಧ ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿದೆ.

ಗುರುವಾರ ನಡೆದ ಪಂದ್ಯದಲ್ಲಿ ವಿರಾಮದ ವೇಳೆಗೆ ಉಭಯ ತಂಡಗಳು 1–1 ಗೋಲಿನಿಂದ ಸಮಬಲ ಸಾಧಿಸಿದ್ದವು. ಎಮಿಲಿ ವಾನ್ ಎಗ್ಮಂಡ್ ಅವರು ಆಸ್ಟ್ರೇಲಿಯಾ ಪರ ಹಾಗೂ ಯುಚೆನಾ ಕಾನು ಅವರು ನೈಜೀರಿಯಾಕ್ಕೆ ಗೋಲು ತಂದಿತ್ತರು.

ಎರಡನೇ ಅವಧಿಯಲ್ಲಿ ಒಸಿನಚಿ (65ನೇ ನಿ.) ಮತ್ತು ಒಶೋಲಾ (72ನೇ ನಿ.) ಅವರು ಏಳು ನಿಮಿಷಗಳ ಅಂತರದಲ್ಲಿ ಗೋಲು ಗಳಿಸಿ ನೈಜೀರಿಯಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಹೊರಬಿದ್ದ ವಿಯೆಟ್ನಾಂ (ಹ್ಯಾಮಿಲ್ಟನ್ ವರದಿ): ಗುರುವಾರ ನಡೆದ 'ಇ' ಗುಂಪಿನ ಪಂದ್ಯದಲ್ಲಿ ಪೋರ್ಚುಗಲ್ 2–0 ಗೋಲುಗಳಿಂದ ವಿಯೆಟ್ನಾಂ ವಿರುದ್ಧ ಗೆದ್ದಿತು. ಸೋಲು ಅನುಭವಿಸಿದ ವಿಯೆಟ್ನಾಂ, 16ರ ಘಟ್ಟ ಪ್ರವೇಶಿಸುವ ಅವಕಾಶ ಕಳೆದುಕೊಂಡಿತು. ಟೆಲ್ಮಾ (7ನೇ ನಿ.) ಮತ್ತು ಕಿಕಾ ನಜರೆತ್ (21ನೇ ನಿ.) ಅವರು ಪೋರ್ಚುಗಲ್ ಗೆಲುವಿನಲ್ಲಿ ಗಮನ ಸೆಳೆದರು.

ಡ್ರಾ ಪಂದ್ಯದಲ್ಲಿ ಅಮೆರಿಕ: ನಾಯಕಿ ಲಿಂಡ್ಸೆ ಹೊರಾನ್ ಅವರು ಎರಡನೇ ಅವಧಿಯಲ್ಲಿ ಗಳಿಸಿದ ಗೋಲಿನ ನೆರವಿನಿಂದ ಹಾಲಿ ಚಾಂಪಿಯನ್ ಅಮೆರಿಕ ತಂಡ, ನೆದರ್ಲೆಂಡ್ಸ್ ಜತೆ 1–1 ಗೋಲಿನ ಡ್ರಾ ಸಾಧಿಸಿತು.

ನೈಜೀರಿಯಾ ಮತ್ತು ಆಸ್ಟ್ರೇಲಿಯಾ ತಂಡಗಳ ಹಣಾಹಣಿ –ಎಎಫ್‌ಪಿ ಚಿತ್ರ

SAMSUNG

Introducing
Galaxy Z Fold5 | Z Flip5

samsung.com

Pre-book now and get Galaxy Z Flip5 at ₹49999*

Retail price	₹ 99999#
Exchange value of old device	₹ 30000~
Additional upgrade bonus	₹ 12000**
Additional bank cashback	₹ 8000^
Effective price	₹ 49999*

Zero down payment | 9 months no cost EMI***

HDFC BANK | BAJAJ FINSERV | Samsung Finance+™

or

10% Extra Cashback^^ Samsung Axis Bank Credit Cards

Offer valid till Aug 17, 2023

Scan to experience the flip side

#JoinTheFlipSide

Please dispose of e-waste and plastic waste responsibly. Customer can WhatsApp on 1800 5 7267864 for information on e-waste/ plastic waste pick up.

Image simulated for illustrative purpose only. Actual UX/UI may differ. Color subject to availability. Flex mode supported at angles between 75° & 115°. S Pen Fold Edition sold separately and is only compatible with Galaxy Z Fold5, Z Fold4, Z Fold3. Devices shown are sold separately. Offers may be revised or withdrawn without prior notice. *T&C apply. Offer price shown above is 1 unit of Galaxy Z Flip5 8GB|256GB inclusive of exchange value of old device, upgrade bonus & bank cashback. Final price at discretion of dealer. #Retail price of 1 unit of Galaxy Z Flip5 8GB|256GB. Price inclusive of taxes. ~Approximate value on exchange of 1 unit of Galaxy Z Flip4 8GB|128GB. Exchange value varies basis model and condition of old device. Exchange at the discretion of retailer. **Upgrade bonus provided by brand at its sole discretion upon exchange of select smartphones. Reach out to dealer for more details. ^Cashback provided by issuer/NBFC at its sole discretion. ***Eligibility for EMI at the sole discretion of the financiers including those listed on Samsung Finance+ (Financier T&C applies). Samsung disclaims any liabilities with the same. ^^10% Cashback applicable as per limits- Signature variant: ₹ 2500 monthly, ₹ 10000 annually. Infinite variant: ₹ 5000 monthly, ₹ 20000 annually. Bank cashback/EMI offer cannot be clubbed with 10% Extra Cashback on Samsung Axis Bank Credit Cards.

Or WhatsApp "Hi" to 9870 494949 to pre-book at Samsung Exclusive Store

Cheil-16119/23